"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

# ಕರ್ನಾಟಕ ವಿಧಾನ ಪರಿಷತ್ತು

(158ನೇ ಮುಂದುವರೆದ ಅಧಿವೇಶನ)

ಬುಧವಾರ, 11ನೇ ಮಾರ್ಚ್ 2026

## ವಿಷಯಾನುಕ್ರಮಣಿಕೆ (INDEX)


1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

882- ಬೆಂಗಳೂರು ನೈಸ್ ರಸ್ತೆ ಟೋಲ್‌ಗಳ ಬಗ್ಗೆ.
- ಶ್ರೀ ರಾಮೋಜಿಗೌಡ
- ಶ್ರೀ ಸತೀಶ ಜಾರಕಿಹೊಳಿ (ಲೋಕೋಪಯೋಗಿ ಸಚಿವರು)

957- ಸಿಂಧನೂರು & ಸಿರಗುಪ್ಪ ತಾಲ್ಲೂಕುಗಳನ್ನು ಸಂಪರ್ಕಿಸುವ ನಿಟ್ಟೂರು-ಸಿಂಗಾಪುರ ಸೇತುವೆ ನಿರ್ಮಾಣ ಮಾಡುವ ಬಗ್ಗೆ.
- ಶ್ರೀ ಬಸನಗೌಡ ಬಾದರ್ಲಿ
- ಶ್ರೀ ಸತೀಶ ಜಾರಕಿಹೊಳಿ (ಲೋಕೋಪಯೋಗಿ ಸಚಿವರು)

888- ಸಾರಿಗೆ ಇಲಾಖೆಯ ಅಧಿಕ ನೌಕರರು ನಕಲಿ NOC ಪಡೆದಿರುವ ಬಗ್ಗೆ.
- ಶ್ರೀ ಟಿ.ಎ.ಶರವಣ
- ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು ಮತ್ತು ಮುಜರಾಯಿ ಸಚಿವರು)

892- ಮಾಜಿ ಸೈನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡದಿರುವ ಬಗ್ಗೆ.
- ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್)
- ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)

889 - ಖಾಲಿ ಇರುವ ಬಂದರು ಅಧಿಕಾರಿ ಹುದ್ದೆಗಳ ಬಗ್ಗೆ.
- ಶ್ರೀ ಗಣಪತಿ ದುಮ್ಮಾ ಉಳ್ವೇಕರ್
- ಶ್ರೀ ಮಂಕಾಳ ಎಸ್.ವೈದ್ಯ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

955 – ಜಮೀನುಗಳನ್ನು ಭೂಸ್ವಾಧೀನ ಮಾಡಿಕೊಳ್ಳುವ ಮಾರ್ಗಸೂಚಿ ಮೌಲ್ಯಗಳ ಬಗ್ಗೆ.
- ಶ್ರೀ ಕೆ.ಎಸ್. ನವೀನ್
- ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**956– ಧಾರವಾಡದಲ್ಲಿ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳ ಅಭಿವೃದ್ಧಿ ಕಾರ್ಯದ ಬಗ್ಗೆ.**

- ಶ್ರೀ ಪ್ರದೀಪ್ ಶೆಟ್ಟರ್
- ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು)

**937+951+972 – ಸರ್ಕಾರಿ ಪಶು ಆಸ್ಪತ್ರೆಗಳು ಹಾಗೂ ಸಿಬ್ಬಂದಿಗಳ ಬಗ್ಗೆ.**

- ಶ್ರೀ ಡಿ.ಎಸ್.ಅರುಣ್
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಕೆ.ವೆಂಕಟೇಶ್ (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು)

**962– ಕರ್ನಾಟಕ ರಾಜ್ಯದಲ್ಲಿ ಭೂ ಮಂಜೂರಾತಿ ಕುರಿತು.**

- ಶ್ರೀ ಮಂಜುನಾಥ್ ಭಂಡಾರಿ
- ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)

**930– ಕರಾವಳ ಭಾಗದ ಪ್ರಮುಖ ಸೇತುವೆಗಳ ಬಗ್ಗೆ.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಸತೀಶ ಜಾರಕಿಹೊಳ (ಲೋಕೋಪಯೋಗಿ ಸಚಿವರು)

**860 – ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಅಭಿವೃದ್ಧಿಪಡಿಸಿರುವ ಬಗ್ಗೆ.**

- ಶ್ರೀ ಎಂ. ಎಲ್. ಅನಿಲ್ ಕುಮಾರ್
- ಶ್ರೀ ಸತೀಶ ಜಾರಕಿಹೊಳ (ಲೋಕೋಪಯೋಗಿ ಸಚಿವರು)

**984 – ತುಮಕೂರು-ಶಿವಮೊಗ್ಗ ಹೆದ್ದಾರಿ ಕುರಿತು.**

- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಸತೀಶ ಜಾರಕಿಹೊಳ (ಲೋಕೋಪಯೋಗಿ ಸಚಿವರು)

**ಆ) ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

2. **ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು**

**ಅ) 9ನೇ ತರಗತಿಯವರೆಗೂ ಓದಿದ ಮಕ್ಕಳು 10ನೇ ತರಗತಿ ದಾಖಲಾತಿಯಲ್ಲಿ ಕಾಣೆಯಾಗಿರುವ ಬಗ್ಗೆ.**

- ಶ್ರೀ ಟಿ.ಡಿ.ಶ್ರೀನಿವಾಸ್ (ಡಿ.ಟಿ.ಎಸ್)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಆ) ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ಥಿರಾಸ್ತಿ ನೋಂದಣಿ ಮತ್ತು ಇ-ಖಾತಾ ಪಡೆಯುವಲ್ಲಿ ಆಗುತ್ತಿರುವ ತೊಂದರೆಗಳನ್ನು ಸರಿಪಡಿಸುವ ಬಗ್ಗೆ**

- ಶ್ರೀ ಮಂಜುನಾಥ ಭಂಡಾರಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಇ) ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿರುವ ಕೆ.ಪಿ.ಎಸ್.ಸಿ.: ತಕ್ಷಣದ ತನಿಖೆಗೆ ಆಗ್ರಹ ಕುರಿತು.**

- ಡಾ॥ ಧನಂಜಯ ಸರ್ಜಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಈ) ಮಂಗಳೂರು ಮಹಾನಗರದಲ್ಲಿ 24/7 ನೀರು ಸರಬರಾಜು ಮಾಡಬೇಕಾಗಿದ್ದ ಜಲಸಿರಿ ಯೋಜನೆಯನ್ನು ಶೀಘ್ರವಾಗಿ ಮುಕ್ತಾಯಗೊಳಿಸಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಬಗ್ಗೆ.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಉ) ಕರ್ನಾಟಕ ಅಂತರ್ಜಾತಿ ವಿವಾಹ ಯೋಜನೆಯಡಿ ಪರಿಶಿಷ್ಟ ಜಾತಿಯ ವಧು/ವರರಿಗೆ ನೀಡುತ್ತಿರುವ ಪ್ರೋತ್ಸಾಹ ಧನವನ್ನು ಪೂರ್ಣ ಪ್ರಮಾಣದಲ್ಲಿ ಮತ್ತು ಶೀಘ್ರವಾಗಿ ನೀಡುವ ಬಗ್ಗೆ.**

- ಶ್ರೀ ಗೋವಿಂದರಾಜು
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಊ) ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಬೆದರಿಸಿ ವೈಟ್‌ಫೀಲ್ಡ್ ಅಪಾರ್ಟ್‌ಮೆಂಟ್‌ನಲ್ಲಿನ ವೃದ್ಧರೊಬ್ಬರಿಂದ ಲಕ್ಷಾಂತರ ರೂಪಾಯಿ ದೋಚಿರುವ ಕುರಿತು.**

- ಶ್ರೀ ಕಿಶೋರ್ ಕುಮಾರ್ ಪುತ್ತೂರು
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಎ) ಬಳ್ಳಾರಿ ಜಿಲ್ಲೆ ಕಂಪ್ಲೀ ಪಟ್ಟಣದ ಸಕ್ಕರೆ ಕಾರ್ಖಾನೆ ಪ್ರದೇಶದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಿರ್ಮಿಸುತ್ತಿರುವ "ಮೌಲಾನಾ ಅಜಾದ್ ಶಾಲೆಯನ್ನು ಬೇರೆಡೆ ನಿರ್ಮಿಸಬೇಕೆನ್ನುವ ಬಗ್ಗೆ.**

- ಶ್ರೀ ವೈ.ಎಂ.ಸತೀಶ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಏ) ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಬೇಕಾದ ಶಿಕ್ಷಕರು ಇಂದು ಬಿಸಿ ಊಟ, ಮಕ್ಕಳಿಗೆ ಹಾಲು, ಮೊಟ್ಟೆ ಕೊಟ್ಟು ಅದರ ಲೆಕ್ಕ ಬರೆಯುವುದು, ಬಿಎಲ್‌ಓ ಕಾರ್ಯಗಳ ಜೊತೆಗೆ ಹಲವು ಇತರ ಕಾರ್ಯಗಳನ್ನು ನಿರ್ವಹಿಸುತ್ತಿರುವ ಬಗ್ಗೆ.**

- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಐ) ದೈಹಿಕ ಶಿಕ್ಷಣ ಪಠ್ಯದಲ್ಲಿಯೇ ಮೌಲ್ಯ ಶಿಕ್ಷಣವನ್ನು ಸೇರ್ಪಡೆ ಮಾಡಿ, ಮುದ್ರಿಸಿ ರಾಜ್ಯದ ಎಲ್ಲಾ ಶಾಲೆಗಳಿಗೆ ಸರಬರಾಜು ಮಾಡುವ ಕುರಿತು.**

- ಶ್ರೀ ಶಶೀಲ್ ಜಿ ನಮೋಶಿ
- ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)

ಒ) ಸ್ವಾತಂತ್ರ್ಯ ಹೋರಾಟಗಾರರಿಗೆ ಅಥವಾ ಅವರ ಅವಲಂಬಿತರಿಗೆ ನೀಡುವ ಮಾಸಾಶನವನ್ನು ಹೆಚ್ಚಿಸುವ ಕುರಿತು.

- ಶ್ರೀ ರಮೇಶ್ ಬಾಬು
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

೩. ನಿಯಮ ೭೩ಎ ಮೇರೆಗೆ ಪ್ರಸ್ತಾಪಿಸಲಾಗಿದ್ದ ಶೂನ್ಯವೇಳೆ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು.

ಅ) ಬಾಗಲಕೋಟೆ ಜಿಲ್ಲೆ ಮುಧೋಳದ ಮಹಾರಾಜ ಕಾಲೋನಿಯಲ್ಲಿ ಅಂತರ್ಜಲ ವಿಷಮಯವಾಗಿದ್ದು ನಲ್ಲಿಗಳಲ್ಲಿ ಕಲುಷಿತ ನೀರು ಹರಿಯುತ್ತಿದ್ದು, ನಾಗರಿಕರ ಜೀವಕ್ಕೆ ಆಪತ್ತು ಎದುರಾಗಿರುವ ಕುರಿತು.

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಪೌರಾಡಳಿತ ಮತ್ತು ಹಜ್ ಸಚಿವರ ಪರವಾಗಿ)

ಆ) ರಾಜ್ಯದಲ್ಲಿ ಟೈಫಾಯಿಡ್ ಪ್ರಕರಣಗಳು ಹೆಚ್ಚುತ್ತಿರುವ ಕುರಿತು.

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

ಇ) ಹೋಳಿ ಆಚರಣೆಗಾಗಿ ಪರೀಕ್ಷೆ ತಪ್ಪಿಸಲು ವಿದ್ಯಾರ್ಥಿನಿಯ ಮೇಲೆ ಒತ್ತಡ; ಕೊಪ್ಪಳದಲ್ಲಿ ಶಿಕ್ಷಣ ಹಕ್ಕಿನ ಮೇಲೆ ನಡೆದ ದೌರ್ಜನ್ಯದ ಬಗ್ಗೆ.

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಪರವಾಗಿ)

ಈ) ಕಾಸರಗೋಡು ಕನ್ನಡಿಗರ ಭಾಷಾ ಹಕ್ಕುಗಳ ಮೇಲೆ ಮಲೆಯಾಳ ಸವಾರಿ; ಕಾಯ್ದೆ ತಿದ್ದುಪಡಿಗೆ ಮತ್ತು ಸರ್ಕಾರದ ಮಧ್ಯಪ್ರವೇಶಕ್ಕೆ ಆಗ್ರಹ ಕುರಿತು.

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಸಚಿವರ ಪರವಾಗಿ)

ಉ) ಧಾರವಾಡ ಜಿಲ್ಲೆಯ ಅಣ್ಣಿಗೇರಿ ತಾಲ್ಲೂಕಿನ ನಾವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಂದಿಗನ ಹಳ್ಳಕ್ಕೆ ಸೇರುತ್ತಿರುವ ಶೌಚಾಲಯ ಮತ್ತು ಕಲುಷಿತ ನೀರನ್ನು ತಡೆಗಟ್ಟಿ ನೀರನ್ನು ವೈಜ್ಞಾನಿಕ ಕ್ರಮಗಳ ಮೂಲಕ ಶುದ್ಧೀಕರಿಸುವ ಬಗ್ಗೆ.

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ)

ಊ) ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಪ್ರಾಧ್ಯಾಪಕರ ಹುದ್ದೆಗಳ ಭರ್ತಿಗೆ ಆಯವ್ಯಯದಲ್ಲಿ ಅನುದಾನವನ್ನು ಕಾದಿರಿಸಿರುವ ಬಗ್ಗೆ.

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಕೃಷಿ ಸಚಿವರ ಪರವಾಗಿ)

4. ಗಮನ ಸೆಳೆಯುವ ಸೂಚನೆಗಳು

ಅ) **'ಕೋಲಿ', 'ಕಬ್ಬಲಿಗ', ಬೆಸ್ತ, 'ಅಂಬಿಗ' ಮತ್ತು 'ಬಾರ್ಕಿ' ಪದಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವ ಪ್ರಸ್ತಾವನೆಯ ಸ್ಥಿತಿಗತಿಗಳ ಬಗ್ಗೆ.**

- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಡಾ॥ ತಳವಾರ್ ಸಾಬಣ್ಣ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)

ಆ) **ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಸುತ್ತಮುತ್ತಲ ಕೆರೆಗಳಿಗೆ ನೀರು ತುಂಬಿಸುವ ಕೆ.ಸಿ.ವ್ಯಾಲಿ ಯೋಜನೆಯಡಿ ಕೈಬಿಟ್ಟಿರುವ ಕೆರೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೂಡಲೇ ಸೇರಿಸುವ ಬಗ್ಗೆ.**

- ಶ್ರೀ ಹೆಚ್.ಎಸ್.ಗೋಪಿನಾಥ್
- ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಇ) **ಮಣ್ಣಿನ ಆರೋಗ್ಯ ಕಾರ್ಡ್ ಯೋಜನೆಯನ್ನು ಪರಿಣಾಮಕಾರಿಯಾಗಿ ಕಡ್ಡಾಯಗೊಳಿಸುವ ಮೂಲಕ ಮಣ್ಣಿನ ಆರೋಗ್ಯ ತಿಳಿಯದೇ ಅವೈಜ್ಞಾನಿಕವಾಗಿ ಮತ್ತು ಯಥೇಚ್ಛವಾಗಿ ರಾಸಾಯನಿಕ ರಸಗೊಬ್ಬರ ಬಳಕೆಯಿಂದ ನೀರಿನ ಮೂಲಗಳು-ನದಿಗಳು ಕಲುಷಿತಗೊಂಡು ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗಳಿಗೆ ಕಾರಣವಾಗುತ್ತಿರುವುದನ್ನು ತಡೆಗಟ್ಟುವ ಬಗ್ಗೆ.**

- ಡಾ॥ ಧನಂಜಯ ಸರ್ಜಿ
- ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)

5. ವಿತ್ತೀಯ ಕಾರ್ಯಕಲಾಪ

**2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ.**

- ಶ್ರೀ ಎಂ.ನಾಗರಾಜು
- ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಬೋಸರಾಜು (ಸಭಾನಾಯಕರು)

6. ನಿಯಮ 330ರ ಮೇರೆಗೆ ಚರ್ಚೆ

ಅ) **ಹಿಂದುಳಿದ ವರ್ಗಗಳಲ್ಲಿ ಬರುವ ಜಾತಿಗಳ ಕುಲ ಕಸುಬುಗಳು ನಶಿಸುತ್ತಿರುವುದರಿಂದ ಅವುಗಳನ್ನು ಉತ್ತೇಜಿಸಿ ಆರ್ಥಿಕ ಭದ್ರತೆ ಕಲ್ಪಿಸುವ ಕುರಿತು.**

- ಡಾ॥ ತಳವಾರ್ ಸಾಬಣ್ಣ
- ಶ್ರೀ ಶಿವರಾಜ್ ಎಸ್. ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)
- ಶ್ರೀಮತಿ ಹೇಮಲತಾ ನಾಯಕ್

**ಆ) ರಾಜ್ಯದ ಬಯಲುನಾಡಿನ ಜಿಲ್ಲೆಗಳಾದ ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸುವ ಕುರಿತು.**

- ಶ್ರೀ ಕೆ.ಎಸ್.ನವೀನ್
- ಶ್ರೀ ಗೋವಿಂದ ರಾಜು
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)
- ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)

**ಇ) ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು, ಟೇಕಲ್ ಹೋಬಳ, ಅಗಲಕೋಟೆ ಗ್ರಾಮದಲ್ಲಿ ಶಿಕ್ಷಣ ಇಲಾಖೆಗೆ ದಾನವಾಗಿ ನೀಡಲಾದ ಭೂಮಿಯ ಅತಿಕ್ರಮಣ ಹಾಗೂ ದಾಖಲೆಯ ವಂಚನೆ ಕುರಿತು.**

- ಶ್ರೀ ಕೇಶವ ಪ್ರಸಾದ್.ಎಸ್
- ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)

**7. ವಿತ್ತೀಯ ಕಾರ್ಯಕಲಾಪ**

**2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ.**

- ಶ್ರೀ ಡಿ.ಎಸ್.ಅರುಣ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಡಾ॥ ಎಂ.ಸಿ.ಸುಧಾಕರ (ಉನ್ನತ ಶಿಕ್ಷಣ ಸಚಿವರು)
- ಡಾ॥ ಎಂ.ಆರ್. ಸೀತಾರಾಂ
- ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)

- - - - -

(294) 11.03.2026/11.00/ ಎಸ್‌ಕೆ.ಎಕೆ

# ಕರ್ನಾಟಕ ವಿಧಾನ ಪರಿಷತ್ತು

ಮಂಗಳವಾರ, 11ನೇ ಮಾರ್ಚ್ 2026

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಪೂರ್ವಾಹ್ನ 11 ಗಂಟೆ 03 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಯವರು

ಪೀಠದಲ್ಲಿ ಉಪಸ್ಥಿತರಿದ್ದರು.

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, LNG (Liquefied Natural Gas) ಗೆ ಸಂಬಂಧಪಟ್ಟಂತೆ ನಾವು .....

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಏನೇ ಕೇಳಬೇಕೆಂದರೂ ಪ್ರಶ್ನೋತ್ತರ ವೇಳೆ ಮುಗಿದ ನಂತರ ಕೇಳಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಅದು ನಮಗೆ ಲಿಸ್ಟ್ ಆಗಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಪದ್ಧತಿಯನ್ನು ಕಲಿಯಿರಿ

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಈಗ ಗ್ಯಾಸ್, ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆಯಿಂದ ಹೋಟೆಲ್‌ಗಳಲ್ಲಿ ತಿಂಡಿ ಸಿಗುತ್ತಿಲ್ಲ. ಸಾರ್ವಜನಿಕರಿಗೆ ತೊಂದರೆಯಾಗಿದೆ. ಇದರಿಂದ black market create ಮಾಡಿದ್ದಾರೆ. ದಯವಿಟ್ಟು ಅದು...

**ಸಭಾಪತಿಯವರು:-** ಆಯಿತು. ತಾವು ಮಾತನಾಡಬೇಡಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೋಟೆಲ್‌ಗಳು ಕೂಡ ಬಂದ್ ಆಗಿದೆ. ....

**ಸಭಾಪತಿಯವರು:-** ತಾವು ಏತಕ್ಕೆ ಮಾತನಾಡುತ್ತೀರಾ. ಹೌದು ಎಂದರೆ ಮುಗಿಯತ್ತಲ್ಲವೇ

**ಶ್ರೀ ಐವನ್ ಡಿ'ಸೋಜಾ:-** ಇನ್ನೂ ಚರ್ಚೆ ...

**ಸಭಾಪತಿಯವರು:-** ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ತಾವು ಕೇಳುವುದಿಲ್ಲವೇನು? ತಮಗೆ ಮಾತನಾಡುವ ಚಟ ಇದೆ. ನಿನ್ನೆ ಪ್ರಶ್ನೋತ್ತರ ವೇಳೆಯಲ್ಲಿ ಒಬ್ಬೊಬ್ಬರು ಹದಿನೈದು ನಿಮಿಷಗಳಷ್ಟು ಸಮಯವನ್ನು ತೆಗೆದುಕೊಂಡು ಮಾತನಾಡಿದ್ದಾರೆ. ನಾನು ಬೆಲ್ ಮಾಡಿದಾಗ, ಮಾತನಾಡುವುದನ್ನು ನಿಲ್ಲಿಸಬೇಕು. ಮುಂದಿನ ಪ್ರಶ್ನೆಯನ್ನು ಕೇಳುವುದಕ್ಕೆ ಹೇಳುತ್ತೇನೆ. ಸರಿಯಾದ ಸಮಯಕ್ಕೆ ಸದನ ನಡೆಯಬೇಕು.

## 1. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ 882
(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಏನಿದೆ ಎಂದರೆ, ಬೆಂಗಳೂರು ಹೊರ ವಲಯದಲ್ಲಿರುವ ನೈಸ್ ರಸ್ತೆ ಯೋಜನೆಗೆ ಸರ್ಕಾರ ಹಾಗೂ ಕಂಪನಿಯ ನಡುವೆ ಮಾಡಿಕೊಂಡಿರುವ ಒಪ್ಪಂದದ ಮುಖ್ಯ ಷರತ್ತುಗಳು ಯಾವುವು ಎಂದು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಒಂದು ರಸ್ತೆ ಮತ್ತು ಬಡಾವಣೆಗಳಿಗೆ ಎಂಬುದೊಂದು ಅಗ್ರಿಮೆಂಟ್ ಆಗಿದೆ. ನಾನು ಇದರ ಬಗ್ಗೆ ಗೂಗಲ್‌ನಲ್ಲಿ search ಮಾಡಿದಾಗ ಒಟ್ಟು ಪ್ರಾಜೆಕ್ಟ್ 20,193 ಎಕರೆ ಇದೆ. ಒಟ್ಟು 13,000 ಎಕರೆಯನ್ನು ಟೌನ್‌ಶಿಪ್‌ಗೆ ತೆಗೆದುಕೊಂಡಿದ್ದಾರೆ. ರಸ್ತೆಗೆ ಒಟ್ಟು 6,999 ಎಕರೆ ತೆಗೆದುಕೊಂಡಿದ್ದಾರೆ. ಇಲ್ಲಿ ಏನಾಗಿದೆ ಎಂದರೆ ಟೌನ್‌ಶಿಪ್‌ಗೆ 13,000

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನೇರವಾಗಿ ಪ್ರಶ್ನೆಯನ್ನು ಕೇಳಿ.

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:-** ನಾನು ಬೆಲ್ ಮಾಡಿದಾಗ, ತಾವು ನಿಲ್ಲಿಸಲಿಲ್ಲವೆಂದರೆ, ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ರಾಮೋಜಿಗೌಡ:-** 13,000 ಎಕರೆ ಜಾಗವನ್ನು ತೆಗೆದುಕೊಂಡಿದ್ದಾರೆ. ಇದುವರೆವಿಗೂ ಒಂದು ಬಡಾವಣೆ ಕೂಡ ಮಾಡಿಲ್ಲ. ರೈತರಿಗೆ ಇದುವರೆವಿಗೂ ದುಡ್ಡು ಹೋಗಿಲ್ಲ, ಇಲ್ಲವೆಂದರೆ ಅದಕ್ಕೆ denotification ಮಾಡಿಲ್ಲ. ಅವರು ಭೂಸ್ವಾಧೀನ ಪಡಿಸಿಕೊಳ್ಳುವಾಗ ಒಂದು ಎಕರೆಗೆ ಸುಮಾರು ಐದರಿಂದ ಹತ್ತು ಲಕ್ಷ ರೂಪಾಯಿಗಳನ್ನು ನಿಗಧಿಪಡಿಸಿರಬಹುದು. ಅದರ ಬೆಲೆ ಆಗ 1,300 ಕೋಟಿ ರೂಪಾಯಿಗಳಷ್ಟು ಇತ್ತು. ಈಗ ಅದೇ ಭೂಮಿಗೆ 13,000 ಎಕರೆಗೆ ಸರಾಸರಿ 5 ರಿಂದ 10 ಕೋಟಿ ರೂಪಾಯಿಗಳಷ್ಟು ಲೆಕ್ಕ ಹಾಕಿದರೆ, 1 ಲಕ್ಷ 30,000 ಕೋಟಿ ರೂಪಾಯಿಗಳಾಗುತ್ತದೆ. ಅದರೆ ಇದುವರೆವಿಗೂ ಅವರಿಗೆ ಯಾರು ಒಂದು ರೂಪಾಯಿ ಕೊಟ್ಟಿಲ್ಲ ಮತ್ತು ಟೌನ್‌ಶಿಪ್ ಮಾಡಿಲ್ಲ. ಇದರ ಬಗ್ಗೆ ಸರ್ಕಾರ ಏನು ಪರಿಶೀಲನೆ ಮಾಡುತ್ತಿದೆ ಎನ್ನುವುದೊಂದು. ಎರಡನೆಯದಾಗಿ, ರಸ್ತೆಗಳನ್ನು ಮಾಡಿದ್ದಾರೆ. ಆ ರಸ್ತೆಗೆ ಯಾರು ಭೂಮಿಯನ್ನು acquisition ಮಾಡಿದ್ದಾರೆ, ಅವರಿಗೆ ಬದಲಿ ನಿವೇಶನ ಕೊಡುತ್ತೇವೆ ಎಂದು ನಾಯಂಡಹಳ್ಳಿ ಗೇಟ್ ಹತ್ತಿರ ಬಾಗೇಗೌಡ ಲೇ-ಔಟ್ ಇರುತ್ತದೆ ಮತ್ತು Pramod ಬಡಾವಣೆಗಳನ್ನು

ಮಾಡಿದ್ದಾನೆ ಎಂದು ಕೊಡುತ್ತಾರೆ. ಆದರೆ ಆ ಬಡಾವಣೆಯಲ್ಲಿ ನಿವೇಶನ ಕೊಟ್ಟಿದ್ದಾರೆ. ಆದರೆ ಅವರಿಗೆ ನೊಂದಣಿ ಮಾಡಿಸಿಕೊಟ್ಟಿಲ್ಲ. ಅವರು ಹೋಗಿ ಅಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಅವರಿಗೆ ಯಾವುದೇ ಮೂಲಭೂತ ಸೌಕರ್ಯಗಳಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರೇ ಉತ್ತರ ಹೇಳಿ. ತಾವು ಭಾಷಣ ಮಾಡಬೇಡಿ.

**ಶ್ರೀ ಸತೀಶ ಜಾರಕಿಹೊಳಿ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ನೈಸ್ ಕಂಪನಿ ಮತ್ತು ಸರ್ಕಾರದ ಮಧ್ಯೆ 1997 ರಲ್ಲಿ ಒಪ್ಪಂದವಾಗಿರುವ ಯೋಜನೆಯಾಗಿದೆ. ಇದನ್ನು ನೈಸ್ ಕಾರಿಡಾರ್ ರಸ್ತೆ ಎಂದು ಕರೆಯುತ್ತೇವೆ. ಇದು ಸುಮಾರು ಐದು ಟೌನ್‌ಶಿಪ್‌ಗಳು ಮತ್ತು ಬೆಂಗಳೂರಿನಿಂದ ಮೈಸೂರು ನಗರಕ್ಕೆ ಇದೊಂದು parallel ಆಗಿ ರಸ್ತೆ ಮಾಡಿರುವಂತಹ ಯೋಜನೆ. ತಾವು ಹೇಳಿರುವಂತಹ ಅಷ್ಟೊಂದು ಭೂಮಿಯನ್ನು ಇಲ್ಲಿಯವರೆವಿಗೆ ಕೊಡುವುದಕ್ಕಾಗಿರಲಿಲ್ಲ. ಏಕೆಂದರೆ, ಇದು ಇನ್ನೂ ಅಪೂರ್ಣವಾಗಿದೆ. ಈ ವಿಷಯದ ಕುರಿತಾಗಿ ಮಾನ್ಯ ಸರ್ವೋಚ್ಛ ನ್ಯಾಯಾಲಯ ಮತ್ತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವ್ಯಾಜ್ಯಗಳು ನಡೆಯುತ್ತಿದೆ. ಸರ್ಕಾರ ಮತ್ತು ನೈಸ್ ಕಂಪನಿ ಮಧ್ಯೆ ಏನೊಂದು ಒಪ್ಪಂದವಾಗಿದೆಯೋ, ಅದನ್ನು ಪೂರ್ಣಗೊಳಿಸುವುದಕ್ಕೆ ಇಲ್ಲಿಯವರೆವಿಗೆ ಸಾಧ್ಯವಾಗಿಲ್ಲ. ಇದನ್ನು ಮನಗೊಂಡು ಮಾನ್ಯ ಮುಖ್ಯಮಂತ್ರಿಗಳು ಸಚಿವ ಸಂಪುಟದ ಉಪ ಸಮಿತಿಯನ್ನು ನೇಮಿಸಿದ್ದಾರೆ. ಅದರಲ್ಲಿ ನಾನು ಕೂಡ ಸದಸ್ಯನಾಗಿದ್ದೇನೆ. ಅದಕ್ಕೆ ಗೃಹ ಸಚಿವರು ಕೂಡ ಅಧ್ಯಕ್ಷರಾಗಿದ್ದಾರೆ. ಇದು ಸುಮಾರು 30 ವರ್ಷಗಳ ಹಳೆಯದ್ದಾಗಿರಬಹುದು. ಇದನ್ನು ಯಾವ ರೀತಿ ಬಗೆಹರಿಸಬೇಕೆಂಬ ಸ್ಪಷ್ಟವಾದ ವರದಿಯನ್ನು ಕೊಡಿ ಎಂದು ಹೇಳಿದ್ದಾರೆ. ಆ ವರದಿಯ ಕೊಟ್ಟ ಮೇಲೆ ಇದಕ್ಕೆ ಏನಾದರೂ ಪರಿಹಾರ ಕಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ಯೋಜನೆಯಲ್ಲಿ ಬಹಳಷ್ಟು ಸಮಸ್ಯೆ ಮತ್ತು ಗೊಂದಲವಿದೆ. ಇದರ ಬಗ್ಗೆ ಉಪ ಸಮಿತಿ ವರದಿ ಕೊಟ್ಟ ನಂತರ ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ.

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯ ಇರುವುದೇನೆಂದರೆ, 1997ರಲ್ಲಿ ಮೂವತ್ತು ವರ್ಷಕ್ಕೆ ಅಗ್ರಿಮೆಂಟ್ ಆಗಿದೆ. ಇದುವರೆವಿಗೂ ಅವರಿಗೆ ಟೌನ್‌ಶಿಪ್ ಮಾಡುವುದಕ್ಕಾಗಲಿಲ್ಲ. ಈಗ ನಾವು 13,000 ಎಕರೆ ಕೊಟ್ಟಿದ್ದೇವೆ. ಇನ್ನೂ ಏನೂ ಅವಧಿ ಕೂಡ ಮುಗಿಯುತ್ತಿದೆ. ಯಾವುದೇ ಭೂಸ್ವಾಧೀನ ಪಡಿಸಿಕೊಂಡಿಲ್ಲ. ಬಡಾವಣೆಗಳು ಕೂಡ ಆಗಿಲ್ಲ. ಅವರಿಗೆ ಏತಕ್ಕೆ ಕೊಡಬೇಕು? ಈಗಾಗಲೇ ಮೂವತ್ತು ವರ್ಷಗಳಾಗುತ್ತಿದೆ. 1 ಲಕ್ಷ

30,000 ಕೋಟಿ ರೂಪಾಯಿಗಳು, ಇದು ಸಣ್ಣ ಮೊತ್ತವಲ್ಲ. ನಮ್ಮ ಬಜೆಟ್‌ನ ಶೇಕಡಾ 25 ರಷ್ಟು ಇದೆ. ಮಾನ್ಯ ಸಭಾಪತಿಯವರೇ, ದ್ವಿಚಕ್ರ ವಾಹನಗಳಿಗೆ ಎಲ್ಲಿಯೂ ಕೂಡ ಟೋಲ್ ಸಂಗ್ರಹ ಮಾಡುವುದಿಲ್ಲ. ಯಾವ ಹೆದ್ದಾರಿಗಳಲ್ಲಿಯೂ ಕೂಡ ಟೋಲ್ ಸಂಗ್ರಹ ಮಾಡುವುದಿಲ್ಲ. ಇವರು ಇಲ್ಲಿ ಟೋಲ್ ಸಂಗ್ರಹ ಮಾಡುತ್ತಾರೆ. ಇವರು ಟೋಲ್‌ನ ದರ ನಿಗಧಿ ಮಾಡಬೇಕಾದರೆ ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಎರಡ್ಮೂರು ವರ್ಷಗಳ ಕಾಲ ಅನುಮತಿಯನ್ನು ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತಿಲ್ಲ. ಅವರೇ ಟೋಲ್ ಶುಲ್ಕವನ್ನು ನಿಗಧಿಪಡಿಸಿ, ಅವರೇ ಸಂಗ್ರಹ ಮಾಡುತ್ತಿದ್ದಾರೆ. ಸರ್ಕಾರ ನೋಟಿಸ್ ಕೊಟ್ಟ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಯಾವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ದ್ವಿಚಕ್ರ ವಾಹನಕ್ಕೋಸ್ಕರ ಟೋಲ್ ಸಂಗ್ರಹ ಮಾಡುವುದಿಲ್ಲ. ಅವರು ಅದನ್ನು ಮಾಡಬಾರದು. ಆಮೇಲೆ ಇವರು ಏನು ಮಾಡುತ್ತಾರೆ ಎಂದರೆ ಇದಕ್ಕೆ ಸಿಬ್ಬಂದಿಗಳನ್ನು ಜಾಸ್ತಿ ತೆಗೆದುಕೊಂಡಿರುವುದಿಲ್ಲ. ಟೋಲ್‌ನಲ್ಲಿ ಶುಕ್ರವಾರ, ಶನಿವಾರ ಸಮಯದಲ್ಲಿ ನೋಡಿದರೆ, ನಾವು ಹತ್ತು ಹದಿನೈದು ನಿಮಿಷಗಳ ಕಾಲ ಟೋಲ್‌ನಲ್ಲಿ ಕಾಯಬೇಕಾಗುತ್ತದೆ. ವಾಹನಗಳು ಬೇಗ ಮೂವ್ ಆಗುವುದಿಲ್ಲ. ದಯವಿಟ್ಟು, ಅಲ್ಲಿ ಹೆಚ್ಚಿನದಾಗಿ ಸಿಬ್ಬಂದಿಗಳನ್ನು ನೇಮಕ ಮಾಡಬೇಕು. ಸಿಬ್ಬಂದಿ ನೇಮಕ ಮಾಡಿದರೆ, at least ವಾಹನಗಳು ಬೇಗ ಚಲಾಯಿಸಿಕೊಂಡು ಹೋಗುತ್ತಾರೆ. ಯಾವುದೇ ಟೋಲ್‌ಗಳನ್ನು ಐದರಿಂದ ಹತ್ತು ನಿಮಿಷಗಳ ಕಾಲ ವಾಹನಗಳು ನಿಲ್ಲಬೇಕಾಗುವುದು ಬೇಕಾಗಿರುವುದಿಲ್ಲ. ಅದೇ ರೀತಿಯಾಗಿ 2016ರಲ್ಲಿ ಸರಿಯಾಗಿ ರಸ್ತೆಗಳನ್ನು ನಿರ್ವಹಣೆ ಮಾಡಿಲ್ಲ ಎಂದು Default Notice ಅನ್ನು ನಮ್ಮ ಸರ್ಕಾರ ಸುತ್ತೋಲೆಯನ್ನು ಹೊರಡಿಸಿದೆ. ಅದರ ಮೇಲೆ ಮಾನ್ಯ ನ್ಯಾಯಾಲಯದ ಮೊರೆ ಹೋಗುತ್ತಾರೆ.

**(ಮುಂದು)**

(295) 11.03.2026 11.10 ಟಿಸಿಹೆಚ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಾಮೋಜಿಗೌಡ (ಮುಂದು)**

ನಾವು ಏನೇ ಕೊಟ್ಟರು ಕೂಡ ಅವರು ಕೋರ್ಟ್‌ಗೆ ಹೋಗುತ್ತಿದ್ದಾರೆ. ಹಾಗಾಗಿ, ನನ್ನ ಕೊನೆಯ ಪ್ರಶ್ನೆ ಏನೆಂದರೆ, ಸರ್ಕಾರ ಅವರಿಗೆ ಸುಮಾರು 13,000 ಎಕರೆ ಜಮೀನು ಕೊಡುವುದಕ್ಕೆ plan ಮಾಡಿದೆ. ಈಗ ಅವರು township ಮತ್ತು road ಮಾಡುತ್ತೇವೆಂದು ಹೇಳುತ್ತಿದ್ದಾರೆ. Road ಗೆ ನಮ್ಮದೇನೂ problem ಇಲ್ಲ. ಆ ರಸ್ತೆ ಆಗಿದ್ದರಿಂದ ಅನೇಕ vehicles Outer Ring Road ನಲ್ಲಿ ಹೋಗುತ್ತಿವೆ.

**ಸಭಾಪತಿಯವರು:-** ಮಾನ್ಯ ರಾಮೋಜಿಗೌಡ ರವರೇ, ಈಗ ಏನು ಮಾಡಬೇಕೆಂದು ತಾವು ಪ್ರಶ್ನೆ ಕೇಳಿ.

**ಶ್ರೀ ರಾಮೋಜಿ ಗೌಡ:-** ಮಾನ್ಯ ಸಭಾಪತಿಯವರೇ, ಆದರೆ ಅಲ್ಲtownship ಅನ್ನು ಯಾವುದೇ ಕಾರಣಕ್ಕೂ ಕೊಡಬಾರದು. ಇವತ್ತಿನ ದಿವಸ ಅವರ ಅವಧಿ ಮುಗಿದಿರುವುದರಿಂದ two-wheeler ಶುಲ್ಕವನ್ನು ರದ್ದುಗೊಳಿಸಬೇಕು.

**ಶ್ರೀ ಸತೀಶ್ ಜಾರಕಿಹೊಳಿ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ರಾಮೋಜಿಗೌಡರವರು ಹೇಳಿದಂತೆ, ನಾವು ಏನೇ ಮಾಡಿದರೂ ಕೂಡ ಅವರು ತಕ್ಷಣವೇ ಕೋರ್ಟ್‌ಗೆ ಹೋಗುತ್ತಾರೆ. ಅಲ್ಲಿಂದ ತಡೆಯಾಜ್ಞೆ ಬರುತ್ತದೆ. ಹೀಗಾಗಿ, ನಮ್ಮ ಸರ್ಕಾರ ಮತ್ತು ಹಿಂದಿನ ಸರ್ಕಾರ ಇಲ್ಲಿಯವರೆಗೆ ಯಾವುದೇ ಕಾಮಗಾರಿಯನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಸದಸ್ಯರು ಸ್ಕೂಟರ್ ಬೈಕ್‌ಗಳಿಗೆ ಶುಲ್ಕವನ್ನು ರದ್ದುಗೊಳಿಸಬೇಕು ಎಂದು ಹೇಳಿದ್ದಾರೆ. ಇದು ನಮ್ಮ 97ರ Framework Agreement ನಲ್ಲಿದೆ. ಅವರು ತಮಗೆ ಹೇಗೆ ಬೇಕೋ ಹಾಗೆ ಮಾಡಿಸಿಕೊಳ್ಳುತ್ತಿದ್ದಾರೆ. ಸ್ಕೂಟರ್‌ಗಳನ್ನು ಕೂಡ include ಮಾಡಿ ನಮ್ಮ ಸರ್ಕಾರದಿಂದ sign ಆಗಿದೆ. ಮಾನ್ಯ ಸದಸ್ಯರು ಹೇಳಿದಂತೆ, ಇದನ್ನು ಮುಂದುವರೆಸಬೇಕೋ, ಬೇಡವೋ ಎನ್ನುವುದಕ್ಕಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು ಉಪ ಸಮಿತಿಯನ್ನು ನೇಮಕ ಮಾಡಿದ್ದಾರೆ. ನಾವು ಅಲ್ಲಿ ಒಂದು ಸ್ಪಷ್ಟವಾದ ವರದಿಯನ್ನು ಸರ್ಕಾರಕ್ಕೆ ಕೊಡುತ್ತೇವೆ. ಅವರ ಎಲ್ಲಾ ಅಂಶಗಳು ಏನಿದೆ ನಮ್ಮ committee ಕೂಡ ಇದಕ್ಕೆ ಚಿಂತನೆ ಮಾಡುತ್ತಿದೆ. ಅವರ ಚಿಂತನೆ ಮತ್ತು ಕಳಕಳಿ ಏನಿದೆಯೋ ಅದನ್ನು ಖಂಡಿವಾಗಿಯು ಕೂಡ ನಾವು ಸಮಿತಿಯಿಂದ ವರದಿ ತಯಾರು ಮಾಡಿ ಅದನ್ನು ಸರ್ಕಾರಕ್ಕೆ ಕೊಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿದಂತೆ ಆದಷ್ಟು ಎಲ್ಲಾ ರಕ್ಷಣೆ ಮಾಡತಕ್ಕಂಥ ಪ್ರಯತ್ನ ನಮ್ಮ ಇಲಾಖೆ ಮಾಡುತ್ತದೆ.

ಪ್ರಶ್ನೆ ಸಂಖ್ಯೆ.957
(ಉತ್ತರ ಲಗತ್ತಿಸಿದೆ)

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸದರಿ ಕಾಮಗಾರಿ 2017-18ರಲ್ಲಿ CSF ಅನುದಾನದಲ್ಲಿ ಮಂಜೂರಾಗಿದ್ದು, ಸೇತುವೆ Approach ರಸ್ತೆ ಇದುವರೆಗೂ ರಾಜ್ಯ ಸರ್ಕಾರದಿಂದ ಭೂಸ್ವಾಧೀನವಾಗದ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ ಎಂದು ಹೇಳಿದ್ದಾರೆ. ಅದೇ ರೀತಿ . . .

**ಸಭಾಪತಿಯವರು:-** ಶ್ರೀ ಬಸನಗೌಡ ಬಾದರ್ಲಿಯವರೇ, ಅದನ್ನು ಓದಬೇಡಿ, ಕೇಳಿ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಅವರು answer ಕೊಟ್ಟಿದ್ದಾರೆ. ನಾನು ಅದನ್ನೇ ಕೇಳುತ್ತಿದ್ದೇನೆ. ಅದೇ ರೀತಿಯಲ್ಲಿ ತುಂಗಭದ್ರಾ ನದಿಗೆ ಅಡ್ಡಲಾಗಿ ನಿಟ್ಟೂರು-ಸಿಂಗಾಪುರ ಬಿಡ್ಜ್ ನಿರ್ಮಾಣ ಕಾಮಗಾರಿ ಈ ಎರಡೂ ತಾಲ್ಲೋಕುಗಳಲ್ಲಿ ಬಹುದಿನದ ಬೇಡಿಕೆಯಾಗಿದೆ. ರಾಜ್ಯ ಸರ್ಕಾರ ಈ ಕೂಡಲೇ ಕಾಮಗಾರಿಗೆ ಅವಶ್ಯಕತೆ ಇರುವ ಭೂಮಿಯ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಆದಷ್ಟು ಬೇಗನೆ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಸತೀಶ್ ಜಾರಕಿಹೊಳಿ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಇದು ಯಾವ ರೀತಿ ಅವಶ್ಯಕೆ ಇದೆ. ಅಲ್ಲಿ ಇದರಿಂದ ಸಾರ್ವಜನಿಕವಾಗಿ ಎಷ್ಟು ಉಪಯೋಗವಾಗುತ್ತದೆ. ಅಲ್ಲಿ ವಾಹನ ಸಂಚಾರ ದಟ್ಟಣೆ ಎಷ್ಟಿದೆ ಎನ್ನುವುದನ್ನು ನೋಡಿ ನಾವು ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರು ಭೂಸ್ವಾಧೀನ ಪ್ರಕ್ರಿಯೆ ಮಾಡುವಂತೆ ಹೇಳಿದ್ದಾರೆ ಅದನ್ನು ಮಾಡುತ್ತೇವೆ. ಬ್ರಿಡ್ಜ್ ಕಟ್ಟುವುದು late ಆಗಬಹುದು. ಆದರೆ ನಮಗೆ ಭೂಸ್ವಾಧಿನಕ್ಕೆ ಬೇಕಾದಂತಹ ರೂ. 6.5 ಕೋಟಿಗಳನ್ನು ಕೊಟ್ಟು ಆ ಭೂಮಿಯನ್ನು ನಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತೇವೆ. ನಮ್ಮ ಹಣಕಾಸಿನ ಲಭ್ಯತೆ ಮೇಲೆ ಇದನ್ನು ಮಾಡತಕ್ಕಂಥ ಪ್ರಯತ್ನವನ್ನು ನಮ್ಮ ಇಲಾಖೆಯಿಂದ ಮಾಡುತ್ತೇವೆ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ರಾಯಚೂರು ಜಿಲ್ಲೆಯಲ್ಲಿರುವ ಸಿಂಧನೂರು ಮತ್ತು ಸಿರುಗುಪ್ಪ ತಾಲ್ಲೂಕುಗಳಲ್ಲಿ ಆ bridgeನ ಅವಶ್ಯಕತೆ ಬಹಳ ಇದೆ. ಹಲವಾರು ಹಳ್ಳಿಗಳಿಗೆ ಹೋಗಬೇಕಾದರೆ

ನೂರಾರು ಕಿಲೋ ಮೀಟರ್ ಸುತ್ತಾಡಿ ಬರುವಂಥ ಪರಿಸ್ಥಿತಿ ಇದೆ. ರೈತರಿಗೆ ಮತ್ತು ವಿದ್ಯಾರ್ಥಿಗಳಿಗೂ ಸಮಸ್ಯೆಯಾಗಿದೆ. ಇದನ್ನು ಕೂಡಲೇ ಮಾನ್ಯ ಸಚಿವರಿಂದ ಮಾಡುವಂಥದ್ದು ಆಗಬೇಕು ಎಂದು ನಾನು ಕೇಳುತ್ತಿದ್ದೇನೆ.

**ಶ್ರೀ ಸತೀಶ್ ಜಾರಕಿಹೊಳಿ:–** ಮಾನ್ಯ ಸಭಾಪತಿಯವರೇ, ಅದರ ಅವಶ್ಯಕತೆ ಇದ್ದರೆ ಖಂಡಿತವಾಗಿಯು ಕೂಡ bridge ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ. ೪೪೪**
**(ಉತ್ತರ ಲಗತ್ತಿಸಿದೆ)**

**ಶ್ರೀ ಟಿ.ಎ ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಿಂದಿನ ಬೆಳಗಾವಿ ಅಧಿವೇಶನದಲ್ಲಿ ಇದೇ ಪ್ರಶ್ನೆಯನ್ನು ಮಾನ್ಯ ಸಾರಿಗೆ ಸಚಿವರಿಗೆ ಕೇಳಿದ್ದೆನು. ಅವೊತ್ತು ನನಗೆ ಮಾನ್ಯ ಸಚಿವರು ನನಗೆ ಒಂದು ಭರವಸೆಯನ್ನು ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ನಿಮ್ಮಲ್ಲಿ ಯಾವುದೇ ಮಾಹಿತಿ ಇದ್ದರೂ ನನಗೆ ಕೊಡಿ, ಅದರಲ್ಲಿ ಏನಾದರೂ ಸತ್ಯಾಂಶ ಇದ್ದರೆ ನಾನು ಲೋಕಾಯುಕ್ತ ತನಿಖೆಗೆ ಆದೇಶ ಮಾಡುತ್ತೇನೆ ಎಂದು ಸದನದಲ್ಲಿ ನನಗೆ ಭರವಸೆ ಕೊಟ್ಟಿದ್ದರು. ನಾನು ಅದರ ಪ್ರಕಾರ ಮಾನ್ಯ ಸಚಿವರಿಗೆ ಪತ್ರವನ್ನು ಕೂಡ ಬರೆದು, ಅವರಿಗೆ ಸಂಪೂರ್ಣ duplicate certificate ಪಡೆದಿರತಕ್ಕಂಥ ನೌಕರರು ಯಾರಿದ್ದಾರೋ ಅವರ ವಿಚಾರವಾಗಿ ಸಂಪೂರ್ಣ ಮಾಹಿತಿಯನ್ನು ಕೊಟ್ಟಿದ್ದೆನು. ಆದರೆ ಅವರ ವಿರುದ್ಧ ಏನೂ ಕ್ರಮ ಆಗಿಲ್ಲ. ಈಗಾಗಲೇ ೩ ತಿಂಗಳಾಗಿದೆ. ಎರಡನೆಯದಾಗಿ, ದಿನಾಂಕ 15.12.2025 ರಂದು ಈ ಪ್ರಶ್ನೆಗೆ ನಾನು ಸಂಪೂರ್ಣ ವಿವರಗಳನ್ನು ಕೊಟ್ಟಿದ್ದೇನೆ. ಅದಾದ ನಂತರ ಈ ದಿನಾಂಕ 23.02.2026ಕ್ಕೆ ನಾನು ಈ ಒಂದು ಪ್ರಶ್ನೆಯನ್ನು ಈ ಸದನದಲ್ಲಿ ಮಾತನಾಡಬೇಕೆಂದು ನೋಟೀಸ್ ಕೊಟ್ಟಿದ್ದೇನೆ. ಅದಾದ ನಂತರ ಒಂದು ವಾರಕ್ಕೆ ಇಲಾಖಾಧಿಕಾರಿಗಳು ಅವರಿಗೆ ಒಂದು ನೋಟೀಸ್ seven days ನಲ್ಲಿ ಕಳುಹಿಸಿ, ನೀವು ನಮಗೆ 15 ದಿವಸದಲ್ಲಿ ಉತ್ತರ ಕೊಡಿ ಎಂದು ಏನೋ ಒಂದು ನೆಪಕ್ಕೆ ಕಳುಹಿಸಿದ್ದಾರೆ. ಏಕೆಂದರೆ, ಮಾನ್ಯ ಸಾರಿಗೆ ಸಚಿವರ ಬಗ್ಗೆ ನನಗೆ ಗೌರವ ಇದೆ. ಏಕೆಂದರೆ ಅವರು ಬಹಳ ಉತ್ತಮವಾದಂತಹ ಕೆಲಸವನ್ನು ಮಾಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಶರವಣರವರೇ, ನೀವು ಪ್ರಶ್ನೆ ಕೇಳಿ.

**ಶ್ರೀ ಟಿ.ಎ ಶರವಣ:-** ಮಾನ್ಯ ಸಭಾಪತಿಯವರೇ, ಆದರೆ ಈ ಇಲಾಖಾಧಿಕಾರಿಗಳು ಅವರಿಗೆ ಯಾವ ರೀತಿ misguide ಮಾಡುತ್ತಾರೆ ಎಂದು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ನನ್ನ ಬೇಡಿಕೆ ಇರುವುದೇನೆಂದರೆ, ತಾವು ಏನು ಭರವಸೆಯನ್ನು ಕೊಟ್ಟಿದ್ದೀರಿ. ಅದು ಯಾವುದೂ ಕೂಡ ಈಡೇರಿಲ್ಲ. ಈಗಲಾದರೂ ಕೂಡ ಎಚ್ಚೆತ್ತುಕೊಂಡು, ಈ ವಿಚಾರವಾಗಿ ತಾವು ಇಲಾಖೆಯಲ್ಲಿ ಅಕ್ರಮವಾಗಿ ಯಾರು ಏನು ಮಾಡಿದ್ದಾರೆ ಅವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕು. ಅದನ್ನು ನಾವು ಮಾಡುತ್ತೇವೆಂದು ಹೇಳಿದ್ದರು. ಆದರೆ ಅವರಿಗೆ ಬರೀ ನೋಟೀಸ್ ಕೊಟ್ಟು . . .

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ರಾಮಲಿಂಗಾ ರೆಡ್ಡಿಯವರೇ, ತಾವು ಉತ್ತರ ಹೇಳಿ, ಮಾನ್ಯ ಶರವಣರವರೇ, ತಾವು ಆಮೇಲೆ ಪ್ರಶ್ನೆ ಕೇಳಿ.

**ಶ್ರೀ ರಾಮಲಿಂಗಾ ರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಯವರೇ, ಹಿಂದಿನ ಬೆಳಗಾವಿ ಅಧಿವೇಶನದಲ್ಲೂ ಕೂಡ ಮಾನ್ಯ ಸದಸ್ಯರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಅದರಲ್ಲಿ ಗ್ರೂಪ್-ಸಿ ವೃಂದದಿಂದ Motor Vehicle Inspectors ಗೆ ಶೇ.5 ರಷ್ಟು ಬಡ್ತಿ ನೀಡಲು ಸರ್ಕಾರದ ಅಧಿಸೂಚನೆ ಸಂಖ್ಯೆ. ಟಿಡಿ 40 ಟಿಡಿಎಸ್ 2021 (ಭಾಗ-1) ದಿನಾಂಕ 12.10.2022 ರನ್ವಯ ಅವಕಾಶ ಮಾಡಿಕೊಟ್ಟರು. ಅದಾದನಂತರ 2022-2023ರಲ್ಲಿ ಸುಮಾರು 17 ಗ್ರೂಪ್-ಸಿ ನೌಕರರಿಗೆ ನಮ್ಮ ಇಲಾಖೆಯಿಂದ higher studies ಗೆ ಅವರ experience ಮೇಲೆ ಬೇರೆ ಕಡೆಗೆ ಹೋಗಿ ಓದುವುದಕ್ಕೆ ಅವಕಾಶ ಇದೆ. 17 ಗ್ರೂಪ್-ಸಿ ನೌಕರರು ತೆಗೆದುಕೊಂಡಿದ್ದಾರೆ. 2023-24ರಲ್ಲಿ 24 ಗ್ರೂಪ್-ಸಿ ನೌಕರರು ತೆಗೆದುಕೊಂಡಿದ್ದಾರೆ. 2024-25ರಲ್ಲಿ 15 ಗ್ರೂಪ್-ಸಿ ನೌಕರರು ತೆಗೆದುಕೊಂಡಿದ್ದಾರೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಅವಕಾಶ ಎಲ್ಲಿದೆ?

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಒಟ್ಟು 41 ನೌಕರರಲ್ಲಿ, 3 ಜನ ನೌಕರರು ಸೇರಿಕೊಳ್ಳಲಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ಉತ್ತರದಲ್ಲಿ ಹೇಳಿರುವುದನ್ನು ಬಿಟ್ಟು ಹೇಳಿ ಎಂದು ಕೇಳುತ್ತಿದ್ದಾರೆ.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಇಬ್ಬರು not concerned. ಅವರಿಗೆ ನಮ್ಮ ಇಲಾಖೆಯವರು ಕೊಟ್ಟಿಲ್ಲ. ಆಮೇಲೆ ಇಬ್ಬರು ರೆಗ್ಯೂಲರ್ ಆಗಿ ರಜೆ ಹಾಕಿಕೊಂಡು ಹೋಗಿ ವ್ಯಾಸಂಗ ಮಾಡುತ್ತಿದ್ದಾರೆ. ಒಬ್ಬರ ಬಗ್ಗೆ ಏನೂ ಮಾಹಿತಿ ಇಲ್ಲ. ಆಮೇಲೆ ನಮ್ಮ ಸಾರಿಗೆ ಆಯುಕ್ತರು, ದಿನಾಂಕ 09.05.2025 ರಂದು ಮತ್ತು ದಿನಾಂಕ 29.11.2025ರಂದು ಕೂಡ Department of Technical Education Director ರವರಿಗೆ letter ಬರೆದಿದ್ದಾರೆ. ಆದರೆ ಅವರಿಂದ ನಮಗೆ ಸರಿಯಾಗಿ ಮಾಹಿತಿ ಸಿಗುವುದಿಲ್ಲ. ಆಮೇಲೆ ನಮ್ಮ ಸಾರಿಗೆ ಆಯುಕ್ತರು, ಅವರಿಗೆ ದಿನಾಂಕ 03.03.2026ಕ್ಕೆ ಒಂದು ಕಾರಣ ಕೇಳಿ ನೋಟೀಸ್ ಅನ್ನು ಕೂಡ ಕೊಡುತ್ತಾರೆ. ಅದಕ್ಕೆ clarity ಬರಬೇಕೆಂದು . . .

**ಸಭಾಪತಿಯವರು:-** ಮಾನ್ಯ ಸಚಿವರೇ, ನೋಟೀಸ್ ಕೊಟ್ಟಿದ್ದೀರಿ. ಮುಂದೆ ಏನು ಮಾಡುತ್ತೀರಿ ಹೇಳಿ?

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ನಿವೃತ್ತ ನ್ಯಾಯಾಧೀಶರಿಂದ ತನಿಖೆ ಮಾಡಿಸುತ್ತಿದ್ದೇವೆ. ಏಕೆಂದರೆ ನಮ್ಮ ಇಲಾಖೆಗೆ ಬರುತ್ತದೆ ಮತ್ತು Department of Technical Education ಕೂಡ ಬರುತ್ತದೆ. ನಿವೃತ್ತ ನ್ಯಾಯಾಧೀಶರಿಂದ ತನಿಖೆ ಮಾಡಿ ಎಂದು ಆದೇಶವನ್ನು ಕೂಡ ಮಾಡಿದ್ದೇವೆ. ನಮ್ಮ ಹತ್ತಿರ ಗೆಜೆಟ್ copy ಕೂಡ ಇದೆ. ಅದನ್ನು ಮಾನ್ಯ ಸದಸ್ಯರಾದ ಶ್ರೀ ಶರವಣ ರವರಿಗೆ ಕಳುಹಿಸುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನನ್ನ ವಿನಂತಿ ಏನಿದೆ ಅದನ್ನು ಕೇಳಿಕೊಂಡುಬಿಡಿ. ನಾನು ಮಾನ್ಯ ಸಚಿವರಿಗೆ ಇಷ್ಟೇ ಹೇಳುವುದು.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಮೇಲ್ನೋಟಕ್ಕೆ ಇದರಲ್ಲಿ ತಪ್ಪಾಗಿದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ನಿವೃತ್ತ ನ್ಯಾಯಾಧೀಶರಾದ ಶ್ರೀ ನಾರಾಯಣ್ ಎಂಬುವರನ್ನು ನೇಮಕ ಮಾಡಲಾಗಿದೆ. ಅದು ಗೆಜೆಟ್ ಕೂಡ ಆಗಿದೆ. ಅದನ್ನು ತನಿಖೆ ಮಾಡಿಸುತ್ತೇವೆ.

**ಸಭಾಪತಿಯವರು:-** ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಿದ್ದೀರಾ ಸರಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಚಿವರೇ, ನನ್ನ ವಿನಂತಿ ಏನೆಂದರೆ . . .

**ಸಭಾಪತಿಯವರು:-** ಮಾನ್ಯ ಶರವಣರವರೇ, ಒಂದು ನಿಮಿಷ ಕೇಳಿ. ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಿದ್ದಾರೆಂದರೆ ಅಲ್ಲಿಗೆ ಮುಗಿಯಿತು. ಅಲ್ಲಿಯವರೆಗೂ ಏನೂ ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಆಯಿತು ಅದು ಮಾಡಲಿ. ನಾನು ಇನ್ನೊಂದು ವಿಚಾರವನ್ನು ಹೇಳುತ್ತೇನೆ ಅಷ್ಟೇ. ಮಾನ್ಯ ಸಚಿವರೇ, ಕೆ.ಸಿ.ಎಸ್.ಆರ್ ನಿಯಮಗಳು ಏನು ಹೇಳುತ್ತದೋ ಅದರ ಪ್ರಕಾರ, ಯಾರು ಈ fake certificate ಕೊಟ್ಟಿದ್ದಾರೋ, ಅವರ ವಿರುದ್ಧ ಕೂಡ ಕ್ರಮ ತೆಗೆದುಕೊಳ್ಳಬೇಕು. ಆಮೇಲೆ ಇದು ತಮಗೂ ಕೂಡ ಗೊತ್ತಿದೆ. ಬೆಳಗಾವಿಯಿಂದ ಬೆಂಗಳೂರಿಗೆ ಬರುವುದಕ್ಕೆ ಎಷ್ಟು ಸಮಯ ತೆಗೆದುಕೊಳ್ಳುತ್ತದೆ. ಮೈಸೂರಿನಿಂದ ಬೆಂಗಳೂರಿನ ಜೆ.ಪಿ.ನಗರಕ್ಕೆ ಬರುವುದಕ್ಕೆ ಎಷ್ಟು ಸಮಯ ಬೇಕಾಗುತ್ತದೆ? ಆತ ಅಲ್ಲಿಂದ journey ಮಾಡಿಕೊಂಡು one hour ನಲ್ಲಿ ಇಲ್ಲಿಗೆ ಬಂದು ಇಲ್ಲಿ exam ಬರೆಯುವುದಕ್ಕೆ ಸಾಧ್ಯವೇ? ಅವರು ಯಾವ ರೀತಿ ಈ ನಕಲು ಅಥವಾ fake certificate ಕೊಟ್ಟಿದ್ದಾರೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಸಾಕಷ್ಟು ಜನ ನೇಮಕಾತಿಗೋಸ್ಕರ ಫಲಾನುಭವಿಗಳು ಕಾಯುತ್ತಿದ್ದಾರೆ. ಅವರಿಗೆಲ್ಲಾ ನ್ಯಾಯ ಸಿಗಬೇಕಲ್ಲವೇ ಮಾನ್ಯ ಸಚಿವರೇ. ಇದು ನನ್ನ ಉದ್ದೇಶ.

**ಸಭಾಪತಿಯವರು:-** ಮಾನ್ಯ ರಾಮಲಿಂಗಾ ರೆಡ್ಡಿಯವರೇ, ತಾವು ಉತ್ತರ ಹೇಳಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಡಿಪ್ಲೋಮಾ ಸರ್ಟಿಫಿಕೇಟ್‌ನಿಂದ ನೇಮಕಾತಿ ಮಾಡಿಕೊಂಡಿರತಕ್ಕಂಥ ವಿದ್ಯಾರ್ಥಿಗಳಿಗೆ . . .

**ಸಭಾಪತಿಯವರು:-** ಮಾನ್ಯ ಟಿ.ಎ.ಶರವಣರವರೇ, ತಾವು ಕುಳಿತುಕೊಳ್ಳಿ.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಈಗ ನಾನು ಬಹಳ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದೇನೆ. ನಿವೃತ್ತ ನ್ಯಾಯಾಧೀಶರಿಂದ ತನಿಖೆ ಮಾಡಿಸುತ್ತೇವೆ. ಯಾರು ತಪ್ಪು ಮಾಡಿದ್ದಾರೋ ಅವರ ಮೇಲೆ ಖಂಡಿತವಾಗಿಯು ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಆಯಿತು. ಮಾನ್ಯ ಎನ್.ರವಿಕುಮಾರ್ ರವರೇ, ತಮ್ಮ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.೮೪೯ಕ್ಕೆ ಮಾನ್ಯ ಸಚಿವರು ಸಮಯ ಕೇಳಿದ್ದಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಯಾವಾಗ ಉತ್ತರ ಕೊಡುತ್ತಾರೆ?

**ಸಭಾಪತಿಯವರು:-** ಮಾನ್ಯ ಲೋಕೋಪಯೋಗಿ ಸಚಿವರು 10 ದಿನಗಳ ಕಾಲಾವಕಾಶ ಕೇಳಿದ್ದಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, okay.

**ಪ್ರಶ್ನೆ ಸಂಖ್ಯೆ. ೮೯೨**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಡಿ.ಟಿ ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ದೀರ್ಘವಾದ ಉತ್ತರವನ್ನು ಮಾನ್ಯ ಕಂದಾಯ ಸಚಿವರು ಒದಗಿಸಿದ್ದಾರೆ. ಆದರೆ ಮಾಜಿ ಸೈನಿಕರುಗಳಿಗೆ ನಿವೇಶವನ್ನು ಕೊಡುವ ವಿಚಾರದಲ್ಲಿ, ಯಲಹಂಕ ಹೋಬಳಿ, ಗಂಟಿಗಾನಹಳ್ಳಿ ಗ್ರಾಮದ ಸರ್ವೇ ನಂಬರ್ 16, 17 ಮತ್ತು ಸರ್ವೇ ನಂಬರ್ 19 ರಲ್ಲಿ ಸುಮಾರು 10 ವರ್ಷಗಳ ಹಿಂದೆ ಆಶ್ರಯ/ಸಿಆರ್/29/2014-15, ದಿನಾಂಕ 07.01.2017 ರಲ್ಲಿ ವಿಶೇಷ ಆಶ್ರಯ ಯೋಜನೆಯಡಿಯಲ್ಲಿ ಮಾಜಿ ಸೈನಿಕರಿಗೆ ನಿವೇಶನ ಹಂಚಿಕೆ ಮಾಡಲು ಮಂಜೂರು ಮಾಡಿರುತ್ತಾರೆ.

(ಮುಂದು)

(296)11.3.2026/11.20/ಎಂ.ಎಂ-ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಟಿ. ಶ್ರೀನಿವಾಸ್ (ಮುಂದು):-**

ಅಂದರೆ ಆಶ್ರಯ/ಸಿ.ಆರ್/29/2014-15 ದಿನಾಂಕ 7-1-2017ರಲ್ಲಿ ವಿಶೇಷ ಆಶ್ರಯ ಯೋಜನೆಯಡಿಯಲ್ಲಿ ಮಾಜಿ ಸೈನಿಕರಿಗೆ ಮಂಜೂರು ಮಾಡಿರುತ್ತಾರೆ. ಆದರೆ ಸರಿ ಸುಮಾರು ಹತ್ತು ವರ್ಷಗಳಾದರೂ ಇದು ಕಾರ್ಯಗತವಾಗಿರುವುದಿಲ್ಲ. ಸರ್ವೆ ನಂ. 16, 17, 19ರಲ್ಲಿ ಸಂಬಂಧಪಟ್ಟ ತಹಶೀಲ್ದಾರರಿಗೆ ಮೂಲ ಉದ್ದೇಶ ನಮ್ಮ ಮಾಜಿ ಸೈನಿಕರಿಗೆ ನಿವೇಶನ ಕೊಡಬೇಕೆಂದು ಬಂದ ಮೇಲೆ ಅಲ್ಲಿ ಒತ್ತುವರಿಯಾಗಿದೆಯೇ, ಇಲ್ಲವೇ ಎಂಬುದು ಖಂಡಿತವಾಗಿಯೂ ಅವರಿಗೆ ಗೊತ್ತಿರುತ್ತದೆ. ಏಕೆಂದರೆ ಉಪ ಪ್ರಶ್ನೆಯಲ್ಲಿ ಒಂದು ಕಡೆ ಹೇಳುತ್ತಾರೆ ಆ ಸರ್ವೆ ನಂಬರ್‌ನಲ್ಲಿ ಯಾರು ಯಾರು occupy ಮಾಡಿದ್ದಾರೆ, ಸ್ಮಶಾನಕ್ಕೆ ಎಷ್ಟು ಗುಂಟೆ ಜಾಗವಿದೆ, ಎಷ್ಟು ಗುಂಟೆ ಇಲ್ಲ ಎಂದು ಗೊತ್ತಿರುತ್ತದೆ. ಖಂಡಿತ ಆ ಒಂದು ಉದ್ದೇಶವನ್ನು ಈಡೇರಿಸುವಂತಹ ಮನಸ್ಥಿತಿ ತಹಶೀಲ್ದಾರರಿಗಿಲ್ಲ ಎಂದು ನನಗನಿಸುತ್ತದೆ. ಏಕೆಂದರೆ 2021ರಲ್ಲಿ ಅದನ್ನು ಸಂಬಂಧಪಟ್ಟ Executive Officer ಗಳಿಗೆ ಹಸ್ತಾಂತರ ಮಾಡಿದ ಮೇಲೆ ಅದು ಆ ಇ.ಓ.ಗಳ ಅಂದರೆ ಕಾರ್ಯನಿರ್ವಾಹಕ ಅಧಿಕಾರಿಗಳ ಹೊಣೆಗಾರಿಕೆಯಾಗಿರುತ್ತದೆ. ಏಕೆಂದರೆ ಅಕಸ್ಮಾತ್ ಅಲ್ಲಿ ಏನಾದರೂ ಒತ್ತುವರಿಯಾಗಿದ್ದರೆ, occupy ಮಾಡಿದ್ದರೆ ಸರ್ವೆಯರ್‌ಗೆ ಬರೆಯಬೇಕು. ಮತ್ತು ಪೋಲೀಸರನ್ನು ಕರೆದುಕೊಂಡು ಹೋಗಿ ಒತ್ತುವರಿಯನ್ನು ತೆರವುಗೊಳಿಸಬೇಕು. ಈಗಾಗಲೇ ಇದು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಹಸ್ತಾಂತರವಾಗಿದೆ. ಆದರೂ ಸಹ ಇಲ್ಲಿ ಒತ್ತುವರಿಯಾಗಿದೆ ಎಂದು ಹೇಳುತ್ತಾರೆ.

**ಸಭಾಪತಿಯವರು:-** ಮಾನ್ಯ ಶ್ರೀನಿವಾಸ್‌ರವರೇ, ಪ್ರಶ್ನೆ ಕೇಳಿ.

**ಶ್ರೀ ಡಿ.ಟಿ. ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಾಗಲೇ ಕೆಳಮನೆಯಲ್ಲಿ ಈ ವಿಚಾರವಾಗಿ ಮಾಜಿ ಸೈನಿಕರ ಬಡಾವಣೆ ಸಚಿವ ಕೃಷ್ಣ ಭೈರೇಗೌಡರು ಎಂದು . . .

**ಸಭಾಪತಿಯವರು:-** ಮಾನ್ಯ ಸಚಿವರೇ, ಉತ್ತರ ಹೇಳಿ.

**ಶ್ರೀ ಡಿ.ಟಿ. ಶ್ರೀನಿವಾಸ್:-** ಆ ನಿಟ್ಟಿನಲ್ಲಿ ಖಂಡಿತ ಇದನ್ನು ಅತಿ ತುರ್ತು ಎಂದು ಪರಿಗಣಿಸಬೇಕು.

**ಸಭಾಪತಿಯವರು:-** ಮಾನ್ಯ ಶ್ರೀನಿವಾಸ್‌ರವರೆ, ಸಚಿವರು ಉತ್ತರ ಹೇಳುತ್ತಾರೆ ಆಮೇಲೆ ಕೇಳಿ.

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, 2004ರಲ್ಲಿ ಜಿಲ್ಲಾಧಿಕಾರಿಗಳಿಗೆ ಇದನ್ನು ಕಾಯ್ದಿರಿಸುವುದಕ್ಕೆ ಅಧಿಕಾರ ಇರಲಿಲ್ಲ ಆದರೂ ಅವತ್ತು ಕಾದಿರಿಸಿದ್ದಾರೆ. ಅದಾದ ನಂತರ ರಾಜೀವ್ ಗಾಂಧಿ ವಸತಿ ನಿಗಮದವರೇ, ಅಲ್ಲಿ ಗುಂಪು ಮನೆಗಳನ್ನು ಕಟ್ಟಿ ಬೇರೆಯವರಿಗೆ ಆ ಮನೆಗಳನ್ನು ಹಂಚಿಕೆ ಮಾಡಿಕೊಟ್ಟಿದ್ದಾರೆ. ಈಗ ಅಲ್ಲಿ ಬೇರೆಯವರು ವಾಸ ಇದ್ದಾರೆ. ಅದಲ್ಲದೆ 2-3 ಸರ್ವೆ ನಂಬರುಗಳಲ್ಲಿ ಸ್ಮಶಾನಗಳು ಇವೆ, ರಸ್ತೆಗಳು ಬಂದಿವೆ. ಈಗ 4 ಎಕರೆ 18 ಗುಂಟೆ ಉಳಿದಿದೆ. 15 ಎಕರೆಯಲ್ಲಿ ಖುಲ್ಲ ಉಳಿದಿರುವುದು 4 ಎಕರೆ 18 ಗುಂಟೆ. ನಾನು ರಾಜೀವ್ ಗಾಂಧಿ ವಸತಿ ನಿಗಮದವರಿಗೆ ಕಂದಾಯ ಇಲಾಖೆಯಿಂದ ಜಾಗವನ್ನು reserve ಮಾಡಿ ಕೊಟ್ಟಿದ್ದೇವೆ. ಈಗ ನಾನು ಒಂದು ಸಲಹೆ ಕೊಡಬಲ್ಲೆ. ತಾವು ಕೂಡ ಪ್ರಶ್ನೆ ಎತ್ತಿದ್ದೀರಿ ಮಾನ್ಯ ಸ್ಥಳೀಯ ಶಾಸಕರೂ ಒತ್ತಾಯ ಮಾಡಿದ್ದಾರೆ. 4 ಎಕರೆ 18 ಗುಂಟೆಯಲ್ಲಿ ಕನಿಷ್ಠ ಬಹುಮಹಡಿ ಕಟ್ಟಿ ಅರ್ಜಿದಾರರಿಗೆ ಮನೆ ಕೊಡುವುದಕ್ಕೆ ಒಂದು ಸಲಹೆ ಕೊಡಬಲ್ಲೆ. ಆದರೆ ಅಂತಿಮ ತೀರ್ಮಾನ ರಾಜೀವ್ ಗಾಂಧಿ ವಸತಿ ನಿಗಮದವರದ್ದಾಗಿರುತ್ತದೆ. ಆದರೆ ನಾವು ಇದನ್ನು ಕೊಟ್ಟಿರುವುದು ಮಾಜಿ ಸೈನಿಕರಿಗಾಗಿ. ಅವರಿಗಾಗಿ ಇದನ್ನು ಉಪಯೋಗ ಮಾಡಿ ಉಳಿದಿದ್ದನ್ನು ಬೇರೆಯವರಿಗೆ ಉಪಯೋಗ ಮಾಡಿ ಎಂದು ನಾನವರಿಗೆ ಸಲಹೆ ರೂಪದಲ್ಲಿ ಒತ್ತಾಯ ಮಾಡಬಹುದು. ಆದರೆ ಅದಕ್ಕೊಂದು ಸಣ್ಣ ಅಡ್ಡ ಇದೆ. ಏನೆಂದರೆ ಅವರು ನಿವೇಶನ ಕೇಳುತ್ತಿದ್ದಾರೆ. ನಿವೇಶನ ಕೊಡಬೇಕಾದರೆ 2021ರಲ್ಲಿ ಕಳೆದ ಸರ್ಕಾರದಲ್ಲಿ ಒಂದು ಕಾನೂನು ಮಾಡಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಸೈನಿಕರಿಗೆ ನಿವೇಶನ ಕೊಡುವುದಕ್ಕೆ ಬರುವುದಿಲ್ಲ. ಬೆಂಗಳೂರು ನಗರ ಜಿಲ್ಲೆಯ ಮೂಲದವರಾಗಿದ್ದರೆ, ಅವರಿಗೆ ಪಕ್ಕದ ಜಿಲ್ಲೆಯಲ್ಲಿ ಕೊಡಬಹುದು. ಅಂತಹ ಕಾನೂನು ಮಾಡಿದ್ದಾರೆ. ನಿವೇಶನವನ್ನು ಕಾನೂನು ಪ್ರಕಾರ ಅಕ್ಕ ಪಕ್ಕದ ಜಿಲ್ಲೆಯಲ್ಲಿ ಕೊಡಬಹುದು ಅಂದರೆ ಬೆಂಗಳೂರು ಗ್ರಾಮಾಂತರ ಅಥವಾ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕೊಡಬಹುದು. ನಾನು

ರಾಜೀವ್ ಗಾಂಧಿ ವಸತಿ ನಿಗಮದವರಿಗೆ ಅವರ ಪರವಾಗಿ ಇಲ್ಲಿ ಬಹುಮಹಡಿ ಕಟ್ಟಿ ಅದರಲ್ಲಿ ನಿವೃತ್ತ ಸೈನಿಕರಿಗೆ ಹಂಚಿಕೆ ಮಾಡಿಕೊಡಿ ಎಂದು ಮನವಿ ಮಾಡುತ್ತೇನೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.):-** ಇಲ್ಲಿ ಏನಾಗುತ್ತದೆಂದರೆ ಹಿಂದೆ ತೆಗೆದುಕೊಂಡಿರುವಂತಹ ನಿರ್ಣಯ ಸಹಜವಾಗಿಯೇ 250ಕ್ಕೂ ಹೆಚ್ಚು ಜನರು ಸೇರಿಕೊಂಡು ಸೊಸೈಟಿ ಮಾಡಿಕೊಂಡು ಸಾಕಷ್ಟು ಬಾರಿ approach ಮಾಡಿದ್ದಾರೆ. ನನ್ನನ್ನು approach ಮಾಡಿದಾಗ ನಾನು ಸಹ ಅಲ್ಲಿಗೆ ಹೋಗಿದ್ದೆ. ಮಾನ್ಯ ಸಚಿವರು ಖುಲ್ಲ ಜಾಗ ಎಷ್ಟು ಉಳಿದಿದೆ ಎಂದು ಹೇಳುತ್ತಿದ್ದಾರೆ. ಅದರ ಜೊತೆಯಲ್ಲಿ ಒಂದಷ್ಟು ಜನ ಅದನ್ನು occupy ಮಾಡಿಕೊಂಡಿದ್ದಾರೆ. ಇನ್ನು ಒಂದಷ್ಟು ಜನ ಪ್ರಭಾವಿಗಳು, ಮಾಜಿ ಜಿಲ್ಲಾ ಪಂಚಾಯತ್ನವರು, ಅವರಿವರು ಇದೇ ಸರ್ವೆ ನಂಬರಿನಲ್ಲಿ occupy ಮಾಡಿಕೊಂಡಿದ್ದಾರೆ. ಅಂದರೆ ಉದ್ದೇಶಪೂರ್ವಕವಾಗಿ ಅವರು occupy ಮಾಡಿಕೊಂಡು ಅವರು ಜಾಗವನ್ನು ಬಿಟ್ಟುಕೊಡುತ್ತಿಲ್ಲ. ಬಿಟ್ಟುಕೊಡದೇ ಇರುವುದರಿಂದ ಸಹಜವಾಗಿಯೇ ತಾಲ್ಲೂಕು ಪಂಚಾಯಿತಿಯ ಇ.ಓ. ಮೇಲೆ ಪ್ರಭಾವ ಬೀಳುತ್ತದೆ. ಇ.ಓ. ಅದನ್ನು ತೆರವುಗೊಳಿಸುವಂತಹ ಕಾರ್ಯವನ್ನು ಮಾಡುವುದಿಲ್ಲ. ಏಕೆಂದರೆ ಅವರೆಲ್ಲಾ ಪ್ರಭಾವಿಗಳು. ಹಾಗಾಗಿ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದು ಇಷ್ಟೇ. ಹಿಂದಿನ ಸರ್ಕಾರ ಏನೇ ಮಾಡಿರಲಿ, ನಮ್ಮ ಸರ್ಕಾರ ಅವರ ಹಿತಾಸಕ್ತಿಯನ್ನು ಕಾಪಾಡಬೇಕಾಗುತ್ತದೆ. ಏಕೆಂದರೆ ನಾವೆಲ್ಲಾ ನೆಮ್ಮದಿಯಾಗಿ ಇಲ್ಲಿದ್ದೇವೆ ಎಂದರೆ ಸೈನಿಕರು ಗಡಿಯಲ್ಲಿ ನಮ್ಮನ್ನೆಲ್ಲಾ ಕಾಪಾಡುವಂತಹ ಕೆಲಸ ಮಾಡಿರುತ್ತಾರೆ. ಅವರಿಗೆ ಆಶ್ರಯದಲ್ಲಿ ನಿವೇಶನ ಕೊಡುತ್ತೇವೆಂದು ಹೇಳಿ ಸರ್ಕಾರಗಳು ಪ್ರಾಮಿಸ್ ಮಾಡಿದ ಮೇಲೆ ಅದರ ಮೇಲೆ ನಿಲ್ಲುವುದು ಒಳ್ಳೆಯದು ಎನ್ನುವುದು ನನ್ನ ಭಾವನೆ. ಶೀಘ್ರವಾಗಿ ಅದನ್ನು ತೆರವುಗೊಳಿಸಿ, ಏನಿದೆಯೋ ಅದರಲ್ಲಿಯೇ ಕೊಟ್ಟರೆ ಸಾಕು ಎನ್ನುವುದು ಅವರ ಭಾವನೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ ನಿವೇಶನ ಕೊಡುವುದಿಲ್ಲ ಎಂದು ನಾನು ಹೇಳುತ್ತಿಲ್ಲ. ಅವರು ತಪ್ಪು ಅರ್ಥ ಮಾಡಿಕೊಳ್ಳುವುದು ಬೇಡ. ಪಕ್ಕದ ಜಿಲ್ಲೆಯಲ್ಲಿ ಕೊಡಬೇಕೆಂದು ಕಾನೂನು ಹೇಳುತ್ತದೆ. ಬೇಕಾದರೆ ಅದನ್ನು ಓದುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ ಬೇಡ.

**ಶ್ರೀ ಕೃಷ್ಣ ಬೈರೇಗೌಡ:-** ಪಕ್ಕದ ಜಿಲ್ಲೆಯಲ್ಲಿ ಅವರಿಗೆ ನಿವೇಶನ ಕೊಡಬಹುದು ಎಂದು ಕಾನೂನು ಹೇಳುತ್ತದೆ. ಇಲ್ಲಿ ನಾನು ಒತ್ತುವರಿಯನ್ನು ಖಾಲಿ ಮಾಡಿಸುವುದು ಒಂದು ವಿಷಯ. ಒತ್ತುವರಿಯನ್ನು ಖಾಲಿ ಮಾಡಿದರೂ ಸಹ

ನಿವೇಶನವನ್ನು ಈಗ ಹಂಚಿಕೆ ಮಾಡುವುದಕ್ಕೆ ಅವಕಾಶ ಕಡಿಮೆ ಇದೆ. ಏಕೆಂದರೆ ಕಳೆದ ಸರ್ಕಾರದಲ್ಲಿ ಆಗಿರುವ ಕಾನೂನು ಪ್ರಕಾರ ಅವಕಾಶ ಇಲ್ಲ. ಆದರೂ ಕೂಡ ಅದಕ್ಕೆ ಪರಿಹಾರವಾಗಿ ಬಹುಮಹಡಿ ಕಟ್ಟಿ ಕೊಡುವುದಕ್ಕೆ ಎಲ್ಲಿಯೂ ಅಡ್ಡಿಯಿಲ್ಲ. ಅವರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಅದರ ಮುಖಾಂತರವಾದರೂ ಅವರಿಗೆ ಸಹಾಯ ಮಾಡೋಣ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 1964ರ ರೆವಿನ್ಯೂ ಕಾಯಿದೆಗೆ ಕಾಯಕಲ್ಪ ಕೊಟ್ಟಿದ್ದಾರೆ. ಆದರೆ ಹಿಂದಿನ ಸರ್ಕಾರ ಮಾಡಿದೆ ಎಂದು ಹಿಂದೆ ಕೊಟ್ಟಂತಹ ವಾಗ್ದಾನವನ್ನು ಮುರಿಯುವುದು ಬೇಡ. ದಯವಿಟ್ಟು ಸಚಿವರು ಮನಸ್ಸು ಮಾಡಿದರೆ ಆಗುತ್ತದೆ. ಅವರು ಹತ್ತು ವರ್ಷಗಳಿಂದ ಬೆಂಗಳೂರಿನಲ್ಲಿ ಜಾಗ ಸಿಗುತ್ತದೆಂದು ಆಸೆಯಿಟ್ಟುಕೊಂಡಿದ್ದಾರೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, 250 ಜನರಿಗೆ 4 ಎಕರೆ ಜಾಗವನ್ನು ಎಲ್ಲಿ ಕೊಡುತ್ತಾರೆ? Multi-storey ಮಾಡಿದರೆ ಎಲ್ಲರಿಗೂ ಕೊಡಬಹುದು.

**ಚುಕ್ಕೆ ಪ್ರಶ್ನೆ ಸಂಖ್ಯೆ: ೮೮೯**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಗಣಪತಿ ದುಮ್ಮಾ ಉಳ್ವೇಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಕರ್ನಾಟಕ ಜಲಸಾರಿಗೆ ಮಂಡಳಿಯಲ್ಲಿ ಇರುವ ಬಂದರು ಅಧಿಕಾರಿ ಹುದ್ದೆಗಳು ಎಷ್ಟು ಮತ್ತು ಖಾಲಿ ಇರುವ ಮತ್ತು ಭರ್ತಿ ಮಾಡಿರುವ ಹುದ್ದೆಗಳು ಎಷ್ಟು ಎಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ೩ ಬಂದರು ಅಧಿಕಾರಿ ಹುದ್ದೆಗಳು ಮಂಜೂರಾಗಿವೆ, ಒಂದು ಬಂದರು ಅಧಿಕಾರಿ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿದೆ, ಇನ್ನು ಎರಡು ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಅದರಂತೆ ಆದಷ್ಟು ಬೇಗ ಈ ಎರಡು ಹುದ್ದೆಗಳನ್ನು ಭರ್ತಿ ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಮಂಕಾಳ ಎಸ್. ವೈದ್ಯ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಇದನ್ನು ಭರ್ತಿ ಮಾಡಿ ಸರಿಪಡಿಸುವ ಕೆಲಸವನ್ನು ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಆದಷ್ಟು ಬೇಗನೆ ಎಂದರೆ ಏನು? ನಿರ್ದಿಷ್ಟವಾಗಿ ಹೇಳಬೇಕು. ಸಚಿವರಿದ್ದಂಥವರು ಅಧಿಕಾರಿಗಳು ಕೊಟ್ಟಂತಹ ಉತ್ತರವನ್ನೇ ಹೇಳಬಾರದು. ನೀವು ಚರ್ಚೆ ಮಾಡಿ ನಿರ್ದಿಷ್ಟವಾಗಿ 2 ತಿಂಗಳನಲ್ಲಿ ಅಥವಾ 4 ತಿಂಗಳನಲ್ಲಿ ಮಾಡುತ್ತೇವೆ ಎಂದು ಹೇಳಬೇಕು.

**ಶ್ರೀ ಮಂಕಾಳ ಎಸ್. ವೈದ್ಯ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ತಾಂತ್ರಿಕ ಸಮಸ್ಯೆ ಇದೆ. ಹಾಗಾಗಿ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಆದರೂ ನಾವು ಪದೇ ಪದೇ call for ಮಾಡುತ್ತಿದ್ದೇವೆ. ಆದರೆ ಯಾರೂ ಬರುವುದಿಲ್ಲ.

**ಶ್ರೀ ಗಣಪತಿ ದುಮ್ಮಾ ಉಳ್ವೇಕರ್:-** ಮಾನ್ಯ ಸಭಾಪತಿಯವರೇ, ಕಳೆದ ೫ ವರ್ಷಗಳಿಂದ ತೇಲು ಜೆಟ್ಟಿಗೆ ಮಾಡಿರುವ ವೆಚ್ಚ ಎಷ್ಟು ಎಂದು ಜಿಲ್ಲಾವಾರು ಮಾಹಿತಿ ಕೇಳಿದ್ದೆ. ಅದರಂತೆ ಕಾರವಾರ ತಾಲ್ಲೂಕಿನ ಸದಾಶಿವಗಡದಲ್ಲಿ ತೇಲು ಜೆಟ್ಟಿಗೆಯನ್ನು ನಿರ್ಮಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಈ ತೇಲು ಜೆಟ್ಟಿಗೆ ಇರುವ ಜಾಗದ ಜಿ.ಪಿ.ಎಸ್. ಮಾಪನ ಯಾವುದು ಎಂಬ ಬಗ್ಗೆ ಸಂಪೂರ್ಣ ಮಾಹಿತಿ ಬೇಕು. ಏಕೆಂದರೆ ಅಲ್ಲಿ ನಿರ್ಮಿಸಿರುವ ತೇಲು

ಜೆಟ್ಟಿಗೆ ಇಲ್ಲಿಯತನಕ ಪ್ರಾರಂಭವಾಗಿಲ್ಲ. ಹಾಗಾಗಿ ಮಾನ್ಯ ಸಚಿವರಲ್ಲಿ ಹಾಗೂ ಮಾನ್ಯ ಸಭಾಪತಿಯವರಲ್ಲಿ ಅದರ ಮಾಹಿತಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಮಂಕಾಳ ಎಸ್. ವೈದ್ಯ:-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಬರುವ ಪೂರ್ವದಲ್ಲಿಯೇ ಇದನ್ನು ಕಾರ್ಯರೂಪಕ್ಕೆ ತಂದಿದ್ದರು. ಟೆಂಡರ್ ಕರೆದು ಮಾಡಿದ್ದರು. ಅಲ್ಲಿ ತೇಲು ಜೆಟ್ಟಿಗೆಯನ್ನೂ ರೆಡಿ ಮಾಡಿದ್ದರು. ಅದಕ್ಕೆ ಸಿ.ಆರ್.ಝಡ್ ಅನುಮತಿ ತೆಗೆದುಕೊಳ್ಳಲಿಲ್ಲ. ಸಿ.ಆರ್.ಝಡ್ ನಿಂದ ಅನುಮತಿ ತೆಗೆದುಕೊಳ್ಳದೇ ಇದ್ದುದರಿಂದ ಈಗ ಅನುಮತಿ ಕೋರಿದ್ದೇವೆ. ಸಿ.ಆರ್.ಝಡ್ ನಿಂದ ಅನುಮತಿ ಬಂದ ನಂತರವೇ ಇದನ್ನು ಮತ್ತೆ ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಚುಕ್ಕೆ ಪ್ರಶ್ನೆ ಸಂಖ್ಯೆ: ೨೫೫**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಏನೆಂದರೆ, ಸರ್ಕಾರ ಬೇರೆ ಬೇರೆ ಉಪಯೋಗಕ್ಕೋಸ್ಕರ ಭೂಸ್ವಾಧೀನ ಪ್ರಕ್ರಿಯೆಯನ್ನು ರಾಜ್ಯವ್ಯಾಪಿ ಮಾಡುತ್ತಿರುವಂಥದ್ದು ನಮ್ಮೆಲ್ಲರಿಗೂ ಗೊತ್ತಿರುವಂತಹ ವಿಷಯ.

(ಮುಂದು)

(297) 11-03-2026 11-30 KH/RN (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ನವೀನ್ (ಮುಂದು):**

ಭೂಸ್ವಾಧೀನ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ 2019 ಕ್ಕೆ ನಿಗದಿ ಮಾಡಿರುವಂತಹ ಮಾರ್ಗಸೂಚಿ ದರವನ್ನು ಈಗ ಭೂಸ್ವಾಧೀನ ನಡೆಸುತ್ತಿರುವುದಕ್ಕೂ ಕೂಡ ಕೊಡುತ್ತಿದ್ದಾರೆ. ಅಲ್ಲಿ ಹೆಚ್ಚುವರಿ ದರ ಇದ್ದರೂ ಕೂಡ ಭೂಸ್ವಾಧೀನಪಡಿಸಿಕೊಳ್ಳುವಂತಹ ಜಮೀನಿಗೆ ಹಳೆಯ ದರದಲ್ಲಿ ರೈತರಿಗೆ ಪರಿಹಾರ ಕೊಡಬೇಕೆಂದು ಕಾನೂನು ಇದೆ ಮತ್ತು ಮಾನ್ಯ ಸಚಿವರು ಉತ್ತರದಲ್ಲಿ 'ಭೂಸ್ವಾಧೀನ ಕಾಯ್ದೆ ಕಲಂ-26 ರಡಿ 3 ವರ್ಷಗಳ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಮಾರಾಟವಾದ ಕ್ರಯಗಳನ್ನು ಪಡೆದು, ಸದರಿ ಕ್ರಯಗಳಲ್ಲಿ ಅತಿ ಹೆಚ್ಚು ದರಕ್ಕೆ ಮಾರಾಟವಾದ ಶೇಕಡಾ 50 ರಷ್ಟು ಕ್ರಯಗಳನ್ನು ಪರಿಗಣಿಸುತ್ತೇವೆ' ಎಂದು ಕೊಟ್ಟಿದ್ದಾರೆ. ಮಾನ್ಯ ಕಂದಾಯ ಇಲಾಖೆಯವರು ಮೊದಲನಿಂದ ಕೊಟ್ಟಿರುವಂತಹ ಪತ್ರದಲ್ಲಿ ಬೇರೆ ಇದೆ. ಅದು ಏನು ಹೇಳುತ್ತದೆ ಎಂದರೆ, ದಿನಾಂಕ:30-09-2023 ರ ಅಧಿಸೂಚನೆಯ ಪ್ರಕಾರ ಮಾರುಕಟ್ಟೆ ಮೌಲ್ಯವನ್ನು ಪರಿಷ್ಕರಣೆ ಮಾಡಿರುವುದಿಲ್ಲ. ಕಾರಣವೇನೆಂದರೆ, ಸದರಿ ಗ್ರಾಮದ ಸರ್ವೆ ನಂಬರ್‌ಗಳು ಭದ್ರಾ ಮೇಲ್ದಂಡೆ ಯೋಜನೆಗೆ ಒಳಪಟ್ಟಿರುವುದರಿಂದ, ಈ ಪ್ರದೇಶದ ಮೌಲ್ಯ ಪರಿಷ್ಕರಣೆ ಮಾಡಿದ್ದಾರೆ. ಪರಿಹಾರ ನೀಡಲು ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ಹೊರೆ ಆಗುತ್ತದೆ ಎಂದು ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಭೂಮಿ ಕಳೆದುಕೊಳ್ಳುತ್ತಿರುವಂತಹ ರೈತರು ಸರ್ಕಾರದ ಯಾವುದೋ ಯೋಜನೆಗೆ ಭೂಮಿ ಬೇಕು ಎಂದು ಭೂಸ್ವಾಧೀನಪಡಿಸಿಕೊಳ್ಳುವಂತಹ ರೈತರಿಗೆ ಹಳೆಯ ದರ. ಆದರೆ, stamp duty collect ಮಾಡಬೇಕೆಂದರೆ, ಹೊಸ ಮಾರ್ಗಸೂಚಿ ದರ. ಈ ರೀತಿ ನೇರವಾಗಿ ರೈತರಿಗೆ ಅನ್ಯಾಯ ಮಾಡುವಂತಹ ಕೆಲಸ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ನಡೆಯುತ್ತಿದೆ. ಈ ರೀತಿಯಾದಂತಹ ವಿಮುಖ ನೀತಿಯನ್ನು ಸರ್ಕಾರ ಏಕೆ ಅನುಸರಿಸುತ್ತಿದೆ?

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, 2013ರ ಕಾನೂನಿನ ಪ್ರಕಾರ ಭೂಸ್ವಾಧೀನ ಪ್ರಕ್ರಿಯೆ ನಡೆಸುವಾಗ ಆ ಪ್ರದೇಶದಲ್ಲಿ ಯಾವ ದಿನಾಂಕದಂದು ಭೂಸ್ವಾಧೀನ ಪ್ರಕ್ರಿಯೆಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸುತ್ತೇವೆ. ಆ ದಿನದಿಂದ 3 ವರ್ಷಗಳ ಭೂ ವಹಿವಾಟುಗಳನ್ನು ತೆಗೆದುಕೊಳ್ಳುತ್ತೇವೆ. ಆ ಭೂ ವಹಿವಾಟಿನಲ್ಲಿ ಅತಿ ಹೆಚ್ಚು ಇರುವಂತಹ ದರ ಎಷ್ಟಕ್ಕೆ ಮಾರಾಟ ಆಗಿದೆ. ಅದರ ಸರಾಸರಿ ತೆಗೆದುಕೊಂಡು, ಆ ದರ ಹೆಚ್ಚು ಇದ್ದರೆ, ಅದರ ಮೇಲೆ ರೈತರಿಗೆ ಪರಿಹಾರ ಕೊಡುತ್ತೇವೆ. ಗೈಡ್‌ಲೈನ್ಸ್ ವ್ಯಾಲ್ಯೂ ಜಾಸ್ತಿ ಇದ್ದರೆ ಗೈಡ್‌ಲೈನ್ಸ್ ವ್ಯಾಲ್ಯೂ ಅನ್ನು ತೆಗೆದುಕೊಳ್ಳುತ್ತೇವೆ. ಎರಡರಲ್ಲಿ ಯಾವುದು ಹೆಚ್ಚು ಇರುತ್ತದೋ, ಅದನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಹೇಳುರುವುದು ಭಾಗಶಃ ನಿಜ. ಒಂದು ಬಾರಿ ಪ್ರಾಥಮಿಕ ಅಧಿಸೂಚನೆ ಆದ ಮೇಲೆ ನಾವು ಆ ಭೂಮಿಗೆ ಮೌಲ್ಯಮಾಪನ ಪರಿಷ್ಕರಣೆ ಮಾಡುವುದಿಲ್ಲ. ಅದು ಇವತ್ತು ಅಲ್ಲ. ಕಾಲದಿಂದ ನಡೆದು ಬಂದಿರುವಂತಹ ಪ್ರಕ್ರಿಯೆ. ಏಕೆಂದರೆ, ಕಾನೂನು ಏನು ಹೇಳುತ್ತದೆ ಎಂದರೆ, ನೋಟಿಫಿಕೇಷನ್ ದಿನಾಂಕದಿಂದ ಮುಂದಿನ 3 ವರ್ಷ ಯಾವುದು ಹೆಚ್ಚು ದರ transaction ಆಗಿರುತ್ತದೆ. ಆ ದರಗಳಲ್ಲಿ average ದರವನ್ನು ತೆಗೆದುಕೊಂಡು ಪರಿಹಾರ ಕೊಡಬೇಕೆಂದು ಹೇಳುತ್ತದೆ. ಆ ಕಾರಣದಿಂದ ಅಲ್ಲಿ ಪರಿಷ್ಕರಣೆ ಮಾಡದೇ ಇರುವುದು, ಇದು ಈ ಕಾಲದಿಂದ ಅಲ್ಲ. ಹತ್ತಾರು ವರ್ಷಗಳಿಂದ ನಡೆದು ಬಂದಿರುವಂತಹ ವಾಡಿಕೆ. ಎರಡನೆಯದಾಗಿ, ಇದೇ ಕಾರಣಕ್ಕೆ ಕಾಲಕಾಲಕ್ಕೆ ಗೈಡ್‌ಲೈನ್ಸ್ ವ್ಯಾಲ್ಯೂ ಪರಿಷ್ಕರಣೆ ಆಗಬೇಕು. ಕಾಲಕಾಲಕ್ಕೆ ಗೈಡ್‌ಲೈನ್ಸ್ ವ್ಯಾಲ್ಯೂ ಪರಿಷ್ಕರಣೆ ಆಗಲಿಲ್ಲ ಎಂದರೆ, ಹಳೆಯ ದರ ಇದ್ದರೆ . . . ಹೊಸದಾಗಿ ನೋಟಿಫೈ ಮಾಡಿದ್ದೇವೆ ಎಂದು ಇಟ್ಟುಕೊಳ್ಳಿ. Land acquisition ಒಂದು ದಿನದ ಕಥೆಯಲ್ಲ. ಒಂದು ವರ್ಷದ್ದು ಅಲ್ಲ. ಪ್ರತಿನಿತ್ಯ ಒಂದಲ್ಲ ಒಂದು ಉದ್ದೇಶಕ್ಕೆ ಆಗುತ್ತಿರುತ್ತದೆ. ನಾವು ಕಾಲಕಾಲಕ್ಕೆ ಗೈಡ್‌ಲೈನ್ಸ್ ವ್ಯಾಲ್ಯೂ ಅನ್ನು revise ಮಾಡಲಿಲ್ಲವೆಂದರೆ, ಪರೋಕ್ಷವಾಗಿ ಅದರ ನಷ್ಟ ಆ ರೈತರಿಗೆ ಆಗುತ್ತದೆ. ಹಾಗಾಗಿ ಕಾಲಕಾಲಕ್ಕೆ revision ಮಾಡಬೇಕು. ಆದರೆ, ಎಲ್ಲಿ land acquisition preliminary notification ಆಗಿದೆ, ಅಲ್ಲಿ ಮಾಡುವುದಿಲ್ಲ. ಅಲ್ಲಿ market value, ಅಲ್ಲಿ registered amount ತೆಗೆದುಕೊಳ್ಳುತ್ತೇವೆ. ಗೈಡ್‌ಲೈನ್ಸ್ ವ್ಯಾಲ್ಯೂ compare ಮಾಡಿ, ಅದರಲ್ಲಿ ಯಾವುದು ಹೆಚ್ಚು ಇದ್ದರೆ ಅದನ್ನು ರೈತರಿಗೆ ಕೊಡುತ್ತೇವೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಹಿಂದೆಯಿಂದಲೂ ಈ ವಾಡಿಕೆ ಇತ್ತು ಎಂದು ಮಾನ್ಯ ಸಚಿವರು ಹೇಳಿದರು. ಅವರು ಹೇಳಿರುವ ಹಾಗೆ ಒಂದು ಗ್ರಾಮದ ಒಂದು ಸರ್ವೆ ನಂಬರ್ ಅನ್ನು ನೋಟಿಫೈ ಮಾಡಿರುತ್ತೀರಿ. ಆ ಗ್ರಾಮದ ಆ ನಿರ್ದಿಷ್ಟವಾದ ಸರ್ವೆ ನಂಬರ್ ನೋಟಿಫೈ ಆಗಿರುವ ಕಾರಣಕ್ಕೋಸ್ಕರ ಆ ಗ್ರಾಮದ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಜಮೀನುಗಳಿಗೂ ಹಳೆಯ ಮೌಲ್ಯವನ್ನು ನಿಗದಿ ಮಾಡಿದರೆ ಹೇಗೆ? ತಾವು ಏನು ಕಾರಣ ಹೇಳಿದ್ದೀರಿ. ಆ ಕಾರಣಕ್ಕೋಸ್ಕರ ಅಲ್ಲಿ ಭೂಮಿ ಕೊಟ್ಟವನಿಗೂ ಲಾಭ ಸಿಗುತ್ತಿಲ್ಲ

ಮತ್ತು guidance value revise ಆಗಿದ್ದರೂ ಕೂಡ ಆ ಗ್ರಾಮದ ಯಾವುದೋ ಒಂದು ಸರ್ವೆ ನಂಬರ್‌ನಲ್ಲಿ ಆ ಜಮೀನು ಸೇರಿರುವುದಕ್ಕೋಸ್ಕರ ಇಡೀ ಹಳ್ಳಿಯ guidance value ವನ್ನು increase ಮಾಡುವುದಿಲ್ಲ. ಯಥಾವತ್ತಾಗಿ ಅದೇ ರೀತಿ ಮಾಡಿಕೊಳ್ಳುತ್ತಾ ಬಂದಿದ್ದಾರೆ. 2019ರಲ್ಲಿ ಪರಿಷ್ಕರಣೆ ಮಾಡಿರುವಂತಹದ್ದನ್ನು 2026ನೇ ಇಸವಿಯಾದರೂ ಕೂಡ ಯಥಾವತ್ತಾಗಿ ಹಾಗೆಯೇ ನಿರ್ವಹಣೆ ಮಾಡಿದ್ದಾರೆ. ತಮ್ಮ ಉದ್ದೇಶ ಸರ್ಕಾರಕ್ಕೆ ಹಣ ಉಳಿಸುವಂತಹದ್ದು ಇರಬಹುದು. ಆದರೆ, ತಾವು ಯಾವುದೋ ಒಂದು ಗ್ರಾಮದ ಒಂದು ಸರ್ವೆ ನಂಬರ್‌ನಲ್ಲಿ ಹೋಗುವಂತಹ ಆಸ್ತಿಯ ಕಾರಣಕ್ಕೋಸ್ಕರ ಇಡೀ ಗ್ರಾಮ ಗ್ರಾಮಗಳನ್ನೇ ಆ ಕ್ಯಾಟಗರಿಗೆ ಸೇರಿಸುವಂತಹದ್ದು ಯಾವ ರೀತಿಯ ಕ್ರಮ ಎನ್ನುವುದನ್ನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, guidance value ಅನ್ನು ಜಾಸ್ತಿ ಮಾಡಬಾರದು ಎಂದು ಮಾನ್ಯ ಸದಸ್ಯರು ಮಾತನಾಡುತ್ತಾರೆ. ಕೆಲವು ಕಡೆ market value ಗೂ guidance value ಗೂ ಇವತ್ತು ಒಂದರಿಂದ ಹತ್ತು ಪಟ್ಟು ವ್ಯತ್ಯಾಸ ಇದೆ. Black money ಗೆ ಇದೇ ಕಾರಣವಾಗುತ್ತಿದೆ. ಮಾನ್ಯ ಸದಸ್ಯರು ವ್ಯವಹಾರದಲ್ಲಿ ಇದ್ದಾರೆ. ನಾವು ವ್ಯವಹಾರದಲ್ಲಿ ಇಲ್ಲದೇ ಹೋದರೂ ಕೂಡ ಮಾತನಾಡುತ್ತೇವೆ. ಯಾವುದಾದರೂ ಭೂಮಿ ವ್ಯವಹಾರ ಆದ ತಕ್ಷಣ first discussion ದರಕ್ಕಿಂತ ಮೊದಲು . . .

**ಸಭಾಪತಿಯವರು:-** ಮಾನ್ಯ ಸಚಿವರೇ, ಒಂದು ನಿಮಿಷ. ಮಾನ್ಯ ಸದಸ್ಯರು ಯಾವ ವ್ಯವಹಾರದಲ್ಲಿ ಇದ್ದಾರೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎಸ್.ನವೀನ್‌ರವರು ಎಲ್ಲಾ ವ್ಯವಹಾರದಲ್ಲಿಯೂ ಇದ್ದಾರೆ. ಅವರು ಎಲ್ಲಾ ರೀತಿಯ ವ್ಯವಹಾರಸ್ಥರು.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಚಿವರೇ,. ನಾನು ಎಲ್ಲಾ ವ್ಯವಹಾರದಲ್ಲಿ ಇದ್ದೇನೆ ಎಂದು ಹೇಳಿದರಲ್ಲವೇ? ಅದಕ್ಕೆ ತಾವು ನನ್ನನ್ನು partner ಮಾಡಿಕೊಳ್ಳಿ. ಇಲ್ಲದಿದ್ದರೆ, ನಾನು ನಿಮ್ಮನ್ನು partner ಮಾಡಿಕೊಳ್ಳುತ್ತೇನೆ. ಹಾಗೆಯೇ ನೀವು ನಿಮ್ಮ ವ್ಯವಹಾರದಲ್ಲಿ ನನ್ನನ್ನು partner ಮಾಡಿಕೊಳ್ಳಿ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸದಸ್ಯರೇ, ಬೇಡ. ನೀವು ನಿಮ್ಮ ವ್ಯವಹಾರ ಮಾಡಿ. ನನ್ನ ವ್ಯವಹಾರ ನಾನು ಮಾಡುತ್ತೇನೆ. Mix ಆಗುವುದು ಬೇಡ. ಮಾನ್ಯ ಸಭಾಪತಿಯವರೇ, rate ಬಗ್ಗೆ ಮಾತನಾಡುವುದಕ್ಕಿಂತ ಮೊದಲು ಚೆಕ್ ಎಷ್ಟು? ಕ್ಯಾಶ್ ಎಷ್ಟು ಎಂದು ಕೇಳುತ್ತಾರೆ. ಇದು ಸತ್ಯ ಅಲ್ಲವೇ? ಇದರ ಬಗ್ಗೆ ಹೇಳಿದರೆ ತಪ್ಪು. ಈ ರೀತಿ ನಡೆಯುತ್ತಿರುವುದು ಸತ್ಯವಲ್ಲವೇ? ಮೊದಲು ಚೆಕ್ ಎಷ್ಟು, ಕ್ಯಾಶ್ ಎಷ್ಟು ಎಂದು ಮಾತನಾಡಬೇಕು. ಇಷ್ಟೆಲ್ಲಾ ಇದ್ದರೂ ಕೂಡ ನಾವು ಇದನ್ನೇ ಜಾಸ್ತಿ ಮಾಡಬೇಕು. ಕೆಲವು ಕಡೆ guidance value 2 ಲಕ್ಷ ರೂಪಾಯಿಗಳು ಇದೆ. ಇದನ್ನು ಬೇಕಾದರೆ ತೋರಿಸುತ್ತೇನೆ. ಅಲ್ಲಿ 70 ರಿಂದ 80 ಲಕ್ಷ ರೂಪಾಯಿಗಳಿಗೆ ಭೂಮಿ ಮಾರಾಟವಾಗುತ್ತಿದೆ.

ಆದರೂ ಕೂಡ guidance value ಅನ್ನು revise ಮಾಡಬಾರದು. ಇದರಿಂದ, Black money ಗೆ ಪರೋಕ್ಷವಾಗಿ ಪ್ರೋತ್ಸಾಹ ಮಾಡುವಂತಹದ್ದು ಆಗುತ್ತದೆ. ಹಾಗಾಗಿ ಮಾನ್ಯ ಸದಸ್ಯರು ಹೇಳಿರುವಂತಹ ವಿಷಯದಲ್ಲಿ ನಾವು ಸರ್ಕಾರ . . . ಇದು ಇವತ್ತಲ್ಲ ಕಾಲದಿಂದ. . . ನಾನು ಕಳೆದ ಸರ್ಕಾರ ಎಂದು ಕೂಡ ಹೇಳುತ್ತಿಲ್ಲ. ಮೊದಲಿನಿಂದಲೂ ಕೂಡ ಭೂಸ್ವಾಧೀನ ಪ್ರಕ್ರಿಯೆ ಆದಾಗಿನಿಂದಲೂ ಮತ್ತು ನನಗೆ ಜ್ಞಾಪಕ ಇರುವಾಗಿನಿಂದಲೂ ಎಲ್ಲಿ preliminary notification ಆಗುತ್ತದೆ. ಅಲ್ಲಿ guidance value revision ಮಾಡುವುದಿಲ್ಲ. ಅದು ಇಡೀ ಊರಿಗೆ ಎಂದಲ್ಲ. ಇದಕ್ಕೆ distance criteria ಇಟ್ಟುಕೊಂಡಿರುತ್ತಾರೆ. ಇದನ್ನು ಇಷ್ಟು radius ನಲ್ಲಿ ಮಾಡುವುದಿಲ್ಲ. ಹಾಗಾಗಿ ರೈತರಿಗೆ ಅನ್ಯಾಯ ಆಗಬಾರದು ಎಂದು ಹೇಳುತ್ತೇನೆ. 2013ನೇ ಸಾಲಿನ ಕಾನೂನು ಏನು ಹೇಳುತ್ತದೆ ಎಂದರೆ, guidance value ಒಂದನ್ನೇ recognize ಮಾಡುವುದಿಲ್ಲ. ಮಾರುಕಟ್ಟೆಯಲ್ಲಿ registered sale deed rate ಅನ್ನು ತೆಗೆದುಕೊಳ್ಳುತ್ತಾರೆ. ಅದರಲ್ಲಿ higher rate ಅನ್ನು ತೆಗೆದುಕೊಂಡು, ಅದನ್ನು avarage ಮಾಡಿ ಪರಿಹಾರವನ್ನು ನಿಗದಿ ಮಾಡುತ್ತಾರೆ. ಈ ಒಂದು ಅನುಕೂಲ ರೈತರಿಗೆ ಸಿಕ್ಕಿಲ್ಲ ಎಂದರೆ ನನಗೆ ಮಾಹಿತಿ ಕೊಡಿ. Documents ಕೊಡಿ. ಯಾವುದಾದರೂ ಪ್ರಕರಣದಲ್ಲಿ ಆ ರೀತಿಯಾಗಿದ್ದರೆ ಸರಿಪಡಿಸುವಂತಹ ಪ್ರಯತ್ನವನ್ನು ಖಂಡಿತವಾಗಿಯೂ ಮಾಡುತ್ತೇವೆ. ರೈತರಿಗೆ ಅನ್ಯಾಯವಾಗಬಾರದು. ಆ ವಿಷಯದಲ್ಲಿ ನಾನು ತಮ್ಮ ಜೊತೆಗೆ ಇದ್ದೇನೆ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಒಂದು ಸ್ಪಷ್ಟೀಕರಣವನ್ನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ಇಲ್ಲಿ ನಾವು ಯಾವುದೋ ವ್ಯವಹಾರದ . . .

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸದಸ್ಯರೇ, ನನ್ನ ಮಾತಿನ ಅರ್ಥ ಆ ರೀತಿ ಎಲ್ಲಿಯೂ ಇರಲಿಲ್ಲ. ನಾನು ಆ ರೀತಿ ಹೇಳಲಿಲ್ಲ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಚಿವರೇ, ನಾನು ಹೇಳುತ್ತಿರುವಂತಹದ್ದು . . .

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸದಸ್ಯರೇ, ದಯವಿಟ್ಟು ನಾನು ಏನಾದರೂ ಆ ರೀತಿ ಮಾತನಾಡುವಾಗ ನಿಮ್ಮ ಹಿತಾಸಕ್ತಿ ಇದೆ ಎಂದು ಏನಾದರೂ ಅರ್ಥ ಬಂದಿದ್ದರೆ, ಅದು ನನ್ನ ಉದ್ದೇಶ ಆಗಿರಲಿಲ್ಲ. ನಾನು ಆ ರೀತಿ ಹೇಳಲಿಲ್ಲ. ನಾನು ವ್ಯವಹಾರಸ್ಥರು ಎಂದರೆ ಪ್ರಪಂಚದ ಜ್ಞಾನ ಹೊಂದಿರುವವರು ಎಂದು ಹೇಳಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಅವರು ಏನು ತಿಳಿದುಕೊಳ್ಳುವುದಿಲ್ಲ. ತಲೆಗೆಡಿಸಿಕೊಳ್ಳಬೇಡಿ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ರೀತಿ ತಿಳಿದುಕೊಳ್ಳುತ್ತಾರೋ, ಬಿಡುತ್ತಾರೋ, ಕನಿಷ್ಟಪಕ್ಷ ನನ್ನ ಅಭಿಪ್ರಾಯವನ್ನು ನಾನು ಸ್ಪಷ್ಟಪಡಿಸಬೇಕಲ್ಲವೇ? ಆ ಅರ್ಥದಲ್ಲಿ ನಾನಂತು ಹೇಳಿಲ್ಲ. ದಯವಿಟ್ಟು, ಆ ರೀತಿ ನಾನು ಮಾತನಾಡುವುದಿಲ್ಲ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಚಿವರೇ, ನಾನು ಆ context ನಲ್ಲಿ ಹೇಳುತ್ತಿಲ್ಲ. ನಾನು ಹೇಳುತ್ತಿರುವುದೇನೆಂದರೆ, ತಾವು ಈಗ ಮಾನದಂಡ ಏನು ಮಾಡಿದ್ದೀರಾ, ಈ ವಿಷಯವನ್ನು ತಮ್ಮ ಇಲಾಖೆಯ ವತಿಯಿಂದ ಪುನರ್ ಪರಿಶೀಲನೆ ಮಾಡುವಂತಹ ಅವಶ್ಯಕತೆ ಇದೆ. ಏಕೆಂದರೆ, ನೋಟಿಫಿಕೇಷನ್ ಆದಂತಹ ದಿನಾಂಕದಿಂದ ಯಾವ ದಿನಾಂಕಕ್ಕೆ applicable ಆಗುತ್ತದೆ, ಅಲ್ಲಿಯವರೆಗೂ ಇರುವಂತಹದ್ದು ನಡೆದುಕೊಂಡು ಬಂದಿರುವಂತಹ ಪ್ರಕ್ರಿಯೆ ಎಂದು ಮಾನ್ಯ ಸಚಿವರು ಹೇಳಿದರು. ನಾನು ಕೇಳುತ್ತಿರುವುದೇನೆಂದರೆ, ಈಗಾಗಲೇ notified ಆಗಿರುವಂತಹ land ಗಳನ್ನು ಪ್ರತ್ಯೇಕವಾಗಿ ನಿಮ್ಮ ಸಿಸ್ಟಂನಲ್ಲಿ ಇಟ್ಟು ಬಿಡಿ. ಇದಕ್ಕೆ ಏಕೆ distance ಅನ್ನು circumference ಅನ್ನು, ಆ village ಅನ್ನು ಸೀಮಿತವಾಗಿ ಮಾಡುತ್ತಾ, ಅಲ್ಲಿರುವಂತಹ ಒಬ್ಬರೋ, ಇಬ್ಬರೋ ರೈತರ ಕಾರಣಕ್ಕೋಸ್ಕರ ಉಳಿದಿರುವಂತಹ 100 ಜನ ರೈತರಿಗೆ ಏಕೆ ಸಮಸ್ಯೆ ಮಾಡುತ್ತೀರಿ?

**ಸಭಾಪತಿಯವರು:-** ಮಾನ್ಯ ಸಚಿವರೇ, ಉತ್ತರವನ್ನು ಹೇಳಿ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಸಲಹೆಯ ಬಗ್ಗೆ ನಾವು ಗಂಭೀರವಾಗಿ ಯೋಚನೆ ಮಾಡುತ್ತೇವೆ. ಅದಲ್ಲದೇ, ಎಲ್ಲಾದರೂ ರೈತರಿಗೆ ಅನ್ಯಾಯವಾಗಿದ್ದರೆ, ಆ ಪ್ರಕರಣವನ್ನು ಕೊಟ್ಟರೆ ನ್ಯಾಯ ಕೊಡಿಸುವಂತಹ ಕೆಲಸ ಮಾಡುತ್ತೇವೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

(298) 11.3.2026 11.40 ಪಿಕೆ:ವಿಕೆ (ಸಭಾಪತಿಗಳ ಉಪಸ್ಥಿತಿ)

## ಪ್ರಶ್ನೆ ಸಂಖ್ಯೆ 956

(ಉತ್ತರ ಲಗತ್ತಿಸಲಾಗಿದೆ)

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಹುಬ್ಬಳ್ಳಿಯ ಉಣಕಲ್‌ನಲ್ಲಿ ಬರುವ ಐತಿಹಾಸಿಕ ಚಂದ್ರಮೌಳೇಶ್ವರ ದೇವಸ್ಥಾನ ಪುರಾತನ ಕಾಲದ ದೇವಸ್ಥಾನವಾಗಿದೆ. ಮಾನ್ಯ ಸಭಾಪತಿಯವರಿಗೂ ಇದು ಗೊತ್ತಿದೆ. ಇದು 2-3 ವರ್ಷಗಳ ಮುಂಚೆ ಕೇಂದ್ರ ಸರ್ಕಾರ ಪುರಾತತ್ವ ಇಲಾಖೆಯ ವ್ಯಾಪ್ತಿಗೆ ಬರುತ್ತಿತ್ತು. ಈಗ ಅವರು ಅದಕ್ಕೊಂದು ಅನುಮೋದನೆ ಕೊಟ್ಟಿದ್ದಾರೆ. ದೇವಸ್ಥಾನದ ಸುತ್ತಮುತ್ತ ಹಳೆಯ ಮನೆಗಳಿವೆ; ಅವು ಬಿದ್ದು ಹೋಗಿವೆ. ಆ ಮನೆಗಳನ್ನು ದುರಸ್ತಿ ಮಾಡಿಸಲು ಅಥವಾ ಹೊಸದಾಗಿ ಕಟ್ಟಿಕೊಳ್ಳಲು ಸರ್ಕಾರ ಅನುಮತಿ ಕೊಡುತ್ತಿಲ್ಲ. ಅವರಿಗೆ ಒಂದು ಪರಿಹಾರವನ್ನು ನಿಗದಿ ಮಾಡಬೇಕು. ದೇವಸ್ಥಾನದ ಸುತ್ತ 100 ಮೀಟರ್ ವ್ಯಾಪ್ತಿಯಲ್ಲಿ ಮನೆಗಳಿದ್ದರೆ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುವುದಕ್ಕಾಗುವುದಿಲ್ಲ ಎನ್ನುವ ನಿಯಮ ಇದೆ. ಆದ್ದರಿಂದ, ಅಲ್ಲಿರುವಂತಹ 15-20 ಮನೆಗಳನ್ನು ತೆಗೆದು ಸರ್ಕಾರದಿಂದ ಅವರಿಗೆ ಪರಿಹಾರ ಕೊಡಬೇಕು. ಇದಕ್ಕೆ ಕಳೆದ ಎರಡು ವರ್ಷಗಳ ಹಿಂದೆ ಕೇಂದ್ರ ಸರ್ಕಾರದಿಂದ ಅನುಮತಿ ತೆಗೆದುಕೊಂಡಿದ್ದೇವೆ. ಇವತ್ತು ಇದೇ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಮಹಾನಗರ ಪಾಲಿಕೆಯವರು ರೂ. 25 ಕೋಟಿಗಳನ್ನು ತೆಗೆದಿಟ್ಟಿದ್ದಾರೆ. ಇದನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು. ಐತಿಹಾಸಿಕ ಹಿನ್ನೆಲೆಯುಳ್ಳ ಈ ದೇವಸ್ಥಾನವನ್ನು ಅಭಿವೃದ್ಧಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಗಳೆ, ನಾನೂ ಕೂಡ 2 ತಿಂಗಳ ಮುಂಚೆ ಈ ದೇವಸ್ಥಾನಕ್ಕೆ ಹೋಗಿದ್ದೆ. ಪುರಾತತ್ವ ಇಲಾಖೆಯವರು ಇದಕ್ಕೆ ಅನುಮತಿ ಕೊಟ್ಟಿದ್ದಾರೆ. ನಮ್ಮ ಎ.ಸಿ.ಯವರೂ ಕೂಡ ಅನುಮತಿ ಕೊಟ್ಟಿದ್ದಾರೆ. ಮಹಾನಗರ ಪಾಲಿಕೆಯವರು ರೂ. 25 ಕೋಟಿಗೆ ಅಂದಾಜು ಮಾಡಿದ್ದಾರೆ. ಅದರಲ್ಲಿ, ರೂ. 18 ಕೋಟಿ ಭೂಸ್ವಾಧೀನಕ್ಕೆಂದು, ರೂ. 7.50 ಕೋಟಿ ಅದರ ಅಭಿವೃದ್ಧಿ ಇಟ್ಟಿದ್ದಾರೆ. ಈ ಕಡತ ದಿನಾಂಕ 12.2.2026 ರಂದು ನಗರಾಭಿವೃದ್ಧಿ ಇಲಾಖೆಗೆ ಬಂದಿದೆ. ನಾನು ಯು.ಡಿ.ಡಿ. ಕಾರ್ಯದರ್ಶಿಯವರ ಹತ್ತಿರ ಮಾತನಾಡಿ ಇದನ್ನು ಕ್ಲಿಯರ್ ಮಾಡಿಸುತ್ತೇನೆ.

**ಶ್ರೀ ಪ್ರದೀಪ್ ಶೆಟ್ಟರ್:-** ತಾವು ದಯವಿಟ್ಟು ಇದನ್ನು ಗಂಭೀರವಾಗಿ ತೆಗೆದುಕೊಂಡು ಕೆಲಸ ಮಾಡಿಕೊಡಿ. ಇದು ಒಂದು ಒಳ್ಳೆಯ ಕೆಲಸವಾಗುತ್ತದೆ.

ಹುಬ್ಬಳ್ಳಿಯ ಸಿದ್ಧಾರೂಡ ಮಠ ಪುರಾತನ ಮಠವಾಗಿದೆ. ಈ ಮಠಕ್ಕೆ ಮಹಾರಾಷ್ಟ್ರ, ಗೋವ, ಉತ್ತರ ಪ್ರದೇಶ ಮತ್ತು ದೆಹಲಿಯಿಂದ ಕೂಡ ಸರ್ದಾರ್‌ಜೀಗಳು ಬರುತ್ತಾರೆ. 15 ವರ್ಷಗಳ ಮುಂಚೆ ಮಾನ್ಯ ಅನಂತ್‌ಕುಮಾರ್‌ರವರು ಕೇಂದ್ರ ಸಚಿವರಾಗಿದ್ದಾಗ ರೂ. 20 ಕೋಟಿ ಖರ್ಚು ಮಾಡಿ ವಸತಿ ಗೃಹಗಳನ್ನು ಕಟ್ಟಿಸಿಕೊಟ್ಟಿದ್ದರು. ಸಿದ್ಧಾರೂಢ ಮಠದ ಅಭಿವೃದ್ಧಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳಿಗೆ ಜಾಸ್ತಿ ದುಡ್ಡು ಸಿಗುತ್ತಿಲ್ಲ. ಸದರಿ ಮಠದ ಅಭಿವೃದ್ಧಿಗೆ ಸರ್ಕಾರ ಸ್ಪಂದಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಗಳೆ, ಮಠಗಳು ನನ್ನ ವ್ಯಾಪ್ತಿಗೆ ಬರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಕೊಡಬಹುದು ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಇದಕ್ಕೆ ಅನುದಾನ ಕೊಡಬಹುದಾಗಿದೆ. ಹಣದ ಲಭ್ಯತೆಯನ್ನು ನೋಡಿಕೊಂಡು ಸಾಕಷ್ಟು ಹಣವನ್ನು ಕೊಡುತ್ತಿದ್ದೇವೆ. ಈ ಸಲದ ಬಜೆಟ್‌ನಲ್ಲಿ ಇದಕ್ಕೆ ಹೆಚ್ಚು ಹಣವನ್ನು ಇಟ್ಟರೆ ಈ ನಿಟ್ಟಿನಲ್ಲಿ ಪರಿಶೀಲನೆ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ 937+951+972

(ಉತ್ತರ ಲಗತ್ತಿಸಲಾಗಿದೆ)

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಇದರ ಬಗ್ಗೆ ಸಾಕಷ್ಟು ಸಲ ಚರ್ಚೆ ಆಗಿದೆ. 400 ಹುದ್ದೆಗಳನ್ನು ತುಂಬಲು ಕೆ.ಪಿ.ಎಸ್.ಸಿ.ಗೆ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ನಂತರ, ಹೈದರಾಬಾದ್-ಕರ್ನಾಟಕ ರೋಸ್ಟರ್‌ನ ಸಮಸ್ಯೆಯಿಂದಾಗಿ ತಡೆ ಹಿಡಿಯುವಂಥಾದ್ದಾಗುತ್ತಿದೆ. ಕೆ.ಪಿ.ಎಸ್.ಸಿ.ಯಲ್ಲೇ ಈ ರೀತಿ ಆಗುತ್ತಾ ಹೋದರೆ ನೀವು ಈ ಭಾಗದಲ್ಲಿರುವಂತಹ ಸಂಸ್ಥೆಗಳಿಗೆ ಯಾವಾಗ ನ್ಯಾಯ ಕೊಡುವುದಕ್ಕೆ ಆಗುತ್ತದೆ? 400 ಹುದ್ದೆಗಳನ್ನು ತುಂಬಲು ಏನು ಕ್ರಮ ಕೈಗೊಂಡಿದ್ದೀರಿ ದಯವಿಟ್ಟು ತಿಳಿಸಬೇಕು. ಎಲ್ಲೆಲ್ಲಿ ಪಶುವೈದ್ಯಕೀಯ ಸಂಸ್ಥೆಗಳಿವೆಯೋ ಅವು ಸಿಬ್ಬಂದಿ ಕೊರತೆಯಿಂದ ನೂರಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಸರ್ಕಾರ, ಮೊಬೈಲ್ ಘಟಕ ಎಂದು ಮಾಡಿದೆ. ಅದು ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯ ತನಕ ಇರುತ್ತದೆ. ತಮ್ಮ ಆಸ್ಪತ್ರೆಗಳೂ ಕೂಡ ಅದೇ ಸಮಯದಲ್ಲಿ ತೆರೆದಿರುತ್ತವೆ. ಆ ಮೊಬೈಲ್ ಘಟಕಕ್ಕೆ ಬೇರೆ ಸಮಯವನ್ನು ನಿಗದಿ ಮಾಡಿ, ಆಸ್ಪತ್ರೆ ಸಮಯ ಮುಗಿದ ನಂತರ, ಮೊಬೈಲ್ ಘಟಕ ಓಡಾಡಿದರೆ ಅದರಿಂದ ಜಾನುವಾರುಗಳ ಚಿಕಿತ್ಸೆಗೆ ಅನುಕೂಲವಾಗುತ್ತದೆ. Cattle ex gratia ವ್ಯವಸ್ಥೆ ಇದೆ. ಅಂದರೆ, ರೈತರ ಹಸು-ಜಾನುವಾರು ಸತ್ತು ಹೋದರೆ ಅದಕ್ಕೆ ರೂ. 15,000 ಪರಿಹಾರ ಕೊಡುತ್ತಾರೆ. ಈ ಮೊತ್ತವನ್ನು 2025ರ ಮಾರ್ಚ್ 31ರ ತನಕ ಮಾತ್ರ ಕೊಟ್ಟಿದ್ದಾರೆ. ಏಪ್ರಿಲ್ 2025ರಿಂದ ಇಲ್ಲಿಯ ತನಕ ಯಾರಿಗೂ ಕೊಟ್ಟಿಲ್ಲ. ಇದು ದೊಡ್ಡ ಸಮಸ್ಯೆಯಾಗಿದೆ.

**ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಗಳೆ, ಕೆ.ಪಿ.ಎಸ್.ಸಿ. ಮೂಲಕ 400 ಹುದ್ದೆಗಳನ್ನು ತುಂಬುತ್ತೇವೆ ಎಂದು ಹೇಳುತ್ತಲೇ ಇದ್ದೀರಿ, ಆದರೆ ಆ ಕೆಲಸ ಆಗಿಲ್ಲ ಎಂದು ಹೇಳಿದರು. ಈಗಾಗಲೇ ಪರೀಕ್ಷೆಗಳನ್ನು ಮಾಡಿ, ಅವರ ದಾಖಲೆಗಳನ್ನು ಪರಿಶೀಲನೆ ಮಾಡುತ್ತಿದ್ದಾರೆ. ಸದ್ಯದಲ್ಲೇ ನಾವು ಅಂತಿಮಗೊಳಿಸುತ್ತೇವೆ ಎಂದು ಹೇಳಿದ್ದಾರೆ. ಇದಾದ ತಕ್ಷಣ ನಾವು ನೇಮಕಾತಿ ಮಾಡಿಕೊಳ್ಳುತ್ತೇವೆ. ಮೊಬೈಲ್ ಘಟಕಗಳ ಬಗ್ಗೆ ಕೇಳಿದರು. ಮಾನ್ಯ ಸಭಾಪತಿಗಳೆ, ಇದು ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿದೆ. ಬೆಳಗ್ಗೆ 9 ಗಂಟೆಯಿಂದ ಸಂಜೆ 5 ತಂಟೆಯ ತನಕ ಕೆಲಸ ಮಾಡುತ್ತವೆ. ರಾತ್ರಿ ಸಮಯಕ್ಕೂ ಈ ಸೇವೆಯನ್ನು ವಿಸ್ತರಣೆ ಮಾಡಬೇಕು ಎಂದು ಕೇಂದ್ರಕ್ಕೆ ಮನವಿ ಮಾಡಿದ್ದೇವೆ. ಆಗ ಹಗಲು-ರಾತ್ರಿ ಈ ಸೇವೆಗಳು ಸಿಗುತ್ತವೆ. ಈ ನಿಟ್ಟಿನಲ್ಲಿ ಒತ್ತಡ ಹಾಕಿದ್ದೇವೆ, ಕೇಂದ್ರದ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿ ಮಾತನಾಡಿದ್ದೇವೆ. ಅವರು,

ನೋಡೋಣ ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಗಳೆ, ನಮ್ಮ ಸರ್ಕಾರ ಬಂದಮೇಲೆ 250 ಜನ ಇನ್ಸ್‌ಪೆಕ್ಟರ್‌ಗಳನ್ನು, 400 ಜನ ಪಶುವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದೇವೆ. 400 ಹುದ್ದೆಗಳನ್ನು ತುಂಬಲು ಕೆ.ಪಿ.ಎಸ್.ಸಿ.ಗೆ ಕೊಟ್ಟಿದ್ದೇವೆ. ಅಲ್ಲದೇ 700 ಜನ ಡಿ ಗ್ರೂಪ್ ನೌಕರರನ್ನು ನೇಮಕ ಮಾಡಿಕೊಂಡಿದ್ದೇವೆ. ಆದರೂ ಇನ್ನೂ ಕೊರತೆ ಇದೆ. ಆದ್ದರಿಂದ, ಇನ್ನೂ 400 ಜನರನ್ನು ಗುತ್ತಿಗೆ ಆಧಾರದಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಆರ್ಥಿಕ ಇಲಾಖೆಗೆ ಮನವಿ ಮಾಡಿಕೊಂಡಿದ್ದೇವೆ. ಇವೆಲ್ಲವೂ ಭರ್ತಿಯಾದರೆ ಸ್ವಲ್ಪ ಸುಧಾರಣೆ ಆಗುತ್ತದೆ. ಮತ್ತೆ, ಜಾನುವಾರು ಪರಿಹಾರ ಮೊತ್ತ ನಿರ್ದಿಷ್ಟ ದಿನಾಂಕದ ನಂತರ ಯಾರಿಗೂ ಬಂದಿಲ್ಲ ಎನ್ನುವ ಮಾತನ್ನು ಹೇಳಿದರು. ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಕುರಿತು ಈಗಲೇ ಮಾಹಿತಿ ತರಿಸಿ ಕೊಡುತ್ತೇನೆ. ಬಹುಶಃ ಅದು ಬಿಡುಗಡೆ ಆಗಿರುತ್ತದೆ. ಒಂದು ವೇಳೆ ಹಣ ಬಿಡುಗಡೆ ಆಗದೇ ಇದ್ದರೆ ಹಣಕಾಸು ಇಲಾಖೆಯವರ ಜೊತೆ ಮಾತನಾಡಿ ಈ ಕೆಲಸವನ್ನು ಮಾಡಿಸುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಗಳೆ, ಹುದ್ದೆಗಳನ್ನು ತುಂಬುವ ಬಗ್ಗೆ ಮಾನ್ಯ ಸಚಿವರು ಹೇಳಿದರು. ಹೈದರಾಬಾದ್-ಕರ್ನಾಟಕದ ಭಾಗವಾದ ಬಳ್ಳಾರಿಯಿಂದ ಬೀದರ್‌ವರೆಗೆ ನೀವು ಎಷ್ಟು ನೇಮಕಾತಿಗಳನ್ನು ಮಾಡಿದ್ದೀರಿ ಎನ್ನುವ ಮಾಹಿತಿ ನನ್ನ ಬಳಿ ಇದೆ. ಕಳೆದ 2-3 ವರ್ಷಗಳಿಂದ ಕೊಪ್ಪಳ ಜಿಲ್ಲೆಯಲ್ಲಿ ನೇಮಕಾತಿ ಮಾಡಿರುವ ಪ್ರಮಾಣ ಬಹಳ ಕಡಿಮೆ ಇದೆ. ಕೊಪ್ಪಳ ಜಿಲ್ಲೆಗೆ ಮಂಜೂರಾದ ಹುದ್ದೆಗಳು 21 ಇದ್ದರೆ, ಈ ಪೈಕಿ 6 ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. 15 ಹುದ್ದೆಗಳು ಖಾಲಿ ಇವೆ. ಗಂಗಾವತಿಗೆ 9 ಹುದ್ದೆಗಳು ಮಂಜೂರು ಆಗಿದ್ದರೆ, 4 ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. ಎಲಬುರ್ಗಾಕ್ಕೆ 14 ಹುದ್ದೆಗಳು ಮಂಜೂರು ಆಗಿದ್ದರೆ, 3 ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. 11 ಹುದ್ದೆಗಳು ಖಾಲಿ ಇವೆ. ಕುಕ್ಕನೂರು ಭಾಗಕ್ಕೆ 7 ಹುದ್ದೆಗಳು ಮಂಜೂರು ಆಗಿದ್ದರೆ, 4 ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. 3 ಹುದ್ದೆಗಳು ಖಾಲಿ ಇವೆ. ಕನಕಗಿರಿಯಲ್ಲಿ 5 ಹುದ್ದೆಗಳು ಮಂಜೂರು ಆಗಿದ್ದರೆ, 1 ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. 4 ಹುದ್ದೆಗಳು ಖಾಲಿ ಇವೆ. ಒಟ್ಟು ಮಂಜೂರಾದ ಹುದ್ದೆಗಳು 77 ಇದ್ದರೆ, ಈ ಪೈಕಿ 25 ಹುದ್ದೆಗಳನ್ನು ಭರ್ತಿ ಮಾಡಿದ್ದು, 52 ಹುದ್ದೆಗಳು ಖಾಲಿ ಇವೆ. ಕೊಪ್ಪಳ ಜಿಲ್ಲೆಯ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವುದರಿಂದ ಜಾನುವಾರುಗಳಿಗೆ ಚಿಕಿತ್ಸೆ ನೀಡಲು ಕಷ್ಟವಾಗುತ್ತಿದೆ. ಇತ್ತೀಚೆಗೆ, ಹಸುಗಳಿಗೆ ಗಂಟುರೋಗ, ಕಾಲುಬಾಯಿ ರೋಗ, ಗುಂಡುಸೂಲಿ ರೋಗ ಬಂತು.

(ಮುಂದು)

(299) 11-3-2026 11.50 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೇಮಲತಾ ನಾಯಕ್(ಮುಂದು):**

ಈ ತರಹ ರೋಗಗಳು ಬಂದಾಗ ರೈತರು ಚಿಕಿತ್ಸೆಗೆ ಹೋಗದಿರುವಂತಹ ಬಹಳ ಕಠಿಣವಾದ ಪರಿಸ್ಥಿತಿ ಇವತ್ತು ಇದೆ. 7 ಜಿಲ್ಲೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡಿರುವಂಥವರು ಕೇವಲ 4 ಜನರು ಇದ್ದಾರೆ. ಇಲ್ಲಿಯವರೆವಿಗೂ ನೇಮಕಾತಿ ಆಗಿಲ್ಲ.

**ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಬೀದರ್ ಮತ್ತು ಗುಲ್ಬರ್ಗಾದಲ್ಲಿ ಶೇಕಡ ನೂರರಷ್ಟು ಇದ್ದಾರೆ. ಇನ್ನು 5 ಜಿಲ್ಲೆಗಳಲ್ಲಿ ಸ್ವಲ್ಪ ಕಡಿಮೆ ಇದ್ದಾರೆ. ಕಲ್ಯಾಣ ಕರ್ನಾಟಕ ಭಾಗಕ್ಕೆ ಎಂದು ಕೆ.ಪಿ.ಎಸ್.ಸಿ.ಯಿಂದ ನೇಮಕಾತಿ ಮಾಡುತ್ತಿದೇವೆ ಕಲ್ಯಾಣ ಕರ್ನಾಟಕಕ್ಕೆ 54 ಪಶು ವೈದ್ಯರುಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಎಲ್ಲಿ ಕೊರತೆ ಇದೆ ಅಂತಹ ಕಡೆಗೆ ಕೊಡುತ್ತೇವೆ. ಎರಡು ಜಿಲ್ಲೆಗಳಲ್ಲಿ ಪೂರ್ತಿಯಾಗಿ ಇದ್ದಾರೆ. ಬೀದರ್‌ನಲ್ಲಿ ಶೇಕಡ 100 ರಷ್ಟು ಇದ್ದಾರೆ ಮತ್ತು ಗುಲ್ಬರ್ಗಾದಲ್ಲಿ ಶೇಕಡ 75-80 ರಷ್ಟು ಇದ್ದಾರೆ. ಆದ್ದರಿಂದ 54 ಜನ ಪಶು ವೈದ್ಯರುಗಳನ್ನು ಕಲ್ಯಾಣ ಕರ್ನಾಟಕಕ್ಕೆ ಕೊಡಬೇಕು. ಎಲ್ಲಿ ಪಶು ವೈದ್ಯರುಗಳು ಖಾಲಿ ಇದ್ದಾರೆ ಅಲ್ಲಿಗೆ ಕೊಡುತ್ತೇವೆ.

**ಶ್ರೀ ಹೇಮಲತಾ ನಾಯಕ್:-** ಪಶು ವೈದ್ಯರುಗಳು ಖಾಲಿ ಇರುವಂತಹ ತಾಲ್ಲೂಕುಗಳಿವೆ.

**ಶ್ರೀ ಕೆ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಖಾಲಿ ಇರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪಶು ವೈದ್ಯರ ಕೊರತೆ ಇರುವುದು ನಮ್ಮ ಗಮನದಲ್ಲೂ ಇದೆ. ಆದ್ದರಿಂದ ಎಷ್ಟು ಸಾಧ್ಯವೋ ಅಷ್ಟು ಬಂದ ಹಾಗೆ, ಎಲ್ಲಿ ಖಾಲಿ ಇದೆಯೋ ಅಂತಹ ಕಡೆಗಳಲ್ಲಿ ಭರ್ತಿ ಮಾಡುತ್ತೇವೆ. Cattle death claim ಬಗ್ಗೆ ಕೇಳಿದ್ದಾರೆ. ಎಸ್.ಸಿ., ಎಸ್.ಟಿ.ಗಳಿಗೆ ಸಂಬಂಧಿಸಿದಂತೆ up to ಜೂನ್ 2025 ವರೆಗೆ ಕೊಟ್ಟಿದ್ದೇವೆ. ಜನರಲ್ up to ಏಪ್ರಿಲ್ 2025 ವರೆಗೆ ಕೊಟ್ಟಿದ್ದೇವೆ. ಹಣ ಬಿಡುಗಡೆಯಾದ ಮೇಲೆ ಅದನ್ನು ಕೊಡಿಸುತ್ತೇವೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಕಳೆದ ಮೂರು ವರ್ಷಗಳಿಂದ ಪಶು ಆಸ್ಪತ್ರೆಯಲ್ಲಿ ಪಶು ವೈದ್ಯರುಗಳ ಕೊರತೆ ಬಹಳ ಇದೆ, ನೇಮಕಾತಿ ಮಾಡಿ ಎಂದು ಪ್ರಶ್ನೆ ಕೇಳುತ್ತಲೇ ಬಂದಿದ್ದೇನೆ. ಕಳೆದ ಮೂರು ವರ್ಷಗಳಿಂದ ಅದನ್ನೇ ಟೈಪ್ ಮಾಡುತ್ತಿದ್ದಾರೆ. ಹಿಂದೆ ಮಾನ್ಯ ಸಚಿವರು ಏನು ಉತ್ತರ ಕೊಟ್ಟಿದ್ದಾರೆ ಅದೇ ಉತ್ತರವನ್ನು ಈಗಲೂ ಕೊಟ್ಟಿದ್ದಾರೆ.

400 ಹುದ್ದೆಗಳನ್ನು ನೇಮಕಾತಿ ಮಾಡುವುದಕ್ಕೆ ಕೆ.ಪಿ.ಎಸ್.ಸಿ.ಗೆ ಕೊಟ್ಟಿದ್ದೇವೆ. ಅದರ ಪ್ರಕ್ರಿಯೆಗಳು ಚಾಲನೆಯಲ್ಲಿವೆ. 400 ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದೇವೆ ಎಂದು ಇದೇ ಉತ್ತರ ಕೊಡುತ್ತಿದ್ದಾರೆ. ಸದನದ ಮೂಲಕ ನಮ್ಮ ಒತ್ತಾಯವೇನೆಂದರೆ, ಮಂಜೂರಾಗಿರುವ 3,721 ಪಶು ವೈದ್ಯರುಗಳ ಹುದ್ದೆಗಳಲ್ಲಿ 1,743 ಹುದ್ದೆಗಳು ಖಾಲಿ ಇವೆ. ಅದರಲ್ಲಿ 400 ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದೇವೆಂದು ಹೇಳುತ್ತಿದ್ದಾರೆ. ಗುತ್ತಿಗೆ ಆಧಾರದ ಹುದ್ದೆಗಳನ್ನು ಬಿಟ್ಟುಬಿಡಿ, ಪರ್ಮನೆಂಟ್ ಆಗಿ ನೇಮಕಾತಿ ಮಾಡಿಕೊಳ್ಳಿ ಎಂದು ನಾವು ಕೇಳುತ್ತಿದ್ದೇವೆ. ಆದರೂ ಗುತ್ತಿಗೆ ಆಧಾರದ ಹುದ್ದೆಗಳನ್ನು ಸೇರಿಸಿದರೂ ಕೂಡ ಶೇಕಡ 45 ರಷ್ಟು ಹುದ್ದೆಗಳು ಖಾಲಿ ಇವೆ. ಒಬ್ಬ ಪಶು ವೈದ್ಯ 4-4 ಆಸ್ಪತ್ರೆಗಳ ಇನ್‌ಚಾರ್ಜ್ ತೆಗೆದುಕೊಂಡಿರುತ್ತಾರೆ. ಅವರು ಎಲ್ಲಿ ಹೋಗುತ್ತಾರೆ? ಅವರು ಸಮರ್ಪಕವಾಗಿ ಜಾನುವಾರುಗಳಿಗೆ ಚಿಕಿತ್ಸೆ ಕೊಡುವುದಕ್ಕೆ ಸಾಧ್ಯವಿದೆಯೇ? ಒಬ್ಬ ವೈದ್ಯರು 4-4 ಆಸ್ಪತ್ರೆಗಳಿಗೆ ಹೋಗಬೇಕು. 5,000 ಜಾನುವಾರುಗಳಿಗೆ ಒಬ್ಬ ಪಶು ವೈದ್ಯ ಇರಬೇಕೆಂದು ನಿಯಮವಿದೆ. ನಮ್ಮ ಒತ್ತಾಯವೇನೆಂದರೆ, ಮೂಕ ಪ್ರಾಣಿಗಳಿಗೆ ಸರಿಯಾದ ಸಮಯಕ್ಕೆ ಚಿಕಿತ್ಸೆ ಕೊಡದಿದ್ದರೆ ಸತ್ತು ಹೋಗುತ್ತವೆ. ಎತ್ತುಗಳು ಸತ್ತು ಹೋದರೆ ರೈತರ ಕೃಷಿ ಚಟುವಟಿಕೆಗಳು ಬಂದ್ ಆಗುತ್ತವೆ. ಕೋಳಿ, ಕುರಿ ಸಾಕಾಣಿಕೆಗಳಿಂದ ಜೀವನ ನಡೆಸುತ್ತಿದ್ದಾರೆ. ಎತ್ತುಗಳಿಗೆ, ಕುರಿಗಳಿಗೆ ಸರಿಯಾದ ಚಿಕಿತ್ಸೆ ಸಿಗದೆ ಸತ್ತು ಹೋದರೆ ಅದಕ್ಕೆ ಪರಿಹಾರವನ್ನು ಕೊಡುತ್ತಾರೆಯೇ? ಅದಕ್ಕೆ ನಮ್ಮ ಒತ್ತಾಯವೇನೆಂದರೆ, ಆದಷ್ಟು ಬೇಗ ವೈದ್ಯರುಗಳ ನೇಮಕಾತಿಯನ್ನು ಮಾಡಬೇಕು. ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಹೆಚ್ಚುವರಿ ಹುದ್ದೆಗಳ ಮಂಜೂರಾತಿಯನ್ನು ತೆಗೆದುಕೊಂಡು ಬಜೆಟ್‌ನಲ್ಲಿ ಘೋಷಣೆ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಈ 400 ಹುದ್ದೆಗಳು ನಿಗದಿಯಾಗಿದೆ. ಕಳೆದ ಮೂರು ವರ್ಷಗಳಿಂದ ನಮ್ಮ ಸಚಿವರಾದ ಮಾನ್ಯ ಪ್ರಭು ಚವ್ಹಾಣ್‌ರವರು ಸೇರಿದಂತೆ ಎಲ್ಲರೂ ಇದೇ ಉತ್ತರವನ್ನು ಕೊಟ್ಟರು. ದಯವಿಟ್ಟು ಮಾನ್ಯ ಸಚಿವರು ಆಸಕ್ತಿ ವಹಿಸಿ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಹೋಗಿ ಇದೇ ಬಜೆಟ್‌ನೊಳಗೆ ಇನ್ನು 250 ಪಶು ವೈದ್ಯರುಗಳನ್ನು ನೇಮಕ ಮಾಡುತ್ತೇವೆಂದು ಘೋಷಣೆ ಮಾಡಲಿ. 3,100 ಪಶು ವೈದ್ಯರ ಹುದ್ದೆಗಳು ಖಾಲಿ ಇವೆ. ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ನಾನು ಮಾನ್ಯ ಸಚಿವರಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಒತ್ತಾಯ ಮಾಡಿ 400 ಗುತ್ತಿಗೆ ಆಧಾರದ ಹುದ್ದೆಗಳನ್ನು ಖಾಯಂ ಮಾಡುವುದಕ್ಕೆ ಆಗುತ್ತಿಲ್ಲ. ಬಜೆಟ್‌ನಲ್ಲಿ ಹೆಚ್ಚು ಹುದ್ದೆಗಳಿಗೆ ಕನಿಷ್ಠ 200-300 ಹುದ್ದೆಗಳಿಗೆ ಮಂಜೂರಾತಿಯನ್ನು ತೆಗೆದುಕೊಳ್ಳಿ.

**ಶ್ರೀ ಕೆ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಪಶು ವೈದ್ಯರ ಕೊರತೆ ಇರುವುದು, ಇನ್ಸ್ಪೆಕ್ಟರ್‌ಗಳ ಕೊರತೆ ಇರುವುದು ಸರ್ಕಾರದ ಗಮನದಲ್ಲಿದೆ. ಅದನ್ನೆಲ್ಲಾ ಭರ್ತಿ ಮಾಡಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಖಾಯಂ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ನಾವು ಕೆ.ಪಿ.ಎಸ್.ಸಿ.ಗೆ ಕೊಟ್ಟಿದ್ದು, ಅವರು ಆದಷ್ಟು ಬೇಗ ಮಾಡಬೇಕಾಗಿತ್ತು, ಆದರೆ ಮಾಡಿಲ್ಲ. ಈಗ ಅವರು ಅಂತಿಮವಾಗಿ ಮಾಡುತ್ತಿದ್ದಾರೆ. ಅವರು ನೇಮಕಾತಿ ಮಾಡಿದ ಮೇಲೆ ಖಾಯಂ ವೈದ್ಯರುಗಳು ಬರುತ್ತಾರೆ.

**ಸಭಾಪತಿಯವರು:-** ಇರುವಂತಹ ವೈದ್ಯರುಗಳನ್ನು ಕರೆದುಕೊಂಡು ಬರುವುದಕ್ಕೆ ರೈತರು ವೆಹಿಕಲ್ ಅನ್ನು ಕಳುಹಿಸಬೇಕು. ನಾನೇ ಎಷ್ಟೋ ಸಲ ವೆಹಿಕಲ್ ಅನ್ನು ಕಳುಹಿಸಿದ್ದೇನೆ.

**ಶ್ರೀ ಕೆ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇರುವಂತಹ ವ್ಯವಸ್ಥೆಯಲ್ಲೇ reorganize ಮಾಡಿ ಪಶು ವೈದ್ಯರುಗಳನ್ನು ಹಾಕಿದ್ದೇವೆ. ನಾನು ಮಾಹಿತಿಗೋಸ್ಕರ ಹೇಳುತ್ತಿದ್ದೇನೆ. ಕರ್ನಾಟಕದಲ್ಲಿ 1,38,000 ರಾಸುಗಳಿವೆ. ರಾಷ್ಟ್ರೀಯ ಕೃಷಿ ಆಯೋಗದ ಮಾರ್ಗಸೂಚಿಯಂತೆ ಇರಬೇಕಾದ ಆಸ್ಪತ್ರೆಗಳು 2,776 ಇರಬೇಕು. ಈಗ ಮಂಜೂರಾಗಿರುವ ಆಸ್ಪತ್ರೆಗಳು 4,166, ಕೃಷಿ ಆಯೋಗದ ಮಾಹಿತಿ ಪ್ರಕಾರ ನಮ್ಮ ರಾಜ್ಯದಲ್ಲಿ 2,776 ಆಸ್ಪತ್ರೆಗಳು ಇರಬೇಕು. ತಮಿಳುನಾಡಿನಲ್ಲಿ ಎರಡು ಕೋಟಿ ನಲವತ್ತೈದು ಲಕ್ಷ ರಾಸುಗಳಿವೆ. ಅಲ್ಲಿ ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನ ಪ್ರಕಾರ 4,900 ಆಸ್ಪತ್ರೆಗಳು ಇರಬೇಕು. ಅಲ್ಲಿ ಕೇವಲ 3,869 ಆಸ್ಪತ್ರೆಗಳಿವೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ನಮ್ಮಲ್ಲಿ ಸಿಕ್ಕಾಪಟ್ಟೆ ಆಸ್ಪತ್ರೆಗಳು ಆಗಿಬಿಟ್ಟಿವೆ. ಈಗಲೂ ಜನಪ್ರತಿನಿಧಿಗಳಿಂದ ನಮಗೆ ಆಸ್ಪತ್ರೆಗಳು ಬೇಕು ಎಂದು ಒತ್ತಡ ಬರುತ್ತಿದೆ. ಆದ್ದರಿಂದ ಈ ಸಲ ಹೊಸ ಆಸ್ಪತ್ರೆಗಳನ್ನು ಕೊಡುತ್ತಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಬಗ್ಗೆ ಮಾತ್ರ ನಾವು ಚಿಂತನೆ ಮಾಡೋಣ. ಒಂದು ಸಮಯ ಅಲ್ಲಿ ಹೆಚ್ಚಾಗಿದೆ, ಅದನ್ನು ಕಡಿಮೆ ಮಾಡುವುದಕ್ಕೆ ನಮ್ಮಿಂದ ಆಗುತ್ತದೆಯೇ, ಕಡಿಮೆ ಇದ್ದರೆ ಹೆಚ್ಚು ಮಾಡುವುದಕ್ಕೆ ನಮ್ಮಿಂದ ಆಗುತ್ತದೆಯೇ?

**ಶ್ರೀ ಕೆ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅವರ ಮಾಹಿತಿಗಾಗಿ ನಾನು ಹೇಳುತ್ತಿದ್ದೇನೆ ಅಷ್ಟೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಮಾಹಿತಿ ಕೊಡಲಿ, ಅದರ ಪ್ರಶ್ನೆಯಲ್ಲ. ಇಲ್ಲಿ ಕೊರತೆ ಇದ್ದರೆ ಏನು ಮಾಡಬೇಕು ಎಂಬುದರ ಬಗ್ಗೆ ಯೋಚನೆ ಮಾಡಲಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ನೀವು ಏನು ಮಾಡುತ್ತೀರಿ ಎಂಬುದನ್ನು ಹೇಳಿ, ಅವರು ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ಪರಿಹಾರವನ್ನು ಹೇಳಿ?

**ಶ್ರೀ ಕೆ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇದನ್ನೆ ಸ್ವಲ್ಪ reorganize ಮಾಡಿ ಜನರಿಗೆ ಸೌಕರ್ಯ ಸಿಗುವಂತಹ ಕೆಲಸ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 962**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ 2-3 ಉಪ ಪ್ರಶ್ನೆಗಳಿವೆ. ಗ್ರಾಮ ಪಂಚಾಯಿತಿಗಳನ್ನು Article 40 of the Constitution of Indian comes under the Directive Principles of State Policy. ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಗ್ರಾಮ ಪಂಚಾಯಿತಿಗಳಿಗೆ ಅಧಿಕಾರಗಳನ್ನು, ಸಂಪನ್ಮೂಲಗಳನ್ನು ಮತ್ತು ಮೂಲಭೂತ ಸೌಕರ್ಯಗಳನ್ನು ಕೊಡುವುದು ನಮ್ಮ ಸರ್ಕಾರದ ಜವಾಬ್ದಾರಿಯಾಗಿದೆ. ನಾನು ಅವರ ಹತ್ತಿರ ಕೇಳಿಕೊಳ್ಳುವುದೇನೆಂದರೆ, ನಮ್ಮ ಸರ್ಕಾರದ ಜವಾಬ್ದಾರಿ ಇದೆ ಎಂದು ಹೇಳಬೇಕಾದರೆ ಗ್ರಾಮ ಪಂಚಾಯಿತಿಯವರಿಗೆ ಸ್ವಂತ ಕಟ್ಟಡಗಳು ಇರುವುದಿಲ್ಲ. ಒಂದು ವೇಳೆ ಕಟ್ಟಡಗಳಿದ್ದರೂ ಅವರಿಗೆ ಕಾಲಂ 11 ರಲ್ಲಿ ಹಾಕಿರುತ್ತಾರೆ. ಕಾಲಂ 11 ರಲ್ಲಿ ಏನಾಗಿರುತ್ತದೆ ಎಂದರೆ ಅದು "ಸರ್ಕಾರ" ಎಂದು mention ಮಾಡಿರುತ್ತಾರೆ. ಸರ್ಕಾರ ಎಂದು ಹೇಳಿದಾಗ ಅದು ಗ್ರಾಮ ಪಂಚಾಯಿತಿಗೆ ಸೇರುವುದಿಲ್ಲ. ಅದರಲ್ಲಿ ಬೇರೆ ಬೇರೆ ಜಾಗಗಳು ಸೇರಿರುತ್ತವೆ. ಮತ್ತೊಂದು ಜಾಸ್ತಿಯಾಗಿ ಏನು ಬರುತ್ತದೆ ಎಂದರೆ, ಕಾಲಂ 11 ಅನ್ನು ತೆಗೆದುಕೊಂಡಾಗ ಸಾಮಾಜಿಕ ಅರಣ್ಯಗಳು, ಗೋಮಾಳಗಳು ಬಂದಿರುತ್ತವೆ. ಇದಕ್ಕೆ ಸ್ಪಷ್ಟವಾದ ನಿರ್ದೇಶನವನ್ನು ಕೊಡಬೇಕು. ನಾವು ಯಾವಾಗ ಮೂಲಭೂತ ಸೌಕರ್ಯಗಳನ್ನು ಕೇಳಬೇಕು ಎಂದರೆ ಪ್ರತಿ ಗ್ರಾಮ ಪಂಚಾಯಿತಿಗಳಿಗೆ ಸ್ಥಳಗಳನ್ನು ಗುರುತಿಸಬೇಕು. ಪಂಚಾಯಿತಿ ಕಛೇರಿ, ಸಭಾಭವನ, ಅಂಗನವಾಡಿ, ಆರೋಗ್ಯ ಕೇಂದ್ರ, ಪಾರ್ಕ್, ಸ್ಮಶಾನ ಇರಬಹುದು, ಇವೆಲ್ಲವನ್ನು ಗುರುತಿಸುವುದಕ್ಕೆ ಅಧಿಕಾರಿಗಳಿಗೆ ಮಾನ್ಯ ಸಚಿವರು ಸ್ಪಷ್ಟವಾದ ನಿರ್ದೇಶನವನ್ನು ಕೊಡಬೇಕು. ಇವತ್ತು ಎಷ್ಟೋ ಜಾಗದಲ್ಲಿ ಗೊಂದಲವಾಗಿ ಬಿಟ್ಟಿದೆ. ಆ ಜಾಗದಲ್ಲಿ ಕಾಲಂ 11 ರಲ್ಲಿ ಏನಾಗುತ್ತದೆ ಎಂದರೆ ಗೋಮಾಳ, ರಕ್ಷಿತ ಅರಣ್ಯ ಇರುತ್ತದೆ, ಸಾಮಾಜಿಕ ಅರಣ್ಯಗಳು ಇರುತ್ತವೆ. ಇದಕ್ಕಾಗಿ ಮೂಲಭೂತ ಸೌಕರ್ಯಗಳನ್ನು ನಾವು ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿಲ್ಲ. ಮೊನ್ನೆ ನಾನೇ ಸ್ವತಃ ಹಲವಾರು ಗ್ರಾಮ ಪಂಚಾಯಿತಿಗಳಿಗೆ ಭೇಟಿಯನ್ನು ಕೊಟ್ಟಾಗ ಇದನ್ನು ನಾನು ನೋಡಿರುವಂಥದ್ದು. ಹಾಗಾಗಿ ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಯಾವುದೇ ಸರ್ಕಾರಿ ಸಂಸ್ಥೆ ಅದು ಗ್ರಾಮ ಪಂಚಾಯಿತಿ ಇರಲಿ, ಬೇರೆ ಇಲಾಖೆ ಇರಲಿ, ಅವರಿಗೆ ಜಾಗ ಕಾಯ್ದಿರಿಸಿದೆ ಎಂದಾಗ ಅದನ್ನು ನಾವು ಕಾಲಂ 11 ರಲ್ಲಿ ಕೂರಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

(ಮುಂದು)

(300) 11/03/2026 12:00 ಎಸ್‌ಪಿಆರ್/ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣಬೈರೇಗೌಡ (ಮುಂದು):**

ಕಲಂ-9 ರಲ್ಲಿ "ಮಾಲೀಕತ್ವ" ಎಂದು ಇದ್ದು, ಇದರಲ್ಲಿ "ಸರ್ಕಾರಿ" ಎಂಬುದಾಗಿ ಇರುತ್ತದೆ. ಕಲಂ-11 ರಲ್ಲಿ 'ಗ್ರಾಮ ಪಂಚಾಯಿತಿ ಕಟ್ಟಡಕ್ಕೆ' ಎಂದು ನಮೂದಿಸಿದ್ದರೆ, ಅಲ್ಲಿಗೆ ಈ ಜಾಗವನ್ನು ಅವರಿಗೆ ಕಾಯ್ದಿರಿಸಿದ್ದೇವೆ ಎಂದು ಅರ್ಥ. ಅದರ ಮೂಲ ಮಾಲೀಕತ್ವ ಸರ್ಕಾರ ಅಂದರೆ ಕಂದಾಯ ಇಲಾಖೆಯಲ್ಲಿ ಇರುತ್ತದೆ. ಆದರೆ, ಅವರಿಗೆ ಸಂಪೂರ್ಣ ಮಾಲೀಕತ್ವವನ್ನು ಕೊಡಬೇಕೆಂದು ಸದಸ್ಯರು ಕೇಳುತ್ತಿದ್ದಾರೆ. ಧಾರಾಳವಾಗಿ ಕೊಡುತ್ತೇವೆ. ಗ್ರಾಮ ಪಂಚಾಯಿತಿಗೆ ಅವರ ಕಛೇರಿ ಜಾಗದ ಮಾಲೀಕತ್ವ ಅವರಿಗೆ ಬೇಕು ಎಂದರೆ, ನಾವು ಖಂಡಿತವಾಗಿಯೂ ಕೊಡುತ್ತೇವೆ. ಇದರಲ್ಲಿ ಇಲ್ಲ ಎನ್ನುವ ಚಕಾರವೇ ಇಲ್ಲ. ಯಾರಿಗೆ ಈ ರೀತಿಯಾಗಿ ಬೇಕೋ, ಅವರು ಒಂದು ಅರ್ಜಿಯನ್ನು ನೀಡಿದರೆ, ಅವರಿಗೆ ನಾವು ಸರ್ವೆ ಸ್ಕೆಚ್ ಅನ್ನು ಮಾಡಿ, ಹೊಸ ನಂಬರ್ ಅನ್ನು ಕೊಟ್ಟು, ಕಲಂ-11 ರ ಬದಲಿಗೆ, ಅವರಿಗೆ ಕಲಂ-9 ರಲ್ಲಿನ ಮಾಲೀಕತ್ವದಲ್ಲಿ ಅವರನ್ನೇ ಕೂಡಿಸುತ್ತೇವೆ. ಇದು ದೊಡ್ಡ ವಿಷಯವೇನೂ ಅಲ್ಲ. ಅದನ್ನು ನಾವು ಮಾಡಿ ಕೊಡುತ್ತೇವೆ.

ಇನ್ನು ಅವರು ಹೇಳಿರುವ ಎರಡನೆಯ ಅಂಶವೇನೆಂದರೆ, ಇವತ್ತಿನ ದಿವಸ ಗ್ರಾಮೀಣ ಪ್ರದೇಶದಲ್ಲಿಯೂ ಸಹ aspirational, ಅಂದರೆ ಹಳ್ಳಿಯಲ್ಲಿ ಇರುವವರಿಗೂ ಸಹ ಅವರದ್ದೇ ಆದ ಆಶಯಗಳೂ ಕೂಡ ಇವೆ. ಇವುಗಳನ್ನು ಈಡೇರಿಸಬೇಕಾದರೆ, ಒಂದು ಪಾರ್ಕ್, ಆಟದ ಮೈದಾನ ಗಳ ಅವಶ್ಯಕತೆ ಇದೆ. ನಾವು ಇವುಗಳಿಗಾಗಿ ಜಾಗವನ್ನು ಉಳಿಸಬೇಕು ಎಂದು ಹೇಳಿದರೆ, ಇಲ್ಲಿ ಎಲ್ಲಾ ಜನಪ್ರತಿನಿಧಿಗಳ ಒತ್ತಡ ಏನೆಂದರೆ, ಇರುವ ಎಲ್ಲಾ ಜಾಗ ಮತ್ತು ಜಮೀನುಗಳನ್ನೂ ರೈತರಿಗೆ ಮಂಜೂರು ಮಾಡಿ ಎಂದು ಹೇಳಿದರೆ, ಕೊನೆಗೆ ಹಳ್ಳಿಯಲ್ಲಿ ಇರುವವರಿಗೆ ಇವತ್ತು ಅಲ್ಲ ನಾಳೆಯ ದಿನ ಪಾರ್ಕ್, ಆಟದ ಮೈದಾನ ಇವುಗಳನ್ನು ಒದಗಿಸಿಕೊಡಬೇಕಾದಂತಹ ಸಂದರ್ಭ ಬರುತ್ತದೆ. ಇವತ್ತಿನ ದಿವಸ ಸರ್ಕಾರವೇ ಸ್ಮಶಾನಕ್ಕೆ ಜಾಗವನ್ನು ಖರೀದಿ ಮಾಡುವಂತಾಗಿದೆ. ಈ ರೀತಿಯಾಗಿ ಸ್ಮಶಾನಕ್ಕೆ ಬೇಕಾದ ಜಾಗವನ್ನು ನಾವೇ ದುಡ್ಡು ಕೊಟ್ಟು ಖರೀದಿ ಮಾಡುತ್ತಿದ್ದೇವೆ. ಪ್ರತಿ ವರ್ಷ ಇದಕ್ಕಾಗಿ 20 ಕೋಟಿ ರೂಪಾಯಿಗಳನ್ನು ವ್ಯಯಿಸುವಂತಹ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಏನೆಂದರೆ, ಹಳ್ಳಿಗಳಲ್ಲಿಯೂ ಸಹ ಆಟದ ಮೈದಾನ ಹಾಗೂ ಇನ್ನಿತರೆಗಳಿಗೆ ಸರ್ಕಾರವು ಜಾಗವನ್ನು ಗುರ್ತಿಸಬೇಕು ಎಂಬುದಾಗಿರುತ್ತದೆ. ಹೀಗಾಗಿ ಸ್ಥಳೀಯ ಸಂಸ್ಥೆಯವರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದರೆ, ಎಲ್ಲಿ ಸರ್ಕಾರಿ ಜಾಗ ಇದೆಯೋ, ಅದನ್ನು ಆಟದ ಮೈದಾನಕ್ಕೆ ಅಥವಾ ಪಾರ್ಕ್‌ಗಳಿಗಾಗಿ ನಮಗೆ ಕೊಡಬೇಕೆಂದು ಕೇಳಿದರೆ, ಅದನ್ನೂ ಕೂಡ ನಾವು ನೂರಕ್ಕೆ ನೂರರಷ್ಟು ಸಕಾರಾತ್ಮಕವಾಗಿ ಪರಿಗಣಿಸುತ್ತೇವೆ.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ರೀತಿಯಾಗಿ ಮಂಜೂರು ಮಾಡುವುದಕ್ಕೆ ಎಷ್ಟು ಬಾಕಿ ಇದೆ ಎಂಬ ಮತ್ತೊಂದು ಅಂಶದ ಬಗ್ಗೆಯೂ ಸಹ ಮಾನ್ಯ ಸಚಿವರನ್ನು ಕೇಳಿದ್ದೆ. ಬಹುಶಃ ಎಲ್ಲಿಯೋ ಒಂದು ಕಡೆ ಇಲಾಖಾಧಿಕಾರಿಗಳು ನನಗೆ ತಪ್ಪು ಉತ್ತರವನ್ನು ಕೊಟ್ಟಿರಬೇಕು ಅಥವಾ ಮಾನ್ಯ ಸಚಿವರಿಗೆ ಕೊಟ್ಟಿರಬೇಕು. ಏಕೆಂದರೆ ಎರಡೂ ಜಿಲ್ಲೆಗಳಿಂದ ಸೇರಿಕೊಂಡು ಕೇವಲ 37 ಅರ್ಜಿಗಳು ಮಾತ್ರವೇ ಬಾಕಿ ಇವೆ ಎಂಬ ಉತ್ತರವನ್ನು ನೀಡಿದ್ದಾರೆ. ಆದರೆ, ನನ್ನ ಹತ್ತಿರ ಇರುವ ಮಾಹಿತಿಯಂತೆ, ಕೇವಲ ಮಂಗಳೂರು ಜಿಲ್ಲೆಯೊಂದರಲ್ಲಿಯೇ ಸುಮಾರು 221 ಗ್ರಾಮ ಪಂಚಾಯಿತಿಗಳ ಪೈಕಿ 100 ಕ್ಕಿಂತಲೂ ಹೆಚ್ಚಿನ ಅರ್ಜಿಗಳು ಕೊಟ್ಟು, ಅವುಗಳು ಬಾಕಿ ಇವೆ ಎಂಬ ಮಾಹಿತಿಯನ್ನು ನನಗೆ ನೀಡಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಪರಿಶೀಲನೆ ಮಾಡಬೇಕು. ಇದರ ಸಂಪೂರ್ಣ ಚಿತ್ರಣವನ್ನು ನಾನು ಅವರಿಗೆ ನೀಡುತ್ತಿದ್ದೇನೆ. ಇದು ಕೇವಲ ಒಂದು ಜಿಲ್ಲೆಯ ಸಂಗತಿಯಾಗಿದೆ. ಅದೇ ರೀತಿಯಾಗಿ ಉಡುಪಿ ಜಿಲ್ಲೆಯಲ್ಲಿಯೂ ಸಹ ಇದೆ. ಗ್ರಾಮ ಪಂಚಾಯಿತಿಯವರು ಯಾವ ಜಾಗಗಳಿಗಾಗಿ ಮನವಿಯನ್ನು ಮಾಡುತ್ತಾರೆಯೋ, ಅವರ ಹಂತದಲ್ಲಿಯೇ ಕಡತಗಳನ್ನು ಅಲ್ಲಲ್ಲಿ ಬಾಕಿ ಇಟ್ಟಿರುತ್ತಾರೆ. ಹೀಗಾಗಿ ಯಾವುದೇ ಗ್ರಾಮ ಪಂಚಾಯಿತಿಯಿಂದ ಈ ರೀತಿಯ ಮನವಿಗಳು ಬಂದಾಗ, ಅದನ್ನು ಕೂಡಲೇ ವಿಲೇ ಮಾಡುವಂತಹ ಅನುಕೂಲತೆಯನ್ನು ಮಾಡಿಕೊಡುವಂತೆ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ಗ್ರಾಮ ಪಂಚಾಯಿತಿ ಸ್ವಂತ ಕಛೇರಿ ಕಟ್ಟಡ, ಯಾವುದೇ ಗ್ರಾಮಕ್ಕೆ ಸ್ಮಶಾನ, ಅಂಗನವಾಡಿ ಕಟ್ಟಡ, ಕಸ ವಿಲೇವಾರಿ ಘಟಕ ಈ ರೀತಿಯ ಸೌಲಭ್ಯಗಳಿಗೆ ಸರ್ಕಾರವು ನೂರಕ್ಕೆ ನೂರರಷ್ಟು ಆದ್ಯತೆಯನ್ನು ನೀಡಿ, ಅವುಗಳನ್ನು ಪರಿಗಣಿಸುತ್ತೇವೆ. ಇಂತಹ ವಿಷಯಗಳಲ್ಲಿ ಸರ್ಕಾರವು ಮೀನ-ಮೇಷ ಎಣಿಸುವುದಕ್ಕೆ ಹೋಗುವುದಿಲ್ಲ. ಇವುಗಳನ್ನು ಬಿಟ್ಟು ಇನ್ನು ಕೆಲವು ಅಧಿಕ ಉಪಯೋಗಕ್ಕಾಗಿ ಜಾಗವನ್ನು ಕೇಳಿದರೆ, ಅದಕ್ಕೆ ಅರ್ಹತೆ/justification ಇದೆಯೋ ಅಥವಾ ಇಲ್ಲವೋ ಎನ್ನುವುದನ್ನು ನಾವು ವಿಚಾರ ಮಾಡಬಹುದು. ಆದರೆ, ಮೂಲಭೂತ ಸೌಕರ್ಯಗಳಿಗಾಗಿ ಏನೇ ಕೇಳಿದರೂ ಕೂಡ ಅದನ್ನು ನಾವು ಸಕಾರಾತ್ಮಕವಾಗಿ ಪರಿಗಣಿಸುತ್ತೇವೆ. ದಯಮಾಡಿ ಸದಸ್ಯರು ಆ ಪಟ್ಟಿಯನ್ನು ನನಗೆ ನೀಡಿದರೆ, ನಾನು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಿ, ಅದರಲ್ಲಿ ಅತ್ಯಾವಶ್ಯಕವಾದ ಅಂದರೆ, essential ಅಂತ ಯಾವುದು ಇದೆಯೋ, ಅವುಗಳೆಲ್ಲವನ್ನೂ ಮಾಡಿಕೊಡಬೇಕೆಂದು ನಾನು ಸೂಚಿಸುತ್ತೇನೆ.

ಪ್ರಶ್ನೆ ಸಂಖ್ಯೆ: ೯೩೦
(ಉತ್ತರವನ್ನು ಲಗತ್ತಿಸಿದೆ)

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಯು ಬಹಳ ಸ್ಪಷ್ಟವಾಗಿದೆ. ಕರಾವಳಿ ಭಾಗದಲ್ಲಿ ಎಷ್ಟು ಪ್ರಮುಖ ಸೇತುವೆಗಳಿವೆ ಹಾಗೂ ಈ ಪೈಕಿ ಎಷ್ಟು ಬಿದ್ದು ಹೋಗಿವೆ, ಇವುಗಳ ಪುನಶ್ಚೇತನಕ್ಕಾಗಿ ಏನೆಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂಬುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆನು. ೨,೦೦೦ ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಾಜ್ಯದಲ್ಲಿ ಸರ್ಕಾರವು ಸೇತುವೆಗಳ ನಿರ್ಮಾಣ, ಅವುಗಳ ಪುನಶ್ಚೇತನ ಮಾಡುತ್ತೇವೆ ಎಂಬುದಾಗಿ ಮಾನ್ಯ ಸಚಿವರು ತಿಳಿಸಿದ್ದಾರೆ. ಕರಾವಳಿ ಭಾಗದ ಸೇತುವೆಗಳ ನಿರ್ಮಾಣ ಮತ್ತು ಅವುಗಳ ಪುನಶ್ಚೇತನಕ್ಕಾಗಿ 561 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ ಎಂಬುದಾಗಿ ತಿಳಿಸಿದ್ದಾರೆ. ಕರಾವಳಿ ಭಾಗದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ಎಷ್ಟು ಸೇತುವೆಗಳು ಬಿದ್ದು ಹೋಗಿವೆ ಎಂಬುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆನು. ಕಳೆದ ಬಾರಿ ಮಳೆಯ ಸಂದರ್ಭದಲ್ಲಿ ಸುಮಾರು 15 ಸೇತುವೆಗಳು ಬಿದ್ದು ಹೋಗಿವೆ. ಇವುಗಳು ಹೇಗೆ ಬಿದ್ದವು ಎಂಬುದರ ಬಗ್ಗೆ ಮಾನ್ಯ ಸಚಿವರು ಏನಾದರೂ enquiry ಮಾಡಿದ್ದಾರೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮಂಗಳೂರಿನಿಂದ ತಾವು ಬಂದಿದ್ದೀರಿ. ವಿಮಾನ ನಿಲ್ದಾಣದಿಂದ ಮಂಗಳೂರಿಗೆ ಹೋಗಬೇಕಾದರೆ, ಮರವೂರು ಎಂಬ ಸೇತುವೆ ಇದೆ. ಅಲ್ಲಿನ ಎರಡೂ ಸೇತುವೆಗಳು ಹೊಸತು ಆಗಿವೆ. ಈಗ ಬಿದ್ದಿರುವ ಸೇತುವೆ ೭೦-೮೦ ವರ್ಷಗಳಷ್ಟು ಹಳೆಯದಾಗಿ ಬಿದ್ದಿಲ್ಲ. ಇವುಗಳು ನಿರ್ಮಾಣವಾಗಿ ಈಗ್ಗೆ ೨೦ ವರ್ಷಗಳಾಗಿಬರಹುದು. ಇವುಗಳು ಹೇಗೆ ಬಿದ್ದಿವೆ ಎಂದು ಕೇಳಿದರೆ, ಅಕ್ರಮವಾಗಿ ಮರಳು ತೆಗೆಯುವವರು ಸೇತುವೆಯ ಅಡಿಗೆ ಹೋಗಿ, ಅದರ foundation ನ ಕೆಳಗೆ ಇದ್ದ ಮರಳನ್ನು ತೆಗೆದಿರುವ ಕಾರಣ ಈ ಸೇತುವೆಗಳು ಬಿದ್ದು ಹೋಗಿವೆ. ಇವತ್ತಿನ ದಿವಸ ಸರ್ಕಾರ ಇದಕ್ಕಾಗಿ ೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಹೀಗಾಗಿ ಇದಕ್ಕೆ accountability ಬೇಡವೇ? ಅಲ್ಲಿನ 15 ಸೇತುವೆಗಳು ಬಿದ್ದು ಹೋಗಿರುವ ಬಗ್ಗೆ ಸರ್ಕಾರವು ತಿಳಿಸಿದೆ. ಇವುಗಳೆಲ್ಲವೂ ಬಿದ್ದಿರುವುದು ಹೇಗೆ ಎನ್ನುವುದರ ಬಗ್ಗೆ ತಾವು enquiry ಮಾಡಬೇಕು. ಹಾಗೂ ಈ 15 ಸೇತುವೆಗಳಿಗೆ ಎಲ್ಲಿ ಪುನಶ್ಚೇತನ ಮಾಡಿದ್ದಾರೆ ಅದರಲ್ಲಿ ಲಘು ವಾಹನ ಸಂಚಾರಕ್ಕೆ ಮಾತ್ರವೇ ಅವಕಾಶ ಮಾಡಿದ್ದಾರೆ. ಹೀಗಾದಾಗ ಭಾರಿ ವಾಹನಗಳು ಎಲ್ಲಿಗೆ ಹೋಗುವುದು ಎನ್ನುವುದು ನನ್ನ ಪ್ರಶ್ನೆಯಾಗಿದ್ದು, ಇದಕ್ಕೆ ನಾನು ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತೇನೆ.

ಶಿರಾಡಿ ಘಾಟ್‌ನಲ್ಲಿ ಟನಲ್ ರೋಡ್‌ಗಳನ್ನು ಮಾಡುವುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅಲ್ಲಿ ಟನಲ್ ರೋಡ್ ಅನ್ನು ಮಾಡುವುದಕ್ಕೆ ಈಗಾಗಲೇ ಡಿ.ಪಿ.ಆರ್. ಆಗಿ ಅನುಮತಿ ದೊರೆತಿದೆ ಎಂಬುದಾಗಿ ನಮ್ಮ ಭಾಗದ ಸಂಸದರು ತಿಳಿಸಿದ್ದಾರೆ. ಆದರೆ, ಕೇಂದ್ರ ಸರ್ಕಾರವು ಟನಲ್ ರೋಡ್ ಅನ್ನು ಮಾಡುವುದಕ್ಕೆ ಇದುವರೆವಿಗೆ ಯಾವುದೇ ರೀತಿಯ ಅನುಮತಿಯನ್ನು ನೀಡಿಲ್ಲ ಆದರೆ, ಇದರ ಬಗ್ಗೆ ಪ್ರಸ್ತಾವನೆ ಇದೆ ಎಂಬುದಾಗಿ ರಾಜ್ಯ ಸರ್ಕಾರವು

ಹೇಳುತ್ತಿದೆ. ಸುಮಾರು 30.422 ಕಿಲೋ ಮೀಟರ್ ಉದ್ದದ ರಸ್ತೆಯಲ್ಲಿ ಒಟ್ಟು 3.80 ಕಿಲೋ ಮೀಟರ್ ಉದ್ದದ ಮೂರು ಸುರಂಗ ಮಾರ್ಗಗಳಿದ್ದು, ಪ್ರಸ್ತುತ ಈ ಅಲೈನ್‌ಮೆಂಟ್ ಇನ್ನೂ ಅಂತಿಮಗೊಳಿಸಲ್ಪಟ್ಟಿರುವುದಿಲ್ಲ / ಅನುಮೋದಿಸಲ್ಪಟ್ಟಿರುವುದಿಲ್ಲವೆಂದು ತಿಳಿಸಿರುತ್ತಾರೆ. ಇದು ಹೇಗೆ ನಡೆಯುತ್ತದೆ ಎನ್ನುವುದರ ಬಗ್ಗೆ ಸಚಿವರು ಉತ್ತರಿಸಬೇಕು.

**ಶ್ರೀ ಸತೀಶ ಜಾರಕಿಹೊಳಿ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಕಳಕಳಿ ಏನೆಂದರೆ, ಕರಾವಳಿ ಭಾಗದ ಪ್ರಮುಖ ಸೇತುವೆಗಳು ಸಂಚಾರಕ್ಕೆ ಯೋಗ್ಯವಾಗಿಲ್ಲ ಎಂಬ ಬಗ್ಗೆ ಪ್ರಶ್ನೆಯನ್ನು ಕೇಳಿದ್ದು, ಇದಕ್ಕೆ ನಾವು "ಕರಾವಳಿ ಭಾಗದಲ್ಲಿ ಲೋಕೋಪಯೋಗಿ ಇಲಾಖೆಯ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ, ಲಘು ವಾಹನ ಸಂಚಾರಕ್ಕೆ ಮಾತ್ರ ಯೋಗ್ಯವಾಗಿರುವ ಒಟ್ಟು 15 ಸೇತುವೆಗಳನ್ನು ಗುರುತಿಸಲಾಗಿದೆ" ಎಂಬ ಉತ್ತರವನ್ನು ನೀಡಿದ್ದೇವೆ. ಇಲ್ಲಿ ಭಾರಿ ವಾಹನಗಳು ಹೋಗುವುದಕ್ಕೆ ಆಗುವುದಿಲ್ಲವೆಂತಲೂ ಸಹ ನಾವು ಹೇಳಿದ್ದೇವೆ. ಇಲ್ಲಿ ಕೇವಲ ಲಘು ವಾಹನಗಳು ಮಾತ್ರವೇ ಸಂಚಾರಗೊಳ್ಳುತ್ತಿವೆ. ಮುಂದುವರೆದು, ಸೇತುವೆಗಳ ಕೆಳಗೆ ಇರುವ ಮರಳು ತೆಗೆಯುವಿಕೆಯಿಂದಾಗುವ ಸಮಸ್ಯೆಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಿಗೆ ನಾನು ಕಳೆದ ಬಾರಿ ಭೇಟಿಯನ್ನು ನೀಡಿದಾಗ, ಈ ಸಮಸ್ಯೆಯ ಬಗ್ಗೆ ತಿಳಿಸಿದಾಗ, ಇದನ್ನು ತಡೆಯುವುದಕ್ಕೆ ತಾವೇ ಕ್ರಮಗಳನ್ನು ವಹಿಸಬೇಕೆಂದು ಎಂದು ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕ ಇವರುಗಳಿಗೆ ಸೂಚನೆಗಳನ್ನು ಕೊಟ್ಟಿದ್ದೇವೆ. ಇವರುಗಳು ಬಹುಶಃ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬುದರ ಬಗ್ಗೆ ನನ್ನ ಗಮನಕ್ಕೆ ಮಾಹಿತಿ ಇಲ್ಲ. ಮಾನ್ಯ ಸದಸ್ಯರು ಹೇಳಿದಂತೆ, ಅಲ್ಲಿನ ಶಿರಾಡಿ ಘಾಟ್‌ನಲ್ಲಿ ಟನಲ್ ರೋಡ್ ನಿರ್ಮಾಣಕ್ಕೆ ಎನ್.ಹೆಚ್.ಎ.ಐ. ರವರಿಗೆ ನಾವು ಎನ್.ಓ.ಸಿ. ಅನ್ನು ಕೊಟ್ಟಿದ್ದೇವೆ. ಅವರು ಮೂರು ಅಲೈನ್‌ಮೆಂಟ್ ಅನ್ನು ಮಾಡಿದ್ದು, ಅದು ಯಾವುದು ಎಂದು ಗುರ್ತಿಸಬೇಕಾದ ಕರ್ತವ್ಯ ಅವರದ್ದೇ ಆಗಿದೆ. ನಮ್ಮಿಂದ ಯಾವ ರೀತಿಯ ಸಹಕಾರದ ಅವಶ್ಯಕತೆ ಇದೆಯೋ ಅದನ್ನು ನೀಡುವಂತಹ ಪ್ರಯತ್ನವನ್ನು ನಾವು ಖಂಡಿತವಾಗಿಯೂ ಸಹ ಮಾಡಿದ್ದೇವೆ. ಸೇತುವೆಯ ನಿರ್ಮಾಣ ಅಥವಾ ಪುನಶ್ಚೇತನದ ಬಗ್ಗೆ ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರೆ, ಅದನ್ನು ಮಾಡಲು ನಮ್ಮ ಇಲಾಖೆಯು ಕ್ರಮ ಕೈಗೊಳ್ಳುತ್ತದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಮರವೂರು ಸೇತುವೆಯು ಅತ್ಯಂತ ಪ್ರಮುಖ ಸೇತುವೆಯಾಗಿದ್ದು, ಇಲ್ಲಿ ಕಳೆದ ಮೂರು ವರ್ಷಗಳಿಂದ ಯಾವುದೇ ಕಾಮಗಾರಿ ಆಗಿಲ್ಲ. ಒನ್ ವೇ ಮಾದರಿಯಲ್ಲಿಯೇ ಅಲ್ಲಿ ಸಂಚಾರಿ ವ್ಯವಸ್ಥೆ ಆಗಿದೆ. ಸರ್ಕಾರವು ಹೊಸ ಸೇತುವೆಯನ್ನು ನಿರ್ಮಿಸಿದೆ. ಆದರೆ, ಹಳೆಯ ಸೇತುವೆ ಏನೂ ಫಾಲ್ಟ್ ಇಲ್ಲದೇ ಆ ರೀತಿಯಾಗಿ ಬಿದ್ದು ಹೋಗಿರುವುದು ಸರಿಯಾದುದಲ್ಲ. ಇದಕ್ಕಾಗಿ ಸರ್ಕಾರವು 40 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ. ತಕ್ಷಣವೇ ಅದರ ಕಾಮಗಾರಿಯನ್ನು ಪ್ರಾರಂಭಿಸಿ, ಹೊಸ ಸೇತುವೆಯನ್ನು ನಿರ್ಮಿಸಬೇಕೆಂದು ನಾನು ಒತ್ತಾಯಿಸುತ್ತೇನೆ.

**ಶ್ರೀ ಸತೀಶ ಜಾರಕಿಹೊಳಿ:–** ಮಾನ್ಯ ಸಭಾಪತಿಯವರೆ, ಬಹುಶಃ 20 ವರ್ಷಗಳ ಇತಿಹಾಸದಲ್ಲಿ 561 ಕೋಟಿ ರೂಪಾಯಿಗಳನ್ನು ನಾವು ಕರಾವಳಿ ಭಾಗದ ಜಿಲ್ಲೆಗಳಾದ ಕಾರವಾರ, ಉಡುಪಿ ಮತ್ತು ಮಂಗಳೂರುಗಳಿಗೆ ಕೊಟ್ಟಿದ್ದು ಬಹುಶಃ ದಾಖಲೆಯ ಮೊತ್ತವಾಗಿರುತ್ತದೆ. ಅಲ್ಲಿನ ಎಂ.ಎಲ್.ಸಿ. ಗೂ ಸಹ ಪ್ರಥಮ ಬಾರಿಗೆ ಒಂದು ಸೇತುವೆಯನ್ನು ನೀಡಿದ್ದು, ಇದು ಬಹುಶಃ ಅವರ ಊರಿಗೆ ಸಂಪರ್ಕವನ್ನು ಸಾಧಿಸಲು ನೀಡಿರುವುದು ಬಹುಶಃ ದಾಖಲೆ ಇರಬಹುದು ಎಂದು ನಾನು ಭಾವಿಸಿದ್ದೇನೆ. ಬಿದ್ದು ಹೋಗಿರುವ ಸೇತುವೆಗಳ ಬಗೆಗಿನ ಮಾಹಿತಿಯನ್ನು ನಮ್ಮ ಗಮನಕ್ಕೆ ತಂದರೆ, ಅದನ್ನು ಸರಿ ಮಾಡುವಂತಹ ಪ್ರಯತ್ನವನ್ನು ನಮ್ಮ ಇಲಾಖೆಯು ಖಂಡಿತವಾಗಿಯೂ ಸಹ ಮಾಡುತ್ತದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಸಲಹೆಯನ್ನು ನೀಡಿದರೆ, ಅದನ್ನು ಸರಿಪಡಿಸುವಂತೆ ಪ್ರಯತ್ನವನ್ನು ನಮ್ಮ ಇಲಾಖೆಯು ಖಂಡತವಾಗಿಯೂ ಸಹ ಮಾಡುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: ೫೬೦**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 2024 ರ ಸಾಲಿನ ಆಯವ್ಯಯದಲ್ಲಿ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ದೇವನಹಳ್ಳಿ, ವೇಮಗಲ್, ನರಸಾಪುರ, ಮಾಲೂರು ಮತ್ತು ತಮಿಳುನಾಡು ರಾಜ್ಯದ ಹೊಸೂರು ಬಾರ್ಡರ್‌ಗೆ ಹೋಗುವ ಯೋಜನೆಯನ್ನು ಹೈಬ್ರಿಡ್ ವರ್ಷಾಸನ ಮಾದರಿಯಲ್ಲಿ (HAM) ತೆಗೆದುಕೊಂಡಿದ್ದಾರೆ. ಇದು 3,190 ಕೋಟಿ ರೂಪಾಯಿಗಳ ಯೋಜನೆಯಾಗಿದ್ದ, ಇದರಲ್ಲಿ ಮೂರು ಪ್ಯಾಕೇಜ್‌ಗಳನ್ನು ಮಾಡಿದ್ದಾರೆ. ಈ ಪೈಕಿ ಎರಡು ಪ್ಯಾಕೇಜ್ ಅನ್ನು ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಗೆ (KSHIP) ನೀಡಿದ್ದಾರೆ. ಹಾಗೂ ಒಂದು ಪ್ಯಾಕೇಜ್ ಅನ್ನು ಕೆ.ಆರ್.ಡಿ.ಸಿ.ಎಲ್. ಸಂಸ್ಥೆಗೆ ವಹಿಸಿದ್ದಾರೆ. ಇಲಾಖೆಯ ಸಚಿವರು ಈಗಾಗಲೇ ಬಹಳ ಆಸಕ್ತಿಯನ್ನು ತೆಗೆದುಕೊಂಡು, ಕೇವಲ ಒಂದೇ ವರ್ಷದ ಅವಧಿಯಲ್ಲಿ ಈ ಯೋಜನೆಗೆ ರೂಪವನ್ನು ನೀಡಿ, ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಗಳನ್ನು ತೆಗೆದುಕೊಂಡು, ಟೆಂಡರ್ ಪ್ರಕ್ರಿಯೆಯನ್ನು ಮಾಡಿದರು.

(ಮುಂದು)

(301)11-03-2026/12-10/bkp-bns (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಎಲ್.ಅನಿಲ್ ಕುಮಾರ್(ಮುಂದು):**

ಆದರೆ, ಈ ಯೋಜನೆಯನ್ನು ಪ್ರಾರಂಭ ಮಾಡುವುದಕ್ಕೆ ಸಾಕಷ್ಟು ತೊಡಕುಗಳು ಆಗಿವೆ. ಈಗ ಕೊಟ್ಟಿರತಕ್ಕಂತಹ ಉತ್ತರದಲ್ಲಿ ಈಗಾಗಲೇ ಹೊಸಕೋಟೆ ಮಾಲೂರು ಮತ್ತು ಮಾಲೂರು ಎಲಿವೇಟೆಡ್ ರಸ್ತೆಯನ್ನು ಪ್ರಾರಂಭ ಮಾಡಿದ್ದೇವೆಂದು ಹೇಳುತ್ತಾರೆ. ಅದನ್ನು ಪ್ರಾರಂಭ ಮಾಡಿದ್ದು ನಾವು ಕೂಡ ನೋಡಿದ್ದೇವೆ. ಉಳಿದ ಎರಡು ರಸ್ತೆಗಳು ಬಹಳ ಪ್ರಮುಖವಾದ ರಸ್ತೆಗಳಾಗಿವೆ. ದೇವನಹಳ್ಳಿ, ವೇಮಗಲ್ ಮತ್ತು ಕೋಲಾರಕ್ಕೆ ಒಂದು ರಸ್ತೆ ಇದೆ ಮತ್ತು ವೇಮಗಲ್‌ನಿಂದ ನರಸಾಪುರ, ಮಾಲೂರು ಮತ್ತು ತಮಿಳುನಾಡು ಹೊಸೂರು ಗಡಿ ಭಾಗಕ್ಕೆ ಏನು ರಸ್ತೆ ಇದೆ, ಅದು ಬಹಳ ಪ್ರಮುಖವಾದ ರಸ್ತೆಯಾಗಿದ್ದು, ಪ್ರತಿನಿತ್ಯ ಸಾವಿರಾರು ಗಾಡಿಗಳು ಈ ರಸ್ತೆಯ ಮೂಲಕ ತಮಿಳುನಾಡಿಗೆ ಹಾದು ಹೋಗುವಂತಹದ್ದಾಗಿರುತ್ತದೆ.

ಮಾನ್ಯ ಸಭಾಪತಿಯವರೆ, ಈ ಒಂದು ರಸ್ತೆ ಬೆಂಗಳೂರು-ಹೈದ್ರಾಬಾದ್‌ನ ಏನು ಹೈವೇ ರಸ್ತೆ ಇದೆ ಮತ್ತು ಬೆಂಗಳೂರು-ಚೆನ್ನೈನ ಏನು ಹೈವೇ ರಸ್ತೆ ಇದೆ ಈ ಎರಡು ರಸ್ತೆಗಳಿಗೆ ಲಿಂಕ್ ಮಾಡತಕ್ಕಂತಹ ರಸ್ತೆಯಾಗಿದೆ. ಇದರ ಬಗ್ಗೆ ಕೆಲವೊಂದು ತೊಡಕುಗಳಿದ್ದು, ಇದರ ಬಗ್ಗೆ ವ್ಯಾಜ್ಯ ಕೋರ್ಟ್‌ನಲ್ಲಿ ಇದ್ದುದರಿಂದ ಅದನ್ನು ಮಾಡಲಿಕ್ಕೆ ಸಾಧ್ಯವಾಗಿರುವುದಿಲ್ಲ. ಈಗ ಕೋರ್ಟ್‌ನಲ್ಲಿ ಅರ್ಜಿಗಳು ವಜಾ ಆಗಿದ್ದು, ಅದರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ, ಈ ವಿಚಾರವಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ. ಯಾವ ಒಂದು ಕಾಲಮಿತಿಯಲ್ಲಿ ಇದನ್ನು ಜಾರಿ ಮಾಡುತ್ತೀರಿ ಮತ್ತು ಯಾವಾಗ ಈ ಕೆಲಸವನ್ನು ಪ್ರಾರಂಭ ಮಾಡುತ್ತೀರಿ? ಎನ್ನುವುದನ್ನು ಹೇಳಬೇಕು. ಏಕೆಂದರೆ, ಪ್ರತಿನಿತ್ಯ ಕೋಲಾರ-ಮಾಲೂರು ಮತ್ತು ಹೊಸೂರು ಮಾರ್ಗದಲ್ಲಿ ಸುಮಾರು 12,000 ವಾಹನಗಳು ಓಡಾಡುತ್ತಿವೆ.

**ಸಭಾಪತಿಯವರು:-** ನೀವು ಭಾಷಣ ಮಾಡಬೇಡಿ, ನೇರ ಪ್ರಶ್ನೆಯನ್ನು ಕೇಳಿ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೆ, ನಾನು ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನು ಇತ್ತೀಚೆಗೆ ಮದುವೆಗೆಂದು ಹೋದಾಗ ಮಾಲೂರು ನಗರವನ್ನು ಪಾಸ್ ಮಾಡಿ ಹೊರಗಡೆ ಬರಬೇಕೆಂದರೆ ಸುಮಾರು ಒಂದೂವರೆ-ಎರಡು ಗಂಟೆ ಆಗಿರುತ್ತದೆ. ಆದ್ದರಿಂದ, ಗೌರವಾನ್ವಿತ ಸಚಿವರು ಇದಕ್ಕೆ ಉತ್ತರವನ್ನು ಕೊಡಬೇಕು.

**ಸಭಾಪತಿಯವರು:-** ಆಯಿತು, ಕುಳಿತುಕೊಳ್ಳಿ. ನೀವು ಪ್ರಶ್ನೆಯನ್ನು ಕೇಳುವುದನ್ನು ಬಿಟ್ಟು ಭಾಷಣ ಮಾಡುತ್ತಿದ್ದೀರಿ.

**ಶ್ರೀ ಸತೀಶ ಜಾರಕಿಹೊಳಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಇದು 3 ಪ್ಯಾಕೇಜ್ ಇರುತ್ತದೆ. ಈಗಾಗಲೇ ಒಂದು ಪ್ಯಾಕೇಜ್‌ನ ಕೆಲಸ ಪ್ರಾರಂಭವಾಗಿದೆ. ಅದು ನಿಗದಿತ ಅವಧಿಗಿಂತ ಮುಂಚೆಯೇ ಈ ಕೆಲಸವನ್ನು ಮುಗಿಸಿಕೊಡುವಂತಹ ಪ್ರಯತ್ನವನ್ನು ಮಾಡುತ್ತೇವೆ. ಇನ್ನು ಪ್ಯಾಕೇಜ್ ನಂಬರ್-2ರ ಬಗ್ಗೆ ಹೇಳುವುದಾದರೆ ಮೊನ್ನೆ ಕಳೆದ 2 ತಿಂಗಳ ಹಿಂದೆ ಅಪಾಯಿಂಟ್‌ಮೆಂಟ್ ಆರ್ಡರ್ ಅನ್ನು ಕೊಟ್ಟಿದ್ದೇವೆ. ಈ ಕೆಲಸವನ್ನು 2-3 ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೆ. ಇನ್ನು ಪ್ಯಾಕೇಜ್ ನಂಬರ್-3ರ ಬಗ್ಗೆ ಹೇಳುವುದಾದರೆ ಇದು ಕೋರ್ಟ್‌ನಲ್ಲಿರುವುದರಿಂದ ಅದರ ಬಗ್ಗೆ ಕಾನೂನು ಅಭಿಪ್ರಾಯ

ಪಡೆದು ಆದಷ್ಟು ಬೇಗ ಅದನ್ನೂ ಕೂಡ ಮಾಡುತ್ತೇವೆ ಮತ್ತು ಪ್ಯಾಕೇಜ್-1 ಅಂದರೆ, ವೇಮಗಲ್‌ನಿಂದ ತಮಿಳುನಾಡು ಗಡಿಯವರೆಗಿನ ಕೆಲಸವನ್ನು ನಾವು ಆದಷ್ಟು ಬೇಗ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೆ, ಈಗ ಈ ಬಗ್ಗೆ ರಿಟ್ ಅಪೀಲ್ ಹೋಗಿದ್ದಾರೆ, ಆ ರಿಟ್ ಅಪೀಲ್‌ನಲ್ಲಿಯೂ ಕೂಡ lower court order ಗೆ ತಡೆಯಾಜ್ಞೆಯನ್ನು ಕೊಟ್ಟಿರುವುದಿಲ್ಲ. ರಿಟ್ ಅಪೀಲ್‌ಗೆ ಸಂಬಂಧಪಟ್ಟಂತೆ ಕೊಟ್ಟಿರುವಂತಹ ಉತ್ತರದಲ್ಲಿ ಏನು ಹೇಳುತ್ತಿದ್ದಾರೆಂದರೆ, ರಸ್ತೆ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ತ್ವರಿತವಾಗಿ ಅಗತ್ಯ ಕ್ರಮಗಳನ್ನು ಪ್ರಾಧಿಕಾರ ವಹಿಸಬೇಕೆಂದು ಹೇಳಿ ನಿರ್ದೇಶನ ಕೊಡಲಾಗಿದೆ ಎಂದು ಹೇಳುತ್ತಾರೆ. ಹಾಗಾಗಿ, ಈಗ ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಳ್ಳಲಾಗಿದೆ ಮತ್ತು ನೇಮಕಾತಿ ದಿನಾಂಕವನ್ನು ಘೋಷಿಸಿ ಶೀಘ್ರ ಕಾಮಗಾರಿಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಇವತ್ತು ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಈ ಸರ್ಕಾರ ಬಂದ ಮೇಲೆ ರಾಜ್ಯ ಸರ್ಕಾರದ ಅನುದಾನದಡಿಯಲ್ಲಿ ಇಷ್ಟೊಂದು ದೊಡ್ಡ ಮೊತ್ತದ 3,190 ಕೋಟಿ ರೂಪಾಯಿಗಳ ಯೋಜನೆಯನ್ನು ತೆಗೆದುಕೊಂಡು ಎರಡು ಹೈವೇಗಳನ್ನು ಅಂದರೆ ಬೆಂಗಳೂರು-ಹೈದ್ರಾಬಾದ್ ಮತ್ತು ಬೆಂಗಳೂರು-ಚೆನ್ನೈ ರಸ್ತೆಯನ್ನು ಕನೆಕ್ಟ್ ಮಾಡುವಂತಹದ್ದು ಮತ್ತು ಇಂಡಸ್ಟ್ರಿಯಲ್ ಕಾರಿಡಾರ್ ಏನಿದೆ, ದಾಬಸ್‌ಪೇಟೆ, ದೇವನಹಳ್ಳಿ ವೇಮಗಲ್, ನರಸಾಪುರ, ಮಾಲೂರು ಮತ್ತು ಹೊಸೂರಿಗೆ ಹೋಗತಕ್ಕಂತಹ ಇಂಡಸ್ಟ್ರಿಯಲ್ ಕಾರಿಡಾರ್ ಅನ್ನು ತೆಗೆದುಕೊಳ್ಳುವಂತಹ ರಸ್ತೆಯನ್ನು ತೆಗೆದುಕೊಂಡು ಈ ಕೆಲಸವನ್ನು ನಿಮ್ಮ ಅವಧಿಯಲ್ಲಿಯೇ ಪ್ರಾರಂಭ ಮಾಡಿಬಿಟ್ಟು, ನಿಮ್ಮ ಅವಧಿಯಲ್ಲಿಯೇ ಪೂರ್ಣ ಮಾಡಬೇಕು. ಇದರ ಶ್ರೇಯಸ್ಸು ಈ ಸರ್ಕಾರಕ್ಕೆ ಸಿಗಬೇಕು. ಮತ್ತೆ ಅಲ್ಲಿನ ಜನರಿಗೆ ಇದರಿಂದ ಅನುಕೂಲವಾಗಬೇಕು. ಈ ಯೋಜನೆಗಳನ್ನು ಹತ್ತಾರು ವರ್ಷಗಳ ಕಾಲ ಮಾಡಿಕೊಂಡು ಹೋದರೆ ಹೇಗೆ? ಈಗ ನಾನು ಈ ಬಗ್ಗೆ ನನ್ನ ಸ್ವಂತ ಅನುಭವವನ್ನು ಹೇಳುತ್ತಿದ್ದೇನೆ. ಈ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಡಿ.ಟಿ. ಶ್ರೀನಿವಾಸ್ ರವರು ಸಹ ಹೇಳಿದ್ದಾರೆ. ಮೊನ್ನೆ ದಿವಸ ಮಾಲೂರಿನಲ್ಲಿ ಒಂದು ಮದುವೆಗೆ ಹೋಗಿ ಬರಬೇಕಾದರೆ 2 ಗಂಟೆಗಳಾಗಿದೆ. ಹಾಗಾಗಿ, ದಯಮಾಡಿ ಈ ಕೆಲಸವನ್ನು ಮಾಡಬೇಕು. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಬಹಳ ಆಸಕ್ತಿಯನ್ನು ತೆಗೆದುಕೊಂಡಿದ್ದಾರೆ. ಆದರೆ, ಇವತ್ತು ಕೋರ್ಟ್‌ನಲ್ಲಿ ಇರುವಂತಹ ವ್ಯಾಜ್ಯಗಳೆಲ್ಲವೂ ಪರಿಹಾರವಾಗಿವೆ. ಪ್ಯಾಕೇಜ್-1 ರ ಬಗ್ಗೆಯೂ ಸಹ ಕೋರ್ಟ್‌ನಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಅರ್ಜಿಯನ್ನು ವಜಾ ಮಾಡಿದ್ದಾರೆ. ಅವರು ಏನು ಕೋರ್ಟ್‌ಗೆ ಅಪ್ರೋಚ್ ಮಾಡಿದ್ದವರು fake documents ಅನ್ನು ಕೊಟ್ಟಿದ್ದಾರೆಂದು ಅದು ಸಾಬೀತಾಗಿದೆ.

ಹಾಗಾಗಿ, ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕು. ಅಪೀಲ್ ಹೋಗದೇ ಇದ್ದರೂ ಸಹ ಅವರ ಮೇಲೆ Caveat ಹಾಕಿಕೊಂಡು ನಾವು ಕೆಲಸವನ್ನು ಮುಂದುವರಿಸಬೇಕಾಗುತ್ತದೆ. ಹಾಗಾಗಿ, ಈ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದಂತಹ ಉತ್ತರವನ್ನು ಕೊಟ್ಟು ಕೆಲಸವನ್ನು ಕಾಲಮಿತಿಯಲ್ಲಿ ಪ್ರಾರಂಭ ಮಾಡಬೇಕು.

**ಶ್ರೀ ಸತೀಶ ಜಾರಕಿಹೊಳಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಇದು ನಮ್ಮ ಕಾಲಾವಧಿಯಲ್ಲಿಯೇ ಪ್ರಾರಂಭವಾಗಿ, ನಮ್ಮ ಕಾಲಾವಧಿಯಲ್ಲಿಯೇ ಖಂಡಿತವಾಗಿ ಮುಗಿಸಿ ಇದನ್ನು ನಾವೇ ಉದ್ಘಾಟನೆ ಮಾಡುತ್ತೇವೆ. ಎರಡು ವರ್ಷಗಳ ಒಳಗೆ ಈ 3 ಪ್ಯಾಕೇಜ್‌ಗಳನ್ನು ಮುಗಿಸುವಂತಹ ಪ್ರಯತ್ನವನ್ನು ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ನಾನು ಭರವಸೆಯನ್ನು ಕೊಡುತ್ತೇನೆ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೆ, ನನಗೆ ಒಂದೇ ಒಂದು ನಿಮಿಷ ಅವಕಾಶ ಕೊಡಿ. ಏಪ್ರಿಲ್ 1ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಕೋಲಾರ ಜಿಲ್ಲೆಗೆ ಮತ್ತು ಮಾಲೂರಿಗೆ ಬರುತ್ತಿದ್ದಾರೆ. ಸಾಧ್ಯವಾದರೆ ಅಷ್ಟೊತ್ತಿಗೆ ಇದನ್ನು ಬಗೆಹರಿಸಿ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ನಾವು ಮತ್ತು ಮಂತ್ರಿಗಳಾದ ತಾವು ಸಹ ಬಂದು ಅದನ್ನು ಪ್ರಾರಂಭ ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಸತೀಶ ಜಾರಕಿಹೊಳಿ:-** ಆಯಿತು.

**ಸಭಾಪತಿಯವರು:-** ಶ್ರೀಯುತ ಅನಿಲ್ ಕುಮಾರ್‌ರವರೆ, ಮಾನ್ಯ ಮುಖ್ಯಮಂತ್ರಿಗಳು ಏಪ್ರಿಲ್ 1ನೇ ತಾರೀಖು ಅಲ್ಲಿಗೆ ಬರುತ್ತಾರೋ ಇಲ್ಲವೋ ಅದನ್ನು ಖಚಿತಪಡಿಸಿಕೊಳ್ಳಿ.

**ಪ್ರಶ್ನೆ ಸಂಖ್ಯೆ 984**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ತುಮಕೂರಿನಿಂದ ಶಿವಮೊಗ್ಗಕ್ಕೆ ನ್ಯಾಷನಲ್ ಹೈವೇ ಏನಿದೆ, ಇದು 4 ಭಾಗದಲ್ಲಿ ಇದೆ ಎಂದು ಹೇಳಿ ಉತ್ತರ ಕೊಟ್ಟಿದ್ದಾರೆ. ಇದು ಗೊತ್ತಿರುವಂತಹ ವಿಷಯ. ಇದರಲ್ಲಿ ವಿಶೇಷವಾಗಿ ಬಾಣಾವರದಿಂದ ಶಿವಮೊಗ್ಗಕ್ಕೆ ಇರತಕ್ಕಂತಹ ರಸ್ತೆಯ ಬಗ್ಗೆ ಮಾತನಾಡುತ್ತಿದ್ದೇನೆ. ಮೊನ್ನೆ ನಾನು ಈ ಪ್ರಶ್ನೆ ಹಾಕುವುದಕ್ಕಿಂತ ಮುಂಚಿತವಾಗಿ ಒಂದು ಬಾರಿ... ಹೆಚ್ಚು ಕಡಿಮೆ ಶಿವಮೊಗ್ಗದ ಜನರು ಚಿತ್ರದುರ್ಗದಿಂದಲೇ ಸುಮಾರು 10-15 ವರ್ಷಗಳಿಂದ ಓಡಾಡುತ್ತಿದ್ದಾರೆಯೇ ವಿನಃ ಈ ಕಡೆ ಬರುವುದನ್ನು ಮರತೇ ಬಿಟ್ಟಿದ್ದಾರೆ. ಈ ಒಂದು ರಸ್ತೆ ಯಾವ ಒಂದು ಹಂತಕ್ಕೆ ಬಂದಿದೆ ಎಂದು ನೋಡಲು ನಾನು by road ಶಿವಮೊಗ್ಗಕ್ಕೆ ಬೆಂಗಳೂರಿನಿಂದ ತುಮಕೂರು ಮೂಲಕವೇ ಹೋಗಿರುತ್ತೇನೆ. ಈ ರಸ್ತೆಯ ಕೆಲಸ ಬಾಣಾವರದವರೆಗೆ ಮುಗಿಯುವ ಹಂತದಲ್ಲಿದೆ. ಈ ಕೆಲಸ ಹೆಚ್ಚು ಕಡಿಮೆ 100% ಆಗಿದೆ ಎಂದು ಹೇಳುತ್ತಾರೆ. ಆದರೆ, ಈ ಕೆಲಸ ಮುಗಿಯುವ ಹಂತದಲ್ಲಿದೆ.

ಮಾನ್ಯ ಸಭಾಪತಿಯವರೆ, ಈ ಬಾಣಾವರದಿಂದ ಶಿವಮೊಗ್ಗಕ್ಕೆ ಹೋಗುವಂತಹ ರಸ್ತೆಯಂತೂ ನೋಡಿದರೆ ಅದನ್ನು ದೇವರೇ ಕಾಪಾಡಬೇಕು. ಆ ಕೆಲಸವನ್ನು ಯಾವಾಗ ಮುಗಿಸುತ್ತಾರೋ ಗೊತ್ತಿಲ್ಲ. ವಿಶೇಷವಾಗಿ ನಮ್ಮ ತರೀಕೆರೆ ಪ್ರವೇಶ ಮಾಡಿದ ತಕ್ಷಣ ಅಲ್ಲಿಂದ ಸರ್ವೀಸ್ ರಸ್ತೆ ಎಂದು ಮಾಡಿರತಕ್ಕಂತಹ ರಸ್ತೆಯು ಸಾರ್ವಜನಿಕರ ಮನೆಗೆ ಬಾಗಿಲಿಗೆ ಹೋಗಿಬಿಟ್ಟಿದೆ. ಅವರುಗಳು ಏನಾದರೂ ಒಂದು ಕಲ್ಲು ಹಾಕಲಿಕ್ಕೆ ಹೋದರೂ ಕೂಡ ಅವರಿಗೂ ಸಹ ಸತಾಯಿಸುತ್ತಿದ್ದಾರೆ. ಹಾಗಾಗಿ, ಈ ಕೆಲಸ ಬಹಳ ವೇಗವಾಗಿ ಆಗಬೇಕು. ಆಮೇಲೆ ಭದ್ರಾವತಿಯ ಬೊಮ್ಮನಕಟ್ಟೆಯಿಂದ ಹಿಡಿದು, ಬೈಪಾಸ್‌ನಿಂದ ಹಿಡಿದು ಮಾಚೇನಹಳ್ಳಿ ಮೂಲಕ ಹೋಗುವಂತಹ ರಸ್ತೆಯಂತೂ ತುಂಬಾ ಹಾಳಾಗಿದೆ. ನ್ಯಾಷನಲ್ ಹೈವೇ ಅಥಾರಿಟಿಯವರು ಮಾಡುವಂತಹದ್ದು, ಇದು ಕೇಂದ್ರ ಸರ್ಕಾರದ ಯೋಜನೆ ಎನ್ನುವುದು ಸರಿ ಇದೆ. ಅಲ್ಲಿ ಅಗೆದಿರುವಂತಹ ಆ ಮಣ್ಣು ಮಾರುವವರೆಗೂ ಸಹ ಆ ಕಾಮಗಾರಿಯನ್ನು ಶುರು ಮಾಡಿರುವುದಿಲ್ಲ. ಅಲ್ಲಿ ಮಣ್ಣನ್ನು ಮಾರಿಕೊಂಡಿದ್ದಾರೆ. ಅದರ ಜೊತೆಗೆ ರಸ್ತೆಗಳಲ್ಲಿ ಇರತಕ್ಕಂತಹ ಬಂಡೆಗಳು ಏನೇನು ಬರುತ್ತದೆ, ಅದನ್ನು ಅಲ್ಲಲ್ಲಿಯೇ ಹೊಡೆದಿರುವುದರಿಂದ ಸಾರ್ವಜನಿಕರು ಓಡಾಡಲಿಕ್ಕೆ ಕಷ್ಟವಾಗಿದೆ.

**ಶ್ರೀ ಸತೀಶ್ ಜಾರಕಿಹೊಳಿ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೆ, ಈ ಕೆಲಸ ವಿಳಂಬ ಆಗಲಿಕ್ಕೆ ಕಾರಣ ಭೂಸ್ವಾದೀನ ಸಮಸ್ಯೆಯಾಗಿರುತ್ತದೆ. ಇದು ಸುಮಾರು 4 ಪ್ಯಾಕೇಜಿನ ಶೇಕಡ 90ಕ್ಕಿಂತ ಹೆಚ್ಚಿನ ಭೂಮಿಯನ್ನು ನಾವು ಭೂಸ್ವಾಧೀನ ಮಾಡಿಕೊಂಡಿದ್ದೇವೆ. ಮತ್ತು ಈಗಾಗಲೇ ಯಾವ ಒಂದು ಕಾಲಮಿತಿಯಲ್ಲಿ ಹಿಂದೆ ಅವರಿಗೆ ಪ್ಯಾಕೇಜ್ 1,2,3,4 ಕ್ಕೆ ಸಂಬಂಧಪಟ್ಟಂತೆ ಅವರಿಗೆ ದಿನಾಂಕವನ್ನು ಸಹಿತ ಕೊಟ್ಟಿರುತ್ತೇವೆ. ಅದು 26ನೇ ತಾರೀಖು ಇರಬಹುದು. ಕೊನೆಯದಾಗಿ, 31ನೇ ಮಾರ್ಚ್ 2027ಕ್ಕೆ ಇದನ್ನು ಬಗೆಹರಿಸುವಂತಹ ಪ್ರಯತ್ನ ಮಾಡುತ್ತೇವೆ. ಏತಕ್ಕೆಂದರೆ ಇದು ನ್ಯಾಷನಲ್ ಹೈವೇ ಅಥಾರಿಟಿ ಅವರಿಗೆ ಬರುವುದರಿಂದ ಅವರ ಜೊತೆ ನಿರಂತರವಾಗಿ ಸಭೆಯನ್ನು ನಾವು ಮಾಡುತ್ತಿದ್ದೇವೆ. ಪ್ರತಿ ತಿಂಗಳು ಅವರ ಜೊತೆಯಲ್ಲಿ ಸಭೆಯನ್ನು ಮಾಡಿ ಇದನ್ನು ಬಗೆಹರಿಸುವಂತಹ ಪ್ರಯತ್ನ ಮಾಡುತ್ತೇವೆ. ಆದಷ್ಟು ಅವರು ಕೊಟ್ಟಂತಹ ದಿನಾಂಕಕ್ಕೆ stick on ಆಗುವಂತೆ ಅವರಿಗೆ ನಾವು ವಿನಂತಿ ಮಾಡುತ್ತೇವೆ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. 2018 ರಲ್ಲಿ ಈ ರಸ್ತೆಯ ಕಾಮಗಾರಿ ಪ್ರಾರಂಭವಾಗಿರುತ್ತದೆ. ಎಲ್ಲಿಯೂ ಅಷ್ಟೊಂದು ಸಮಸ್ಯೆಯಾಗದಿದ್ದರೂ ಸಹ ತರೀಕೆರೆಯಿಂದ ಭದ್ರಾವತಿ ಜನರು ಮಾತ್ರ ಬಹಳ ಕಷ್ಟದಲ್ಲಿ ಸಿಕ್ಕಿ ಹಾಕಿಕೊಂಡಿರುತ್ತಾರೆ. ಕಾಲೇಜಿಗೆ ಹೋಗುವಂತಹ ವಿದ್ಯಾರ್ಥಿಗಳು ಸಹ, ನೌಕರಿಗೆ ಹೋಗುವಂತಹ ಜನರು, ಮಾಚೇನಹಳ್ಳಿ ಡೈರಿಯ ಹತ್ತಿರ ಒಂದು ಮನುಷ್ಯನ ಆಳದಷ್ಟು ಉದ್ದ ಅಗೆದಿದ್ದಾರೆ. ಅಲ್ಲಿ ಒಂದು ಪರ್ಸೆಂಟ್‌ನಷ್ಟು ಸಹ ಕೆಲಸ ಆಗುತ್ತಿಲ್ಲ. ಅದಕ್ಕೆ ಸನ್ಮಾನ್ಯ ಸಚಿವರು ತಾವೇ ಖುದ್ದಾಗಿ ಅಲ್ಲಿಗೆ ಬಂದು ಕಾಮಗಾರಿ ಕೆಲಸದ ಪರಿಶೀಲನೆ ಮಾಡುತ್ತೀರೋ ಅಥವಾ ಮತ್ತೇನು ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಅಲ್ಲಿ ಭೂಸ್ವಾಧೀನ ಪ್ರಕ್ರಿಯೆಯಿಂದ ತೊಂದರೆಯಾಗಿದೆ ಎಂದು ಹೇಳುತ್ತಾರೆ. ಆದರೆ, ಭೂಸ್ವಾಧೀನದ ವಿಚಾರವಾಗಿ ಅಲ್ಲಿನ ಸಾರ್ವಜನಿಕರ ಸಂಪರ್ಕವನ್ನೇ ಯಾರೂ ಸಹಿತ ಮಾಡಿರುವುದಿಲ್ಲ. ನಾನು ಈ ಬಗ್ಗೆ ಹಲವಾರು ಬಾರಿ ಕೆ.ಡಿ.ಪಿ. ಮೀಟಿಂಗ್‌ನಲ್ಲಿ ಹೇಳಿರುತ್ತೇನೆ. ಅಲ್ಲಿಗೆ ಸಾರ್ವಜನಿಕ ಪ್ರತಿನಿಧಿಗಳನ್ನು ಕಳುಹಿಸಿ, ಅಲ್ಲಿ ಅವರ ಜೊತೆಯಲ್ಲಿ ರೈತರನ್ನು ಕೂರಿಸಿಕೊಂಡು ನೀವು ಭೂಸ್ವಾಧೀನಕ್ಕೆ ಅಗತ್ಯ ಪ್ರಕ್ರಿಯೆಗಳನ್ನು ಬೇಗ ಮಾಡಿಕೊಳ್ಳಿ ಎಂದು ಹೇಳುವುದನ್ನೂ ಸಹ ಮಾಡಿರುವುದಿಲ್ಲ. ಈಗ ಇತ್ತೀಚಿನ ದಿನಗಳಲ್ಲಿಯೂ ಸಹ ಈ ಕೆಲಸ ಮಂದಗತಿಯಲ್ಲಿ ಹೋಗುತ್ತಿದೆ. ಆದಷ್ಟು ಬೇಗ ಈ ಕೆಲಸವನ್ನು ಮುಕ್ತಾಯ ಗೊಳಿಸಬೇಕೆಂದು ಈ ಸದನದ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಸತೀಶ್ ಜಾರಕಿಹೊಳಿ:–** ಮಾನ್ಯ ಸಭಾಪತಿಯವರೆ, ನಾವು ಅಧಿಕಾರ ವಹಿಸಿಕೊಂಡ ಮೇಲೆ 30 ತಿಂಗಳು ಆಗಿದ್ದು, ನಾವು ಅಧಿಕಾರಕ್ಕೆ ಬಂದಾಗ 42 ನ್ಯಾಷನಲ್ ಹೈವೇ ಪ್ರಾಜೆಕ್ಟ್‌ಗಳ ಸಮಸ್ಯೆಯಿತ್ತು, ಆದರೆ, ಈಗ 6 ಪ್ರಾಜೆಕ್ಟ್‌ಗಳು ಮಾತ್ರ ನಮ್ಮ ಇಲಾಖೆಯ ಮುಂದೆ ಬಾಕಿ ಇವೆ. ಈ 6 ಬಾಕಿ ಪ್ರಾಜೆಕ್ಟ್‌ಗಳನ್ನು 3 ತಿಂಗಳುಗಳಲ್ಲಿ ಬಗೆಹರಿಸುತ್ತೇವೆ. ಇದರಲ್ಲಿ ಮಾನ್ಯ ಸದಸ್ಯರು ಹೇಳಿದಂತಹ ನ್ಯಾಷನಲ್ ಹೈವೇ ಕೂಡ ಆದಷ್ಟು ಬೇಗ ನಾವು ಅದನ್ನು ಸಂಚಾರಕ್ಕೆ ಮುಕ್ತಿ ಮಾಡಲಿಕ್ಕೆ ನಮ್ಮ ಇಲಾಖೆ ನ್ಯಾಷನಲ್ ಹೈವೇ ಅಥಾರಿಟಿಯವರ ಜೊತೆ ಸಹಕಾರ ಕೊಡುತ್ತದೆ ಎಂದು ಭರವಸೆ ಕೊಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಶಿವಕುಮಾರ್‌ರವರ ಪ್ರಶ್ನೆಗೆ ಸುಮಾರು 15 ದಿನಗಳ ಸಮಯವನ್ನು ಸಂಬಂಧಪಟ್ಟ ಇಲಾಖೆಯವರು ಕೇಳಿದ್ದಾರೆ. ಮತ್ತೆ ಶ್ರೀಮಾನ್ ಹೆಚ್.ಎಸ್.ಗೋಪಿನಾಥ್ ರವರ ಪ್ರಶ್ನೆಯನ್ನು ಬೇರೆ ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ದಿನಾಂಕ:11ನೇ ಮಾರ್ಚ್ 2026, ಸಮೂಹ-3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 124 ಪ್ರಶ್ನೆಗಳ ಪೈಕಿ 44 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಉತ್ತರಗಳನ್ನು ಮಂಡಿಸಲಾಯಿತು.

## 2. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವನೆಗಳು

**ವಿಷಯ:- 9ನೇ ತರಗತಿಯವರೆಗೂ ಓದಿದ ಮಕ್ಕಳು 10ನೇ ತರಗತಿ ದಾಖಲಾತಿಯಲ್ಲಿ ಕಾಣೆಯಾಗಿರುವ ಬಗ್ಗೆ.**

- - -

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:10-03-2026 ರಂದು 'ಕನ್ನಡ ಪ್ರಭಾ' ದಿನಪತ್ರಿಕೆಯಲ್ಲಿ "9ನೇ ಕ್ಲಾಸ್ ಮಕ್ಕಳು 10ನೇ ಕ್ಲಾಸ್‌ನಲ್ಲಿ ಮಾಯ" ಎಂಬ ವಿಷಯವು ಪ್ರಕಟವಾಗಿದ್ದು, ಬೆಂಗಳೂರು ಉತ್ತರ ವಲಯದಲ್ಲಿ ಹತ್ತು ಸರ್ಕಾರಿ ಶಾಲೆಗಳಲ್ಲಿ 2024-25ನೇ ಸಾಲಿನಲ್ಲಿ 9ನೇ ತರಗತಿಯವರೆಗೂ ಓದಿದ 181 ಮಕ್ಕಳು 10ನೇ ತರಗತಿ ದಾಖಲಾತಿಯಲ್ಲಿ ಕಾಣೆಯಾಗಿದ್ದಾರೆ. ಇದು ಶಿಕ್ಷಣ ಇಲಾಖೆಯ ಅಧಿಕಾರಿಗಳ ನಿದ್ದೆಗೆಡಿಸಿದ್ದು, ಆ ಶಾಲೆಗಳಿಂದ ಮಾಹಿತಿ ಕೇಳಿದ್ದಾರೆ.

ಒಂದೇ ತರಗತಿ ಅಂತರದಲ್ಲಿ ಇಷ್ಟೊಂದು ಮಕ್ಕಳ ಸಂಖ್ಯೆ ಕಡಿಮೆಯಾಗಿರುವುದರ ಸುತ್ತಾ ಅಧಿಕಾರಿಗಳಲ್ಲೇ ಹಲವು ಅನುಮಾನಗಳನ್ನು ಹುಟ್ಟು ಹಾಕಿದೆ. ಆ ಮಕ್ಕಳು ವಲಸೆ ಹೋದರಾ? ಶಾಲೆ ಬಿಟ್ಟರಾ? ಬೇರೆ ಶಾಲೆಗಳಿಗೆ ವರ್ಗಾವಣೆ ಆದರಾ? ಇಲ್ಲಾ ಅವರು ಕಲಿಕೆಯಲ್ಲೇನಾದರೂ ಹಿಂದುಳಿದರಬಹುದಾದ ಕಾರಣಕ್ಕೆ ಮತ್ತೊಂದು ವರ್ಷ ಹಿಂದಿನ ತರಗತಿಯಲ್ಲೇ ಉಳಿಸಲಾಯಿತಾ? ಎಷ್ಟೆಲ್ಲಾ ಪ್ರಶ್ನೆಗಳು ಹುಟ್ಟಿಕೊಂಡಿರುವ ಹಿನ್ನೆಲೆಯಲ್ಲಿ ಬೆಂಗಳೂರು ಉತ್ತರ ವಲಯ -2 ಕ್ಷೇತ್ರ ಶಿಕ್ಷಣಾಧಿಕಾರಿ ಅವರು ತಮ್ಮ ವ್ಯಾಪ್ತಿಯಿಂದ ಮಾಹಿತಿ ಕೇಳಿರುತ್ತಾರೆ. ಇದರಲ್ಲಿ 03 ಕರ್ನಾಟಕ ಪಬ್ಲಿಕ್ ಶಾಲೆಗಳು ಸೇರಿವೆ. ಆ ಮಕ್ಕಳು ಎಲ್ಲಿ ಹೋದರು ಎನ್ನುವುದು ಶಾಲೆಗಳು ನೀಡುವ ಉತ್ತರದಿಂದಲೇ ತಿಳಿದು ಬರಬೇಕಾಗಿದೆ.

ಬೆಂಗಳೂರು ನಗರ ಶಾಲೆಯಲ್ಲಿ 2024-25ನೇ ಸಾಲಿನಲ್ಲಿ ಒಟ್ಟಾರೆ 10 ಶಾಲೆಗಳಲ್ಲಿ 181 ವಿದ್ಯಾರ್ಥಿಗಳು ಕಾಣೆಯಾಗಲು ನಿಖರವಾದ ಮಾಹಿತಿಯನ್ನು ಆಯಾ ಶಾಲೆಗಳಿಂದ ಪಡೆದು ಇದರಲ್ಲಿ ಯಾರಾದರೂ ತಪ್ಪಿತಸ್ಥರಿದ್ದರೆ ಅವರ ಮೇಲೆ ಕ್ರಮ ಕೈಗೊಂಡು ಈ ರೀತಿ ಪ್ರಕರಣಗಳು ಮರುಕಳಿಸದಂತೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸುತ್ತೇನೆ.

(ಮುಂದು)

(302) 11.03.2026 12.20 ಎಸ್‌ವಿ-ಕೆಎಸ್ (ಉಪ ಸಭಾಪತಿಯವರ ಉಪಸ್ಥಿತಿ)

ಆ) ವಿಷಯ:- ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ಥಿರಾಸ್ತಿ ನೋಂದಣಿ ಮತ್ತು ಇ-ಖಾತಾ ಪಡೆಯುವಲ್ಲಿ ಆಗುತ್ತಿರುವ ತೊಂದರೆಗಳನ್ನು ಸರಿಪಡಿಸುವ ಬಗ್ಗೆ.

- - - - -

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. "ಇ-ಖಾತಾಕ್ಕೆ ಪರದಾಟ, ಸರ್ವರ್ ಡೌನ್ ನೆಪ, ಕೈಗಾರಿಕಾ ಆಸ್ತಿ ನೋಂದಣಿಗೆ ತೊಡಕು!" ಎಂಬ ಶೀರ್ಷಿಕೆಯಡಿ ದಿನಾಂಕ 26/02/2026ರ "ವಿಜಯವಾಣಿ" ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ಥಿರಾಸ್ತಿಗಳ ನೋಂದಣಿ ಹಾಗೂ ಮಾಲೀಕತ್ವ ವರ್ಗಾವಣೆಗೆ 'ಇ-ಖಾತಾ' ಕಡ್ಡಾಯಗೊಳಿಸಿರುವುದು ಇದೀಗ ಸಾರ್ವಜನಿಕರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ತಾಂತ್ರಿಕ ದೋಷಗಳು ಮತ್ತು ಪಾಲಿಕೆಯ ಆಡಳಿತಾತ್ಮಕ ವೈಫಲ್ಯದಿಂದಾಗಿ ನೈಜ ಅರ್ಜಿದಾರರು ಅಲೆದಾಡುವಂತಾಗಿದ್ದರೆ, ಮಧ್ಯವರ್ತಿಗಳ ಮೂಲಕ ಅರ್ಜಿ ಸಲ್ಲಿಸಿದರೆ ಕೆಲವೇ ದಿನಗಳಲ್ಲಿ ಕೆಲಸವಾಗುತ್ತಿದೆ ಎಂಬ ಗಂಭೀರ ಆರೋಪ ಕೇಳಬರುತ್ತಿದೆ.

ಭೂ ಪರಿವರ್ತನೆಯಾದ ಕೃಷಿಯೇತರ ಭೂಮಿ ಮತ್ತು ಸ್ಥಿರಾಸ್ತಿಗಳ ಮಾಲೀಕತ್ವಕ್ಕೆ ಇ-ಖಾತಾ ಕಡ್ಡಾಯವಾಗಿದೆ.

ಇ-ಆಸ್ತಿ ತಂತ್ರಾಂಶದ ಮೂಲಕ ಫಾರಂ ನಂಬರ್-3 ಅನ್ನು ನೋಂದಣಿ ಇಲಾಖೆ ಹಾಗೂ ಹಣಕಾಸು ವ್ಯವಹಾರಗಳಿಗೆ ಹಾಜರುಪಡಿಸಬೇಕಿದೆ. ಆದರೆ ಪಾಲಿಕೆಯಲ್ಲಿ ಹಳೆಯ ದಾಖಲೆಗಳ ಲಭ್ಯತೆ ಇಲ್ಲದಿರುವುದು, ಸರ್ವರ್ ಸಮಸ್ಯೆ ಮತ್ತು ತಾಂತ್ರಿಕ ದೋಷಗಳಿಂದಾಗಿ ಪ್ರಕ್ರಿಯೆ ವಿಳಂಬವಾಗುತ್ತಿದೆ.

ಪಾಲಿಕೆಗೆ ನೇರವಾಗಿ ಅರ್ಜಿ ಸಲ್ಲಿಸುವ ಸಾರ್ವಜನಿಕರಿಗೆ ಸಿಬ್ಬಂದಿ ನೀಡುವ ಮೊದಲ ಉತ್ತರ 'ಸರ್ವರ್ ಡೌನ್'. ಸಿಬ್ಬಂದಿ ಕೊರತೆ, ಹಳೆಯ ಕಂಪ್ಯೂಟರ್, ಸ್ಕ್ಯಾನರ್ ಹಾಗೂ ಪ್ರಿಂಟರ್‌ಗಳ ಅಸಮರ್ಪಕ ಕಾರ್ಯನಿರ್ವಹಣೆಯಿಂದಾಗಿ ಇ-ಖಾತಾ ಸಿಗಲು ತಿಂಗಳುಗಟ್ಟಲೆ ಕಾಯಬೇಕಾದ ಸ್ಥಿತಿ ಇದೆ.

ಇತ್ತ, ಸಾರ್ವಜನಿಕರಿಗೆ ತಿಂಗಳುಗಟ್ಟಲೆ ಅಲೆದಾಡುವಂತೆ ಮಾಡುವ ಪಾಲಿಕೆಯಲ್ಲಿ, ಮಧ್ಯವರ್ತಿಗಳು (ಬ್ರೋಕರ್) ಪ್ರವೇಶಿಸುತ್ತಿದ್ದಂತೆಯೇ ಕೆಲಸಗಳು ಸರಾಗವಾಗಿ ನಡೆಯುತ್ತಿವೆ. ಮಧ್ಯವರ್ತಿಗಳ ಮೂಲಕ ಬರುವ ಅರ್ಜಿಗಳಿಗೆ ಕೇವಲ 1-2 ದಿನಗಳಲ್ಲಿ ಇ-ಖಾತಾ ಲಭ್ಯವಾಗುತ್ತಿರುವುದು ವ್ಯವಸ್ಥೆಯಲ್ಲಿನ ಭ್ರಷ್ಟಾಚಾರಕ್ಕೆ ಹಿಡಿದ ಕನ್ನಡಿಯಾಗಿದೆ.

ದೂರು ನೀಡಿದವರಿಗೆ 'ತಪ್ಪು ಮಾಹಿತಿ'ಯ ಶಿಕ್ಷೆ!: ಸಿಸ್ಟಂನಲ್ಲಿನ ವಿಳಂಬ ಹಾಗೂ ಮಧ್ಯವರ್ತಿಗಳ ಹಾವಳಿ ಬಗ್ಗೆ ಮೇಲಾಧಿಕಾರಿಗಳಿಗೆ ದೂರು ನೀಡುವ ಸಾಹಸ ಮಾಡಿದರೆ, ಅರ್ಜಿದಾರರಿಗೆ ಪರೋಕ್ಷವಾಗಿ ಶಿಕ್ಷೆ ನೀಡಲಾಗುತ್ತಿದೆ. ಅಂತಹವರ ದಾಖಲೆಗಳನ್ನು ಉದ್ದೇಶಪೂರ್ವಕವಾಗಿ 'ರಾಂಗ್ ಎಂಟ್ರಿ' ಮಾಡಲಾಗುತ್ತಿದೆ.

ಇ-ಖಾತಾ ಕಡ್ಡಾಯದ ಬಿಸಿ ಕರಾವಳಿಯ ಆರ್ಥಿಕ ಬೆನ್ನೆಲುಬಾದ ಕೈಗಾರಿಕಾ ವಲಯಕ್ಕೂ ತಟ್ಟಿದೆ. ಕರಾವಳಿಯ ಅತೀ ದೊಡ್ಡ ಕೈಗಾರಿಕಾ ವಸಾಹತು ಎಂಬ ಹೆಗ್ಗಳಿಕೆ ಬೈಕಂಪಾಡಿ ಇಂಡಸ್ಟ್ರಿಯಲ್ ಪ್ರದೇಶದ್ದು. 650ಕ್ಕೂ ಅಧಿಕ ಕೈಗಾರಿಕೆಗಳು ಬೈಕಂಪಾಡಿ ವ್ಯಾಪ್ತಿಯಲ್ಲಿವೆ. ಸುಮಾರು 15 ಸಾವಿರ ಮಂದಿ ಈ ಕೈಗಾರಿಕೆಯನ್ನೇ ಅವಲಂಬಿಸಿದ್ದಾರೆ. ಸುಮಾರು 17.58 ಎಕರೆ ಪ್ರದೇಶದಲ್ಲಿ ಸ್ಥಾಪನೆಯಾದ ಎಸ್ಟೇಟ್‌ನಲ್ಲಿ ಸುಮಾರು 90 ಉದ್ದಿಮೆಗಳಿವೆ. 2,500ಕ್ಕೂ ಅಧಿಕ ಕಾರ್ಮಿಕರು ಇದ್ದಾರೆ. ಕೊಲ್ನಾಡು, ಮುಡಿಪು, ಪುತ್ತೂರು ಸಹಿತ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಡೆ ಕೈಗಾರಿಕಾ ವಲಯವಿದ್ದು, ಇವರೆಲ್ಲರಿಗೂ ಇ-ಖಾತೆ ಹೊಸ ಸಮಸ್ಯೆಯಾಗಿದೆ.

ಜನಸಾಮಾನ್ಯರ ಹಿತದೃಷ್ಟಿಯಿಂದ ಮಧ್ಯವರ್ತಿಗಳ ಮೇಲೆ ನಿಗಾವಹಿಸಲು ಪಾಲಿಕೆಯ ಎಲ್ಲಾ ವಿಭಾಗಗಳಿಗೂ ಕೂಡಲೇ ಸಿ.ಸಿ.ಟಿ.ವಿ. ಅಳವಡಿಸಿ ಕಠಿಣ ಕ್ರಮ ಕೈಗೊಳ್ಳುವುದರ ಜೊತೆಗೆ, ಇ-ಖಾತಾ ಸರ್ವನ್ನು ಮೇಲ್ದರ್ಜೆಗೇರಿಸಿ, ಸೂಕ್ತ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಮೂಲಕ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಬೇಕಾಗಿ ಈ ಮೂಲಕ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಇ) ವಿಷಯ:- ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿರುವ ಕೆ.ಪಿ.ಎಸ್.ಸಿ.: ತಕ್ಷಣದ ತನಿಖೆಗೆ ಆಗ್ರಹ ಕುರಿತು.**

- - - - -

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. "ಕೆ.ಪಿ.ಎಸ್.ಸಿ. ಕರ್ಮಕಾಂಡ" ಮುಗಿಯದ ಗೋಳು ಎಂದು ಮಾಧ್ಯಮದ ವರದಿಯಲ್ಲಿ ಪ್ರಕಟವಾಗಿರುವಂತೆ ಕೆ.ಪಿ.ಎಸ್.ಸಿ. ಯು ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ಮುಖ್ಯ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದ್ದು, ಒಂದೇ ಬ್ಲಾಕ್ನ ಹತ್ತಾರು ಅಭ್ಯರ್ಥಿಗಳು ಹೆಚ್ಚು ಅಂಕಗಳನ್ನು ಪಡೆದಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂದು ವಿದ್ಯಾರ್ಥಿಗಳು ತನಿಖೆಗೆ ಆಗ್ರಹಿಸುತ್ತಿದ್ದಾರೆ.

ಇದೊಂದು ಅತ್ಯಂತ ಗಂಭೀರ ವಿಷಯವಾಗಿದ್ದು, ಸರ್ಕಾರದ ನಿರ್ಲಕ್ಷ್ಯ ಅತ್ಯಂತ ದುಃಖಕರವಾಗಿದೆ. ನಾಳೆ ಸರ್ಕಾರದ ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಬೇಕಾದ ರಾಜ್ಯದ ಜನರ ಭವಿಷ್ಯವನ್ನು ನಿರ್ಧರಿಸಬಲ್ಲ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮಹತ್ತರ ಜವಾಬ್ದಾರಿಯನ್ನು ಮರೆತ ಕೆ.ಪಿ.ಎಸ್.ಸಿ. ಒಂದೆಡೆಯಾದರೇ, ಕೆ.ಪಿ.ಎಸ್.ಸಿ.ಯನ್ನು ಶುದ್ಧೀಕರಿಸುವಲ್ಲಿ ಸರ್ಕಾರದ ಬದ್ಧತೆ ಇಲ್ಲದಿರುವುದು ಎದ್ದು ಕಾಣುತ್ತಿದೆ.

ಕೆ.ಪಿ.ಎಸ್.ಸಿ. 2023-24ನೇ ಸಾಲಿನ ಗೆಜೆಟೆಡ್ ಪ್ರೋಬೇಷನರಿ ಹುದ್ದೆಗಳಿಗೆ ನೇಮಕಾತಿಯು ಪ್ರಾರಂಭದಿಂದಲೇ ಗೊಂದಲ-ಸಂದೇಹ ಮತ್ತು ಭ್ರಷ್ಟಾಚಾರದ ವಾಸನೆಯಿಂದ ಕೂಡಿದೆ. ಈ ಹಿಂದೆ ಪೂರ್ವಭಾವಿ ಪರೀಕ್ಷೆಯು ಹಲವಾರು ಗೊಂದಲಗಳಿಂದಾಗಿ 2 ಬಾರಿ ಪರೀಕ್ಷೆ ಮುಂದೂಡಲಾಗಿತ್ತು.

ಈಗ ಮುಖ್ಯ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಅಕ್ರಮದ ಶಂಕೆ ಕೇಳಿ ಬಂದಿದೆ. ಫಲಿತಾಂಶವು ನೈಜವಾಗಿದ್ದಲ್ಲಿ ಅಭ್ಯರ್ಥಿಗಳ ಉತ್ತರ ಪತ್ರಿಕೆಯನ್ನು ವೆಬ್‌ಸೈಟ್ ನಲ್ಲಿ ಪ್ರಕಟಿಸಬೇಕು ಮತ್ತು ಅವರ ಪರೀಕ್ಷಾ ಮಾಧ್ಯಮ ಬಹಿರಂಗ ಮಾಡಬೇಕು ಎನ್ನುವ ಆಗ್ರಹ ವಿದ್ಯಾರ್ಥಿಗಳು ಮತ್ತು ಅಕಾಂಕ್ಷಿಗಳಿಂದ ವ್ಯಕ್ತವಾಗಿದೆ.

ಹಲವಾರು ಭ್ರಷ್ಟಾಚಾರದ ಮಸಿ ಮೆತ್ತಿಕೊಂಡಿರುವ ಕೆ.ಪಿ.ಎಸ್.ಸಿ.ಗೆ ಮತ್ತೊಂದು ಅಕ್ರಮದ ಆರೋಪ ಕೇಳಿಬಂದಿರುವುದು ಅತ್ಯಂತ ಖೇದಕರವಾಗಿದೆ. ಜನರಿಗೆ ಕೆ.ಪಿ.ಎಸ್.ಸಿ. ಹಾಗೂ ಅದರ ಮೂಲಕ ಆಯ್ಕೆಯಾಗುವ ಅಭ್ಯರ್ಥಿಗಳ ವಿಶ್ವಾಸಾರ್ಹತೆ ಕುರಿತು ಅನುಮಾನ ಮೂಡುವ ಮುನ್ನವೇ ಸರ್ಕಾರ ವಿದ್ಯಾರ್ಥಿಗಳು ಮತ್ತು ಕೆ.ಸಿ.ಎಸ್.ಸಿ. ಅಕಾಂಕ್ಷಿಗಳ ವಿವಿಧ ಬೇಡಿಕೆಗಳು ಮತ್ತು ಅವರ ಆಗ್ರಹಗಳನ್ನು ಆಲಿಸಬೇಕಾಗಿದೆ. ಅವರ ಸಂದೇಹ-ಆತಂಕಗಳನ್ನು ನಿವಾರಿಸುವ ನಿಟ್ಟಿನಲ್ಲಿ ಕೂಲಂಕಷ ತನಿಖೆ ನಡೆಸಬೇಕು. ಮತ್ತು ಕೆ.ಪಿ.ಎಸ್.ಸಿ ವಿರುದ್ಧದ

ಆರೋಪಗಳಿಗೆ ಸರ್ಕಾರ ಇದೇ ಸದನದಲ್ಲಿ ವಿಸ್ತೃತ ಉತ್ತರ ನೀಡಬೇಕೆಂದು ಶೂನ್ಯವೇಳೆಯಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಈ) ವಿಷಯ:- ಮಂಗಳೂರು ಮಹಾನಗರದಲ್ಲಿ 24/7 ನೀರು ಸರಬರಾಜು ಮಾಡಬೇಕಾಗಿದ್ದ ಜಲಸಿರಿ ಯೋಜನೆಯನ್ನು ಶೀಘ್ರವಾಗಿ ಮುಕ್ತಾಯಗೊಳಿಸಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಬಗ್ಗೆ**

- - - - -

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು.

ನಗರಕ್ಕೆ 24/7 ನೀರು ಸರಬರಾಜಿಗಾಗಿ 2019ರಲ್ಲಿ ಆರಂಭಗೊಂಡ ಜಲಸಿರಿ ಯೋಜನೆಯು ಭೌತಿಕವಾಗಿ ಈವರೆಗೆ ಪೂರ್ಣಗೊಂಡಿರುವುದು ಕೇವಲ ಶೇ.63 ಮಾತ್ರ. 2023ರಲ್ಲಿ ಮುಗಿಯಬೇಕಿದ್ದ ಈ ಯೋಜನೆಗೆ ಸದ್ಯ ಈ ವರ್ಷದ ಡಿಸೆಂಬರ್‌ವರೆಗೆ ಅವಧಿವರೆಗೆ ವಿಸ್ತರಣೆ ಮಾಡಲಾಗಿದೆ. ಆದರೂ ಆ ವೇಳೆ ಪೂರ್ಣವಾಗುವ ಬಗ್ಗೆ, ಅನುಮಾನ ಇದೆ. ಈ ಬಗ್ಗೆ ಜಿಲ್ಲಾ ಕೆ.ಡಿ.ಪಿ. ಸಭೆಯಲ್ಲಿ ಅನೇಕ ಭಾರಿ ಚರ್ಚಿಸಿ 2024ರಲ್ಲಿ ಪೂರ್ಣಗೊಳಿಸಬೇಕೆಂದು ಆದೇಶಿಸಿದ್ದರೂ, ಅಧಿಕಾರಿಗಳು ಕ್ಯಾರೆ ಅನ್ನದೇ ಈ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಿ, ನಗರದ ಉದ್ದಗಲಕ್ಕೂ ಉತ್ತಮ ಕಾಂಕ್ರೀಟ್ ರಸ್ತೆಗಳನ್ನು ಹಾಳು ಮಾಡಿ ಅದರ ನಿರ್ವಹಣೆ ಮಾಡದೇ ಜನರಿಗೆ ಶಾಪವಾಗಿ ಪರಿಣಮಿಸಿದೆ. ನಗರದ ಕೆಲವು ಭಾಗದಲ್ಲಿ 2-3 ವರ್ಷಗಳಿಂದ ಕಾಮಗಾರಿಯು ಜೆಸಿಬಿ ಮತ್ತು ರಸ್ತೆ ಅಗೆತದಿಂದ ವಾಹನಗಳನ್ನು ನಿಲ್ಲಿಸಿ, ವರ್ಷಗಳು ಸಂದರೂ ಕಾಮಗಾರಿ ಮಾತ್ರ ಪೂರ್ಣಗೊಂಡಿಲ್ಲ.

ನಗರದ ಜನರಿಗೆ ದಿನದ 24 ಗಂಟೆಯೂ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡುವ ಉದ್ದೇಶದೊಂದಿಗೆ ಕೆ.ಯು.ಐ.ಡಿ.ಎಫ್.ಸಿ. ಯಿಂದ ಎ.ಡಿ.ಬಿ ನೆರವಿನ ಕೈಮಿಪ್ ಜಲಸಿರಿ ಯೋಜನೆಯು 8 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚ ಸೇರಿ ರೂ. 821.97 ಕೋಟಿ ಮೊತ್ತದ ಕಾಮಗಾರಿಯನ್ನು 2019ರ ಡಿಸೆಂಬರ್ 24ರಂದು ವಹಿಸಲಾಗಿತ್ತು. ಯೋಜನಾ ಒಪ್ಪಂದದ ಪ್ರಕಾರ 2023ರ ಮೇ 24ರಂದು ಕಾಮಗಾರಿ ಪೂರ್ಣಗೊಳ್ಳಬೇಕಾಗಿತ್ತು.

ಜಲಸಿರಿ ಯೋಜನೆಯಡಿ ಒಟ್ಟು 93,600 ಮನೆಗಳಿಗೆ ಸಂಪರ್ಕ ಒದಗಿಸಬೇಕಾಗಿದೆ. ಈವರೆಗೆ 37,025 ಮನೆಗಳ ಸಂಪರ್ಕ ಕಾರ್ಯ ನಡೆದಿದೆ. ನೀರು ಪೂರೈಕೆಗಾಗಿ 52.57 ಕಿ.ಮೀ ಮುಖ್ಯ ಕೊಳವೆ ಅಳವಡಿಕೆ ಕಾಮಗಾರಿಯಡಿ ಈವರೆಗೆ 44.64 ಕಿ.ಮೀ ಪೂರ್ಣವಾಗಿದೆ. 1155.36 ಕಿ.ಮೀ ವಿತರಣೆ ಜಾಲದಲ್ಲಿ 868.84 ಕಿ.ಮೀ ವಿತರಣೆ ಜಾಲಗಳ ಕಾಮಗಾರಿ ಪೂರ್ಣಗೊಂಡಿದೆ.

24/7 ನೀರಿನ ಸರಬರಾಜು ಇನ್ನೂ ಕಾಮಗಾರಿ ಯೋಜನೆ ಮುಗಿಯದೇ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಲು ಇದು ಪ್ರಮುಖ ಕಾರಣವಾಗಿದೆ. ಆದುದರಿಂದ ಈ ಕಾಮಗಾರಿ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರು ಕೂಡಲೇ ಸಭೆ ನಡೆಸಿ, ಸದರಿ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ ಮಂಗಳೂರು ನಗರದ ಜನರಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕಾಗಿ ಸದನದ ಮೂಲಕ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಉ) ವಿಷಯ:- ಕರ್ನಾಟಕ ಅಂತರ್ಜಾತಿ ವಿವಾಹ ಯೋಜನೆಯಡಿ ಪರಿಶಿಷ್ಟ ಜಾತಿಯ ವಧು/ವರರಿಗೆ ನೀಡುತ್ತಿರುವ ಪ್ರೋತ್ಸಾಹ ಧನವನ್ನು ಪೂರ್ಣ ಪ್ರಮಾಣದಲ್ಲಿ ಮತ್ತು ಶೀಘ್ರವಾಗಿ ನೀಡುವ ಬಗ್ಗೆ.**

-----

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು.

ಪರಿಶಿಷ್ಟ ಜಾತಿಯ ವಧು ಅಥವಾ ವರರ ಅಂತರ್ಜಾತಿ ವಿವಾಹಗಳನ್ನು ಪ್ರೋತ್ಸಾಹಿಸುವ ನಿಟ್ಟನಲ್ಲಿ ಕರ್ನಾಟಕ ಅಂತರ್ಜಾತಿ ವಿವಾಹ ಯೋಜನೆಯಡಿಯಲ್ಲಿ ಅವರಿಗೆ ಪ್ರೋತ್ಸಾಹಧನ ನೀಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಆಡಳತಾತ್ಮಕ ಅಡೆತಡೆ ಮತ್ತು ಅಧಿಕಾರಿಗಳ ಜಡತ್ವದಿಂದ ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಮುಂದುವರೆಸುವಲ್ಲಿ ಸರ್ಕಾರ ವಿಫಲವಾಗಿದೆ. 2025-26 ರ ಆರ್ಥಿಕ ವರ್ಷದಲ್ಲಿ ಕರ್ನಾಟಕ ಅಂತರ್ಜಾತಿ ವಿವಾಹ ಯೋಜನೆಯಡಿಯಲ್ಲಿ ಪ್ರೋತ್ಸಾಹ ಧನಕ್ಕಾಗಿ 5,210 ಅರ್ಜಿಗಳು ಸಲ್ಲಿಕೆಯಾಗಿದ್ದು, ಶೇ 63ಕ್ಕಿಂತ ಹೆಚ್ಚು ಅಂದರೆ 3,319 ಅರ್ಜಿದಾರರಿಗೆ ಇನ್ನೂ ಮೊದಲ ಕಂತಿನ ಹಣ ಪಾವತಿಯಾಗಿಲ್ಲ. ಕೇವಲ 27 ಫಲಾನುಭವಿಗಳಿಗೆ ಮಾತ್ರ ಪೂರ್ಣ ಪ್ರಮಾಣದ ಸಹಾಯಧನವನ್ನು ಮಂಜೂರು ಮಾಡಲಾಗಿದೆ. 2,286 ಫಲಾನುಭವಿಗಳಿಗೆ ಮೊದಲ ಕಂತಿನ ಹಣ ಪಾವತಿಗೆ ಅನುಮೋದನೆ ನೀಡಿದ್ದು, ಉಳಿದ 1,492 ಅರ್ಜಿಗಳಿಗೆ ಇಲಾಖೆ ಅನುಮೋದನೆ ನೀಡದೆ, ಬಾಕಿ ಉಳಿಸಿಕೊಂಡಿದೆ.

ಅಂತರ್ಜಾತಿ ವಿವಾಹ ಯೋಜನೆಯಡಿ ಪರಿಶಿಷ್ಟ ಜಾತಿಯ ಮಹಿಳೆಯನ್ನು ಹಿಂದೂ ಧರ್ಮದ ಇತರೆ ಜಾತಿ ಪುರುಷ ಮದುವೆಯಾಗಿದ್ದಲ್ಲಿ ಅಂತಹ ದಂಪತಿಗೆ 3 ಲಕ್ಷ ರೂ. ಹಾಗೂ ಪರಿಶಿಷ್ಟ ಜಾತಿಯ ಪುರುಷ ಹಿಂದೂ ಧರ್ಮದ ಇತರೆ ಜಾತಿಯ ಮಹಿಳೆಯನ್ನು ಮದುವೆಯಾಗಿದ್ದಲ್ಲಿ 2.50 ಲಕ್ಷ ರೂ. ಪ್ರೋತ್ಸಾಹಧನ ನೀಡಲಾಗುತ್ತದೆ. ಪ್ರೋತ್ಸಾಹ ಧನಕ್ಕೆ ಆಯ್ಕೆಯಾದ ದಂಪತಿಗೆ ಶೇ 50ರಷ್ಟು ಹಣ ನಗದು ರೂಪದಲ್ಲಿ ನೀಡಿದ್ದರೆ ಉಳಿದ ಶೇ 50ರಷ್ಟು ಹಣ ಮೂರು ವರ್ಷಗಳ ಅವಧಿಗೆ ಠೇವಣಿ ಇರಿಸಲಾಗುತ್ತದೆ. 2018-19 ರ ಮಧ್ಯಂತರ ಬಜೆಟ್‌ನಲ್ಲಿ ಪುರುಷ ಎಸ್.ಸಿ. ಸಮುದಾಯಕ್ಕೆ ಸೇರಿದರೆ ಪ್ರೋತ್ಸಾಹ ಧನವನ್ನು 3 ಲಕ್ಷ ರೂ.ಗೆ ಮತ್ತು ಮಹಿಳೆ ಎಸ್.ಸಿ. ಸಮುದಾಯದವಳಾಗಿದ್ದರೆ 5 ಲಕ್ಷ ರೂ.ಗೆ ಹೆಚ್ಚಿಸುವುದಾಗಿ ಮುಖ್ಯಮಂತ್ರಿಗಳು ಘೋಷಿಸಿದ್ದರು. ಇದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿ ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ

ನೀಡಬೇಕೆಂದು ಕೋರುತ್ತೇನೆ. ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ತಮ್ಮನ್ನು ಕೋರುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

**(303) 11.03.2026 12.30 ಕೆಜಿ/ಕೆಎಸ್** **(ಉಪ ಸಭಾಪತಿಯವರ ಉಪಸ್ಥಿತಿ)**

**ಊ) ವಿಷಯ:- 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಬೆದರಿಸಿ ವೈಟ್‌ಫೀಲ್ಡ್ ಅಪಾರ್ಟ್‌ಮೆಂಟ್‌ನಲ್ಲಿನ ವೃದ್ಧರೊಬ್ಬರಿಂದ ಲಕ್ಷಾಂತರ ರೂಪಾಯಿ ದೋಚಿರುವ ಕುರಿತು.**

------

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ನಿಲ್ಲದ ಡಿಜಿಟಲ್ ಅರೆಸ್ಟ್ ಸುಲಿಗೆ ಎಂಬ ಶೀರ್ಷಿಕೆಯಡಿ ಪ್ರಕಟವಾದ ವಿಷಯದ ಬಗ್ಗೆ ಪ್ರಸ್ತಾಪಿಸಲು ಅವಕಾಶ ನೀಡಿದಕ್ಕೆ ತಮಗೆ ಧನ್ಯವಾದಗಳು.

ಸೈಬರ್ ಅಪರಾಧ ಪ್ರಕರಣಗಳು ದಿನಕ್ಕೊಂದು ಸ್ವರೂಪ ಪಡೆದುಕೊಳ್ಳುತ್ತಿದ್ದು ಡಿಜಿಟಲ್ ಅರೆಸ್ಟ್ ಪ್ರಕರಣಗಳು ಹೆಚ್ಚು-ಹೆಚ್ಚು ನಡೆಯುತ್ತಿದೆ. ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಬೆದರಿಸಿ ವೃದ್ಧರೊಬ್ಬರಿಂದ ಲಕ್ಷಾಂತರ ರೂಪಾಯಿ ದೋಚಲಾಗಿದೆ. ವೈಟ್‌ಫೀಲ್ಡ್‌ನಲ್ಲಿರುವ ಅಪಾರ್ಟ್ಮೆಂಟಿನಲ್ಲಿ ವೃದ್ಧರೊಬ್ಬರು ಲಕ್ಷಾಂತರ ರೂಪಾಯಿ ಕಳೆದುಕೊಂಡಿದ್ದಾರೆ. ಸದರಿ ವೃದ್ಧರಿಗೆ ಕರೆ ಮಾಡಿದ್ದ ವಂಚಕ ಮುಂಬಯಿ ಪೊಲೀಸ್ ಎಂಬುದಾಗಿ ಹೇಳಕೊಂಡು ನಿಮ್ಮ ಖಾತೆಯಿಂದ ಭಯೋತ್ಪಾದನೆ ಸಂಘಟನೆಗಳಗೆ ಹಣ ಸಂದಾಯ ಆಗುತ್ತಿದ್ದು ಅಕ್ರಮ ಹಣ ವರ್ಗಾವಣೆ ಪ್ರಕರಣ ದಾಖಲಾಗಿದೆ ಎಂದು ಬೆದರಿಸಿ ಖಾತೆಯಲ್ಲಿರುವ ಎಲ್ಲಾ ಹಣವನ್ನು ವರ್ಗಾಯಿಸಬೇಕು ಇಲ್ಲದಿದ್ದರೆ ಡಿಜಿಟಲ್ ಅರೆಸ್ಟ್ ಮಾಡುವುದಾಗಿ ಬೆದರಿಸಿ ವೃದ್ಧರ 2 ಬ್ಯಾಂಕ್ ಖಾತೆಗಳಂದ ಆನ್‌ಲೈನ್ ಮುಖಾಂತರ 16.60 ಲಕ್ಷ ರೂಪಾಯಿಗಳನ್ನು ವರ್ಗಾಯಿಸಿಕೊಂಡಿದ್ದಾರೆ.

ಗೃಹ ಇಲಾಖೆಯ ಅಂಕಿ ಅಂಶದಲ್ಲಿ ಇರುವಂತೆ ಸೈಬರ್ ವಂಚನೆ ಮತ್ತು ಡಿಜಿಟಲ್ ಅರೆಸ್ಟ್ ವಂಚನೆಯ ಕರಾಳ ಮುಖವನ್ನು ಗಮನಿಸಿದಾಗ 2023, 2024 ಮತ್ತು 2025 ರಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳ ಒಟ್ಟು ಸಂಖ್ಯೆ 59,626, ವಂಚನೆಯ ಒಟ್ಟು ಮೊತ್ತ ರೂ.8,170,87, 44,878/- ಕೋಟಿ ರೂಪಾಯಿಗಳು. ಇದುವರೆಗೆ ಪತ್ತೆಯಾಗದ ಪ್ರಕರಣಗಳ ಸಂಖ್ಯೆ 48,173 ಮತ್ತು ಮೊತ್ತ ರೂ.5,338,13,49,436.00 ಕೋಟಿ ರೂಪಾಯಿಗಳು. 2023, 2024 ಮತ್ತು 2025 ನೇ ಸಾಲಿನಲ್ಲಿ ದಾಖಲಾದ ಡಿಜಿಟಲ್ ಅರೆಸ್ಟ್ ಪ್ರಕರಣಗಳ ಒಟ್ಟು ಸಂಖ್ಯೆ 1,655, ವಂಚನೆಯ ಒಟ್ಟು ಮೊತ್ತ ರೂ.3,727,711,003 ಇದುವರೆಗೆ ಪತ್ತೆಯಾಗದ ಡಿಜಿಟಲ್ ಅರೆಸ್ಟ್

ಪ್ರಕರಣಗಳ ಒಟ್ಟು ಸಂಖ್ಯೆ 1,372 ಮತ್ತು ವಂಚನೆಯ ಒಟ್ಟು ಮೊತ್ತ ರೂ.399,14,2562.00 ಕೋಟಿ ರೂಪಾಯಿಗಳು.

ಆದ್ದರಿಂದ, ರಾಜ್ಯದಾದ್ಯಂತ ನಡೆಯುತ್ತಿರುವ ಇಂತಹ ಆರ್ಥಿಕ ವಂಚನೆಯ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಸೈಬರ್ ಅಪರಾಧ ಠಾಣೆಗಳಿಗೆ Information Technology Act-2000 IPC/BNS ರಡಿ ದಾಖಲಾಗುವ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆಗೊಳಸಿ ಸಂತ್ರಸ್ತರಿಗೆ ಆದಷ್ಟು ಶೀಘ್ರದಲ್ಲಿ ನ್ಯಾಯ ಒದಗಿಸಲು ಸದರಿ ಠಾಣೆಗಳಿಗೆ ಅಗತ್ಯ ಸಿಬ್ಬಂದಿಯನ್ನು ಒದಗಿಸಲು ಕ್ರಮವಹಿಸಿ ಆನ್‌ಲೈನ್ ವಂಚನೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಎ) ವಿಷಯ:- ಬಳ್ಳಾರಿ ಜಿಲ್ಲೆ ಕಂಪ್ಲಿ ಪಟ್ಟಣದ ಸಕ್ಕರೆ ಕಾರ್ಖಾನೆ ಪ್ರದೇಶದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಿರ್ಮಿಸುತ್ತಿರುವ "ಮೌಲಾನಾ ಅಜಾದ್ ಶಾಲೆಯನ್ನು ಬೇರೆಡೆ ನಿರ್ಮಿಸಬೇಕೆನ್ನುವ ಬಗ್ಗೆ.**

-------

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ 10.03.2026ರ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ "ಮೌಲಾನಾ ಆಜಾದ್ ಶಾಲೆ ಬೇರೆಡೆ ನಿರ್ಮಿಸಿ" ಎಂಬ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವ ಕುರಿತು.

ದಿನಾಂಕ: 10.03.2026 ರಂದು ದಿನ ಪತ್ರಿಕೆಗಳಲ್ಲಿ ಸುದ್ದಿಯಾಗಿರುವ "ಮೌಲಾನಾ ಆಜಾದ್ ಶಾಲೆ ಬೇರೆಡೆ ನಿರ್ಮಿಸಿ" ಎಂಬ ಸುದ್ದಿಯು ಪ್ರಕಟವಾಗಿರುತ್ತದೆ. ಬಳ್ಳಾರಿ ಜಿಲ್ಲೆ, ಕಂಪ್ಲಿ ಪಟ್ಟಣದ ಸಕ್ಕರೆ ಕಾರ್ಖಾನೆ ಪ್ರದೇಶದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅವರಣದಲ್ಲಿ ಅಲ್ಪಸಂಖ್ಯಾತರ ಮೌಲಾನ ಆಜಾದ್ ಮಾದರಿ ಶಾಲೆ ನಿರ್ಮಾಣಕ್ಕೆ ಮುಂದಾಗಿದ್ದು, ಇಲ್ಲಿ ಈಗಾಗಲೇ 01 ರಿಂದ 10ನೇ ತರಗತಿಯವರೆಗೆ ಸರ್ಕಾರಿ ಶಾಲೆ ನಡೆಯುತ್ತಿದ್ದು ಎರಡು ಕಟ್ಟಡಗಳು ಸಹ ಇರುತ್ತವೆ. ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿದ್ದು, ಇರುವ ಈ ಮಕ್ಕಳಿಗೆ ಸ್ಥಳದ ಅಭಾವ ಇರುತ್ತದೆ. ಈ ಕಾರಣವಾಗಿ ಸ್ಥಳೀಯರು ಮತ್ತು ಶಾಲೆಯ ಹಳೆಯ ವಿದ್ಯಾರ್ಥಿಗಳು ಈ ಹೊಸ ಮೌಲಾನಾ ಆಜಾದ್ ಮಾದರಿ ಶಾಲೆ ಈ ಶಾಲೆ ಅವರಣದಲ್ಲಿ ಬೇಡ ಎಂದು ವಿರೋಧ ವ್ಯಕ್ತಪಡಿಸಿರುತ್ತಾರೆ.

ಸ್ಥಳೀಯರಿಗೆ ಇಲ್ಲಿ ಬೇಡವಾದ ಶಾಲೆಯನ್ನು ಸರ್ಕಾರ ಪ್ರತಿಷ್ಠೆಗಾಗಿ ಮಾಡದೆ ಕಂಪ್ಲಿ ಪಟ್ಟಣದ ಸಕ್ಕರೆ ಕಾರ್ಖಾನೆ ಪ್ರದೇಶದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅವರಣದಿಂದ ಪಟ್ಟಣದ ಬೇರೆ ಸ್ಥಳಕ್ಕೆ ಕೂಡಲೇ ವರ್ಗಾಯಿಸಿ ಮೌಲಾನಾ ಆಜಾದ್ ಮಾದರಿ ಹೊಸ ಶಾಲೆಯನ್ನು ಬೇರೆಡೆ ನಿರ್ಮಾಣ ಮಾಡುವಂತೆ ಈ ಮೂಲಕ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಏ) ವಿಷಯ:- ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಬೇಕಾದ ಶಿಕ್ಷಕರು ಇಂದು ಬಿಸಿ ಊಟ, ಮಕ್ಕಳಿಗೆ ಹಾಲು, ಮೊಟ್ಟೆ ಕೊಟ್ಟು ಅದರ ಲೆಕ್ಕ ಬರೆಯುವುದು, ಬಿಎಲ್‌ಓ ಕಾರ್ಯಗಳ ಜೊತೆಗೆ ಹಲವು ಇತರ ಕಾರ್ಯಗಳನ್ನು ನಿರ್ವಹಿಸುತ್ತಿರುವ ಬಗ್ಗೆ.**

- - -

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. "ಗುರುಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರ, ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ". ಎಂಬ ನಾಣ್ನುಡಿಯನ್ನು ನಾವೆಲ್ಲರೂ ಶಿಕ್ಷಕರ ದಿನಾಚರಣೆಯ ದಿವಸದಂದು ಹೇಳುತ್ತಾ ಬಂದಿದ್ದೇವೆ. ಆದರೆ, ಇಂದು ಶಿಕ್ಷಕರು ಬೋಧನೆಯ ಜೊತೆಗೆ ಹೆಚ್ಚಾಗಿ ಬೋಧಕೇತರ ಕೆಲಸಗಳನ್ನು ಮಾಡುವುದಕ್ಕೆ ಹೊರಟ್ಟಿರುವುದು ಬಹಳಷ್ಟು ನೋವಿನ ಸಂಗತಿಯಾಗಿದೆ.

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಬೇಕಾದ ಶಿಕ್ಷಕರು ಇಂದು ಬಿಸಿ ಊಟ, ಮಕ್ಕಳಿಗೆ ಹಾಲು, ಮೊಟ್ಟೆ ಕೊಟ್ಟು ಅದರ ಲೆಕ್ಕ ಬರೆಯುವುದು ಆಯಿತು. ಮತದಾರರ ಪಟ್ಟಿ ಪರಿಷ್ಕರಿಣೆಗಾಗಿ ಬಿ.ಎಲ್.ಓ. ಜವಾಬ್ದಾರಿ ಹೊತ್ತಾಯ್ತು, ಜನಗಣತಿ ಮತ್ತು ಹೀಗೆ ಇತ್ಯಾದಿ ಕಾರ್ಯಕ್ರಮಗಳನ್ನು ನಿರ್ವಹಿಸಿ ಪ್ರಸ್ತುತ ಇತ್ತೀಚಿನ ದಿವಸಗಳಲ್ಲಿ ನಾಯಿಗಳನ್ನು ಕಾಯುವ ಹೊಣೆಗಾರಿಕೆಯನ್ನು ಸರ್ಕಾರವು ಶಿಕ್ಷಕರ ಮೇಲೆ ಹೇರಿದೆ ಎಂದು ಪತ್ರಿಕೆ ಮುಖಾಂತರ ಗಮನಕ್ಕೆ ಬಂದಿದೆ. ಈಗಾಗಲೇ ನಮ್ಮ ಶಿಕ್ಷಕರು ಬೋಧಕೇತರ ಹಾಗೂ ಇನ್ನಿತರ ಹೆಚ್ಚುವರಿ ಕೆಲಸಗಳ ಹೊರೆಯಿಂದ ಕಂಗೆಟ್ಟಿದ್ದಾರೆ.

ಇತ್ತೀಚಿನ ವರದಿಯ ಪ್ರಕಾರ, ಶಾಲಾ ಆವರಣದಲ್ಲಿ ಬೀದಿ ನಾಯಿಗಳನ್ನು ನಿಯಂತ್ರಿಸಲು ಪ್ರತಿ ಶಾಲೆಯಿಂದ ಒಬ್ಬ ಶಿಕ್ಷಕರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಬೇಕೆಂದು ಸರ್ಕಾರ ಸೂಚನೆ ನೀಡಿದೆ. ಇದು ಶಿಕ್ಷಕ ವೃತ್ತಿಯ ಘನತೆಗೆ ತಂದ ಚ್ಯುತಿ ಮಾತ್ರವಲ್ಲದೆ, ತರ್ಕಹೀನ ನಿರ್ಧಾರವಾಗಿದೆ ಎಂದು ನಾನು ಭಾವಿಸುತ್ತೇನೆ.

ಈಗಾಗಲೇ, ಶಿಕ್ಷಕರು ಬಿಸಿಯೂಟ, ಮೊಟ್ಟೆ ವಿತರಣೆ. ಗಣತಿ ಕಾರ್ಯ ಮತ್ತು ಬಿ.ಎಲ್.ಓ. ಕರ್ತವ್ಯಗಳಲ್ಲಿ ತೊಡಗಿದ್ದಾರೆ. ಈಗ ನಾಯಿಗಳ ಮೇಲೆ ನಿಗಾ ಇಡುವ ಜವಾಬ್ದಾರಿಯನ್ನೂ ಅವರ ಮೇಲೆ ಹಾಕುವುದು ಎಷ್ಟು ಸರಿ? ಬೀದಿ ನಾಯಿಗಳನ್ನು ನಿಯಂತ್ರಿಸುವುದು ಪರಿಣಿತರ ಅಥವಾ ಸ್ಥಳೀಯ ಸಂಸ್ಥೆಗಳ (ಪೌರಸಂಸ್ಥೆಗಳ) ಕೆಲಸವೇ ಹೊರತು ಶಿಕ್ಷಕರದ್ದಲ್ಲ ಎಂಬ ಅಂಶವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಒಂದು ವೇಳೆ, ನಾಯಿ

ಕಡಿತದಂತಹ ಘಟನೆ ಸಂಭವಿಸಿದರೆ ಅದಕ್ಕೆ ಶಿಕ್ಷಕರನ್ನು ಹೊಣೆ ಮಾಡುವುದು ಅಮಾನವೀಯ ಎಂದು ನಾನು ಭಾವಿಸುತ್ತೇನೆ.

ಇಂತಹ ಬೋಧಕೇತರ ಕೆಲಸಗಳಿಂದಾಗಿ ತರಗತಿಗಳಲ್ಲಿ ಬೋಧನೆಗೆ ಸಮಯವೇ ಇಲ್ಲದಂತಾಗಿ ಮಕ್ಕಳ ಭವಿಷ್ಯ ಕುಂಠಿತಗೊಳ್ಳುತ್ತಿದೆ. ಬೀದಿ ನಾಯಿಗಳ ಹಾವಳಿ ತಡೆಗಟ್ಟುವ ಜವಾಬ್ದಾರಿಯನ್ನು ಕೂಡಲೇ ಆಯಾ ವ್ಯಾಪ್ತಿಯ ನಗರ ಸಂಸ್ಥೆಗಳಿಗೆ ಅಥವಾ ಗ್ರಾಮ ಪಂಚಾಯತಿಗಳಿಗೆ ವಹಿಸಬೇಕು. ಶಿಕ್ಷಕರನ್ನು ನೋಡಲ್ ಅಧಿಕಾರಿಗಳನ್ನಾಗಿ ಮಾಡುವ ಈ ಹಾಸ್ಯಾಸ್ಪದ ಆದೇಶವನ್ನು ತಕ್ಷಣವೇ ಹಿಂಪಡೆದು. ಶಿಕ್ಷಕರಿಗೆ ಕೇವಲ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಮುಕ್ತ ಅವಕಾಶ ನೀಡಬೇಕು. ಶಾಲಾ ಆವರಣದಲ್ಲಿ ಬೀದಿ ನಾಯಿಗಳ ನಿಯಂತ್ರಣಕ್ಕಾಗಿ ಶಿಕ್ಷಕರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಿರುವ ಶಿಕ್ಷಣ ಇಲಾಖೆಯ ಅವೈಜ್ಞಾನಿಕ ಆದೇಶವನ್ನು ಹಿಂಪಡೆಯಬೇಕೇಂದು ಹಾಗೂ ಶಿಕ್ಷಕರಿಗೆ ವಹಿಸಲಾದ ಇನ್ನಿತರೆ ಹೆಚ್ಚುವರಿ ಕಾರ್ಯಗಳಿಂದಲೂ ಸಹ ಮುಕ್ತಿಗೊಳಿಸಿ ಬೋಧನೆ ಒಂದನ್ನು ಮಾತ್ರ ವಹಿಸಬೇಕು ಹಾಗೂ ಸರ್ಕಾರಿ ಶಾಲೆಗಳಲ್ಲಿ 'ಡಿ' ದರ್ಜೆ ನೌಕರರನ್ನು ನೇಮಿಸಿಕೊಳ್ಳಬೇಕು. ಇಲ್ಲದಿದ್ದರೆ, ಶಾಲಾ ಆವರಣದ ಕಸವನ್ನು ಯಾರು ಗೂಡಿಸಬೇಕು? ಶೌಚಾಲಯವನ್ನು ಯಾರು ತೊಳೆಯಬೇಕು? ಇವೆಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂದರೆ, 'ಡಿ' ದರ್ಜೆ ನೌಕರರನ್ನು ಶಾಲಾ ಶಿಕ್ಷಣ ಇಲಾಖೆಯಲ್ಲಿ ನೇಮಕ ಮಾಡಿಕೊಂಡು ಶಿಕ್ಷಕರು ಮುಕ್ತವಾಗಿ ಬೋಧನೆ ಮಾಡುವುದಕ್ಕೆ ಅವಕಾಶ ದೊರಕಿಸಿಕೊಡಬೇಕೆಂದು ಸದನದ ಈ ಶೂನ್ಯ ವೇಳೆಯಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ವಂದನೆಗಳು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

(304) 11.03.2026/12.40/ಎಂವಿ-ಎಂಡಿ **(ಉಪ ಸಭಾಪತಿಯವರ ಉಪಸ್ಥಿತಿ)**

**ಉಪ ಸಭಾಪತಿಯವರು:-** ಮಾನ್ಯ ಶಶೀಲ್ ಜಿ. ನಮೋಶಿ ಯವರೆ, ಶೂನ್ಯ ವೇಳೆಯ ವಿಷಯ ಒಂದು ಪುಟಕ್ಕೆ ಮೀರದಂತೆ ಇರಬೇಕು ಎಂಬುದು ನಿಯಮ. ಅದರಲ್ಲಿ ನೂರು ಪದಗಳು ಇರಬೇಕು. ಆದರೆ, ತಾವು ಎರಡು ಪುಟವನ್ನು ನೀಡಿದ್ದೀರಿ. ಇನ್ನು ಮುಂದೆ ಈ ರೀತಿ ಕೊಡಬೇಡಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು small letter ನಲ್ಲಿ ಬರೆದಿದ್ದಾರೆ. ಇಲ್ಲದಿದ್ದರೆ ಅದು ಮೂರು ಪುಟಗಳಾಗುತ್ತಿತ್ತು.

**ಉಪ ಸಭಾಪತಿಯವರು:-** ಈ ರೀತಿ ಆಗಬಾರದು. ಈ ರೀತಿ ಮುಂದೆ ಕೊಡಬೇಡಿ. ಅಂದರೆ, ಒಂದು ಪುಟಕ್ಕೆ ಅಥವಾ ನೂರು ಪದಗಳಿಗೆ ಮೀರದಂತೆ ಇರಬೇಕು.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇನ್ನು ಮುಂದೆ ಅದನ್ನು ಸರಿಪಡಿಸಿಕೊಳ್ಳುತ್ತೇನೆ.

**ಉಪ ಸಭಾಪತಿಯವರು:-** ಆಯಿತು, ಈಗ ತಾವು ಮಾತನಾಡಿ.

**ಐ) ವಿಷಯ:- ದೈಹಿಕ ಶಿಕ್ಷಣ ಪಠ್ಯದಲ್ಲಿಯೇ ಮೌಲ್ಯ ಶಿಕ್ಷಣವನ್ನು ಸೇರ್ಪಡೆ ಮಾಡಿ, ಮುದ್ರಿಸಿ ರಾಜ್ಯದ ಎಲ್ಲಾ ಶಾಲೆಗಳಿಗೆ ಸರಬರಾಜು ಮಾಡುವ ಕುರಿತು.**

--------

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿರುವುದಕ್ಕಾಗಿ ತಮಗೆ ಧನ್ಯವಾದಗಳು. ದೇಶದಲ್ಲಿ ಶಿಸ್ತು, ರಾಷ್ಟ್ರೀಯ ಭಾವೈಕ್ಯತೆ, ಸಮಾನತೆ ತರುವಲ್ಲಿ ದೈಹಿಕ ಶಿಕ್ಷಣದ ಪಾತ್ರ ಬಹಳ ಪ್ರಮುಖವಾಗಿರುವುದನ್ನು ಮನಗಂಡ ಸರ್ಕಾರವು ದೈಹಿಕ ಚಟುವಟಿಕೆಗಳ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು, ಸಮಿತಿಗಳನ್ನು ರಚಿಸಿ ದೈಹಿಕ ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ನೀಡಲಾಗಿದೆ. ರಾಷ್ಟ್ರೀಯ ಪಠ್ಯಕ್ರಮ ಚಟುವಟಿಕೆಗೆ 2005ರ ಹಿನ್ನೆಲೆಯಲ್ಲಿ ದೈಹಿಕ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಲಾಗಿದೆ. ಈ ಬಗ್ಗೆ ಪ್ರೊ.ಎಲ್.ಆರ್.ವೈದ್ಯನಾಥನ್ ರವರ ಸಮಿತಿಯ ಶಿಫಾರಸ್ಸಿನಂತೆ ಪ್ರಾಥಮಿಕ ಹಂತದಿಂದಲೇ ದೈಹಿಕ ಶಿಕ್ಷಣವು ಬೋಧನಾ ವಿಷಯ ಹಾಗೂ ಪರೀಕ್ಷಾ ವಿಷಯವಾಗಿರಬೇಕು. ದೈಹಿಕ ಶಿಕ್ಷಣವು ಇತರೆ ವಿಷಯಗಳಂತೆ ಪಠ್ಯ ವಿಷಯವಾಗಬೇಕು ಎಂದು ಡಾ:ಆನಂದ್ ನಾಡಿಗೇರ್ ರವರ ಅಧ್ಯಕ್ಷತೆಯಲ್ಲಿ ಪಠ್ಯ ಪುಸ್ತಕ ರಚನಾ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯ ಶಿಫಾರಸ್ಸಿನಂತೆ 6 ರಿಂದ 10ನೇ ತರಗತಿವರೆಗೆ ಇತರೆ ವಿಷಯಗಳಂತೆ ದೈಹಿಕ ಶಿಕ್ಷಣ ಪಠ್ಯ ಪುಸ್ತಕ ಮುದ್ರಣಗೊಳಿಸಿ ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲೆಗಳಿಗೆ ಸರಬರಾಜು ಮಾಡಿ ಬೋಧನೆ ಮತ್ತು ಪರೀಕ್ಷೆ ಮತ್ತು ಮೌಲ್ಯ ಮಾಪನಕ್ಕೆ ಒಳಪಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಆದರೆ, ಇಂದು ಸರ್ಕಾರವು 2026-27ನೇ ಸಾಲಿಗೆ 1 ರಿಂದ 10ನೇ ತರಗತಿಯ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಮಾತ್ರ ಮೌಲ್ಯ ಶಿಕ್ಷಣ (ದೈಹಿಕ ಶಿಕ್ಷಣ ಪಠ್ಯ ವಸ್ತುವೂ ಒಳಗೊಂಡಂತೆ) ಪಠ್ಯ ಪುಸ್ತಕ ಮುದ್ರಿಸಿ ವಿತರಿಸಲು ಕರ್ನಾಟಕ ಪಠ್ಯ ಪುಸ್ತಕ ಸಂಘ, ಬೆಂಗಳೂರು ಇವರಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿರುವುದು ಮೂಲ ದೈಹಿಕ ಶಿಕ್ಷಣ ಪಠ್ಯಕ್ಕೆ ಧಕ್ಕೆಯಾಗುವುದರ ಜೊತೆಗೆ ಮಹತ್ವವನ್ನು ಕಳೆದುಕೊಂಡಂತಾಗುತ್ತಿದೆ.

ಇತ್ತೀಚೆಗೆ ಮಕ್ಕಳಲ್ಲಿ ದೈಹಿಕ ಚಟುವಟಿಕೆಗಳ ಕೊರತೆ ಇರುವುದರಿಂದ ಮಕ್ಕಳು ದೈಹಿಕ ಚಟುವಟಿಕೆಗಳಲ್ಲಿ ಹೆಚ್ಚು ಭಾಗವಹಿಸುವಂತೆ ಸರ್ಕಾರಗಳು ಕಾರ್ಯ ಯೋಜನೆಗಳನ್ನು ರೂಪಿಸಬೇಕೆಂದು ಹಲವು ಸಂಸ್ಥೆಗಳು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿವೆ. ಆದರೆ, ಸರ್ಕಾರವು ಮೂಲ ದೈಹಿಕ ಶಿಕ್ಷಣದ ಹೆಸರನ್ನು ಕೈಬಿಟ್ಟು ಮೌಲ್ಯ ಶಿಕ್ಷಣ ಹೆಸರಿನಲ್ಲಿ ಪಠ್ಯ ಪುಸ್ತಕ ಮುದ್ರಿಸಲು ಆದೇಶಿಸಿದೆ.

ಮಕ್ಕಳಿಗೆ ಮೌಲ್ಯ ಶಿಕ್ಷಣದ ಅವಶ್ಯಕತೆ ಇದೆ. ಸರ್ಕಾರ ಅದನ್ನು ಪಠ್ಯದಲ್ಲಿ ಜಾರಿಗೆ ತರುತ್ತಿರುವುದು ಸಂತಸದ ವಿಷಯ. ಈಗಾಗಲೇ ಈ ಹಿಂದೆ ದೈಹಿಕ ಶಿಕ್ಷಣದ ಪಠ್ಯದಲ್ಲಿಯೇ ಮೌಲ್ಯ ಶಿಕ್ಷಣದ ವಿಷಯಗಳನ್ನು ಸೇರ್ಪಡಿಸಿ ಬೋಧನೆ ಮಾಡಲಾಗುತ್ತಿತ್ತು. ಡಿ.ಎಸ್.ಇ.ಆರ್.ಟಿ ವತಿಯಿಂದ ಮೌಲ್ಯ ಶಿಕ್ಷಣದ ತರಬೇತಿಯನ್ನು ಹಲವು ದೈಹಿಕ ಶಿಕ್ಷಣ ಶಿಕ್ಷಕರಿಗೆ ನೀಡಲಾಗಿದ್ದು, ತರಬೇತಿಯ ಪಠ್ಯ ಪುಸ್ತಕವನ್ನು ಮುದ್ರಿಸಿ ನೀಡಲಾಗಿರುತ್ತದೆ.

ಸರ್ಕಾರದ ಆದೇಶದಂತೆ ಶಾಲೆಗಳಲ್ಲಿ ದೈಹಿಕ ಶಿಕ್ಷಣದ ಹುದ್ದೆಗಳು ಸೃಜನೆಯಾಗಿರುತ್ತವೆ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಎಂಬ ಪದನಾಮದೊಂದಿಗೆ ಸರ್ಕಾರದಿಂದ ನೇಮಕವಾಗಿ ದೈಹಿಕ ಶಿಕ್ಷಣದ ಪಠ್ಯ ಬೋಧನೆಯನ್ನು ನಿರ್ವಹಿಸುತ್ತಿದ್ದಾರೆ. ಆದರೆ, ಮೌಲ್ಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯಾವುದೇ ಶಾಲೆಗಳಲ್ಲಿ ಬೋಧನಾ ಹುದ್ದೆಗಳು ಸೃಜನೆಯಾಗಿರುವುದಿಲ್ಲ ಹಾಗೂ ಮೌಲ್ಯ ಶಿಕ್ಷಕರು ಎಂಬ ಪದನಾಮದೊಂದಿಗೆ ಯಾರನ್ನೂ ನೇಮಕ ಮಾಡಿರುವುದಿಲ್ಲ. ಇದರಿಂದ ಮುಂದೆ ಹಲವು ರೀತಿಯ ಸಮಸ್ಯೆಗಳು ಉದ್ಭವವಾಗುವ ಸಾಧ್ಯತೆಗಳು ಇವೆ.

ಆದುದರಿಂದ, ಇದೊಂದು ನಮ್ಮ ರಾಜ್ಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೌಲ್ಯ ಶಿಕ್ಷಣದ ಪಠ್ಯವಾದ ದೈಹಿಕ ಶಿಕ್ಷಣ ಪಠ್ಯಕ್ಕೆ ಯಾವುದೇ ಧಕ್ಕೆ ಆಗದಂತೆ ದೈಹಿಕ ಶಿಕ್ಷಣ ಪಠ್ಯದಲ್ಲಿಯೇ ಮೌಲ್ಯ ಶಿಕ್ಷಣವನ್ನು ಸೇರ್ಪಡೆ ಮಾಡಿ ಈ ಮೊದಲಿನಂತೆ ದೈಹಿಕ ಶಿಕ್ಷಣದ ಹೆಸರಿನಲ್ಲಿ ಅಥವಾ ದೈಹಿಕ ಶಿಕ್ಷಣ ಮತ್ತು ಮೌಲ್ಯ ಶಿಕ್ಷಣ ಎಂಬ ಹೆಸರಿನಲ್ಲಿ ಪಠ್ಯ ಪುಸ್ತಕವನ್ನು ಮುದ್ರಿಸಿ ಈ ಹಿಂದಿನಂತೆ ರಾಜ್ಯದ ಸರ್ಕಾರಿ/ಅನುದಾನಿತ/ಅನುದಾನ ರಹಿತ ಶಾಲೆಗಳಿಗೆ ಸರಬರಾಜು ಮಾಡಲು ಕ್ರಮ ಕೈಗೊಳ್ಳುವಂತೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರ ಮುಖಾಂತರ ಉತ್ತರವನ್ನು ಒದಗಿಸಲಾಗುವುದು.

**ಉಪ ಸಭಾಪತಿಯವರು:-** ಮಾನ್ಯ ರಮೇಶ್ ಬಾಬು ರವರೆ, ತಮ್ಮ ಹೆಸರನ್ನು ಕರೆದಾಗ, ತಾವು ಸದನದಲ್ಲಿ ಹಾಜರಿರಬೇಕು. ತಾವು ಇಲ್ಲದೇ ಇದ್ದರೆ ತಮಗೆ ಅವಕಾಶ ಇರುವುದಿಲ್ಲ. ಇನ್ನು ಮುಂದೆ ಈ ರೀತಿ ಮಾಡಬೇಡಿ.

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಪ್ರಿಂಟ್‌ಔಟ್ ತೆಗೆದುಕೊಂಡು ಬರುವುದಕ್ಕೆ ಹೋಗಿದ್ದೆ. ಅದಕ್ಕೆ ಕ್ಷಮೆ ಇರಲಿ.

**ಒ) ವಿಷಯ:- ಸ್ವಾತಂತ್ರ್ಯ ಹೋರಾಟಗಾರರಿಗೆ ಅಥವಾ ಅವರ ಅವಲಂಬಿತರಿಗೆ ನೀಡುವ ಮಾಸಾಶನವನ್ನು ಹೆಚ್ಚಿಸುವ ಕುರಿತು.**

-------

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಅನುಮತಿ ಕೋರಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಸೇನಾನಿಗಳು ತಮ್ಮ ತನು ಮನ ಧನ ಅರ್ಪಣೆ ಮಾಡಿ ಹೋರಾಟ ಮಾಡಿರುತ್ತಾರೆ. ಅವರ ಹೋರಾಟದ ಫಲ, ನಾವು ಬ್ರಿಟಿಷರಿಂದ ಮುಕ್ತವಾಗಿ ಪ್ರಜಾಪ್ರಭುತ್ವದ ಮೂಲಕ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಎಲ್ಲವನ್ನು ತ್ಯಾಗ ಮಾಡಿ ದೇಶವು ಸ್ವಾತಂತ್ರ್ಯ ಗಳಿಸಬೇಕೆಂಬ ಉದ್ದೇಶದಿಂದ ಸಾರ್ವಜನಿಕ ಹೋರಾಟದಲ್ಲಿ ತೊಡಗಿಸಿಕೊಂಡ ಲಕ್ಷಾಂತರ ಮಂದಿಗೆ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಅನೇಕ ರೀತಿಯ ಗೌರವಗಳನ್ನು ಸಮರ್ಪಣೆ ಮಾಡಿಕೊಂಡು ಬಂದಿರುತ್ತದೆ. ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದಂತಹ ಸ್ವಾತಂತ್ರ್ಯ ಯೋಧರಿಗೆ ಮತ್ತು ಸ್ವಾತಂತ್ರ್ಯ ಯೋಧರ ಅವಲಂಬಿತರಿಗೆ ಮಾಸಾಶನ ನೀಡುವುದನ್ನು ರಾಜ್ಯ ಸರ್ಕಾರ ಬಹಳ ಹಿಂದಿನಿಂದಲೂ ಮಾಡುತ್ತಿದೆ.

ಆಯಾ ಕಾಲಕ್ಕೆ ಅನುಗುಣವಾಗಿ ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡುವ ಗೌರವ ಮಾಸಾಶನವನ್ನು 2018ರಲ್ಲಿ ಪರಿಷ್ಕೃತಗೊಂಡ ಗೌರವಧನದ ಅನ್ವಯ ಮಾಸಿಕ 10,000/- ರೂಪಾಯಿಗಳನ್ನು ಸ್ವಾತಂತ್ರ ಹೋರಾಟಗಾರರಿಗೆ ಮತ್ತು ಅವರ ಅವಲಂಬಿತರಿಗೆ ರಾಜ್ಯ ಸರ್ಕಾರ ನೀಡುತ್ತಿದೆ. ರಾಜ್ಯ ಸರ್ಕಾರ ನೀಡುತ್ತಿರುವ ಗೌರವಧನ 2018ರ ನಂತರ ಇಲ್ಲಿಯವರಿಗೆ ಪರಿಷ್ಕರಣೆ ಆಗಿರುವುದಿಲ್ಲ. ಬಹಳಷ್ಟು ಕಡೆ ಸ್ವಾತಂತ್ರ್ಯ ಹೋರಾಟಗಾರರು ಅಥವಾ ಸ್ವಾತಂತ್ರ್ಯ ಹೋರಾಟಗಾರರ ಅವಲಂಬಿತರು ಮಾಸಾಶನದ ಆಧಾರದ ಮೇಲೆ ತಮ್ಮ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರವು ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಸ್ವಾತಂತ್ರ್ಯ ಹೋರಾಟಗಾರರ ಗೌರವ ಸಮರ್ಪಣೆಯ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಕೆಲವೇ ಸ್ವಾತಂತ್ರ ಹೋರಾಟಗಾರರಿಗೆ ನೀಡುತ್ತಿರುವ ಗೌರವಧನವನ್ನು 15,000/- ರೂಪಾಯಿಗಳಿಗೆ ಹೆಚ್ಚಿಸಬೇಕಾಗಿ ವಿನಂತಿ ಮಾಡುತ್ತೇನೆ. ಬದುಕಿನ ಕೊನೆಗಾಲದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಗೌರವಯುತವಾಗಿ ನಾವು ನಡೆಸಿಕೊಳ್ಳಬೇಕಾಗಿದೆ. ಇಡೀ ರಾಜ್ಯದಲ್ಲಿ ಸುಮಾರು 2,000 ಸ್ವಾತಂತ್ರ್ಯ ಹೋರಾಟಗಾರರು ಅಥವಾ ಅವರ ಅವಲಂಬಿತರು ಇದ್ದು, ಬೆಳಗಾವಿ ಜಿಲ್ಲೆಯಲ್ಲಿ ಅತಿ ಹೆಚ್ಚು ಸ್ವಾತಂತ್ರ್ಯ ಹೋರಾಟಗಾರರು ಇರುತ್ತಾರೆ. ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಧನವನ್ನು ಹೆಚ್ಚು ಮಾಡಬೇಕೆಂದು ಪ್ರಜಾವಾಣಿ

ದಿನಪತ್ರಿಕೆ ಮತ್ತು ಅನೇಕ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗಿರುತ್ತದೆ. ಆದುದರಿಂದ, ಕರ್ನಾಟಕ ರಾಜ್ಯ ಸರ್ಕಾರವು ಆಡಳಿತ ಮತ್ತು ಸಿಬ್ಬಂದಿ ಇಲಾಖೆಯ ಮುಖಾಂತರವಾಗಿ ಇಡೀ ರಾಜ್ಯದಲ್ಲಿ ಇರುವಂತಹ ಸ್ವಾತಂತ್ರ್ಯ ಹೋರಾಟಗಾರರಿಗೆ ಅಥವಾ ಅವರ ಅವಲಂಬಿತರಿಗೆ ನೀಡುತ್ತಿರುವ ಮಾಸಾಶನವನ್ನು ಹೆಚ್ಚು ಮಾಡಬೇಕೆಂದು ಈ ಸದನದ ಮೂಲಕ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

## ೩. ನಿಯಮ ೫೮ಎ ಮೇರೆಗೆ ಪ್ರಸ್ತಾಪಿಸಲಾದ ಶೂನ್ಯವೇಳೆ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್, ಶ್ರೀ ಜಗದೇವ್ ಗುತ್ತೇದಾರ್, ಶ್ರೀಮತಿ ಹೇಮಲತಾ ನಾಯಕ್ ಮತ್ತು ಶ್ರೀಮತಿ ಬಲ್ಕೀಸ್ ಬಾನು ರವರುಗಳು ದಿನಾಂಕ ೦೯.೦೩.೨೦೨೬ರಂದು ಹಾಗೂ ಶ್ರೀ ಎಫ್.ಹೆಚ್.ಜಕ್ಕಪ್ಪನವರ್ ಮತ್ತು ಶ್ರೀ ಎಸ್.ವ್ಹಿ.ಸಂಕನೂರ ರವರುಗಳು ದಿನಾಂಕ ೧೦.೦೩.೨೦೨೬ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಉಪ ಸಭಾಪತಿಯವರು:-** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಅ) ವಿಷಯ:- ಬಾಗಲಕೋಟೆ ಜಿಲ್ಲೆ ಮುಧೋಳದ ಮಹಾರಾಜ ಕಾಲೋನಿಯಲ್ಲಿ ಅಂತರ್ಜಲ ವಿಷಮಯವಾಗಿದ್ದು ನಲ್ಲಿಗಳಲ್ಲಿ ಕಲುಷಿತ ನೀರು ಹರಿಯುತ್ತಿದ್ದು, ನಾಗರಿಕರ ಜೀವಕ್ಕೆ ಆಪತ್ತು ಎದುರಾಗಿರುವ ಕುರಿತು.**

-------

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಪೌರಾಡಳಿತ ಮತ್ತು ಹಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಪಿ.ಹೆಚ್.ಪೂಜಾರ್ ರವರು ದಿನಾಂಕ 09.03.2026ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

**ಆ) ವಿಷಯ:- ರಾಜ್ಯದಲ್ಲಿ ಟೈಫಾಯಿಡ್ ಪ್ರಕರಣಗಳು ಹೆಚ್ಚುತ್ತಿರುವ ಕುರಿತು.**

---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಜಗದೇವ್ ಗುತ್ತೇದಾರ್ ರವರು ದಿನಾಂಕ ೦೯.೦೩.೨೦೨೬ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಇ) ವಿಷಯ:- ಹೋಳಿ ಆಚರಣೆಗಾಗಿ ಪರೀಕ್ಷೆ ತಪ್ಪಿಸಲುವಿದ್ಯಾರ್ಥಿನಿಯ ಮೇಲೆ ಒತ್ತಡ; ಕೊಪ್ಪಳದಲ್ಲಿ ಶಿಕ್ಷಣ ಹಕ್ಕಿನ ಮೇಲೆ ನಡೆದ ದೌರ್ಜನ್ಯದ ಬಗ್ಗೆ.**

- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀಮತಿ ಹೇಮಲತಾ ನಾಯಕ್ ರವರು ದಿನಾಂಕ 09.03.2026ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)

**ಈ) ವಿಷಯ:- ಕಾಸರಗೋಡು ಕನ್ನಡಿಗರ ಭಾಷಾ ಹಕ್ಕುಗಳ ಮೇಲೆ ಮಲೆಯಾಳ ಸವಾರಿ; ಕಾಯ್ದೆ ತಿದ್ದುಪಡಿಗೆ ಮತ್ತು ಸರ್ಕಾರದ ಮಧ್ಯಪ್ರವೇಶಕ್ಕೆ ಆಗ್ರಹ ಕುರಿತು.**

---------

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀಮತಿ ಬಲ್ಕೀಸ್ ಬಾನು ರವರು ದಿನಾಂಕ 09.03.2026ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

**ಉ) ವಿಷಯ:- ಧಾರವಾಡ ಜಿಲ್ಲೆಯ ಅಣ್ಣಿಗೇರಿ ತಾಲ್ಲೂಕಿನ ನಾವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಂದಿಗನ ಹಳ್ಳಕ್ಕೆ ಸೇರುತ್ತಿರುವ ಶೌಚಾಲಯ ಮತ್ತು ಕಲುಷಿತ ನೀರನ್ನು ತಡೆಗಟ್ಟಿ ನೀರನ್ನು ವೈಜ್ಞಾನಿಕ ಕ್ರಮಗಳ ಮೂಲಕ ಶುದ್ಧೀಕರಿಸುವ ಬಗ್ಗೆ.**

--------

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಎಫ್.ಹೆಚ್.ಜಕ್ಕಪ್ಪನವರ್ ರವರು ದಿನಾಂಕ 10.03.2026ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

**ಊ) ವಿಷಯ:- ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಪ್ರಾಧ್ಯಾಪಕರ ಹುದ್ದೆಗಳ ಭರ್ತಿಗೆ ಆಯವ್ಯಯದಲ್ಲಿ ಅನುದಾನವನ್ನು ಕಾದಿರಿಸಿರುವ ಬಗ್ಗೆ.**

--------

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕೃಷಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಎಸ್.ವ್ಹಿ.ಸಂಕನೂರ ರವರು ದಿನಾಂಕ 10.03.2026ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

## 4. ಗಮನ ಸೆಳೆಯುವ ಸೂಚನೆಗಳು

**ಅ) ವಿಷಯ:- 'ಕೋಲಿ', 'ಕಬ್ಬಲಿಗ', ಬೆಸ್ತ, 'ಅಂಬಿಗ' ಮತ್ತು 'ಬಾರ್ಕಿ' ಪದಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವ ಪ್ರಸ್ತಾವನೆಯ ಸ್ಥಿತಿಗತಿಗಳ ಬಗ್ಗೆ.**

--------

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 'ಕೋಲಿ', 'ಕಬ್ಬಲಿಗ', 'ಬೆಸ್ತ', 'ಅಂಬಿಗ' ಮತ್ತು 'ಬಾರ್ಕಿ' ಪದಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಬೇಕೆಂಬ ವಿಚಾರದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಕೋಲಿ, ಟೋಕ್ರಿ ಕೋಳಿ, ಕೋಯಾ, ಮಹಾದೇವ ಕೋಲಿ ಸಮಾಜ ಪರಿಶಿಷ್ಟ ಪಂಗಡಕ್ಕೆ ಸೇರುವ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ನಂತರದಲ್ಲಿ ಭಾಷಾವಾರು ರಾಜ್ಯ ಪುನರ್ವಿಂಗಡಣೆಯ ಸಂದರ್ಭದಲ್ಲಿ ಇವುಗಳನ್ನು ನಮ್ಮ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಿ ಈ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಆದರೆ, ದೇಶದ 14 ರಾಜ್ಯಗಳಲ್ಲಿ ಇವರು ಪರಿಶಿಷ್ಟ ಜಾತಿಗೆ ಸೇರಿರುತ್ತಾರೆ. ಹಾಗೂ 9 ರಾಜ್ಯಗಳಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿರುತ್ತಾರೆ. ಆದುದರಿಂದ, ಕರ್ನಾಟಕ ರಾಜ್ಯದಲ್ಲಿಯೂ ಕೂಡ ನಮ್ಮ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಬೇಕೆಂದು ನಾವು 1996 ರಿಂದ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಸುಮಾರು 30 ವರ್ಷಗಳಿಂದ ನಿರಂತರವಾದ ಹೋರಾಟ ನಡೆದಿದೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು 1996ರಲ್ಲಿ ...

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರೆ, ತಾವು ಬರೆದಿರುವುದನ್ನು ಓದಬೇಕು.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ತಾವು ಬಂದಿರುವುದಕ್ಕೆ ತಮಗೆ ನಮಸ್ಕಾರಗಳು.

**ಸಭಾಪತಿಯವರು:-** ತಾವು ಇದನ್ನಷ್ಟೇ ಓದಬೇಕು.

**(ಮುಂದು)**

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಮಾನ್ಯ ಸಭಾಪತಿಯವರೇ, ತಾವು ಬಂದಿದ್ದೀರಾ? ನಮಸ್ಕಾರ ಸರ್ ತಮಗೆ.

**ಸಭಾಪತಿಯವರು:–** ಮಾನ್ಯ ತಿಪ್ಪಣ್ಣನವರೇ, ಗಮನ ಸೆಳೆಯುವ ಸೂಚನೆಯಲ್ಲಿ ತಾವು ವಿಷಯವನ್ನು ಮಾತ್ರ ಓದಬೇಕು.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಮಾನ್ಯ ಸಭಾಪತಿಯವರೇ, ತಾವು ಬಂದದ್ದು ಒಳ್ಳೆಯದಾಯಿತು.[xxx] ತಾವು ದೇವರಂತಹವರು. ಅಜಾತಶತ್ರುಗಳು ತಾವು. ನಿಮ್ಮಂತಹವರು ಸಿಗುವುದೇ ಬಹಳ ಕಷ್ಟ.

**ಸಭಾಪತಿಯವರು:–** ಆಯಿತು, ತಾವು ಮುಂದೆ ಓದಿ.

**(ಗೊಂದಲ)**

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಮಾನ್ಯ ಸಭಾಪತಿಯವರೇ, ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಅಜಾತಶತ್ರುಗಳು. ಸರಿಯಲ್ಲವೇ?

**ಸಭಾಪತಿಯವರು:–** ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರೇ, ತಾವು ಮುಂದೆ ಓದಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 'ಕೋಲಿ', 'ಕಬ್ಬಲಿಗ', ಬೆಸ್ತ, 'ಅಂಬಿಗ' ಮತ್ತು 'ಬಾರ್ಕಿ' ಪದಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವ ಪ್ರಸ್ತಾವನೆಯ ಸ್ಥಿತಿಗತಿಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ತಿಪ್ಪಣ್ಣಪ್ಪನವರೇ, ಮಾನ್ಯ ಉಪ ಸಭಾಪತಿಯವರು ಬಂದ ಮೇಲೂ ಕೂಡ ತಾವು ಇದೇ ಮಾತನ್ನೇ ಹೇಳುತ್ತೀರಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾವು ಮಾನ್ಯ ಉಪ ಸಭಾಪತಿಯವರಿಗೆ ಆ ರೀತಿ ಕರೆಯುವುದಿಲ್ಲ. .[xxx] **(ಗೊಂದಲ)** ಮಾನ್ಯ ಸಭಾಪತಿಯವರು ಅಜಾತಶತ್ರುಗಳು, ಅವರಿಗೆ ಯಾವುದೇ ಪಾರ್ಟಿ ಇರುವುದಿಲ್ಲ

---

**[xxx]** ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ತಿಪ್ಪಣ್ಣಪ್ಪನವರೇ, ಮಾನ್ಯ ಸಭಾಪತಿಯವರು ಕೂಡ ನಮ್ಮ ಪಕ್ಷದವರೇ ಆಗಿದ್ದಾರೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಅದು ನನಗೆ ಗೊತ್ತಿಲ್ಲ. ಅವರು ಅಜಾತಶತ್ರು ಎಂದ ಮೇಲೆ ಅವರಿಗೆ ಯಾವುದೇ ಪಾರ್ಟಿ ಇರುವುದಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸದನಕ್ಕೆ ತಪ್ಪು ಮಾಹಿತಿ ಹೋಗುವುದು ಬೇಡ. ಮಾನ್ಯ ಸಭಾಪತಿಯವರಾಗಲಿ ಅಥವಾ ಮಾನ್ಯ ಉಪ ಸಭಾಪತಿಯವರಾಗಲಿ ಯಾವ ಪಕ್ಷ ಅಥವಾ ಯಾರಿಗೂ ಸಂಬಂಧ ಇಲ್ಲ. ಮಾನ್ಯ ಸಭಾಪತಿಯವರು ಹಾಗೂ ಮಾನ್ಯ ಉಪ ಸಭಾಪತಿಯವರು ಸದನಕ್ಕೆ ಸಂಬಂಧ ಅಷ್ಟೇ. ಹಾಗಾಗಿ, ಅದು ಕಡತಕ್ಕೆ ಹೋಗುವುದು ಸೂಕ್ತವಲ್ಲ. ಆದುದರಿಂದ, ಅದನ್ನು ಕಡತದಿಂದ ತೆಗೆಯಿರಿ.

**ಸಭಾಪತಿಯವರು:–** ಹೌದು, ಈ ಸ್ಥಾನದಲ್ಲಿ ಕುಳಿತವರೆಲ್ಲರೂ ಸಹ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕು. ಆಯಿತು, ಅದನ್ನು ಕಡತದಿಂದ ತೆಗೆಯಿರಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಮಾನ್ಯ ಸಭಾಪತಿಯವರೇ, ಒಟ್ಟಾರೆ 23 ಜಿಲ್ಲೆಗಳಲ್ಲಿ ನಮ್ಮ ಪರಿಶಿಷ್ಟ ಪಂಗಡದ ಸಮುದಾಯದವರು ಇದ್ದಾರೆ.

**ಸಭಾಪತಿಯವರು:–** ತಮ್ಮ ಗಮನ ಸೆಳೆಯುವ ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಿದ್ದಾರೆಯೇ?

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಮಾನ್ಯ ಸಭಾಪತಿಯವರೇ, ಆದರೆ ಇಲ್ಲಿ ಕರ್ನಾಟಕ ಸರ್ಕಾರದವರು ಮಲತಾಯಿ ಧೋರಣೆ ತೋರಿ ನಮಗೆ ಅನ್ಯಾಯ ಮಾಡುತ್ತಿದ್ದಾರೆ. ಅದಕ್ಕಾಗಿ, ಗಂಗಾಮತ ಮತ್ತು ಅದರ ಉಪ ಜಾತಿಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ತಾವು ಉತ್ತರ ನೀಡುತ್ತೀರಾ? ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರೇ, ತಮ್ಮ ವಿಷಯಕ್ಕೆ ಮಾನ್ಯ ಸಭಾನಾಯಕರು ಮೊದಲು ಉತ್ತರ ನೀಡಲಿ. ನಂತರ ತಾವು ಮಾತನಾಡಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ನನ್ನ ವಿಷಯಕ್ಕೆ ಯಾರಾದರೂ ಉತ್ತರ ಹೇಳುವವರು ಇದ್ದಾರೆಯೇ? ಇದಕ್ಕೆ ಯಾರು ಜವಾಬ್ದಾರರು? ಮಾನ್ಯ ಮುಖ್ಯಮಂತ್ರಿಗಳು ಕೂಡ ಈ ಸದನದಲ್ಲಿ ಇಲ್ಲ. ಹಾಗಾಗಿ, ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಬರುವವರೆಗೂ ನಾನು ಸದನದ ಬಾವಿಯೊಳಗೆ ಹೋಗಿ ಕೂರುತ್ತೇನೆ.

**ಸಭಾಪತಿಯವರು:-** ತಮ್ಮ ವಿಷಯಕ್ಕೆ ಮಾನ್ಯ ಸಭಾನಾಯಕರು ಉತ್ತರ ನೀಡುತ್ತಾರೆ. ಅದನ್ನು ತಾವು ಕೇಳಿ.

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಕೂಡ ವಿಷಯ ಮಂಡನೆ ಮಾಡುತ್ತೇನೆ. ನಂತರ, ನನಗೂ ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಆಯಿತು, ಮೊದಲು ತಮ್ಮ ವಿಷಯಕ್ಕೆ ಮಾನ್ಯ ಸಭಾನಾಯಕರು ಉತ್ತರ ನೀಡಲಿ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ,

(ಉತ್ತರವನ್ನು ಲಗತ್ತಿಸಲಾಗಿದೆ)

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇದು ಸಮಾಜಕ್ಕೆ ಸಂಬಂಧಪಟ್ಟಂತಹ ಬಹುಮುಖ್ಯವಾದ ವಿಷಯವಾಗಿರುವುದರಿಂದ, ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನಾನು ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಏಕೆಂದರೆ, ಬಹಳ ದಿವಸಗಳಿಂದ ನಾವು ಸದನದಲ್ಲಿ ಈ ವಿಷಯವನ್ನು ಚರ್ಚೆ ಮಾಡಬೇಕು ಮತ್ತು ಈ ವಿಷಯವನ್ನು ಬಹಳ ಗಂಭೀರವಾಗಿ ಸರ್ಕಾರದ ಗಮನಕ್ಕೆ ತರಬೇಕೆಂಬ ಪ್ರಯತ್ನದಿಂದ ಕಾಯುತ್ತಿದ್ದೆವು. ಬಹುಶಃ ನಮ್ಮಿಬ್ಬರ ಕೊನೆಯ ಅಧಿವೇಶನದಲ್ಲಿ ನಮಗೆ ಈ ವಿಷಯ ಪ್ರಸ್ತಾಪಿಸಲು ಅವಕಾಶ ಸಿಕ್ಕಿರುತ್ತದೆ. ಹಾಗಾಗಿ, ತಾವು ನನಗೆ 5 ರಿಂದ 7 ನಿಮಿಷ ಕಾಲಾವಕಾಶ ನೀಡಿದರೆ, ಈ ವಿಷಯವನ್ನು ಮಂಡನೆ ಮಾಡುತ್ತೇನೆ. ಇದು ಬಹಳ ಗಂಭೀರವಾದಂತಹ ಹಾಗೂ ತೀರಾ ಅನ್ಯಾಯಕ್ಕೆ ಒಳಗಾಗಿರುವಂತಹ ಸಮಾಜದ ಬಗ್ಗೆ ತಮಗೂ ಸಹ ಗೊತ್ತಿರುತ್ತದೆ.

**ಸಭಾಪತಿಯವರು:–** ಮಾನ್ಯ ತಳವಾರ್ ಸಾಬಣ್ಣನವರೇ, ಇದು ಗಮನ ಸೆಳೆಯುವ ಸೂಚನೆಯಾಗಿದ್ದು, ತಾವು ವಿಷಯವನ್ನು ಓದಿದ ನಂತರ, ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಓದುತ್ತಾರೆ. ಆ ಉತ್ತರದ ಮೇಲೆ ತಮಗೆ ಏನಾದರೂ ಸ್ಪಷ್ಟೀಕರಣ ಇದ್ದರೆ ಕೇಳಬಹುದು. ಅದನ್ನು ಬಿಟ್ಟು ತಾವು ಈ ವಿಷಯದ ಮೇಲೆ ಭಾಷಣ ಮಾಡಿದರೆ ಹೇಗೆ?

**ಡಾ॥ ತಳವಾರ್ ಸಾಬಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಮುಖ್ಯಮಂತ್ರಿಗಳ ಪರವಾಗಿ ಕೊಟ್ಟಿರುವಂತಹ ಉತ್ತರವನ್ನು ಈಗಾಗಲೇ ಕೆಳಮನೆಯಲ್ಲಿ ನೀಡಲಾಗಿರುತ್ತದೆ. ಆದರೆ, ವಾಸ್ತವವೇ ಬೇರೆ ಇದೆ.

**ಸಭಾಪತಿಯವರು:–** ಆಯಿತು. ಸರಿ. ಈಗ ಏನು ಮಾಡಬೇಕು ಎಂಬುದಷ್ಟನ್ನೇ ಹೇಳಿ.

**ಡಾ॥ ತಳವಾರ್ ಸಾಬಣ್ಣ:–** ಮಾನ್ಯ ಸಭಾಪತಿಯವರೇ, ಆ ವಾಸ್ತವವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಸಭಾಪತಿಯವರು:–** ಇಲ್ಲ. ಇಲ್ಲ. ಗಮನ ಸೆಳೆಯುವ ಸೂಚನೆಯಲ್ಲಿ ಚರ್ಚೆಗೆ ಅವಕಾಶವಿರುವುದಿಲ್ಲ.

**ಡಾ॥ ತಳವಾರ್ ಸಾಬಣ್ಣ:–** ಮಾನ್ಯ ಸಭಾಪತಿಯವರೇ, ನಾನು ಚರ್ಚೆ ಮಾಡುತ್ತಿಲ್ಲ.

**ಸಭಾಪತಿಯವರು:–** ತಾವು ದಯಮಾಡಿ ನನ್ನ ಮಾತನ್ನು ಕೇಳಿ. ಈ ರೀತಿಯಾದರೆ ನಾನು ಸದನ ಹೇಗೆ ನಡೆಸಲಿ?

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ನಾನು ವಾಸ್ತವ ವಿಷಯವನ್ನು ಹೇಳಬೇಕಲ್ಲವೇ?

**ಸಭಾಪತಿಯವರು:-** ನಾನು ಎಲ್ಲರಿಗೂ ಬಹಳ lenience ಕೊಡುತ್ತೇನೆ. ಅದನ್ನು ಯಾರು ಕೂಡ ದುರುಪಯೋಗ ಮಾಡಿಕೊಳ್ಳಬಾರದು.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಇಲ್ಲ.

**ಸಭಾಪತಿಯವರು:-** ತಾವು ಚಿಕ್ಕದಾಗಿ ಪ್ರಶ್ನೆ ಕೇಳಬೇಕು. ಅದನ್ನು ಬಿಟ್ಟು ಭಾಷಣ ಮಾಡಿದರೆ ಹೇಗೆ? ತಾವು ಒಬ್ಬ Professor ರಾಗಿ ಈ ರೀತಿ ಮಾಡಿದರೆ ಹೇಗೆ? ಆಯಿತು, ಚಿಕ್ಕದಾಗಿ ಹೇಳಿ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ನಾನು ಕೂಡ ಚಿಕ್ಕದಾಗಿ ಹೇಳುತ್ತೇನೆ. ತಾವು ನನಗೆ ಎಷ್ಟು ಬೈದರೂ, ಅದನ್ನು ನಾವು 'ಹೂ' ಎಂದು ತೆಗೆದುಕೊಳ್ಳುತ್ತೇವೆ. ಏಕೆಂದರೆ, ತಾವು ಅಷ್ಟು ದೊಡ್ಡ ಸ್ಥಾನದಲ್ಲಿ ಕುಳಿತಿದ್ದೀರಿ. ಅದಕ್ಕಾಗಿ, ತಮ್ಮ ಮೇಲೆ ನನಗೆ ಅಷ್ಟು ಗೌರವ ಇದೆ. ಮಾನ್ಯ ಸಭಾಪತಿಯವರೇ, ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗ ಮತ್ತು ಬಾರ್ಕಿ ಸಮುದಾಯದವರನ್ನು ಎಸ್.ಟಿ. ಪಟ್ಟಿಯಲ್ಲಿ ಸೇರಿಸಬೇಕೆಂದು ಕಳೆದ 30 ವರ್ಷಗಳಿಂದ ಹೋರಾಟ ನಡೆಯುತ್ತಿದೆ. ತಮ್ಮ ಗಮನಕ್ಕೆ ಗೊತ್ತಿರುವ ಹಾಗೆ, ದಿವಂಗತ ವಿಠಲ ಹೇರೂರರವರ ನೇತೃತ್ವದಲ್ಲಿ 1996 ರಲ್ಲಿ ದೊಡ್ಡ ಹೋರಾಟ ಆಯಿತು.

**ಸಭಾಪತಿಯವರು:-** ಆಯಿತು, ಈಗ ಏನಾಗಬೇಕು ಎಂಬುದನ್ನು ತಿಳಿಸಿ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ವಾಸ್ತವ ಸಮಸ್ಯೆ ಏನಿದೆ ಎಂಬುದನ್ನು ನಾನು ಹೇಳುತ್ತೇನೆ. 1996ರಲ್ಲಿ ರಾಜ್ಯ ಸರ್ಕಾರ ಗಂಗಾಮತ ಮತ್ತು ಇದರ ಪರ್ಯಾಯ ಪದಗಳೆಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿರುತ್ತದೆ. ನಮಗೆ ಇಲ್ಲಿಯೇ ಎಡವಟ್ಟು ಆಗಿದ್ದು, ಗಂಗಾಮತ ಮತ್ತು ಪರ್ಯಾಯ ಪದಗಳು ಎಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ ನಂತರ, ಸುಮಾರು 30 ವರ್ಷಗಳ ಕಾಲ ಈ ವಿಷಯಕ್ಕೆ ಸಂಬಂಧಪಟ್ಟ ಕಡತವು ಸುಮಾರು 10 ರಿಂದ 12 ಬಾರಿ ಕೇಂದ್ರದಿಂದ ರಾಜ್ಯಕ್ಕೆ ಮತ್ತು ರಾಜ್ಯದಿಂದ ಕೇಂದ್ರಕ್ಕೆ ಓಡಾಡುತ್ತಿದೆ. ಈ ಹಿಂದೆ ಆಗಿರುವಂತಹ ಒಂದು ಎಡವಟ್ಟಿನಿಂದ ಇಡೀ ಸಮುದಾಯಕ್ಕೆ ಸುಮಾರು 30 ವರ್ಷಗಳಿಂದ ಅನ್ಯಾಯ ಆಗಿದೆ. ಏಕೆಂದರೆ, ಗಂಗಾಮತ ಮತ್ತು ಅದರ ಪರ್ಯಾಯ ಪದಗಳು Registrar General and Census Commissioner of India ದವರ ಪ್ರಕಾರ ಒಂದು ಜಾತಿ ಅಲ್ಲ. ಅದು ಕೇವಲ ಒಂದು generic ಆಗಿರುವಂತಹ

ಶಬ್ದವಾಗಿರುತ್ತದೆ. ಹಾಗಾಗಿ, ಗಂಗಾಮತ ಎಂದು ಕಳುಹಿಸಿರುವಂತಹ ಪ್ರಸ್ತಾವನೆಗೆ ಮನ್ನಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು 30ನೇ ಅಕ್ಟೋಬರ್, 2023ರಲ್ಲಿ ವರದಿ ಬಂದಿರುತ್ತದೆ.

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪನವರೇ, ತಾವು ಸ್ಪಷ್ಟೀಕರಣ ಕೇಳಿ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಮುಗಿಸುತ್ತೇನೆ. ದಯವಿಟ್ಟು ನನಗೆ ಅವಕಾಶ ನೀಡಿ. ಇದು ಇಬ್ಬರು ಸದಸ್ಯರಿಗೆ ಸೇರಿದ ವಿಷಯವಾಗಿರುತ್ತದೆ.

**ಸಭಾಪತಿಯವರು:-** ಇಲ್ಲ ಆಗುವುದಿಲ್ಲ. ದಯಮಾಡಿ ತಾವು ಕುಳಿತುಕೊಳ್ಳಿ. ಗಮನ ಸೆಳೆಯುವ ಸೂಚನೆಯಲ್ಲಿ ಹೆಚ್ಚು ಅವಕಾಶವಿಲ್ಲವೆಂದು ಹೇಳಿದರೂ, ತಾವು ಏನು ಹುಡುಗಾಟಿಕೆ ಮಾಡುತ್ತೀರಾ? ಮಾನ್ಯ ತಿಪ್ಪಣ್ಣಪ್ಪನವರೇ, ತಾವು ಕೇಳಿ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಇದು ತೀರಾ ಅನ್ಯಾಯವಾಗುತ್ತದೆ.

**ಸಭಾಪತಿಯವರು:-** ತಾವು ದಯಮಾಡಿ ಕುಳಿತುಕೊಳ್ಳಿ. ಯಾವ ಅನ್ಯಾಯ ಇದು? ಕುಳಿತುಕೊಳ್ಳಿ ಎಂದು ಹೇಳಿದರೂ ಕೂಡ ಕುಳಿತುಕೊಳ್ಳದೇ ತಾವು ನನಗೆ ಅನ್ಯಾಯ ಮಾಡುತ್ತಿದ್ದೀರಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಗಂಗಾಮತ ಮತ್ತು ಅದರ ಉಪ ಜಾತಿಗಳ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನ ಆಗಿ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಹೋಗಿರುತ್ತದೆ. ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಒಂಟೆತುಪಲ್ಲಿ ಚಿನ್ನಪ್ಪ ರೆಡ್ಡಿ ಆಯೋಗ ಸೇರಿದಂತೆ, ಎಲ್ಲಾ ಆಯೋಗಗಳು ಸಹ, ಈ ಸಮುದಾಯದವರು ಆರ್ಥಿಕವಾಗಿ ಬಹಳ ದುರ್ಬಲವಾಗಿದ್ದಾರೆ. ಅಲ್ಲದೇ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಬಹಳ ಹಿಂದುಳಿದಿದ್ದಾರೆ. ಹಾಗಾಗಿ, ಈ ಸಮುದಾಯದವರನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಯಾವುದೇ ಅಭ್ಯಂತರವಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ಅಲ್ಲದೇ, ಈ ಸಮುದಾಯದವರನ್ನು ಎಸ್.ಟಿ. ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರದ ಬಳಿ ಯಾವುದೇ ಅಧಿಕಾರ ಇರುವುದಿಲ್ಲ. ಆದರೆ, ರಾಜ್ಯ ಸರ್ಕಾರದವರು ಈ ಸಮುದಾಯದ ಬಗ್ಗೆ ಮೂರು ಲೈನ್ ಪ್ರಸ್ತಾವನೆ ಬರೆದು ಕಳುಹಿಸಿದರೆ ಸಾಕು. ಪ್ರತಿ ಗುರುವಾರ ರಾಜ್ಯ ಸಚಿವ ಸಂಪುಟದ ಸಭೆ ನಡೆಯುತ್ತದೆ. ಆ ಸಚಿವ ಸಂಪುಟದ ಸಭೆಯಲ್ಲಿ "ಈ ಸಮುದಾಯದವರದ್ದು ಬಹಳ ದಿನಗಳಿಂದ ಬೇಡಿಕೆ ಇದೆ. ಹಾಗಾಗಿ, ಈ ಸಮುದಾಯದವರನ್ನು ಎಸ್.ಟಿ. ಸೇರಿಸಿ" ಎಂದು ಮೂರ್ನಾಲ್ಕು ಲೈನ್ ಪ್ರಸ್ತಾವನೆ ಬರೆದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದರೆ ಸಾಕು. ಆನಂತರ, ನಾವು ಕೇಂದ್ರ ಸರ್ಕಾರದಲ್ಲಿ ನಮ್ಮ

ಸಮುದಾಯವನ್ನು ಎಸ್.ಟಿ. ಪಟ್ಟಿಗೆ ಸೇರಿಸಿಕೊಳ್ಳುತ್ತೇವೆ. ಏಕೆಂದರೆ, ಬಿ.ಜೆ.ಪಿ. ಸರ್ಕಾರದವರು ನಮ್ಮಲ್ಲಿಗೆ ಪ್ರಸ್ತಾವನೆ ಬಂದರೆ ನಾವು ಮಾಡಿಕೊಡುತ್ತೇವೆಂದು ಸುಮ್ಮನೆ ಹೇಳುತ್ತಾರೆ. ಇದು ಅವರ ಪೊಳ್ಳು ಭರವಸೆ ಎಂಬುದು ನಮಗೆ ಗೊತ್ತಾಗಬೇಕಲ್ಲವೇ? ಶ್ರೀ ನರೇಂದ್ರ ಮೋದಿಯವರು, ಈ ಹಿಂದೆ ಕಲಬುರಗಿಗೆ ಬಂದಾಗ, "ತುಮ್ ಲೋಗೋಂ ಕೋ ಯಾದ್ ರಕುಂಗಾ" (**"तुम लोगों को याद रखूँगा"**) ಎಂದು ಹೇಳಿದರು. ಹಾಗಾಗಿ, ನಾನು ರಾಜ್ಯ ಸರ್ಕಾರದವರಲ್ಲಿ ಮನವಿ ಮಾಡುವುದೇನೆಂದರೆ, ಅವರು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿಕೊಟ್ಟರೆ ಸಾಕು. ಅಲ್ಲದೇ, ಈ ಸಮುದಾಯದ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನ ಹಾಗೂ ಎಲ್ಲವೂ ಆಗಿದೆ. ಈಗಾಗಲೇ ಮೂರು ಬಾರಿ ಕಡತ ಕೇಂದ್ರ ಸರ್ಕಾರಕ್ಕೆ ಹೋಗಿ ವಾಪಸ್ಸು ಬಂದಿರುತ್ತದೆ. ಆದುದರಿಂದ, ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿಕೊಟ್ಟರೆ ಸಾಕು. ಇದಕ್ಕೆ ಎಲ್ಲಾ ಸಮುದಾಯದವರ ಒಪ್ಪಿಗೆ ಇದೆ. ಅಂದರೆ, ಈ ಸಮುದಾಯವನ್ನು ಎಸ್.ಟಿ. ಪಟ್ಟಿಗೆ ಸೇರಿಸಬೇಕು. ಅದರಿಂದಾಗಿ, ಅವರಿಗೆ ನ್ಯಾಯ ಸಿಗಬೇಕು ಎಂಬುದಾಗಿದೆ. ಅದಕ್ಕಾಗಿ, ಇಂತಹ ಕಷ್ಟಕರವಾದಂತಹ, ಸಮಾಜದ ಕಣ್ಣೀರು ಒರೆಸುವಂತಹ ಕೆಲಸ ಮಾಡಬೇಕಾದರೆ, ರಾಜ್ಯ ಸರ್ಕಾರ ಮಾಡಬೇಕಾಗಿರುವ ಒಂದೇ ಒಂದು ಕೆಲಸ ಎಂದರೆ, ಅದು ಈ ಸಮುದಾಯವನ್ನು ಎಸ್.ಟಿ. ಪಟ್ಟಿಗೆ ಸೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬೇಕು. ಇದರಿಂದಾಗಿ, ನಮ್ಮ ಸಮುದಾಯದವರಿಗೆ ನಿರಂತರವಾಗಿ ತೊಂದರೆಯಾಗುತ್ತಿದೆ. "ಇಲ್ಲಿಯವರೆಗೂ ಏತಕ್ಕಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಹೋಗುತ್ತಿಲ್ಲ" ಎಂದು ನಮ್ಮ ಜನಾಂಗದವರು ನಮ್ಮನ್ನು ಪ್ರಶ್ನೆ ಕೇಳುತ್ತಿದ್ದಾರೆ. ಆದುದರಿಂದ, ದಯಮಾಡಿ ಮುಂದಿನ ಸಚಿವ ಸಂಪುಟದಲ್ಲಿ ನಿರ್ಣಯ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬೇಕೆಂದು ತಮ್ಮ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಷಯದ ಬಗ್ಗೆ procedure ಪ್ರಕಾರ ಏನು ಮಾಡಬೇಕೋ, ಅದನ್ನು ಮಾಡಿ ಕಳುಹಿಸಲಾಗಿದೆ. ಆದರೆ, Registrar General and Census Commissioner of India ದವರು ತಮ್ಮ ಪತ್ರದಲ್ಲಿ ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ಪರಿಶೀಲಿಸಿ, ಸೂಕ್ತ ಸ್ಪಷ್ಟೀಕರಣ ನೀಡಬೇಕೆಂದು ಕೇಳಿರುತ್ತಾರೆ. ಸದರಿ ಅಂಶಗಳಿಗೆ ಸೂಕ್ತ ಸ್ಪಷ್ಟೀಕರಣವನ್ನು ಸಹ ಕೊಡಬೇಕೆಂದು ಈಗಾಗಲೇ ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿರವರಿಗೆ ಕೋರಲಾಗಿರುತ್ತದೆ. ಅದು ಬಂದ ತಕ್ಷಣ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತ್ತದೆ. ಇದರ ಜೊತೆಗೆ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಸರ್ಕಾರ ಮುಂದೆ ಈ ಬಗ್ಗೆ ಪರಿಶೀಲನೆ ಮಾಡಿ, ಅವರಿಗೆ ಸೂಕ್ತವಾದಂತಹ

ರೀತಿಯಲ್ಲಿ ಮಾಡುವುದಕ್ಕೆ ಯಾವೆಲ್ಲಾ ತೊಂದರೆಗಳಿವೆ ಎಂಬುದನ್ನು ಪರಿಶೀಲಿಸಿ, ಅವುಗಳನ್ನು ಬಗೆಹರಿಸುವಂತಹ ಕೆಲಸ ಮಾಡಲಾಗುತ್ತದೆ.

(ಮುಂದು)

(306) 11.03.2026 ವೈಎಲ್-ಎಕೆ 1.00 **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಮಾನ್ಯ ಗೋಪಿನಾಥ್‌ರವರು ಸರ್ಕಾರದ ಗಮನ ಸೆಳೆಯಿರಿ.

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಒಂದೆರಡೂ ನಿಮಿಷ ಮಾತನಾಡಲು ಅವಕಾಶ ಕಲ್ಪಿಸಿ.

**ಸಭಾಪತಿಯವರು:-** ಆಗುವುದಿಲ್ಲ. ಎಲ್ಲದಕ್ಕೂ ಈ ರೀತಿ ಎದ್ದು ಮಾತನಾಡಿದರೆ ನಾನು ಒಪ್ಪುವುದಿಲ್ಲ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಇದು ಯಾವ ನ್ಯಾಯ? ಗಮನ ಸೆಳೆಯುವ ಸೂಚನೆ ಮೇಲೆ ಮಾತನಾಡಲು ಇಬ್ಬರ ಹೆಸರು ನಮೂದಿಸಲಾಗಿದೆ.

**ಸಭಾಪತಿಯವರು:-** ಡಾ॥ ತಳವಾರ್ ಸಾಬಣ್ಣನವರೇ, ಗಮನ ಸೆಳೆಯುವ ಸೂಚನೆ ಮೇಲೆ ಮಾತನಾಡಲು ಒಂದು ಲಿಮಿಟ್ ಇರುತ್ತದೆ. ಈಗಾಗಲೇ ತಾವು ಓದಿ ಸಂಬಂಧಪಟ್ಟ ಸಚಿವರ ಗಮನ ಸೆಳೆದಿದ್ದೀರಿ. ಗಮನ ಸೆಳೆಯುವ ಸೂಚನೆ ಮೇಲೆ ಮಾತನಾಡಲು ಏನು ನಿಯಮ ಇದೆ ಎಂಬುದನ್ನು ಓದಿ ನೋಡಿ. ಮಾನ್ಯ ಸಚಿವರು ಉತ್ತರ ಹೇಳಿದ ಮೇಲೆ ಅದಕ್ಕೆ ಸ್ಪಷ್ಟೀಕರಣ ಏನಾದರೂ ಇದ್ದರೆ ಕೇಳಬೇಕು. ಅದನ್ನು ಹೊರತುಪಡಿಸಿ ಭಾಷಣ ಮಾಡುತ್ತಾ ಹೋದರೆ ಹೇಗೆ?

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ನಾನು ಭಾಷಣ ಮಾಡುತ್ತಿಲ್ಲ.

**ಸಭಾಪತಿಯವರು:-** ಈ ರೀತಿ ಎಲ್ಲಾ ವಿಚಾರದ ಮೇಲೆಯೂ ಮಾತನಾಡಿದರೆ ನಾನು ಒಪ್ಪುವುದಿಲ್ಲ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆ ಕೈಗೆತ್ತಿಕೊಂಡಿದ್ದು, ಅದರ ಕಾರ್ಯವಿಧಾನ ಏನೆಂಬುದು ಎಲ್ಲರಿಗೂ ಗೊತ್ತಿದೆ. ಆದಾಗ್ಯೂ ಸಾಕಷ್ಟು ಮಾತನಾಡಲು ಅವಕಾಶ ನೀಡಿದ್ದೀರಿ. ಹಾಗೆಯೇ ಉತ್ತರದಲ್ಲಿಯೂ ಸ್ಪಷ್ಟವಾಗಿ ತಿಳಿಸಲಾಗಿದೆ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ನನಗೆ ಎರಡೂ ನಿಮಿಷ ಮಾತನಾಡಲು ತಾವು ಏತಕ್ಕೆ ಅವಕಾಶ ಕೊಡುತ್ತಿಲ್ಲ. ನಾನೊಬ್ಬ ಅಧಿಕಾರಿಯಾಗಿದ್ದು, ಈ ಮನೆಯ ಸದಸ್ಯನಾಗಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಡಲಿಲ್ಲವೆಂದರೆ ಹೇಗೆ? ನಾನು ಸದನದ ಬಾವಿಗೆ ಹೋಗುತ್ತೇನೆ....

**(ಈ ಹಂತದಲ್ಲಿ ಡಾ॥ ತಳವಾರ್ ಸಾಬಣ್ಣನವರು ಸದನದ ಬಾವಿಯೊಳಗೆ ಬಂದು ಧರಣಿ ನಿರತರಾಗಿ ಘೋಷಣೆ ಕೂಗಿದರು)**

**ಸಭಾಪತಿಯವರು:–** ಬಾವಿಯೊಳಗೆ ಬಂದ ಮೇಲೆ ಸುಮ್ಮನೆ ಇರಿ. ಮಾತನಾಡುವುದು ಬೇಡ. ತಾವು ಬೇಕಾದರೆ ಹೊರಗೆ ಹೋಗಿ. ಇದೇನು ಸದನ ಅಂದುಕೊಂಡಿದ್ದೀರಾ. ಏನೆಂದು ಭಾವಿಸಿದ್ದೀರಿ? ಹುಡುಗಾಟಿಕೆ ಮಾಡುತ್ತೀರಾ? ತಾವೊಬ್ಬರು ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸಿದ್ದು, ಎಲ್ಲಾ ವಿಚಾರವನ್ನು ತಿಳಿದಿರಬೇಕು. ರೂಲ್ ಬುಕ್‌ನಲ್ಲಿ ಏನಿದೆ ಎಂಬುದನ್ನು ಓದಿ ನೋಡಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸದಸ್ಯರಾದ ಡಾ॥ ತಳವಾರ್ ಸಾಬಣ್ಣನವರು ಈ ರೀತಿ ಮಾಡಿದರೆ ಆಗುವುದಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆ ಮೇಲೆ ಮಾತನಾಡಲು ಅಜೆಂಡಾದಲ್ಲಿ ಇಬ್ಬರೂ ಸದಸ್ಯರ ಹೆಸರು ಇದೆ. ಈಗಾಗಲೇ ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರು ಮಾತನಾಡಿದ್ದು, ಅದಕ್ಕೆ ಮಾನ್ಯ ಸಭಾನಾಯಕರು ಉತ್ತರ ನೀಡಿದ್ದಾರೆ. ಹಾಗೆಯೇ ಡಾ॥ ತಳವಾರ್ ಸಾಬಣ್ಣನವರಿಗೂ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:–** ಮಾನ್ಯ ತಿಪ್ಪಣ್ಣಪ್ಪ ಕಮಕನೂರ ರವರು ಮಾತನಾಡುವ ಮೊದಲೇ ಡಾ॥ ತಳವಾರ್ ಸಾಬಣ್ಣನವರಿಗೆ ಮಾತನಾಡಲು ಅವಕಾಶ ನೀಡಿದ್ದು, ಅವರೇ ಮೊದಲು ಮಾತನಾಡಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಡಾ॥ ತಳವಾರ್ ಸಾಬಣ್ಣನವರು ಹಾಗೂ ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರು ಇಬ್ಬರೂ ಮಾತನಾಡಿದ್ದು, ಈಗಾಗಲೇ ಉತ್ತರವನ್ನು ನೀಡಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಗಲಿ. ಒಂದೆರಡೂ ನಿಮಿಷ ಮಾನ್ಯ ತಳವಾರ್ ಸಾಬಣ್ಣನವರಿಗೂ ಮಾತನಾಡಲು ಅವಕಾಶ ನೀಡಿ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆ ಅಡಿ ಯಾವುದೇ ರೀತಿ ಚರ್ಚೆ ಮಾಡಲು ಅವಕಾಶ ಇರುವುದಿಲ್ಲ. ಅದನ್ನು ತಿಳಿದುಕೊಳ್ಳಬೇಕು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಡಾ॥ ತಳವಾರ್ ಸಾಬಣ್ಣನವರೇ, ತಾವು ಸದನದ ಬಾವಿಯಿಂದ ಹೊರಗೆ ಬನ್ನಿ.

**ಸಭಾಪತಿಯವರು:–** ಈ ರೀತಿ ಮಾಡಿದರೆ ಆಗುವುದಿಲ್ಲ. ಡಾ॥ ತಳವಾರ್ ಸಾಬಣ್ಣನವರೇ, ತಾವೊಬ್ಬರು ಪ್ರೊಫೆಸರ್ ಆಗಿದ್ದು, ಅರ್ಥ ಮಾಡಿಕೊಳ್ಳಬೇಕು. ಸದನದೊಳಗೆ ಬಂದು ಹುಡುಗಾಟಿಕೆ ಮಾಡುತ್ತೀರಾ?

**(ಈ ಹಂತದಲ್ಲಿ ಡಾ॥ ತಳವಾರ್ ಸಾಬಣ್ಣನವರು ಸದನದ ಬಾವಿಯಿಂದ ಹೊರಗೆ ಬಂದು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಡಾ॥ ತಳವಾರ್ ಸಾಬಣ್ಣನವರು ಯಾವತ್ತೂ ಆ ರೀತಿ ನಡೆದುಕೊಂಡಿಲ್ಲ.

**ಸಭಾಪತಿಯವರು:-** ಡಾ॥ ತಳವಾರ್ ಸಾಬಣ್ಣನವರೇ, ತಾವು ಎಲ್ಲರನ್ನೂ ಹೆದರಿಸುತ್ತೀರಾ? ಈ ಸದನ ತಮಗೆ ಮಾತ್ರ ಇದೆಯೇ?

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಆ ರೀತಿ ಹೇಳಬೇಡಿ.

**ಸಭಾಪತಿಯವರು:-** ಆಗಲಿ ಮಾತನಾಡಿ, ಭಾಷಣ ಮಾಡುವುದು ಬೇಡ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಈ ಸಮುದಾಯದ ಪರ್ಯಾಯ ಪದಗಳಾದಂತಹ ಟೋಕ್ರೆ ಕೋಲಿ, ಕೋಲಿ ಟೋರು, ಕೋಯಾ, ಬಿನ್ ಕೋಯಾ, ರಾಜ್ ಕೋಯಾಗಳೆಲ್ಲವೂ 1956ನೇ ಇಸವಿಯಲ್ಲಿ ಎಸ್.ಟಿ. ಪಟ್ಟಿಯಲ್ಲಿವೆ. ಅಜಾರ್ತುಯವಾಗಿ 1956ನೇ ಇಸವಿಯಲ್ಲಿ ಪುನರ್ ವಿಂಗಡಣೆಯಾಗಿದ್ದಾಗ ಕೋಲಿ, ಕಬ್ಬಲಿಗ, ಬೆಸ್ತ ಸಮುದಾಯವು ಆ ಪಟ್ಟಿಯಲ್ಲಿ ಬಿಟ್ಟು ಹೋಗಿತ್ತು. ಕೋಲಿ, ಕಬ್ಬಲಿಗ ಸಮುದಾಯಗಳು ಪಟ್ಟಿಯಿಂದ ಬಿಟ್ಟು ಹೋದ ಕಾರಣ,... ಈಗಾಗಲೇ ಅದರ ಬಗ್ಗೆ ದಾಖಲೆ ಇದ್ದು, ನಾನೇ ಸ್ವತ: 3 ವರ್ಷಗಳ ಕಾಲ ಅಧ್ಯಯನ ಮಾಡಿ, ಬ್ರಿಟಿಷ್ ಸರ್ಕಾರದ 103 ದಾಖಲೆಗಳಾದ Census Reports, Anthropological Studies, Gazetteers - ಎಲ್ಲವನ್ನೂ ಸಂಗ್ರಹಿಸಿ ಸರ್ಕಾರಕ್ಕೆ ಕೊಟ್ಟಿದ್ದೇನೆ. ನನ್ನ ಒತ್ತಾಯವೇನೆಂದರೆ, ಈಗಾಗಲೇ ಕೊಟ್ಟಿರುವಂತಹ ದಾಖಲೆಗಳನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ 5 ಪರ್ಯಾಯ ಪದಗಳಾದ ಕೋಲಿ, ಕಬ್ಬಲಿಗ, ಬಾರ್ಕಿ, ಅಂಬಿಗ, ಬೆಸ್ತಗಳಿಗೆ ಸಂಬಂಧಿಸಿದಂತೆ ದಾಖಲೆ ಸಮೇತ ಕೇಂದ್ರ ಸರ್ಕಾರಕ್ಕೆ ಕಳುಹಿಸಿದರೆ ಸಾಕು ಎನ್ನುವಂಥ ಒತ್ತಾಯವನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡುತ್ತೇನೆ. ಈ ಸಮುದಾಯಕ್ಕೆ ಅನ್ಯಾಯವಾಗಿದ್ದು, ತಮಗೂ ಸಹ ಗೊತ್ತಿದೆ. ತಾವು ಸಹ ಉತ್ತರ ಕರ್ನಾಟಕ ಭಾಗದವರಾಗಿದ್ದು, ತಮ್ಮ ಭಾಗದಲ್ಲಿಯೂ ಅಂಬಿಗ, ಬೆಸ್ತ ಸಮುದಾಯದವರು ನೆಲೆಸಿದ್ದಾರೆ. ಹಾಗಾಗಿ, ನಾವು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಮೊದಲು ದಾಖಲೆ ಇರಲಿ, ಈಗ ನಾನೇ ಸ್ವತಃ ದಾಖಲೆಗಳನ್ನು ಒದಗಿಸಿದ್ದೇನೆ. ಈ ದಾಖಲೆಗಳ ಸಮೇತ 5 ಪರ್ಯಾಯ ಪದಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದರೆ, ಅಲ್ಲಿ ನಾವು ಒತ್ತಾಯ ಮಾಡಲು ಅನುಕೂಲವಾಗುತ್ತದೆ ಎಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈಗಾಗಲೇ ಸರ್ಕಾರಕ್ಕೆ ಕಡತ ಕಳುಹಿಸಿ ಎರಡು ವರ್ಷಗಳು ಕಳೆದಿವೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಈಗಾಗಲೇ ಬೇರೆ ಬೇರೆ ಬೇಡಿಕೆ ವಿಷಯದಲ್ಲಿ

ಬೇರೆ ಬೇರೆ ಸಬ್–ಕಾಸ್ಟ್‌ನವರು ಕೊಟ್ಟಿರುವಂಥ ದಾಖಲೆ ಇದೆ. ಅಂತಿಮವಾಗಿ ದಿನಾಂಕ 19.02.2026 ರಂದು ನಮಗೆ ಕಡತ ಬಂದಿದ್ದು, ಪರಿಶೀಲನೆ ವ್ಯಾಪ್ತಿಯಲ್ಲಿದ್ದು, ಅದೆಲ್ಲವನ್ನೂ ಪರಿಶೀಲನೆ ಮಾಡಿ, ಸೂಕ್ತವಾದ ನಿರ್ಧಾರವನ್ನು ಕೈಗೆತ್ತಿಕೊಳ್ಳಲಾಗುವುದು.

**ಆ) ವಿಷಯ:- ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಸುತ್ತಮುತ್ತಲ ಕೆರೆಗಳಿಗೆ ನೀರು ತುಂಬಿಸುವ ಕೆ.ಸಿ.ವ್ಯಾಲಿ ಯೋಜನೆಯಡಿ ಕೈಬಿಟ್ಟಿರುವ ಕೆರೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೂಡಲೇ ಸೇರಿಸುವ ಬಗ್ಗೆ.**

--------

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಸುತ್ತಮುತ್ತಲ ಕೆರೆಗಳಿಗೆ ನೀರು ತುಂಬಿಸುವ ಕೆ.ಸಿ.ವ್ಯಾಲಿ ಯೋಜನೆಯಡಿ ಕೈಬಿಟ್ಟಿರುವ ಕೆರೆಗಳನ್ನು ಸಾರ್ವಜನಿಕ ಹಿತಾದೃಷ್ಟಿಯಿಂದ ಕೂಡಲೇ ಸೇರಿಸುವ ಬಗ್ಗೆ ಮಾನ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ,....

(ಉತ್ತರವನ್ನು ಲಗತ್ತಿಸಲಾಗಿದೆ)

ಬೆಂಗಳೂರು ನಗರ ಕೆ.ಸಿ ವ್ಯಾಲಿಯ ಸಂಸ್ಕರಣಾ ಘಟಕದಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ಆನೇಕಲ್ ತಾಲ್ಲೂಕಿನ 67-ಕೆರೆಗಳನ್ನು ಹಾಗೂ ಕನಕಪುರ ತಾಲ್ಲೂಕಿನ ರಾವುತನಹಳ್ಳಿ ಮತ್ತು ಮಾವತ್ತೂರು ಕೆರೆಗಳನ್ನು ತುಂಬಿಸುವ ಕಾಮಗಾರಿಯು ಈಗಾಗಲೇ ಬಿ.ಡಬ್ಲ್ಯೂ.ಎಸ್.ಎಸ್.ಬಿ. (ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳ) ಯ ಎಸ್.ಟಿ.ಪಿ. ಘಟಕದಲ್ಲಿ ಲಭ್ಯವಿರುವ ನೀರಿನಿಂದ ಸುಮಾರು 50 ಕೆರೆಗಳಿಗೆ ನೀರನ್ನು ತುಂಬಿಸಲಾಗಿದೆ. ಕೆ.ಸಿ. ವ್ಯಾಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. (ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳ) ಯ ಎಸ್.ಟಿ.ಪಿ. ಉನ್ನತೀಕರಣ ಕಾಮಗಾರಿ ಕೈಗೊಂಡಿರುವ ಹಿನ್ನಲೆಯಲ್ಲಿ ಪೂರ್ಣಪ್ರಮಾಣದ ನೀರು ಲಭ್ಯವಾಗಿರುವುದಿಲ್ಲ. ಮುಂದಿನ ದಿನಮಾನಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. (ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳ) ಯವರು ಕಾಮಗಾರಿಯನ್ನು ಪೂರ್ಣಗೊಳಿಸಿ ಹೆಚ್ಚಿನ ನೀರು ಕೆ.ಸಿ.ವ್ಯಾಲಿ ಎಸ್.ಟಿ.ಪಿ. ಯಲ್ಲಿ ಲಭ್ಯವಾಗಿದ್ದಾಗ ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಕೆಲವು ಗ್ರಾಮದ ಕೆರೆಗಳಾದ ವಾಬಸಂದ್ರ ಕೆರೆ, ತಿರುಪಾಳ್ಯ, ಗವಿ ಕೆರೆ ಮತ್ತು ಯಾರಂಡಹಳ್ಳಿ ಕೆರೆಗಳಿಗೆ ನೀರು ತುಂಬಿಸಲು ಯೋಜನೆಯನ್ನು ಕೈಗೊಳ್ಳಲು ಪರಿಶೀಲನೆಯಲ್ಲಿದೆ.

ಈಗಾಗಲೇ ಸದರಿ ವಿಚಾರವಾಗಿ ಚರ್ಚಿಸಿದ್ದು, ಇದು ನಮ್ಮ ಇಲಾಖಾ ವ್ಯಾಪ್ತಿಯೊಳಗೆ ಬರುತ್ತದೆ. ಆದರೆ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ನವರು ಟ್ರೀಟ್‌ಮೆಂಟ್ ಮಾಡಿ, ನಮ್ಮ Minor Irrigation Department ಗೆ ವಹಿಸುತ್ತಾರೆ. ಕೆ.ಸಿ. ವ್ಯಾಲಿಯಲ್ಲಿ 120 ಎಸ್.ಟಿ.ಪಿ. ಘಟಕಗಳಿದ್ದು, ಕೇವಲ ಅದನ್ನು upgrade ಮಾಡುತ್ತಿದ್ದಾರೆ. ಹಾಗಾಗಿ, ಕೇವಲ 60 ಎಂ.ಎಲ್.ಡಿ. ನೀರು ಮಾತ್ರ ಬರುತ್ತಿದ್ದು, ಈಗಾಗಲೇ 50 ಕೆರೆಗಳನ್ನು ತುಂಬಿಸಲಾಗಿದ್ದು, ಕನಕಪುರದಲ್ಲಿ ಎರಡು ಕೆರೆಗಳಿಗೆ ನೀರನ್ನು ತುಂಬಿಸುವಂಥ ಕೆಲಸ ಮಾಡಲಾಗುತ್ತಿದೆ. ಹಾಗೆಯೇ ಜಿಗಣಿ ಹೋಬಳಿಯಲ್ಲಿ ಮೂರು ಕೆರೆಗಳಿಗೆ ಸಂಬಂಧಿಸಿದಂತೆ ಮಾನ್ಯ ಸದಸ್ಯರು ಕೇಳಿದ್ದು, ಈ ಸಂಬಂಧ municipality ವತಿಯಿಂದ ಅಭಿವೃದ್ಧಿ ಮಾಡಲಾಗುತ್ತಿದೆ. ಈ 3 ಕೆರೆಗಳು ಮತ್ತು ಬಾಕಿ ಇರತಕ್ಕಂಥ ನಾಲ್ಕು ಕೆರೆಗಳಿಗೂ 2027ನೇ ಇಸವಿಯಲ್ಲಿ ಎಸ್.ಟಿ.ಪಿ. ಕಾರ್ಯಪೂರ್ಣಗೊಳ್ಳುತ್ತದೆ ಎಂದು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು undertaking ಕೊಟ್ಟಿದ್ದಾರೆ. ಬೆಂಗಳೂರು ನಗರದ ನಾಲ್ಕೈದು ಕಡೆ ಎಸ್.ಟಿ.ಪಿ. ಘಟಕಗಳನ್ನು upgrade ಮಾಡುತ್ತಿದ್ದು, ಅದರನ್ವಯ ಆನೇಕಲ್ ತಾಲ್ಲೂಕಿಗೆ ಸಂಬಂಧಿಸಿದಂತೆ 2027ನೇ ಇಸವಿಯಲ್ಲಿ ಎಸ್.ಟಿ.ಪಿ. ಘಟಕಗಳನ್ನು upgrade ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಅದು ಬಂದ ಕೂಡಲೇ 120 ಎಂ.ಎಲ್.ಡಿ.ಗೆ ಏನೂ ಅಗ್ರಿಮೆಂಟ್ ಆಗಿದೆ, ಅದರಂತೆ ಎಲ್ಲಾ ಕೆರೆಗಳಿಗೂ ನೀರನ್ನು ತುಂಬಿಸಲು ಅವಕಾಶ ಇದೆ.

**ಶ್ರೀ ಹೆಚ್.ಎಸ್.ಗೋಪಿನಾಥ್:-** ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ಗಮನಕ್ಕೆ ತರುವುದೇನೆಂದರೆ, ಎಲೆಕ್ಟ್ರಾನಿಕ್ ಸಿಟಿ, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ ಮತ್ತು ಹೆಬ್ಬಗೋಡಿ ನಗರ ಸಭೆ ವ್ಯಾಪ್ತಿಯಲ್ಲಿ ಸುಮಾರು ಎರಡು ಲಕ್ಷಕ್ಕಿಂತ ಹೆಚ್ಚು ಜನ ಸಂಖ್ಯೆ ಇದ್ದು, ಬೋರ್‌ವೆಲ್‌ನಲ್ಲಿ ಸಹ ನೀರು ಸಿಗುತ್ತಿಲ್ಲ. ಇಲ್ಲಿರತಕ್ಕಂಥ ಆರು ಕೆರೆಗಳನ್ನು ಸಿ.ಎಸ್.ಆರ್. ಫಂಡ್‌ನಲ್ಲಿ ಪುನಶ್ಚೇತನಗೊಳಿಸಲಾಗಿದ್ದು, ಮಳೆ ನೀರು ಅಲ್ಲಿ ಶೇಖರಣೆಯಾಗುತ್ತಿಲ್ಲ. ಅದಕ್ಕಾಗಿ ಮಾನ್ಯ ಸಭಾನಾಯಕರ ಗಮನಕ್ಕೆ ತರುತ್ತಿರುವುದು. ಅಂತರ್ಜಲ ಹೆಚ್ಚು ಮಾಡುವ ದೃಷ್ಟಿಯಿಂದಾಗಿ ನಗರ ಸಭೆಯವರು ಮತ್ತು ಪಂಚಾಯತ್‌ನವರು ಫಂಡ್ ಕೊಡುತ್ತೇವೆ ಎಂದು ಹೇಳಿದ್ದಾರೆ. ದಯವಿಟ್ಟು ಪೈಪ್‌ಲೈನ್ ಹಾಕಲು ಪ್ರಾರಂಭ ಮಾಡಿದರೆ, ಒಳ್ಳೆಯದು. 2027ರ ನಂತರ ಕೆಲಸ ಪ್ರಾರಂಭ ಮಾಡುವುದಕ್ಕಿಂತ ಪೈಪ್‌ಲೈನ್ ಹಾಕುವಂಥ ಕೆಲಸವನ್ನಾದರೂ ಮಾಡಲಿ. ನೀರು ಬಂದ ಮೇಲೆ ಬೇಕಾದರೆ ನೀರು ಕೊಡುವಂಥ ಕೆಲಸ ಮಾಡಲಿ. ಕೊನೆಪಕ್ಷ ಪೈಪ್‌ಲೈನ್ ಅಳವಡಿಸುವಂಥ ಕೆಲಸವಾದರೂ ಪ್ರಾರಂಭ ಮಾಡಲಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಈಗಾಗಲೇ ಹೇಳಿದ ಹಾಗೆ ಮುನಿಸಿಪಾಲಿಟಿರವರಿಗೆ ಕೆರೆಗಳ ಅಭಿವೃದ್ಧಿ ಮಾಡಲು ಪತ್ರ ಬರೆದುಕೊಟ್ಟಿದ್ದಾರೆ. ನಾವು ಪೈಪ್‌ಲೈನ್ ಮಾಡಿ, ಸ್ವಲ್ಪ ಎಸ್.ಟಿ.ಪಿ. ಸ್ವಲ್ಪ improve ಆದರೂ ಕೆರೆಗಳಿಗೆ ನೀರನ್ನು ತುಂಬಿಸುವಂಥ ಕೆಲಸ ಮಾಡುತ್ತೇವೆ. ಪರಿಶೀಲನೆ ಮಾಡಿ, ಆದಷ್ಟು ಬೇಗ ಆ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುತ್ತೇವೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಯಮ 72 ರಡಿ ಮಾನ್ಯ ಸದಸ್ಯರು ಗಮನ ಸೆಳೆಯಬೇಕು, ನಂತರ ಸಂಬಂಧಪಟ್ಟ ಸಚಿವರು ಉತ್ತರ ನೀಡುತ್ತಾರೆ. ಅದನ್ನು ಬಿಟ್ಟು ಚರ್ಚೆ ಮಾಡಲು ಅವಕಾಶ ಇರುವುದಿಲ್ಲ. ಕೆಳಮನೆಯಲ್ಲಿ ನೋಡಿ, ಏನೂ ಮಾತನಾಡುವಂತಿಲ್ಲ. ನಾನು ಎಲ್ಲರಿಗೂ ಸಮಾಧಾನಕರ ಉತ್ತರ ಸಿಗಲಿ ಎಂದು ಮಾತನಾಡಲು ಅವಕಾಶ ನೀಡುತ್ತೇನೆ. ಆದರೆ, ಮಾನ್ಯ ಸದಸ್ಯರು ಕಾನೂನು ಪ್ರಕಾರ ಮಾತನಾಡಿದರೆ, ನಾನು ಕಾನೂನು ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. ಅದನ್ನು ಮೊದಲು ತಿಳಿದುಕೊಳ್ಳಬೇಕು. ಸಾಧ್ಯವಾದಷ್ಟು ಎಲ್ಲಾ ಸದಸ್ಯರಿಗೂ ಮಾತನಾಡಲು ಅವಕಾಶ ನೀಡಿರುತ್ತೇನೆ. ನಿಯಮ ಏನಿದೆ ಎಂಬುದನ್ನು ಸ್ವಲ್ಪ ನೋಡಬೇಕಲ್ಲವೇ?

**ಇ)ವಿಷಯ:- ಮಣ್ಣಿನ ಆರೋಗ್ಯ ಕಾರ್ಡ್ ಯೋಜನೆಯನ್ನು ಪರಿಣಾಮಕಾರಿಯಾಗಿ ಕಡ್ಡಾಯಗೊಳಸುವ ಮೂಲಕ ಮಣ್ಣಿನ ಆರೋಗ್ಯ ತಿಳಯದೇ ಅವೈಜ್ಞಾನಿಕವಾಗಿ ಮತ್ತು ಯಥೇಚ್ಛವಾಗಿ ರಾಸಾಯನಿಕ ರಸಗೊಬ್ಬರ ಬಳಕೆಯಿಂದ ನೀರಿನ ಮೂಲಗಳು-ನದಿಗಳು ಕಲುಷಿತಗೊಂಡು ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗಳಗೆ ಕಾರಣವಾಗುತ್ತಿರುವುದನ್ನು ತಡೆಗಟ್ಟುವ ಬಗ್ಗೆ.**

*****

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಣ್ಣಿನ ಆರೋಗ್ಯ ಕಾರ್ಡ್ ಯೋಜನೆಯನ್ನು ಪರಿಣಾಮಕಾರಿಯಾಗಿ ಕಡ್ಡಾಯಗೊಳಸುವ ಮೂಲಕ ಮಣ್ಣಿನ ಆರೋಗ್ಯ ತಿಳಯದೇ ಅವೈಜ್ಞಾನಿಕವಾಗಿ ಮತ್ತು ಯಥೇಚ್ಛವಾಗಿ ರಾಸಾಯನಿಕ ರಸಗೊಬ್ಬರ ಬಳಕೆಯಿಂದ ನೀರಿನ ಮೂಲಗಳು-ನದಿಗಳು ಕಲುಷಿತಗೊಂಡು ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗಳಗೆ ಕಾರಣವಾಗುತ್ತಿರುವುದನ್ನು ತಡೆಗಟ್ಟುವ ಕುರಿತು ಮಾನ್ಯ ಕೃಷಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಲಾಗಿದೆ)**

(307) 11.03.2026/1.10/ ಎಸ್‌ಕೆ.ಎಕೆ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಒಂದೊಂದೇ ಒಂದು clarification ಹೇಳಿ.

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಎಲ್ಲವನ್ನು ಓದಿ ಹೇಳಿದ್ದಾರೆ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಇದು ಬಹಳ ಮುಖ್ಯವಾದ ಅಂಶವಾಗಿದೆ.

**ಸಭಾಪತಿಯವರು:-** ಮಾನ್ಯ ಧನಂಜಯ ಸರ್ಜಿಯವರೇ, ಇಲ್ಲಿ ಎಲ್ಲ ವಿಷಯಗಳು ಮುಖ್ಯ ಇರುತ್ತದೆ. ನಿಮ್ಮದೇ ಒಬ್ಬರದೇ ಮುಖ್ಯವಲ್ಲ. ಎಲ್ಲಾ ಸದಸ್ಯರ ಕೇಳಿರುವ ವಿಷಯಗಳು ಮುಖ್ಯವಾಗಿರುತ್ತದೆ. ನಿಯಮಗಳ ಪ್ರಕಾರ ಹೇಳಿದ್ದಕ್ಕೆ ಒಂದು clarification ಕೇಳಿ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಏನು excess manure ಮತ್ತು ಕೀಟನಾಶಕವನ್ನು ಬಳಕೆ ಮಾಡುತ್ತಾರೆ. ಅದರಿಂದ ಕ್ಯಾನ್ಸರ್ ತುಂಬಾ ಜಾಸ್ತಿಯಾಗುತ್ತಿದೆ. ನಮ್ಮ ದೇಶದಲ್ಲಿ ನಾಲ್ಕನೇ ಸಾವಿಗೆ ಕಾರಣವೆಂದರೆ, ಅದು ಕ್ಯಾನ್ಸರ್. ಅದರ ಜೊತೆಗೆ ನರ ರೋಗ Alzheimer's, endocrine changes, ಒಟ್ಟಿನಲ್ಲಿ ಇಡೀ ದೇಹಕ್ಕೆ ತೊಂದರೆ ಕೊಡುವಂತಹ chemicals, pesticides ಹಾಗೂ ಗೊಬ್ಬರದಿಂದ release ಆಗುತ್ತಿದೆ. ಇದನ್ನು ಬಹಳಷ್ಟು ಬಳಕೆ ಮಾಡುತ್ತಿದ್ದಾರೆ. ಇಡೀ ಭಾರತ ದೇಶದಲ್ಲಿ 2024ರಲ್ಲಿ 15.6 ಲಕ್ಷ ಜನರಿಗೆ ಹೊಸ ಕ್ಯಾನ್ಸರ್ ಕಾಯಿಲೆಗಳು. ಅದರಲ್ಲಿ 8.7 ಲಕ್ಷ ಜನರು ಸಾವಿಗೀಡಾಗಿದ್ದಾರೆ. ಕರ್ನಾಟಕ ರಾಜ್ಯವನ್ನು ತೆಗೆದುಕೊಳ್ಳುವುದಾದರೆ ಈಗ ಒಟ್ಟು 2,30,000 ಕ್ಯಾನ್ಸರ್ ರೋಗಿಗಳಿದ್ದರೆ, ಅದರಲ್ಲಿ 25,000 ಜನರು ಸಾಯುತ್ತಿದ್ದಾರೆ. ಪ್ರತಿ ವರ್ಷ 87,000 ಜನ ಕ್ಯಾನ್ಸರ್ ರೋಗಿಗಳು ಹೊರಗೆ ಬರುತ್ತಿದ್ದಾರೆ. ಈ ಅಂಶಗಳನ್ನು ಉಪಯೋಗಿಸುವುದರಲ್ಲಿ ಕೀಟನಾಶಕವನ್ನು ಎಷ್ಟರ ಮಟ್ಟಿಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಳಕೆಯಾಗುತ್ತಿದೆ ಎಂದರೆ, ಈಗ ದೇಶದ average ತೆಗೆದುಕೊಂಡರೆ, 0.6 kg per hectare ಇಡೀ ದೇಶದ್ದು ಇದ್ದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದರಿಂದ ಒಂದೂವರೆ ಕೆ.ಜಿ. ಪ್ರತಿ ಹೆಕ್ಟೇರ್‌ಗಳಷ್ಟು ಉಪಯೋಗವಾಗುತ್ತಿದೆ. 30 ಲಕ್ಷ ಮೆಟ್ರಿಕ್ ಟನ್‌ಗಳಷ್ಟು 2021-22 ರಲ್ಲಿ ಬಳಕೆಯಾದರೆ, 32 ಮೆಟ್ರಿಕ್ ಟನ್‌ಗಳಷ್ಟು 2023-24ರಲ್ಲಿ ಬಳಕೆಯಾಗುತ್ತಿದೆ. ಕ್ಯಾನ್ಸರ್‌ಗೆ ಬರುವ ಅಂಶಗಳು nitrate ಹೋಗಿ production ಆಗಿ ಬರುವುದರಿಂದ, ಇದೆಲ್ಲವೂ ನೀರಿಗೆ

ಸೇರುತ್ತದೆ. ನೀರಿಗೆ ಸೇರುವುದರಿಂದ water hyacinth ಎಂದು ಹೇಳ, plant develop ಆಗುತ್ತದೆ. ಅದು ನೀರಿನಲ್ಲಿ ಕವರ್ ಮಾಡುವುದರಿಂದ, ಅಲ್ಲಿನ ನೀರಿಗೆ ಬೆಳೆಯುವಂತಹ bacteria ಗಳು ಇರಬಹುದು. ಅದರ ಜೊತೆಗೆ ಮೀನುಗಳು ಇರಬಹುದು. ಒಟ್ಟಾರೆಯಾಗಿ ಇದರಿಂದ ಬರುವಂತಹ ಎಲ್ಲಾ ರೀತಿಯ ಜೀವಕಳೆಗಳು ನಾಶವಾಗುತ್ತದೆ. Oxygen ಅಂಶ ಕಡಿಮೆಯಾಗುತ್ತಿದೆ. ಮೊನ್ನೆ ಶಿವಮೊಗ್ಗದಲ್ಲಿ ತುಂಗಾ ಮತ್ತು ಭದ್ರಾ ನದಿಯ ನೀರನ್ನು ಸುಮಾರು 15 ಲಕ್ಷ ಹೆಕ್ಟೇರ್‌ಗಳಿಗೆ ಸರಬರಾಜು ಮಾಡಿದ್ದಾರೆ. ಆ ನೀರನ್ನು ಟೆಸ್ಟ್ ಮಾಡಿದಾಗ aluminum ಜಾಸ್ತಿ ಇದೆ. ಅದರಲ್ಲಿ aluminum ಏತಕ್ಕೆ ಜಾಸ್ತಿಯಾಗಿದೆ ಎಂದರೆ, ಇದರಲ್ಲಿ pesticides ಇರುವಂತಹ chloride, aluminum displace ಮಾಡಿ aluminum ಜಾಸ್ತಿಯಾಗುತ್ತಿದೆ. ಇದರಿಂದ ತುಂಗಾ ಮತ್ತು ಭದ್ರಾ ನದಿಯ ನೀರನ್ನು ಕುಡಿಯುವಂತಹವರೆಲ್ಲರಿಗೂ aluminum ಜಾಸ್ತಿಯಾಗುವುದರಿಂದ brain, ಮೂಳೆ, ಕಿಡ್ನಿ, ಲಿವರ್ affect ಆಗುತ್ತಿದೆ. ಹಾಗಾಗಿ ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, ಒಟ್ಟು Soil Testing Labs ಎಷ್ಟಿದೆ ಎಂದು ನೋಡಿದಾಗ ನಮ್ಮ ಕರ್ನಾಟಕ ರಾಜ್ಯದಲ್ಲಿ 1.1 ಕೋಟಿ ಹೆಕ್ಟೇರ್ ಜಾಗವಿದ್ದರೆ, soil testing ಆಗುತ್ತಿರುವುದು ಬರೀ ಐದು ಲಕ್ಷ samples per year. ಅದೇ ತರಹ pesticides testing ಗೆ only ಆರು ಲ್ಯಾಬ್ ಇದೆ. ಅದರಲ್ಲಿ ಕೇವಲ 6,000 ಸ್ಯಾಂಪಲ್‌ಗಳು ಮಾತ್ರ ಟೆಸ್ಟ್ ಆಗುತ್ತಿದೆ. ಇದರಿಂದ ತುಂಬಾ ಅನ್ಯಾಯವಾಗುತ್ತಿದೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ಕಳೆದ ಮೂರು ವರ್ಷಗಳಲ್ಲಿ ಗ್ಯಾರಂಟಿಗಳ ಜಾಹೀರಾತಿಗಾಗಿ ಕಾಂಗ್ರೆಸ್ ಸರಕಾರದಿಂದ ಒಟ್ಟು 520 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದೀರಾ. ದಯವಿಟ್ಟು, ಇದರ ಬಗ್ಗೆ ಜಾಹೀರಾತು ಹೊರಡಿಸಿ, ಜನರಿಗೆ ತಿಳಿಸಬೇಕು. ನಮ್ಮ ತಲೆ ಮೇಲೆ ನಾವೇ ಚಪ್ಪಡಿ ಕಲ್ಲು ಎಳೆದುಕೊಳ್ಳುವಂತಹ ದುಸ್ಥಿತಿ ಬಂದಿದೆ. ದಯವಿಟ್ಟು, ಇದರ ಬಗ್ಗೆ ಗಮನಹರಿಸಬೇಕು. ಇದರ ಬಗ್ಗೆ ಜನರಿಗೆ ಮಾಹಿತಿಯನ್ನು ತಲುಪಿಸುವಂತಹ ಕೆಲಸವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಶ್ರೀ ಎನ್. ಚಲುವರಾಯ ಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಕಳೆದ ಮೂರು ವರ್ಷಗಳಲ್ಲಿ ಇದರ ಬಗ್ಗೆ ಬಹಳಷ್ಟು soil test ಮತ್ತು chemical ಅನ್ನು ಕಡಿಮೆ ಮಾಡಬೇಕು ಎನ್ನುವುದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಕಳೆದ ಬಾರಿ ತಮಗೆಲ್ಲರಿಗೂ ಗೊತ್ತಿರುವಂತೆ ಸ್ವಲ್ಪ urea ಕಡಿಮೆಯಾದಾಗ, ಅದಕ್ಕೆ ತಾವೇನೇ ದೊಡ್ಡ ಗಲಾಟೆ ಮಾಡಿದ್ದೀರಿ. ರೈತರು ಸಣ್ಣ ಗಲಾಟೆ ಮಾಡುತ್ತಿದ್ದರು. ತಾವು ಅವರ ಜೊತೆ ಸೇರಿಕೊಂಡು ಜಾಸ್ತಿ ಗಲಾಟೆ ಮಾಡಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ.

ಇದಕ್ಕೆ ನಾವು ಸಾಕಷ್ಟು convince ಮಾಡಿ, ಕೆಳಮನೆ ಮತ್ತು ಮೇಲ್ಮನೆಯಲ್ಲಿ ಉತ್ತರ ಕೊಟ್ಟಿದ್ದೇನೆ. Manage ಮಾಡಿಕೊಂಡು ಕಡಿಮೆ ಮಾಡುವಂತಹ ಪ್ರಯತ್ನದಲ್ಲಿ ರಾಜಕಾರಣವನ್ನು ನಾವಾಗಲೀ ಅಥವಾ ನೀವಾಗಲೀ ಮಾಡದೇ ರೈತರಿಗೆ proper ಆಗಿ advice ಮಾಡಿಕೊಂಡು ಹೋದರೆ, ಮುಂದಿನ ದಿನಗಳಲ್ಲಿ ಆಗುತ್ತದೆ. ಇವತ್ತು 52 ಲ್ಯಾಬ್‌ಗಳಲ್ಲಿ 41 ಲ್ಯಾಬ್‌ಗಳು N.A.B.L. (National Accreditation Board for Testing and Calibration Laboratories) ನಿಂದ accreditation ಆಗಿರುವಂತಹದ್ದು. ಇಡೀ ರಾಷ್ಟ್ರದಲ್ಲಿ ನಮ್ಮ ರಾಜ್ಯದಲ್ಲಿ ಮಾತ್ರ ಕೃಷಿ ಇಲಾಖೆಯಲ್ಲಿ ಆಗಿರುವಂತಹದ್ದು. ಬೇರೆ ಎಲ್ಲಿಯೂ ಇಷ್ಟೊಂದು ಆಗಿಲ್ಲ. ಬಹುಶಃ ಟೆಸ್ಟ್ 5 ಲಕ್ಷ ಕೊಟ್ಟಿದ್ದರೂ unlimited ಆಗಿ ಟೆಸ್ಟ್ ಮಾಡುವುದಕ್ಕೆ ನಾವು ಎಲ್ಲ ತರಹದ ಕೃಷಿ ಇಲಾಖೆಗೆ ಮತ್ತು ವಿಶ್ವವಿದ್ಯಾಲಯಕ್ಕೆ ಹೇಳಿದ್ದೇವೆ. ರಸಗೊಬ್ಬರವನ್ನು chemical ಬಿಟ್ಟು, natural farming ಗೆ ಹೆಚ್ಚು ಒತ್ತು ಕೊಡುತ್ತಿದ್ದೇವೆ. ಈ ಬಾರಿ 1,75,000 ಎಕರೆ natural farming ಅನ್ನಾಗಿ ಮಾಡಬೇಕೆಂಬ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಈ ಬಾರಿ ಬಜೆಟ್‌ನಲ್ಲಿ "ಹೊಸದಾಮೃತ" ಕಾರ್ಯಕ್ರಮಗಳನ್ನು ಘೋಷಣೆ ಮಾಡಿ, ಆ ಒಂದು ನಿಟ್ಟಿನಲ್ಲಿ ಹಸಿರು ಗೊಬ್ಬರ ಹೆಚ್ಚು ಕೊಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ನಾವು ಈ ಬಾರಿ ಜೋಯಿಡಾ ತಾಲ್ಲೂಕನ್ನು ಹೆಚ್ಚು ಸಾವಯವ ಕ್ಷೇತ್ರ ಎಂದು ಘೋಷಣೆ ಮಾಡಿದ್ದೇವೆ. ಕಳೆದ ಬಾರಿ ಅದು ಯಶಸ್ವಿಯಾಗಿದೆ. ಈ ಬಾರಿ ಮಂಡ್ಯ ಜಿಲ್ಲೆಯಲ್ಲಿ ಪಾಂಡವಪುರ ತಾಲ್ಲೂಕನ್ನು ಘೋಷಣೆ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಜನರನ್ನು ಪೂರ್ಣ ಪ್ರಮಾಣದಲ್ಲಿ chemical ಹೋಗಿರುವವರನ್ನು ಇಳುವರಿಗೋಸ್ಕರ, ಅದಕ್ಕಿಂತ natural ಆಗಿ ಇಳುವರಿ ಮಾಡಬಹುದು. ಮಣ್ಣಿನ ಆರೋಗ್ಯ ಮತ್ತು ಜನರ ಆರೋಗ್ಯಗೋಸ್ಕರವಾಗಿ chemical ನಿಂದ ಹೊರಗೆ ಬರಬೇಕು ಎನ್ನುವ ಬಗ್ಗೆ ಸ್ವಲ್ಪ ಸಮಯವನ್ನು ತೆಗೆದುಕೊಳ್ಳುತ್ತದೆ. ಇದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಿಯಮ 330 ರಡಿಯಲ್ಲಿ ನಾಲ್ಕು ಜನ ಸದಸ್ಯರು ಕೇಳಿರುವಂತಹದ್ದಕ್ಕೆ ಈಗಾಗಲೇ ಉತ್ತರ ಬಂದಿದೆ. ಮಾನ್ಯ ಕೇಶವ ಪ್ರಸಾದ್, ಡಾ ತಳವಾರ್ ಸಾಬಣ್ಣ, ಶ್ರೀ ಸೂರಜ್ ರೇವಣ್ಣ ಮತ್ತು ಶ್ರೀಮತಿ ಹೇಮಲತಾ ನಾಯಕ್‌ರವರ ಉತ್ತರ ಬಂದಿದೆ. ಆದರೆ ಮಂತ್ರಿಗಳು ಇಲ್ಲ. ಇದರ ಬಗ್ಗೆ ಹೇಗೆ ಮಾಡಬೇಕು ಹೇಳಿ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೆಲ್ಲರೂ ಕೆಳಮನೆಯಲ್ಲಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಮಧ್ಯಾಹ್ನ ಉತ್ತರ ಕೊಡಿಸುತ್ತೀರಾ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಕಂದಾಯ ಸಚಿವರು ಇದುವರೆಗೂ ಸದನದಲ್ಲಿ ಇದ್ದರು. ಅವರು ಮಧ್ಯಾಹ್ನ ಬರುತ್ತಾರೆ.

**(ಮುಂದು)**

(308) 11.03.2026 1.20 ಟಿಸಿಹೆಚ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಅದು ಒಂದು. ಎರಡನೆಯದಾಗಿ ಮಾನ್ಯ ವಿರೋಧ ಪಕ್ಷದವರು ನಿನ್ನೆ ದಿವಸ Adjournment Motion ಕೊಟ್ಟಿದ್ದಾರೆ. ನಾನು ಅದನ್ನು ನಿಯಮ 330ಕ್ಕೆ convert ಮಾಡಿದ್ದೇನೆ. ನೀವು ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಅದಕ್ಕೆ ಉತ್ತರ ಕೊಡಿಸಬೇಕು. ಅವರು ಯಾವಾಗ ಬರುತ್ತಾರೆ, time fix ಮಾಡಿ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಹೇಳುತ್ತೇನೆ.

**ಸಭಾಪತಿಯವರು:-** ನೀವು ಮಾತನಾಡಿ ಹೇಳಿ. ಏಕೆಂದರೆ ಅವರು ಇದ್ದಾಗ ಇದು ಆಗಲಿ. ಏಕೆಂದರೆ Adjournment Motion ಕೊಟ್ಟಿದ್ದಾರೆ. Importance ಇದೆ. ಮುಖ್ಯಮಂತ್ರಿಯವರನ್ನು ಕೇಳಿಕೊಂಡು ಹೇಳಿ. ಆಮೇಲೆ ಮಾನ್ಯ ಸದಸ್ಯರುಗಳಿಗೆ ಮಧ್ಯಾಹ್ನಕ್ಕೆ ಒಟ್ಟು 7 ಜನ ಮಾನ್ಯ ಸಚಿವರುಗಳಿಂದ ಉತ್ತರ ಕೊಡಿಸಬೇಕು. ಅಂದರೆ ಮಾನ್ಯ ಕಂದಾಯ ಸಚಿವರು, ಕನ್ನಡ ಮತ್ತು ಸಂಸ್ಕೃತಿ ಸಚಿವರು, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಮತ್ತು ಹಜ್ ಸಚಿವರಿಂದ ಉತ್ತರ ಕೊಡಿಸಿ. ಅವರೆಲ್ಲರಿಗೂ ಹೇಳಿಬಿಡಿ. ಮಧ್ಯಾಹ್ನ ಎಷ್ಟು ಗಂಟೆಗೆ ಬರುತ್ತಾರೋ ಆಗ ನಾನು ತೆಗೆದುಕೊಳ್ಳುತ್ತೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು:-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನನ್ನದು ಕೂಡ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಶ್ರೀ ಎಸ್.ವ್ಹಿ.ಸಂಕನೂರ ರವರೇ, ನಿಮ್ಮದು ಉತ್ತರ ಬಂದಿಲ್ಲ, ಹೇಳಿದ್ದೇನೆ.

## 5. ವಿತೀಯ ಕಾರ್ಯಕಲಾಪ

## 2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯದ ಜನಪ್ರಿಯ ನಾಯಕರಾದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ ರವರು ಮಂಡಿಸಿದ 2026-27ನೇ ಸಾಲಿನ ಆಯವ್ಯಯವನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. 17ನೇ ಬಾರಿಗೆ ಕರ್ನಾಟಕ ರಾಜ್ಯದ ಅರ್ಥ ಸಚಿವರಾಗಿ 2026-27ನೇ ಸಾಲಿನ ಆಯವ್ಯಯವನ್ನು ಮಂಡಿಸಿದ ಮಾನ್ಯ ಮುಖ್ಯಮಂತ್ರಿಯಗಳಿಗೆ ನಾನು ಮತ್ತು ನಮ್ಮ ಪಕ್ಷದ ಎಲ್ಲಾ ಸದಸ್ಯರು ಮತ್ತು ಸದನವು ತುಂಬು ಹೃದಯದಿಂದ ಅಭಿನಂದಿಸುತ್ತದೆಂದು ಭಾವಿಸಿದ್ದೇನೆ.

ಪ್ರಗತಿಶೀಲ ರಾಜ್ಯದ ಜನರ ಹಣಕ್ಕೆ ಪ್ರಮುಖ Trustee ಯಾಗಿ ರಾಜ್ಯದ ಏಳಿಗೆಯನ್ನು ಬಯಸಿ ಕರ್ನಾಟಕದ 7 ಕೋಟಿ ಕನ್ನಡಿಗರನ್ನು ಅರಿತುಕೊಂಡು, ಕನ್ನಡಿಗರ ಕನಸುಗಳನ್ನು ನನಸು ಮಾಡುವ ನಿಟ್ಟಿನಲ್ಲಿ ಸರ್ವ ಪ್ರಯತ್ನ ಮಾಡಲಾಗಿದೆ ಎಂದು ನಾನು ಈ ಬಜೆಟ್ ಓದಿದ ನಂತರ ತಿಳಿದುಕೊಂಡಿದ್ದೇನೆ. ಈ ಆಯವ್ಯಯವು ನಾಡಿನ ರೈತರ, ದಮನಿತರ, ಕಾರ್ಮಿಕರ, ಮಹಿಳೆಯರ, ಅಶಕ್ತರ, ಅಲ್ಪಸಂಖ್ಯಾತರ, ಹಿಂದುಳಿದ ವರ್ಗದವರ, ವಿದ್ಯಾರ್ಥಿಗಳ, ಯುವ ಜನರ, ವ್ಯಾಪಾರಸ್ಥರ, ಕೈಗಾರಿಕೋದ್ಯಮಗಳ ಕನಸುಗಳನ್ನು ಮತ್ತು ಅವರ ಆತ್ಮವಿಶ್ವಾಸವನ್ನು ಪ್ರತಿನಿಧಿಸುವ ಜೀವಂತ ದಾಖಲೆಗಳನ್ನು ನಾಡಿನ ಜನತೆಗೆ ನೀಡಿರುವ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳು. ಈ ಬಜೆಟ್ ಕೇವಲ ಅಂಕಿ-ಅಂಶಗಳ ಸಂಗ್ರಹವಲ್ಲ.

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜ್ ರವರೇ, ನೀವು ಓದುವುದಕ್ಕಿಂದ ಭಾಷಣ ಮಾಡುವುದು ಚೆನ್ನಾಗಿರುತ್ತದೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಭಾಷಣ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜ್‌ರವರೇ, ನೀವು ಅದನ್ನು ಓದುವುದು ಬೇಡ. ನೀವು ಭಾಷಣ ಮಾಡಿದರೆ ಸ್ವಲ್ಪ interest ಇರುತ್ತದೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಕೆಲವು ಪೀಠಿಕೆಯನ್ನು ಮಾತ್ರ ಓದುತ್ತೇನೆ. ಆಮೇಲೆ ಭಾಷಣ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜ್ ರವರೇ, ನೀವು ಭಾಷಣ ಮಾಡಿದರೆ ಸ್ವಲ್ಪ ಏನಾದರೂ ಆಗುತ್ತದೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಕೆಲವು ಪೀಠಿಕೆಯನ್ನು ಮಾತ್ರ ಓದುತ್ತೇನೆ. ಇದು ಕರ್ನಾಟಕದ ಜನರ ಕನಸುಗಳಿಗೂ, ಬದುಕಿಗೂ ಸಂಬಂಧಿಸಿದ ದಿಕ್ಕು ತೋರಿಸುವ ಬಜೆಟ್ ಆಗಿದೆ ಎಂದು ನಾನು ಭಾವಿಸಿದ್ದೇನೆ. ಇಂದು ವಿರೋಧ ಪಕ್ಷದವರು ಸಾಲದ ಬಗ್ಗೆ ಮಾತನಾಡುತ್ತಾರೆ. ಆದರೆ ಒಂದು ವಿಷಯ ಸ್ಪಷ್ಟವಾಗಿ ಕೇಳಬೇಕೆಂದರೆ, ಯಾವುದೇ ಸರ್ಕಾರ ಅಭಿವೃದ್ಧಿಗಾಗಿ ತೆಗೆದುಕೊಳ್ಳುವ ಸಾಲವು ಭಾರವಲ್ಲ. ಅದು ಭವಿಷ್ಯಕ್ಕೆ ಮಾಡುವ ಹೂಡಿಕೆ ಎಂದು ನಾನು ಭಾವಿಸುತ್ತೇನೆ.

ಕರ್ನಾಟಕವು ಇಂದು ಕಾಂಗ್ರೆಸ್ ಪಕ್ಷದ ಆಡಳಿತದೊಂದಿಗೆ ದೇಶದ ಅತ್ಯಂತ ಬಲಿಷ್ಠ ಮತ್ತು ಆರ್ಥಿಕ ರಾಜ್ಯವಾಗಿ ಹೊರಹೊಮ್ಮಿದೆ. ಕರ್ನಾಟಕವು IT/BT/Start-up/Industries/Innovation/AI/ Agriculture ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿ, ದೇಶಕ್ಕೆ ಮಾದರಿಯಾಗಿರುವ ರಾಜ್ಯ ಯಾವುದಾದರೂ ಇದ್ದರೆ ಅದು ನಮ್ಮ ಹೆಮ್ಮೆಯ ಕರ್ನಾಟಕ ರಾಜ್ಯವೆಂದು ನಾನು ಭಾವಿಸಿದ್ದೇನೆ.

ಕಾಂಗ್ರೆಸ್ ನೇತೃತ್ವದ ಸರ್ಕಾರದ ದೃಷ್ಟಿಕೋನ ಬಹಳ ಸ್ಪಷ್ಟವಾಗಿದೆ. ಮಹಿಳಾ ಸಬಲೀಕರಣ, ರೈತರಿಗೆ ಬೆಂಬಲ, ಯುವಕರಿಗೆ ಉದ್ಯೋಗ, ಬಡವರ ಸಾಮಾಜಿಕ ಭದ್ರತೆಗಾಗಿ ಕಟಿಬದ್ಧವಾಗಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರವೆಂದರೆ; ಅದು ಸನ್ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಎಂದು ಹೇಳಬಯಸುತ್ತೇನೆ. ವಿಶೇಷವಾಗಿ ಹೇಳಬೇಕೆಂದರೆ, ಈ ಬಜೆಟ್ ಮೂಲಕ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಒಂದೇ ಸಮಯದಲ್ಲಿ ಸಾಧಿಸುವ ಪ್ರಯತ್ನವನ್ನು ಮಾಡಲಾಗಿದೆ. ಕೆಲವರು ಈ ಬಜೆಟ್ ಅನ್ನು ಟೀಕಿಸುತ್ತಾರೆ. ಆದರೆ ನಾನು ಕೇಳಲು ಬಯಸುವುದೇನೆಂದರೆ; ವಿರೋಧ ಪಕ್ಷಗಳಾದ ಅವರು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ವಿಶೇಷವಾಗಿ ಬಿ.ಜೆ.ಪಿ ಪಕ್ಷದವರಾದ ಅವರು ಆಡಳಿತ ನಡೆಸಿದ ಸಮಯದಲ್ಲಿ ರಾಜ್ಯದಲ್ಲಿ ಎಷ್ಟು ಸಾಲ ಮಾಡಿದ್ದರು ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ನಾನು ಮನವಿಯನ್ನು ಮಾಡುತ್ತೇನೆ. ಅವರು ಆಡಳಿತ ನಡೆಸಿದ ಸಯಮದಲ್ಲಿ ಎಷ್ಟು

ಯೋಜನೆಗಳು ಅರ್ಧದಲ್ಲೇ ನಿಂತುಹೋಗಿದ್ದವು ಎನ್ನುವುದನ್ನು ಸ್ವಲ್ಪ ಆತ್ಮಾವಲೋಕನ ಮಾಡಿಕೊಂಡರೆ ಒಳಿತು ಎಂದು ಹೇಳಬಯಸುತ್ತೇನೆ.

ಈ ನಮ್ಮ ಕನ್ನಡಿಗರ ಸರ್ಕಾರವು ಬಡವರಿಗೆ ಅನ್ನ ಕೊಡುತ್ತದೆ, ಮಹಿಳೆಯರಿಗೆ ಗೌರವ ಕೊಡುತ್ತದೆ, ಯುವಕರಿಗೆ ಅವಕಾಶಗಳನ್ನು ಕೊಡುತ್ತದೆ ಹಾಗೂ ಕನ್ನಡಿಗರು ಸ್ವಾಭಿಮಾನದಿಂದ ಬದುಕಲು ಯೋಜನೆಗಳನ್ನು ನೀಡಿದರೆ ಅದನ್ನು ವಿರೋಧಿಸುವುದು ಎಷ್ಟು ಸರಿ ಹಾಗೂ ಯಾವ ರೀತಿಯ ಸಂಕುಚಿತ ರಾಜಕಾರಣ ಎಂದು ನಾನು ವಿರೋಧ ಪಕ್ಷಗಳನ್ನು ಕೇಳಬಯಸುತ್ತೇನೆ. ಈ ಬಜೆಟ್ ಬಡವರ ಆಸೆ, ರೈತರ ವಿಶ್ವಾಸ, ಯುವಕರ ಭವಿಷ್ಯ ಮತ್ತು ಮಹಿಳೆಯರ ಸ್ವಾಭಿಮಾನ ಹಾಗೂ ಗೌರವ ಕಾಯುವ ಬಜೆಟ್ ಎಂದು ನಾನು ಬಣ್ಣಿಸಲು ಬಯಸುತ್ತೇನೆ. ಈ ಬಜೆಟ್ ಸಶಕ್ತ ಹಾಗೂ ಸುಸ್ಥಿರ ಅಭಿವೃದ್ಧಿ ಮಾದರಿಯನ್ನು ಹೊಂದಿದೆ. ಅವುಗಳನ್ನು 11–ಜಿ ಮಾದರಿಯಾಗಿ ಬಜೆಟ್‌ನಲ್ಲಿ ವ್ಯಾಖ್ಯಾನಿಸಲಾಗಿದೆ. ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಇವರಿಗೆ ಅರ್ಥವಾಗುತ್ತದೆ. ಸ್ವಲ್ಪ ಕೇಳಿಸಿಕೊಳ್ಳಬೇಕು.

**ಸಭಾಪತಿಯವರು:–** ಮಾನ್ಯ ಎಂ.ನಾಗರಾಜು ರವರೇ, ನೀವು ಯಾರನ್ನು ನೋಡಿಕೊಂಡು ಹೇಳುತ್ತಿದ್ದೀರಿ?

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಕೆಲವು ಮಾನ್ಯ ಸದಸ್ಯರು ಬಜೆಟ್ ಓದಿಕೊಂಡಿರುವುದಿಲ್ಲ. ಅದಕ್ಕೋಸ್ಕರ ನಾನು ಕೆಲವು ವಿಚಾರಗಳನ್ನು ಓದಿ ಹೇಳುತ್ತೇನೆ. ತದನಂತರ ವಿಚಾರಗಳನ್ನು ಮಂಡಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಎಂ.ನಾಗರಾಜು ರವರೇ, ಸನ್ಮಾನ್ಯ ಮುಖ್ಯಮಂತ್ರಿಯವರು ಎಲ್ಲಾ ಓದಿ ಹೇಳಿದ್ದಾರೆ. ಈಗ ನೀವು ಮಾತನಾಡಿ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಗ್ಯಾರಂಟಿ economic ಮತ್ತು ಲಿಂಗ ಸಮಾನತೆಯ ಹಾದಿಯತ್ತ ಕರ್ನಾಟಕ ಆಗಿದೆ.

**ಸಭಾಪತಿಯವರು:–** ಮಾನ್ಯ ಎಂ.ನಾಗರಾಜು ರವರೇ, ಪೇಪರ್‌ನಲ್ಲಿ ಇರುವುದನ್ನು ಓದುವುದು ಬಿಟ್ಟು ಮಾತನಾಡಿ. ಪೇಪರ್‌ನಲ್ಲಿ ಬರೆದುಕೊಂಡು ಓದುವುದು ಸರಿ ಕಾಣುವುದಿಲ್ಲ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಇನ್ನು ಒಂದೇ ಒಂದು ಲೈನ್ ಓದಿ ಆಮೇಲೆ ಮಾತನಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜು ರವರೇ, ಅದು ಸರಿ ಕಾಣುವುದಿಲ್ಲ. ನೀವು ಮಾತನಾಡಿದರೆ ಸರಿ ಕಾಣುತ್ತದೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಆಯಿತು. Yes!, ನಾನು ಮಾತನಾಡುವುದನ್ನು ಕೇಳುವುಕ್ಕೆ ಸ್ವಲ್ಪ ಸಾರ್ಮರ್ಥ್ಯ . . .

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಮಂಡನೆ ಮಾಡುವಾಗ ಅದನ್ನೆಲ್ಲಾ ಓದಿದ್ದಾರೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ತಮ್ಮ ಆದೇಶಕ್ಕೆ ಅನುಗುಣವಾಗಿ ಈ ಬಜೆಟ್ ಮೇಲೆ ನಾನು ವಿಚಾರಗಳನ್ನು ವಿಸ್ತಾರವಾಗಿ ಹೇಳುವುದಕ್ಕೆ ಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಈಗ ಮಂಡನೆಯಾಗಿರತಕ್ಕಂಥ 2026 -2027ನೇ ಸಾಲಿನ ಬಜೆಟ್ ಮೇಲೆ ವಿಚಾರಗಳನ್ನು ನೋಡಿದಾಗ ಒಟ್ಟು ರೂ. 4,48,004 ಕೋಟಿಗಳಷ್ಟು ದೊಡ್ಡ ಗಾತ್ರವಾಗಿರತಕ್ಕಂಥ, ಕರ್ನಾಟಕ ರಾಜ್ಯದಲ್ಲಿ ಇತಿಹಾಸ ನಿರ್ಮಾಣ ಮಾಡತಕ್ಕಂಥ ಒಂದು ಬಜೆಟ್ ಮಂಡನೆ ಮಾಡಿರತಕ್ಕಂಥ ಕರ್ನಾಟಕ ರಾಜ್ಯದ ಈ ಆಯವ್ಯಯವನ್ನು ನಾನು ಸ್ವಾಗತಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಈ ಬಜೆಟ್ ಕೊಟ್ಟ ಸಂದರ್ಭದಲ್ಲಿ ಒಟ್ಟಾರೆ ಅಭಿವೃದ್ಧಿಗೋಸ್ಕರ, ಪ್ರಾದೇಶಿಕ ಸಮತೋಲನವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಮತ್ತು ಕೊಟ್ಟ ಮಾತನ್ನು ಉಳಿಸಿಕೊಂಡು ನುಡಿದಂತೆ ನಡೆದಿರತಕ್ಕಂಥ ಯಾವುದಾದರೂ ಸರ್ಕಾರ ಇದ್ದರೆ ಅದು ಸನ್ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ. ಎಲ್ಲಾ ಆಶ್ವಾಸನೆಗಳನ್ನು ಈಡೇರಿಸಿ ಕೊಟ್ಟಿರತಕ್ಕಂಥ ಈ ಬಜೆಟ್ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದ ಅಭಿವೃದ್ಧಿಗೋಸ್ಕರ, ಸಮತೋಲನ ಅಭಿವೃದ್ಧಿಗೋಸ್ಕರ ಮತ್ತು ಸರ್ವರಿಗೂ ಸೇರಿರತಕ್ಕಂಥ ಎಲ್ಲಾ ವರ್ಗಗಳಿಗೂ ಸೇರಿರತಕ್ಕಂಥ ಬಜೆಟ್ ಕೊಟ್ಟಿದ್ದಾರೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವರು ನನ್ನ ಹತ್ತಿರ ಬೆರಳು ತೋರಿಸಿ ಮಾತನಾಡಿದರೆ; ನಾನು ಎದ್ದು ನಿಂತು ಮಾತನಾಡುತ್ತೇನೆ. ಅವರು ಸಭಾಪತಿಯವರಿಗೆ ಬೆರಳು ತೋರಿಸಿದರೆ ನಾನು ಸುಮ್ಮನೆ ಇರುತ್ತೇನೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದೇನೆ. ನಾನು ಈಗ ಬೆರಳು ತೋರಿಸಿರುವುದರ ದಿಕ್ಕು ಅವರಿಗೆ ಏಕೆ? ಅದು ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರಿಗೆ ಆಗಬಾರದೇ? ಏಕೆ ಅವರಿಗೆ ಮಾತ್ರ ಆಗುತ್ತದೆ? Why are you so conscious about it?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಹಾಗಾದರೆ ನಾನು ಕೂಡ ಮಾತನಾಡಬೇಕಾಗುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಏನೂ ಹೇಳಿಲ್ಲ. ಮಾನ್ಯ ನಾಗರಾಜುರವರೇ, ನೀವು ಬೆರಳು ತೋರಿಸಿ ಮಾತನಾಡಿದರೆ ನಾನು ನಿಮ್ಮ ಹತ್ತಿರ ಮಾತನಾಡುತ್ತೇನೆ. ಆಗ ನಿಮ್ಮ ವಿಷಯ break ಆಗುತ್ತದೆ. ಅದಕ್ಕೋಸ್ಕರ ಪೀಠವನ್ನು ನೋಡಿಕೊಂಡು ಮಾತನಾಡಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸೋದರಿ ಭಾರತಿಶೆಟ್ಟಿಯವರೇ, ಈ ರೀತಿ ಕೈ ತೋರಿಸಿದ ತಕ್ಷಣ ನಿಮಗೆ ಎಂದುಕೊಳ್ಳಬಾರದು. ಅಲ್ಲಿ ಪತ್ರಕರ್ತರು ಇದ್ದಾರೆ, Reporters ಇದ್ದಾರೆ. ಇಲ್ಲಿ ಬೇರೆಯವರು ಕೂಡ ಇದ್ದಾರೆ. ಹಾಗಾಗಿ ನಾನು ಎಲ್ಲರಿಗೂ ಹೇಳತಕ್ಕಂಥದ್ದು.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ನಾಗರಾಜುರವರೇ, ನೀವು ಅವರಿಗೆ ಬೆರಳು ತೋರಿಸಿ ಮಾತನಾಡಿ..

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿ Madam ಎಂದು ಹೇಳಿದಾಗ ಮಾತ್ರ ಅವರು respond ಮಾಡಬಹುದು. ನಾನು ಯಾವುದೇ ಕಾರಣಕ್ಕೂ ನಮ್ಮ ಅಕ್ಕನವರ ಹೆಸರನ್ನು ಹೇಳುವುದೇ ಇಲ್ಲ. ಏಕೆಂದರೆ ನನ್ನ ಸಮಯವನ್ನು ನಾನು ವ್ಯರ್ಥ ಮಾಡಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಹಾಗಾಗಿ, ಇಷ್ಟು ದೊಡ್ಡ ಗಾತ್ರದ ಬಜೆಟ್ ಕೊಟ್ಟಿರುವುದನ್ನು ನೋಡಿದಾಗ ಅದು ಬಹಳ ವಿಚಾರಗಳಿಂದ ಕೂಡಿರತಕ್ಕಂಥ ಒಂದು ಬಜೆಟ್. ಎಲ್ಲಾ ಇಲಾಖೆಗಳಿಗೂ ಕೂಡ ಸಾಮಾಜಿಕ ನ್ಯಾಯದ ಪರಿಕಲ್ಪನೆಯೊಂದಿಗೆ ಕೊಟ್ಟಿರತಕ್ಕಂಥ ಈ ಬಜೆಟ್ ಅನ್ನು ನಾವೆಲ್ಲರೂ ಕೂಡ ಸದನವು ಸ್ವಾಗತ ಮಾಡಬೇಕು ಎನ್ನತಕ್ಕಂಥ ಮನವಿಯನ್ನು ಕೂಡ ಮಾಡುತ್ತಿದ್ದೇನೆ. ನೀವು ಯೋಚನೆ ಮಾಡಿ.

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜುರವರೇ, ಇವತ್ತಿನ ದಿವಸ Reporters ಎಲ್ಲಾ ಬಹಳ ಖುಷಿಯಾಗಿದ್ದಾರೆ. ಸಾವಕಾಶದಿಂದ ಮಾತನಾಡುತ್ತಿದ್ದೀರಿ. ಅವರೆಲ್ಲರೂ ಬರೆದುಕೊಳ್ಳುತ್ತಿದ್ದಾರೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ತಾವು ನನಗೆ advise ಮಾಡಿದ್ದೀರಿ ಅಲ್ಲವೇ Sir? ಅದು ಏನಾಗುತ್ತದೆಂದರೆ tankನಲ್ಲಿ ಜಾಸ್ತಿ ನೀರು ಇದ್ದರೆ, ನಲ್ಲಿ open ಮಾಡಿದಾಗ ಜಾಸ್ತಿ ನೀರು ಬಂದುಬಿಡುತ್ತದೆ. ಆ ರೀತಿ ಆಗಿಬಿಟ್ಟಿದೆ ಕಥೆ. ಅದು ಇರಲಿ. ಹಾಗಾಗಿ ನಾನು ಹೇಳುತ್ತಿರತಕ್ಕಂಥದ್ದು ಏನೆಂದರೆ ಈ ವರ್ಷ ನಾವು ಮಂಡನೆ ಮಾಡಿರುವ ಬಜೆಟ್ ಅನ್ನು ನೋಡಿದಾಗ ಅಷ್ಟು ದೊಡ್ಡ ಗಾತ್ರದ ಬಜೆಟ್ ಮಂಡನೆ ಮಾಡಿದ್ದರೂ ಕೂಡ ಕರ್ನಾಟಕ ರಾಜ್ಯವು ಇಡೀ ದೇಶದಲ್ಲೇ ಅತಿವೇಗವಾಗಿ ಬೆಳೆಯುತ್ತಿರತಕ್ಕಂಥ ಆರ್ಥಿಕತೆಯಲ್ಲಿ ಒಂದಾಗಿರತಕ್ಕಂಥ ರಾಜ್ಯ ಮತ್ತು ಬಲಿಷ್ಠ ರಾಜ್ಯ ಎಂದು ಹೇಳಿದರೆ ನಾವೆಲ್ಲರೂ ಕೂಡ ಹೆಮ್ಮೆ ಪಡಬೇಕಾಗುತ್ತದೆ. ಹಲವಾರು ರಾಜ್ಯಗಳು ತನ್ನದೇ ಆದಂತಹ ಸವಾಲುಗಳನ್ನು ಎದುರಿಸುತ್ತಿದ್ದರೂ ಕೂಡ ನಾವು ದೇಶದ ಬೊಕ್ಕಸಕ್ಕೆ ದುಡ್ಡು ಕೊಡತಕ್ಕಂಥ ಜಿ.ಎಸ್.ಟಿಯಲ್ಲಿ ಎರಡನೆಯ ಸ್ಥಾನದಲ್ಲಿರತಕ್ಕಂಥ, ಆರ್ಥಿಕವಾಗಿ ಬಲಿಷ್ಠವಾಗಿರತಕ್ಕಂಥ Innovation ಗೆ ಹೆಸರಾಗಿರತಕ್ಕಂಥ, I.T ಗೆ ಹೆಸರಾಗಿರತಕ್ಕಂಥ, ಸಿಲಿಕಾನ್ ಸಿಟಿ ಎಂದು ಹೆಸರು ಪಡೆದುಕೊಂಡಿರತಕ್ಕಂಥ, ಹುದ್ದೆಗಳನ್ನು ಸೃಷ್ಟಿ ಮಾಡತಕ್ಕಂಥ, ಸಾಮಾಜಿಕ ನ್ಯಾಯವನ್ನು ಪ್ರತಿಪಾದನೆ ಮಾಡತಕ್ಕಂಥ, ಬಸವಣ್ಣನವರ ತತ್ವದಲ್ಲಿ ನಂಬಿಕೆ ಇರತಕ್ಕಂಥ ಮತ್ತು ಡಾ.ಬಿ.ಆರ್.ಅಂಬೇಡ್ಕರ್‌ರವರ ಆಶಯದಲ್ಲಿ ನಂಬಿಕೆ ಇರತಕ್ಕಂಥ, ರಾಜ್ಯ ಯಾವುದಾದರೂ ಇದ್ದರೆ ಅದು ಇದೇ ಸನ್ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಇರತಕ್ಕಂಥ ಕರ್ನಾಟಕ ರಾಜ್ಯ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ ಅಲ್ಲವೇ ಮಾನ್ಯ ಸಭಾಪತಿಯವರೇ. ನಮಗೆ ಹೆಮ್ಮೆ ಅಲ್ಲವೇ ಮಾನ್ಯ ಸಭಾಪತಿಯವರೇ.

**ಸಭಾಪತಿಯವರು:-** ನಾನು ಏನೂ ಮಾತನಾಡುವುದಿಲ್ಲಪ್ಪಾ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಹೀಗಾದರೆ ಹೇಗೆ? ನಾನು ಶ್ರೀಮತಿ ಭಾರತಿ ಶೆಟ್ಟಿ ಅಕ್ಕ ಎಂದು ಹೇಳಿದ್ದರೆ ಮಾತನಾಡುತ್ತಿದ್ದರು. ಆದುದರಿಂದ ಒಟ್ಟಾರೆಯಾಗಿ ಹೇಳಬೇಕೆಂದರೆ, ನಾವು ಈ ಬಜೆಟ್‌ನಲ್ಲಿ ಇರತಕ್ಕಂಥ ವಿಚಾರಗಳನ್ನು ನೋಡಿದಾಗ ನಾವು ಪ್ರಮುಖವಾಗಿ ಕೊಟ್ಟಂತಹ 5 ಗ್ಯಾರಂಟಿ ಯೋಜನೆಗಳ ವಿಚಾರಗಳು. ನನಗೆ ನೀರಿನ ಅವಶ್ಯಕತೆ ಇರುವುದಿಲ್ಲ. ನನಗೆ ಮೈಕ್ ಮಾತ್ರ 'Off ಆಗದಿದ್ದರೆ ಸಾಕು.

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜು ರವರಿಗೆ ಮೈಕ್ ಕೂಡ ಬಂದ್ ಮಾಡಬಹುದು.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಮೈಕ್ ಬಂದ್ ಮಾಡಿದ್ದಾರೆ. ಹಾಗಾಗಿ ನಾನು ಹೇಳಿದೆನು.

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜು ರವರೇ, ಯಾವಾಗಾದರೂ ನೀವು ನೀರು ಕುಡಿಯಿರಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, So, ಹೀಗಾಗಿ, ಈ ಒಂದು ಬಜೆಟ್‌ನ ವಿಚಾರ ಬಂದಾಗ ನಾವು ಕೊಟ್ಟಿರತಕ್ಕಂಥ ವಿಚಾರಧಾರೆಗಳನ್ನು ನೋಡಿದಾಗ, 2025-2026 ನೇ ಸಾಲಿನ ಬಜೆಟ್‌ನಲ್ಲಿ ರೂ.4,09,549 ಕೋಟಿಗಳನ್ನು ಮಂಡಿಸಲಾಗಿತ್ತು. ಆದರೆ ಇವತ್ತಿನ ದಿವಸ ಅದು ರೂ. 4,48,004 ಕೋಟಿಗಳಿಗೆ ಬೆಳೆಸಿರತಕ್ಕಂಥ ಸಂದರ್ಭದಲ್ಲಿ, ಯಾವುದೇ ಕಾರಣಕ್ಕೂ ಕೂಡ ಆ fiscal discipline ಎಂದು ನಾವು ಏನು ಹೇಳುತ್ತೇವೋ, ಅದನ್ನು ನಾವು ಕಾಪಾಡಿಕೊಂಡು ಬಂದಿರತಕ್ಕಂಥ ಕೀರ್ತಿ ಏನಾದರೂ ಇದ್ದರೆ ನಮ್ಮ ಆರ್ಥಿಕ ಸಚಿವರಾಗಿರತಕ್ಕಂಥ ಸನ್ಮಾನ್ಯ ಸಿದ್ದರಾಮಯ್ಯ ರವರಿಗೆ ಸೇರುತ್ತದೆ ಎಂದು ಹೇಳುತ್ತೇನೆ. ಶೇ.3ರಷ್ಟು ಇರತಕ್ಕಂಥ ಒಂದು fiscal discipline ಅನ್ನು ಅವರು ಕಾಪಾಡಿಕೊಂಡು ಬಂದಿರುವುದನ್ನು ನಾವು ಖಂಡಿತವಾಗಿಯು ಕೂಡ appreciate ಮಾಡಬೇಕಾಗುತ್ತದೆ ಎನ್ನುವ ವಿಚಾರವನ್ನು ಕೂಡ ಹೇಳುತ್ತಿದ್ದೇನೆ. But ಯಾವುದೇ ಕಾರಣಕ್ಕೂ ಸಾಲದ ವಿಚಾರಗಳು ಬಂದರೂ ಕೂಡ ಅದನ್ನು ಮರುಪಾವತಿ ಮಾಡುವುದಕ್ಕೋಸ್ಕರ, ಕಳೆದ ಬಾರಿ ಮರುಪಾವತಿ ಮಾಡುವುದಕ್ಕೋಸ್ಕರ ಸುಮಾರು ರೂ.35,316 ಕೋಟಿಗಳು ನಾವು plan ಮಾಡಿಕೊಂಡಿದ್ದೇವೆ.

**(ಮುಂದು)**

(309)11.3.2026/1.30/ಎಂ.ಎಂ-ಆರ್.ಎನ್. (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ. ನಾಗರಾಜು (ಮುಂದು):**

ವಿಶೇಷವಾಗಿ ಮೊದಲನೇ ಬಾರಿಗೆ ನಾವು capital expenditure ಅನ್ನು ರಸ್ತೆಗಳು, infrastructure, flyover ಅಥವಾ infrastructure develop ಮಾಡುವುದಕ್ಕೋಸ್ಕರ ಸಾಕಷ್ಟು ಹಣವನ್ನು ಮೀಸಲಿಟ್ಟಿರುವ ಯಾವುದಾದರೂ ಬಜೆಟ್ ಇದ್ದರೆ ಅದು 2026-27ರ ಬಜೆಟ್ ಎಂಬ ಮಾತನ್ನು ಹೇಳುತ್ತಿದ್ದೇನೆ. ಒಟ್ಟಾರೆ ಸುಮಾರು 90,000/- ಕೋಟಿ ರೂಪಾಯಿಗಳಷ್ಟು capital investment ಇಟ್ಟಿರುವುದನ್ನು ಸ್ವಾಗತ ಮಾಡಬೇಕಾಗುತ್ತದೆ. ಒಂದು ರೀತಿಯಲ್ಲಿ committed expenditure ಖರ್ಚು ಮಾಡಬೇಕೆನ್ನುವುದು obligatory expenditure ಗಳಾಗುತ್ತವೆ. ನಮ್ಮ ವರಮಾನ ಎಷ್ಟೇ ಇದ್ದರೂ ಕೂಡ ಪಿಂಚಣಿ, ವೇತನ ಇವೆಲ್ಲಾ ವಿಚಾರಗಳನ್ನು ಮಾಡಬೇಕಾದರೆ obligatory ಆಗುತ್ತದೆ. ಆದರೆ ನಾವು capital investment ಗೆ ಎಷ್ಟು ಹಣವನ್ನು ಇಡುತ್ತೇವೆ ಎನ್ನುವುದನ್ನು ನೋಡಿದಾಗ capital expenditure ಗೆ restrict ಮಾಡುತ್ತೇವೆಂದಾಗ ಅದು asset creation ಗೋಸ್ಕರ

ಮಾಡಿದಂತಹ ಕೆಲಸವಾಗುತ್ತದೆ. ಅದನ್ನು ನಮ್ಮ ಸಿದ್ಧರಾಮಯ್ಯ ಸಾಹೇಬರು ಕರ್ನಾಟಕ ರಾಜ್ಯದ ಆರ್ಥಿಕ ಸಚಿವರು ಮತ್ತು ಮುಖ್ಯಮಂತ್ರಿಗಳಾಗಿ ಉತ್ತಮವಾದ ಸಾಧನೆಯನ್ನು ಮಾಡಿದ್ದಾರೆ. ಸುಮಾರು ೯೦,೦೦೦/- ಕೋಟಿ ರೂಪಾಯಿಗಳಷ್ಟು capital expenditure ಮೀಸಲಿಟ್ಟಿರುವುದನ್ನು ನಾವೆಲ್ಲರೂ:

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, 71,೦೦೦/- ಕೋಟಿ ರೂಪಾಯಿಗಳು ಎಂದು ಬಜೆಟ್ ಬುಕ್‌ನಲ್ಲಿದೆ.. ಅವರು ೯೦,೦೦೦/- ಕೋಟಿ ರೂಪಾಯಿಗಳೆಂದು ಹೇಳುತ್ತಿದ್ದಾರೆ.

**ಶ್ರೀ ಎಂ. ನಾಗರಾಜು:-** ಮಾನ್ಯ ವಿರೋಧ ಪಕ್ಷದ ನಾಯಕರೇ, I will correct it now. ನಾನು ಹೇಳುವುದನ್ನು ಕೇಳಿಕೊಳ್ಳಿ. ಒಟ್ಟು ವೆಚ್ಚದಲ್ಲಿ 4,48,೦೦4 ಕೋಟಿ ರೂಪಾಯಿಗಳಿದ್ದರೆ ರಾಜಸ್ವ ವೆಚ್ಚ ರೂ. 3,38,೦೦7 ಕೋಟಿ ಆದರೆ ನಿವ್ವಳ ಬಂಡವಾಳ ವೆಚ್ಚ ರೂ. 74,682 ಕೋಟಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವರು ೯೦,೦೦೦/- ಕೋಟಿ ರೂಪಾಯಿಗಳೆಂದು ಹೇಳಿದರು. ತಪ್ಪು ಮಾಹಿತಿ ಕೊಡಬೇಡಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, 74,682 ಕೋಟಿ ರೂಪಾಯಿಗಳ ಜೊತೆಗೆ gross investment ತೋರಿಸಿದಾಗ ಅವರು annexure ಅನ್ನು ಓದಿಕೊಳ್ಳಬೇಕಾಗುತ್ತದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಇವರೇ ಹಣಕಾಸು ಸಚಿವರಾಗಬೇಕು.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, they have to read it along with the budget book. ಜೊತೆಗೆ annexure ಅನ್ನು ತೆಗೆದು ನೋಡಬೇಕಾಗುತ್ತದೆ. Annexure ನಲ್ಲಿ additional expenditure ಏನು ಕೊಟ್ಟಿರುತ್ತಾರೆ ಎಂಬುದನ್ನು ನೋಡಿದಾಗ ಇನ್ನೂ 1೦,೦೦೦ ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಟ್ಟಿರುವುದನ್ನು ನೀವು ನೋಡಬೇಕಾಗುತ್ತದೆ. ಬೇಕಾದರೆ annexure book ಅನ್ನು ನಿಮಗೆ ತಂದು ಕೊಡುವುದಕ್ಕೆ ತಯಾರಿದ್ದೇನೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಹಾಗಾಗಿ ಒಟ್ಟಾರೆ ಮೂಲತಃ ರೂ. 84 ಲಕ್ಷ ಕೋಟಿ ಬಂಡವಾಳ ವೆಚ್ಚವನ್ನು ಕೊಟ್ಟಿದ್ದಾರೆ ಅದರ ನಂತರ ಹೆಚ್ಚುವರಿಯಾಗಿ ಖರ್ಚು ಮಾಡುವುದಕ್ಕೆ ತಯಾರಿದ್ದಾರೆ ಎಂದು ಹೇಳುವುದಕ್ಕೋಸ್ಕರ ೯೦,೦೦೦/- ಕೋಟಿ ರೂಪಾಯಿಗಳನ್ನು ಕೊಟ್ಟಿರುವುದಕ್ಕೆ ದಾಖಲೆಗಳನ್ನು ಕೊಡುವುದಕ್ಕೆ ತಯಾರಿದ್ದೇನೆ ಎಂಬ ಮಾತನ್ನು ಹೇಳುತ್ತಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪುವುದಿಲ್ಲ. ಏಕೆಂದರೆ ಬಜೆಟ್ ಬುಕ್‌ನಲ್ಲಿ ಅವರು ಕೊಟ್ಟಿದ್ದಾರೆ. ಇವರೇತಕ್ಕೆ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡುತ್ತಿದ್ದಾರೆ?

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಇವರು ಬರೆದುಕೊಳ್ಳಲಿ. ನಾನು ಹೇಳುತ್ತಿದ್ದೇನೆ, ದಾಖಲೆ ಕೊಡದಿದ್ದರೆ ಆ ಮಾತನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಏನನ್ನು ಬರೆದುಕೊಳ್ಳುವುದು?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ದಾಖಲೆಗೆ ತಪ್ಪು ಅಂಕಿಗಳು ಹೋಗಬಾರದು ಎಂದು ಹೇಳುತ್ತಿದ್ದಾರೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಅವರ ಸಲಹೆಯನ್ನು ಕೇಳುತ್ತಿದ್ದೇನೆ. ಅಂಕಿ-ಅಂಶಗಳನ್ನು ಅವರ ಮುಂದೆಯೇ ಓದುವುದಕ್ಕೆ ತಯಾರಿದ್ದೇನೆ. ನನ್ನ ಹತ್ತಿರ ಲಿಸ್ಟ್ ಇದೆ. ಮೊದಲು ಅವರು ರೂ. 71,000/- ಎಂದು ತಪ್ಪಾಗಿ ಹೇಳಿದರು. ನಾನು ಬಂಡವಾಳ ವೆಚ್ಚ ರೂ. 74,682 ಕೋಟಿ ಇದೆಯೆಂದು ಹೇಳುತ್ತಿದ್ದೇನೆ. ಅದನ್ನು ಇಲ್ಲ ಎಂದು ಹೇಳಲಿ ನೋಡೋಣ. Infrastructure gross expenditure ಎಂದು ರೂ. 84,000/- ಕೋಟಿ ಇದೆ ಅದನ್ನು ಇಲ್ಲ ಎಂದು ಹೇಳಲಿ ನಾನು ಅವರಿಗೆ ಸವಾಲು ಹಾಕುತ್ತೇನೆ. Let us debate on that. ನೀವು ಬರೆದುಕೊಳ್ಳಿ. ಆ ಪ್ರಶ್ನೆಗೆ ನಾನು ಉತ್ತರ ಕೊಡಲಿಲ್ಲ ಎಂದರೆ ಕೇಳಿ. It is there with me.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ capital investment ಗೆ ಇಟ್ಟಿರುವುದು ರೂ. 74,000 ಕೋಟಿ. ಅದನ್ನು ಒಪ್ಪುತ್ತೇನೆ. ನೀವು 90,000/- ಕೋಟಿ ರೂಪಾಯಿಗಳೆಂದು ಏತಕ್ಕೆ wrong figure ಕೊಡುತ್ತೀರಿ? ಮಾನ್ಯ ಮುಖ್ಯಮಂತ್ರಿಗಳು ಅದನ್ನು ಓದಿಲ್ಲ. ನಿಮ್ಮ ಪುಸ್ತಕದಲ್ಲಿದೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನೀವು ಯೀಲ್ಡ್ ಆಗುವುದಲ್ಲ, ತಪ್ಪು ಮಾಹಿತಿ ಕೊಟ್ಟಾಗ correction ಮಾಡುವುದು ನನ್ನ ಧರ್ಮ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಡಬೇಕಲ್ಲವೇ?

**Sri CHALAVADI T.NARAYANASWAMY:** You can't say that. ಸದನಕ್ಕೆ ತಪ್ಪು ಮಾಹಿತಿ ಕೊಡಬೇಡಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನಿವ್ವಳ ಬಂಡವಾಳ ವೆಚ್ಚ ರೂ. 74,682/- ಕೋಟಿ, ಒಟ್ಟು ಬಂಡವಾಳ ವೆಚ್ಚ 84,567 ಕೋಟಿ ರೂಪಾಯಿಗಳು. ಇದನ್ನು ಇಲ್ಲ ಎಂದು ಹೇಳಲಿ ನೋಡೋಣ. ನಾನು ಓದುತ್ತಿದ್ದೇನೆ, ಸರ್ಕಾರ ಕೊಟ್ಟಿರುವುದು ನನ್ನ ಹತ್ತಿರ ಇದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಏನೂ ಮಾಡುವುದಕ್ಕಾಗುವುದಿಲ್ಲ quote ಮಾಡಿ.

**Sri M.NAGARAJU:** No. No. It is here.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಲ್ಲಿ ಬಜೆಟ್ ಪುಸ್ತಕ ಇದೆ. ಇದು ತೆರೆದ ಕನ್ನಡಿ ಇದ್ದ ಹಾಗೆ. ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಇದರಲ್ಲಿ ಪ್ರಕಟಣೆ ಮಾಡಿ ಓದಿದ್ದಾರೆ. ನಾವು ಅದನ್ನು ಹೇಳುತ್ತಿದ್ದೇವೆ. ಅದನ್ನು ಬಿಟ್ಟು ತಪ್ಪಾಗಿ ಹೇಳಿದರೆ ನಾವು ತಪ್ಪು ಎಂದು ಹೇಳುತ್ತೇವೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಬಂದಾಗ ನಾವು ಪ್ರಶ್ನೆ ಕೇಳುತ್ತೇವೆ. ಆಗ ಮುಜುಗರವಾಗುವುದು ನಿಮಗೇ ಹೊರತು ನಮಗಲ್ಲ. ಅಷ್ಟೇ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದನ್ನು ದಯವಿಟ್ಟು ಬರೆದುಕೊಳ್ಳಿ.

**ಸಭಾಪತಿಯವರು:-** ಕ್ಲಾರಿಫೈ ಮಾಡಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರನ್ನೇ ಕೇಳಲಿ. ಮುಖ್ಯಮಂತ್ರಿಗಳೇ ಇದಕ್ಕೆ ಉತ್ತರ ಕೊಡುತ್ತಾರೆ. ನಾನು ಮುಖ್ಯಮಂತ್ರಿಗಳ ಕಛೇರಿಯಿಂದ ಕೊಟ್ಟಿರುವ ದಾಖಲೆಯನ್ನು ಓದುತ್ತಿದ್ದೇನೆ. ಬೇಕಾದರೆ ಅವರು ಮುಖ್ಯಮಂತ್ರಿಗಳನ್ನೂ ಕೇಳಬಹುದು, ನನ್ನನ್ನೂ ಕೂಡ ಕೇಳಬಹುದು. ಮತ್ತೊಮ್ಮೆ ಓದುತ್ತಿದ್ದೇನೆ. ಬಂಡವಾಳ ವೆಚ್ಚ ರೂ. 74,682/- ಕೋಟಿ;

**ಸಭಾಪತಿಯವರು:-** ಮಾನ್ಯ ನಾಗರಾಜುರವರೆ, ಪ್ರಶ್ನೆ ಏನಿದೆ ಎಂದರೆ ಅವರು ಹೇಳುವುದಕ್ಕೂ ನೀವು ಹೇಳುವುದಕ್ಕೂ ವ್ಯತ್ಯಾಸವಿದೆ. ಬಜೆಟ್ ಬುಕ್ ಬಿಟ್ಟು ಬೇರೆ ಏನು ನೀವು ಹೇಳುತ್ತೀರಿ ಅದು ತಪ್ಪಾಗಿ ಹೋಗಬಾರದು ಎಂದು ಹೇಳುತ್ತಿದ್ದಾರೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಬಜೆಟ್ ಬುಕ್ ಓದುವಾಗ annexure ಗಳನ್ನು ಸಹ ಓದಬೇಕಾಗುತ್ತದೆ.

**ಶ್ರೀ ರಮೇಶ್‌ಬಾಬು:-** ಮಾನ್ಯ ಸಭಾಪತಿಯವರೇ, ಅವರು ನೆಟ್ ಮತ್ತು ಗ್ರಾಸ್ ಎರಡನ್ನೂ ಹೇಳುತ್ತಿದ್ದಾರೆ. Nothing wrong in that.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, 84000/- ಕೋಟಿಯಿಂದ ಹಿಡಿದು 90,000/- ಕೋಟಿ ರೂಪಾಯಿಗಳವರೆಗೂ capital investment ಮಾಡುವುದಕ್ಕೆ ತಯಾರಿದೆ ಎನ್ನುವ ಮಾತನ್ನು ನಮ್ಮ ಸರ್ಕಾರದ ಪರವಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಬೇಕಾದರೆ ಅವರು ಸವಾಲಾಗಿ ಇದನ್ನು ಸ್ವೀಕಾರ ಮಾಡಲಿ ನಾವು ಖರ್ಚು ಮಾಡಿ ತೋರಿಸುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ. ಅದರ ಜೊತೆಗೆ ಹೇಳಬೇಕಾದರೆ ನಾವು ಕೊಟ್ಟಿದ್ದಂತಹ ಗ್ಯಾರಂಟಿಗಳ ವಿಚಾರ ಬಂದಾಗ ಎಲ್ಲರೂ ಕೂಡ ಟೀಕೆ ಮಾಡಿದ್ದು ನಿಜ. ಯಾವುದೇ ಕಾರಣಕ್ಕೂ ಕೂಡ ಗ್ಯಾರಂಟಿಗಳನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಟೀಕೆ ಟಿಪ್ಪಣಿಗಳನ್ನು ಮಾಡುತ್ತಾರೆ. ಆದರೆ ಕಳೆದ 3 ಬಜೆಟ್‌ಗಳಲ್ಲಿ ಕೂಡ ನಮ್ಮ ಆರ್ಥಿಕ ಸಚಿವರು ಮುಖ್ಯಮಂತ್ರಿಗಳಾಗಿರುವಂಥವರು ಅದಕ್ಕೆ ಬೇಕಾದಂತಹ ಸುಮಾರು ರೂ. 51,000/- ಕೋಟಿ ಹಣವನ್ನು ಮೀಸಲಿಟ್ಟು ಖರ್ಚು ಮಾಡಿ ತೋರಿಸಿದ್ದಾರೆ ಎಂದು ಹೇಳುತ್ತೇನೆ. ಅದರಿಂದಾಗಿ ಸುಮಾರು 1.24 ಕುಟುಂಬಗಳಷ್ಟು ಜನರು ಇದರ ಲಾಭ ಪಡೆದಿರುವುದನ್ನು ನಾವು ನೋಡಿದ್ದೇವೆ. ಅದನ್ನು ಸ್ವಾಗತವನ್ನೂ ಮಾಡಿದ್ದೇವೆ. That has been addressed also ಎಂಬ ಮಾತನ್ನು ಹೇಳುತ್ತೇನೆ. ಮುಂದಕ್ಕು ಕೂಡ ಮಾಡುತ್ತೇವೆಂಬ ವಿಚಾರಗಳನ್ನು ಹೇಳಿದ್ದಾರೆ. ಅದನ್ನೂ ಕೂಡ ಸ್ವಾಗತ ಮಾಡಲು ಇಚ್ಛಿಸುತ್ತೇನೆ. ನಮ್ಮ ಸರ್ಕಾರ ಕೊಟ್ಟಿರುವಂತಹ ಗೃಹಲಕ್ಷ್ಮಿ ಯೋಜನೆ, ಗೃಹಜ್ಯೋತಿ, ಶಕ್ತಿ, ಅನ್ನಭಾಗ್ಯ, ಯುವನಿಧಿ ಇರಬಹುದು ಎಲ್ಲಾ ಯೋಜನೆಗಳಿಗೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಹಣಕಾಸನ್ನು ಮೀಸಲಿಟ್ಟು ಅದನ್ನು ಮಾಡಿಕೊಟ್ಟಿರುವಂಥದ್ದಕ್ಕೆ ಕೂಡ ಸ್ವಾಗತ ಮಾಡಲು ಇಚ್ಛಿಸುತ್ತೇನೆ. ಈ ಎಲ್ಲಾ ವಿಚಾರಗಳ ಜೊತೆಗೆ ಗ್ಯಾರಂಟಿ ಮತ್ತು infrastructure development ಜೊತೆಗೆ ಇಲಾಖೆಗಳಿಗೂ ಕೂಡ ಬಹಳಷ್ಟು ಹಣವನ್ನು ಮೀಸಲಿಟ್ಟಿರುವುದನ್ನು

ನಾನು quote ಮಾಡಲು ಇಷ್ಟಪಡುತ್ತೇನೆ. ಹಂಚಿಕೆ ಮಾಡಿರುವುದನ್ನು ನೋಡಿದಾಗ ಕರ್ನಾಟಕ ರಾಜ್ಯದಲ್ಲಿ ಶಿಕ್ಷಣಕ್ಕೆ ಮೊಟ್ಟಮೊದಲ ಬಾರಿಗೆ ಸುಮಾರು 47,224 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಏಕೆಂದರೆ ಶಿಕ್ಷಣ ಎನ್ನುವುದು ಬಹಳ ಮುಖ್ಯ. ಯಾವುದೇ ಸಮಾಜ, ರಾಜ್ಯ, ದೇಶ ಬದಲಾವಣೆಯಾಗಬೇಕಾದರೆ ಗುಣಮಟ್ಟದ ಶಿಕ್ಷಣವನ್ನು ಕೊಡಬೇಕಾಗುತ್ತದೆ. ಅದು Primary Education ಅಥವಾ Higher Education ಇರಬಹುದು. ಅದಕ್ಕೆ ಆದ್ಯತೆ ಕೊಡುವಂತಹ ಕೆಲಸವನ್ನು ನಮ್ಮ ಕರ್ನಾಟಕದ ಕಾಂಗ್ರೆಸ್ ಸರ್ಕಾರ ಮಾಡಿದೆ ಎಂಬ ಮಾತನ್ನು ಹೇಳಬಯಸುತ್ತಿದ್ದೇನೆ.

ಮಹಿಳೆಯರ ಸಬಲೀಕರಣ ವಿಚಾರದಲ್ಲಿ ಗ್ಯಾರಂಟಿಗಳ ಜೊತೆಗೆ ಮಹಿಳೆಯರನ್ನು ಗುರಿಯಾಗಿಟ್ಟುಕೊಂಡು ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳುವುದಕ್ಕೋಸ್ಕರ ಮಹಿಳಾ ಮತ್ತು ಮಕ್ಕಳ ಇಲಾಖೆಗೆ ರೂ. 34,929/- ಕೋಟಿಗಳನ್ನು ಮೀಸಲಿಟ್ಟಿರುವುದು ಕೂಡ ನಮ್ಮ ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿ ಅಕ್ಕ ಸೇರಿ ಎಲ್ಲ ಮಹಿಳೆಯರು ಕೂಡ ಅದನ್ನು ಸ್ವಾಗತ ಮಾಡುತ್ತಾರೆ ಮತ್ತು ಸದನ ಕೂಡ ಸ್ವಾಗತ ಮಾಡುತ್ತದೆಂದು ತಿಳಿದುಕೊಂಡಿದ್ದೇನೆ. ಅದರ ಜೊತೆಗೆ ಇಂಧನ ಇಲಾಖೆಗೆ ಒಂದು ಕಡೆ regular energy ಇರಬಹುದು ಇನ್ನೊಂದು ಕಡೆ renewable energy ಇರಬಹುದು, ಗೃಹಜ್ಯೋತಿ ಯೋಜನೆ ಇರಬಹುದು ಎಲ್ಲವನ್ನೂ ಸಮತೋಲನವಾಗಿ ಸರಿ ಮಾಡಿಕೊಂಡು ಹೋಗುವುದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ರೂ. 29,947 ಕೋಟಿ ಹಣವನ್ನು ಮೀಸಲಿಟ್ಟಿರುವುದನ್ನು ಇಲ್ಲಿ quote ಮಾಡುವುದಕ್ಕೆ ಇಷ್ಟಪಡುತ್ತೇನೆ. ಕಂದಾಯ ಇಲಾಖೆಗೂ ಕೂಡ ಬೇಕಾದಷ್ಟು ಹಣವನ್ನು ಮೀಸಲಿಟ್ಟಿರುವುದನ್ನು ನೋಡಿದ್ದೀರಿ. ಕಂದಾಯ ಸಚಿವರು ಇಲಾಖೆಯಲ್ಲಿ ಪಾರದರ್ಶಕತೆಯನ್ನು ತರುವುದಕ್ಕೋಸ್ಕರ online programme ಮಾಡುವುದಕ್ಕೋಸ್ಕರ ಯಾವ ರೀತಿ ಜನಗಳ ಮನೆ ಬಾಗಿಲಿಗೆ ದಾಖಲೆಗಳನ್ನು ಕೊಡುವುದಾಗಲೀ, ಡಿಜಿಟಲೀಕರಣ ಮಾಡುವುದಾಗಲೀ ಮತ್ತು ಕೆಲಸಗಳನ್ನು ಪಾರದರ್ಶಕವಾಗಿ ಮಾಡುವುದಕ್ಕೋಸ್ಕರ ಹಲವಾರು ವಿನೂತನ ಯೋಜನೆಗಳನ್ನು ನಮ್ಮ ಕಂದಾಯ ಸಚಿವರು ಕೈಗೊಂಡಿರುವುದನ್ನು ಮುಖ್ಯಮಂತ್ರಿಗಳು ಗಮನಿಸಿ ಆ ಇಲಾಖೆಗೆ ರೂ. 19,843/- ಕೋಟಿ ಹಣವನ್ನು ಮೀಸಲಿಟ್ಟಿರುವುದಕ್ಕೆ ನಾವೆಲ್ಲರೂ ಕೂಡ ಸ್ವಾಗತ ಮಾಡಬೇಕೆಂದು ಹೇಳಬಯಸುತ್ತೇನೆ. ಸಮಾಜ ಕಲ್ಯಾಣ ಇಲಾಖೆಗೆ ರೂ. 18,612/- ಕೋಟಿ ಹಣವನ್ನು ಕೊಡುವ ಜೊತೆಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಗೆ 44,000/- ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ದೇಶದಲ್ಲಿಯೇ ಪ್ರಥಮ ಎಂಬ ವಿಚಾರವನ್ನು ಹೇಳುತ್ತಿದ್ದೇನೆ. ಶೋಷಿತ ವರ್ಗಗಳ ಧ್ವನಿಯಾಗಿರುವಂಥಹ;

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಇನ್ನು 10 ನಿಮಿಷ ಮಾತನಾಡಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಈಗ ಪ್ರಾರಂಭ ಮಾಡಿದ್ದೇನೆ. ಇದು ಹೆಚ್ಚುವರಿ ಸಮಯವೇ?

**ಸಭಾಪತಿಯವರು:-** 1 ಗಂಟೆ 20 ನಿಮಿಷಕ್ಕೆ ಮಾತನಾಡಲು ಪ್ರಾರಂಭಿಸಿದ್ದೀರಿ. ಅರ್ಧ ಗಂಟೆಗಳ ಕಾಲ ಮಾತನಾಡಲು ಅವಕಾಶ ಕೊಡುತ್ತೇನೆ. ಇನ್ನೂ 33 ಜನರು ಮಾತನಾಡುವವರಿದ್ದಾರೆ ಅರ್ಥ ಮಾಡಿಕೊಳ್ಳಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಆಯಿತು. ಸಮಾಜ ಕಲ್ಯಾಣ ಇಲಾಖೆಯನ್ನು ತೆಗೆದುಕೊಂಡಾಗ ಸಮಾಜ ಕಲ್ಯಾಣ ಇಲಾಖೆಯಲ್ಲಿ ಯಾವ ರೀತಿ ಕಾರ್ಯಕ್ರಮಗಳು ನಡೆಯುತ್ತಿವೆ ಎನ್ನುವುದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಚೆನ್ನಾಗಿ ಗೊತ್ತು. ಈ ಸಂದರ್ಭದಲ್ಲಿ ಇಲಾಖೆಗೆ ರೂ. 18,612/- ಕೋಟಿ ರೂಪಾಯಿಗಳನ್ನು ಕೊಡುವ ಜೊತೆಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಗೆ ಇವತ್ತು ಕೂಡ ಕೊಟ್ಟ ಮಾತಿನಂತೆ ನಡೆದುಕೊಂಡಿರುವುದು, ಕರ್ನಾಟಕ ರಾಜ್ಯದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾಯಿದೆಯನ್ನು ತಂದು ಅದನ್ನು ಅನುಷ್ಠಾನಗೊಳಿಸಿ ದೇಶಕ್ಕೆ ಮಾದರಿಯಾಗಿರುವಂತಹ ಕಾರ್ಯಕ್ರಮಗಳನ್ನು ಕೊಟ್ಟು ಎಸ್.ಸಿ., ಎಸ್.ಟಿ., ಜನರಿಗೆ ರೂ. 44,000/- ಕೋಟಿ ಹಣವನ್ನು ಕೊಟ್ಟರು.

(ಮುಂದು)

(310) 11-03-2026 1-40 KH/VK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾಗರಾಜು (ಮುಂದು):**

ಕಳೆದ ಬಾರಿ 42,000 ಕೋಟಿ ರೂಪಾಯಿಗಳನ್ನು ಕೊಟ್ಟು, ಆ ಸಮುದಾಯವನ್ನು ಅಭಿವೃದ್ಧಿಗೊಳಿಸುವಂತಹ ಪ್ರಯತ್ನವನ್ನು ಮಾಡಿರುವ ವಿಚಾರಕ್ಕೆ ನಾವೆಲ್ಲರೂ ಶ್ಲಾಘಿಸಬೇಕು. ಕೆಲಸಗಳ ವಿಚಾರಗಳ ಬಗ್ಗೆ ನಾನು ಹೇಳುತ್ತೇನೆ. ಎಲ್ಲರಿಗೂ ಕೂಡ ಆರೋಗ್ಯ ಇರಬೇಕು, "Health for All" concept ಇಟ್ಟುಕೊಂಡು, ಇವತ್ತಿನ ದಿವಸ ಆಸ್ಪತ್ರೆಗಳನ್ನು ಉನ್ನತ ಮಟ್ಟಕ್ಕೆ ಏರಿಸುವಂತಹದ್ದು ಇರಬಹುದು, ಹೊಸ ಮೆಡಿಕಲ್ ಕಾಲೇಜುಗಳನ್ನು ಮಾಡುವಂತಹ ವಿಚಾರ ಇರಬಹುದು, ಆಸ್ಪತ್ರೆಗಳಲ್ಲಿ ಸೂಪರ್ ಸ್ಪೆಷಾಲಿಟಿ ಸೌಲಭ್ಯವನ್ನು ಕೊಡುವಂತಹ ವಿಚಾರಗಳು ಇರಬಹುದು, ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೌಲಭ್ಯಗಳನ್ನು ಮೇಲ್ದರ್ಜೆಗೆ ಏರಿಸುವಂತಹ ಕೆಲಸ ಮಾಡುವುದಕ್ಕೋಸ್ಕರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 17,817 ಕೋಟಿ ರೂಪಾಯಿಗಳನ್ನು ಇಟ್ಟಿರುವಂತಹದ್ದನ್ನು ನಾನು ಸ್ವಾಗತಿಸುತ್ತೇನೆ.

ಅದೇ ರೀತಿ ಕೃಷಿ ಎನ್ನುವುದು ತುಂಬಾ ಮುಖ್ಯವಾದಂತಹ ವಿಷಯವಾಗಿರುವುದರಿಂದ, In Karnataka the agriculture growth ಚೆನ್ನಾಗಿ ಆಗಿರುವಂತಹ ಸಂದರ್ಭದಲ್ಲಿ ಬೆಳವಣಿಗೆಯನ್ನು ನಾವು ನೋಡಬೇಕಾಗುತ್ತದೆ ಮತ್ತು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕೃಷಿಯಲ್ಲಿ ಶೇಕಡಾ 9.1 ರಷ್ಟು ಬೆಳವಣಿಗೆ ಆಗಿರುವಂತಹದ್ದು, Industries ಶೇಕಡಾ 6.7 ರಷ್ಟು ಆಗಿರುವಂತಹದ್ದು, Service Industry ನಲ್ಲಿ ಶೇಕಡಾ 8.1 ರಷ್ಟು growth ಆಗಿರುವಂತಹದ್ದನ್ನು on record ಇರುವಂತಹ ವಿಚಾರಗಳನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆ. That shows very well which is nothing but creating an employment in the State of Karnataka in the matter of Industries by having 6.7 percent of growth as an industrial growth ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಕೃಷಿ ಈ ದೇಶದ ಬೆನ್ನುಲುಬು ಆಗಿರುವುದರಿಂದ, ರೈತರನ್ನು ಕಾಪಾಡಿಕೊಳ್ಳುವಂತಹ ವಿಚಾರದಲ್ಲಿ ನಾವು ಕೊಟ್ಟಿರುವಂತಹ ಪ್ರೋತ್ಸಾಹದಾಯಕ ಕಾರ್ಯಕ್ರಮಗಳಿಂದಾಗಿ agricultural growth 9.1 percent ಆಗಿರುವಂತಹದ್ದನ್ನು ನೋಡಿದ್ದೇವೆ. ಈ ದೇಶದಲ್ಲಿ ಹಲವಾರು ಜನರು ಕೃಷಿಯ ಕಡೆಗೆ ತಿರುಗಿ ನೋಡುವಂತಹ ರೀತಿಯಲ್ಲಿ ಬಜೆಟ್ ಅನ್ನು allocation ಮಾಡಿದ್ದಾರೆ. ಅದೇ ರೀತಿ ಅದನ್ನು implement ಮಾಡಿರುವುದರಿಂದ, growth of agriculture has become 9.1 percent ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಒಟ್ಟಾರೆಯಾಗಿ revenue collection ಅನ್ನು ನೋಡಿದಾಗ, ದೇಶದಲ್ಲಿಯೇ ಕರ್ನಾಟಕ ರಾಜ್ಯ ಜಿ.ಎಸ್.ಟಿ..ಯಲ್ಲಿ ನಂಬರ್-2 ಆಗಿರುವಂತಹದ್ದು. ದೇಶ ಏನಾದರೂ ಅಭಿವೃದ್ಧಿ ಆಗಬೇಕೆಂದರೆ, ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳು ಕೊಡುತ್ತಿರುವಂತಹ ಜಿ.ಎಸ್.ಟಿ., ದುಡ್ಡು ಎನ್ನುವುದನ್ನು ಅವರು ಮರೆಯಬಾರದು ಎನ್ನುವ ಮಾತನ್ನು ಹೇಳುತ್ತಿದ್ದೇನೆ. National Highways ಮಾಡಬಹುದು, National Institutions ಗಳು ಇರಬಹುದು, ಅದಕ್ಕೆ ಬಹಳ ದೊಡ್ಡ ಕೊಡುಗೆ ಏನಾದರೂ ಇದ್ದರೆ ಕರ್ನಾಟಕ ರಾಜ್ಯದಿಂದ ಹೋಗಿರುವಂತಹ ಜಿ.ಎಸ್.ಟಿ., ದುಡ್ಡು ಎಂದು ಹೇಳುವುದಕ್ಕೆ ಬಯಸುತ್ತೇನೆ.

ಅದೇ ರೀತಿ 'ಅನ್ನಭಾಗ್ಯ' ಯೋಜನೆಯಲ್ಲಿಯೂ ಕೂಡ ಸಾವಿರಾರು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎನ್ನುವ ಮಾತಿನಂತೆ ನಡೆದುಕೊಳ್ಳುವುದರ ಜೊತೆಗೆ ಈ ಬಾರಿ Food and Civil Supplies Department ಗೆ 7,942 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿರುವುದನ್ನು ಕೂಡ ನಾವು ಸ್ವಾಗತಿಸಬೇಕಾಗುತ್ತದೆ.

ಅದೇ ರೀತಿ ಪಶುಪಾಲನೆಗೋಸ್ಕರ ಕರ್ನಾಟಕ ರಾಜ್ಯದಲ್ಲಿ ಉತ್ತಮವಾದ encouragement ಕೊಟ್ಟಿರುವಂತಹದ್ದು ನಾವು ಸ್ವಾಗತ ಮಾಡಬೇಕಾಗುತ್ತದೆ. ಪಶುಪಾಲನೆಯಲ್ಲಿ ಕುರಿ, ಮೇಕೆ ಮತ್ತು ಹಸು, ಎಮ್ಮೆಗಳು ಆಕಸ್ಮಿಕವಾಗಿ ಸತ್ತರೆ ಪರಿಹಾರ ಕೊಡುವುದಕ್ಕೆ ಹಣವನ್ನು ಮೀಸಲಿಟ್ಟಿರುವುದರಿಂದ, ರೈತರಿಗೆ ಆಗುವಂತಹ ಸಹಾಯ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಅದಕ್ಕೋಸ್ಕರ Animal Husbandry and Fisheries Department ಗೆ 4,084 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ.

'ಶಕ್ತಿ' ಯೋಜನೆಗೆ 5,300 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದನ್ನು ನಾವು ಸ್ವಾಗತ ಮಾಡುತ್ತೇವೆ.

'ಗೃಹಲಕ್ಷ್ಮೀ' ಯೋಜನೆಗೆ 28,608 ಕೋಟಿ ರೂಪಾಯಿಗಳನ್ನು ಕೊಟ್ಟಿರುವಂತಹದ್ದು. ನುಡಿದಂತೆ ನಡೆದಿರುವಂತಹ ಸರ್ಕಾರದ ಪ್ರತೀಕ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. 'ಗೃಹಜ್ಯೋತಿ' ಯೋಜನೆಗೆ 10,578 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದರಿಂದ, ಹಲವಾರು ಬಡವರ ಮನೆಗಳಿಗೆ ಬೆಳಕು ಕೊಟ್ಟಿರುವುದರಿಂದ, without any bill. Zero bill ಅನ್ನು ಕೊಟ್ಟು, ಇವತ್ತು ಎಲ್ಲಾ ಮನೆಗಳಲ್ಲಿ 200 ಯೂನಿಟ್‌ಗಳ ಕರೆಂಟ್ ಅನ್ನು ಪುಕ್ಕಟೆಯಾಗಿ ಕೊಟ್ಟಿರುವಂತಹದ್ದು, ಕೊಟ್ಟ ಮಾತಿನಂತೆ ನಡೆದುಕೊಂಡಿರುವಂತಹ ಸರ್ಕಾರ ಎಂದರೆ, ಅದು ಕಾಂಗ್ರೆಸ್ ಸರ್ಕಾರ. ಇದಕ್ಕೆ 10,578 ಕೋಟಿ ರೂಪಾಯಿಗಳನ್ನು ಕೊಟ್ಟಿರುವಂತಹದ್ದು.

ಬಡವರ ಮನೆಗೆ ಅನ್ನವನ್ನು ಕೊಡುತ್ತಿರುವಂತಹದ್ದು ಕಾಂಗ್ರೆಸ್ ಸರ್ಕಾರದ ಸಿದ್ಧಾಂತ. ಮಹಿಳೆಯರಿಗೆ ಗೌರವ ಕೊಡುವಂತಹದ್ದು ಕಾಂಗ್ರೆಸ್ ಸರ್ಕಾರದ ಸಿದ್ಧಾಂತವಾಗಿದೆ. ಈ ಸಂದರ್ಭದಲ್ಲಿ 'ಅನ್ನಭಾಗ್ಯ' ಯೋಜನೆಗೆ 6,200 ಕೋಟಿ ರೂಪಾಯಿಗಳನ್ನು ಕೊಟ್ಟು, ಇಂತಹ ಮಹಾನ್‌ಕಾರ್ಯಗಳನ್ನು ಮಾಡಿದಂತಹ ಯಾವುದಾದರೂ ಸರ್ಕಾರ ಇದ್ದರೆ ಅದು ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇದರ ಬಗ್ಗೆ ಹಲವರು ಟೀಕೆ-ಟಿಪ್ಪಣಿಗಳನ್ನು ಮಾಡಿದರು.

ಬಜೆಟ್ ಕೊಟ್ಟಂತಹ ಸಂದರ್ಭದಲ್ಲಿ 'ಯುವನಿಧಿ' ಯೋಜನೆಗೆ ಯಾವುದೇ ರೀತಿಯ ದುಡ್ಡನ್ನು ಕೊಟ್ಟಿಲ್ಲ ಎಂದು ಹೇಳಿದರು. 'ಯುವನಿಧಿ' ಯೋಜನೆಗೆ 913 ಕೋಟಿ ರೂಪಾಯಿಗಳ ದುಡ್ಡನ್ನು ಮೀಸಲಿಟ್ಟಿರುವುದನ್ನು ನೋಡಿದಾಗ, ಅವರು ಕೊಟ್ಟ ಮಾತಿನಂತೆ 5 ಗ್ಯಾರಂಟಿಗಳಿಗೆ ಹಣವನ್ನು ಮೀಸಲಿಟ್ಟಿರುವುದರ ಬಗ್ಗೆ ನಾವೆಲ್ಲರೂ ಸ್ವಾಗತ ಮಾಡುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಹಾಗಾಗಿ ಈ ಎಲ್ಲಾ ವಿಚಾರಗಳ ಜೊತೆಗೆ ನಾನು ಇನ್ನೊಂದು ಅಂಶವನ್ನು ಹೇಳಬೇಕೆಂದರೆ, ಸಾಲದ ಬಗ್ಗೆ ಬಹಳಷ್ಟು ಜನರು ಮಾತನಾಡುತ್ತಿದ್ದರು. ಇದರ ಬಗ್ಗೆ ಮಾತನಾಡುವುದಕ್ಕೆ ಅಧಿಕಾರ ಇದೆ. ಟೀಕೆ-ಟಿಪ್ಪಣಿಗಳನ್ನು ಮಾಡುವುದಕ್ಕೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವಕಾಶಗಳು ಇದೆ. ಆದರೆ, ಒಂದು ಅಂಶವನ್ನು

ತಿಳಿದುಕೊಳ್ಳಬೇಕಾಗುತ್ತದೆ. ಬಿ.ಜೆ.ಪಿ., ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಬೆಂಗಳೂರು ನಗರಕ್ಕೆ ಖರ್ಚು ಮಾಡಿರುವಂತಹ ವಿಚಾರದ ಬಗ್ಗೆ ನಾನು ಹೇಳುತ್ತೇನೆ. ಬೆಂಗಳೂರು ನಗರಕ್ಕೆ 2021-22 ನೇ ಸಾಲಿನಲ್ಲಿ 8,000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 2026-27ನೇ ಸಾಲಿನಲ್ಲಿ 18,000 ಕೋಟಿ ರೂಪಾಯಿಗಳನ್ನು ಬೆಂಗಳೂರು ನಗರಕ್ಕೆ ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ತೀರ್ಮಾನ ಮಾಡಿರುವಂತಹದ್ದು. It shows the concern the Government of Karnataka has got for Bengaluru ಎನ್ನುವ ಮಾತನ್ನು ಹೇಳುತ್ತೇನೆ. ಬೆಂಗಳೂರು ರಾಜಧಾನಿಗೆ ಸುಮಾರು ಶೇಕಡಾ 65 ರಷ್ಟು ತೆರಿಗೆಯನ್ನು ಕನ್ನಡಿಗರು ಕೊಡುವಂತಹ ಬೊಕ್ಕಸದ ಜೊತೆಗೆ 40 percent of I.T. Export ಮಾಡುತ್ತಿರುವಂತಹದ್ದು, ಕರ್ನಾಟಕ ರಾಜ್ಯ ಬೆಂಗಳೂರು ಸಿಲಿಕಾನ್ ವ್ಯಾಲಿ ಆಗಿರುವುದರಿಂದ, ಅದನ್ನು ಅಭಿವೃದ್ಧಿಪಡಿಸಬೇಕು. ಉದ್ಯೋಗಗಳನ್ನು ಸೃಷ್ಟಿ ಮಾಡಬೇಕೆಂದು ಸುಮಾರು 18,000 ಕೋಟಿ ರೂಪಾಯಿಗಳನ್ನು ಬೆಂಗಳೂರು ನಗರ ಅಭಿವೃದ್ಧಿಗೆ ಕೊಟ್ಟಿರುವಂತಹದ್ದನ್ನು ನಾವು ನೋಡಿದ್ದೇವೆ. ನಾವು ಸಾಲದ ವಿಚಾರವಾಗಿ ನೋಡಿದಾಗ ತುಂಬಾ ಜನ ಟೀಕೆ-ಟಿಪ್ಪಣಿಗಳನ್ನು ಮಾಡಿದಾಗಲೂ ಕೂಡ fiscal deficit less than 3 percent ಇರುವಂತಹ ರೀತಿಯಲ್ಲಿ ಸಾಲ-ಸೋಲಗಳನ್ನು ಮಾಡಿರುವಂತಹದ್ದನ್ನು ನಾವು ನೋಡಬೇಕಾಗುತ್ತದೆ. ಹಾಗಾಗಿ 2024-25ರಲ್ಲಿ ಸುಮಾರು 1,05 ಲಕ್ಷ ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದೆವು. ಆಗ ಬಜೆಟ್ 3.71 ಲಕ್ಷ ಕೋಟಿ ರೂಪಾಯಿಗಳು ಇತ್ತು. 2025-26 ರಲ್ಲಿ 1.16 ಲಕ್ಷ ಕೋಟಿ ರೂಪಾಯಿಗಳ ಸಾಲ ಮಾಡಿದ್ದರು. ಈಗ 2026-27ನೇ ಸಾಲಿನಲ್ಲಿ ಸುಮಾರು 1.32 ಲಕ್ಷ ಕೋಟಿ ರೂಪಾಯಿಗಳ ಸಾಲ ಮಾಡುವಂತಹ ವಿಚಾರಗಳನ್ನು ಪ್ರಸ್ತಾಪ ಮಾಡಿರುವಂತಹದ್ದನ್ನು ನಾವು ನೋಡುತ್ತಿದ್ದೇವೆ. ಅದೇ ರೀತಿ ಸಾಲದ ಬಗ್ಗೆ ಟೀಕೆ ಮಾಡುವಂತಹವರು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಬಿ.ಜೆ.ಪಿ., ಸರ್ಕಾರವು 2019-20ನೇ ಸಾಲಿನಲ್ಲಿ 46,000 ಕೋಟಿ ರೂಪಾಯಿಗಳ ಸಾಲ ಮಾಡಿದರು. ಅದರ ಬಗ್ಗೆ ಯಾರೂ ಕೂಡ ಹೇಳುವುದಕ್ಕೆ ಹೋಗಲಿಲ್ಲ. 2020-21ನೇ ಸಾಲಿನಲ್ಲಿ ಕೋವಿಡ್ ಸಂದರ್ಭದಲ್ಲಿಯೂ ಕೂಡ 67,000 ಕೋಟಿ ರೂಪಾಯಿಗಳ ಸಾಲ ಮಾಡಿದಾಗ ನಾವು ಸಹಕಾರ ಕೊಟ್ಟಿದ್ದೇವೆಯೇ ಹೊರತು, ಯಾವುದೇ ಟೀಕೆ-ಟಿಪ್ಪಣಿಗಳನ್ನು ಮಾಡಲಿಲ್ಲ. ಆದರೆ ಸಾಲ ಮಾಡುವುದು ದೊಡ್ಡದಲ್ಲ. ಆ ಸಾಲ ಮಾಡಿದ ದುಡ್ಡನ್ನು Capital Investment ಗೆ ಯಾವುದೇ ಭ್ರಷ್ಟಚಾರ ಇಲ್ಲದೆ ಮಾಡಿದ್ದಾದರೆ ಹಾಗೂ ಶೇಕಡಾ 40 ರಷ್ಟು ಕಮೀಷನ್ ಇಲ್ಲದೇ ಮಾಡಿದ್ದಾದರೆ ಸಾಲ ಮಾಡಿದ್ದು ಸಾರ್ಥಕವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಆ ಕಾರಣಕ್ಕೋಸ್ಕರ ನಮ್ಮಲ್ಲಿ ಯಾವುದೇ ಭ್ರಷ್ಟಚಾರ ಇಲ್ಲದ ರೀತಿಯಲ್ಲಿ ನಾವು ಎಲ್ಲಾ ವಿಚಾರದಲ್ಲಿಯೂ ಪಾರದರ್ಶಕತೆ ಕಾಪಾಡಿಕೊಂಡು ಬಂದಿರುವಂತಹ ವಿಚಾರವನ್ನು ಹೇಳುತ್ತೇನೆ. ಇದೇ ಬಿ.ಜೆ.ಪಿ., ಸರ್ಕಾರ 2022-23ನೇ ಸಾಲಿನಲ್ಲಿ 46,623 ಕೋಟಿ ರೂಪಾಯಿಗಳಷ್ಟು ಸಾಲ ಮಾಡಿರುವಂತಹದ್ದನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಹಾಗಾಗಿ ಒಟ್ಟಾರೆಯಾಗಿ

ಎಲ್ಲಾ ವಿಚಾರಗಳ ಬಗ್ಗೆ ಹೇಳಬೇಕೆಂದರೆ, ಕೊಟ್ಟ ಮಾತಿನಂತೆ ನಡೆದುಕೊಳ್ಳುವುದರ ಜೊತೆಗೆ, ಎಲ್ಲಾ ಇಲಾಖೆಗಳಿಗೂ ಹಣಕಾಸನ್ನು ಕೊಡುವುದರ ಜೊತೆಗೆ, ಸರ್ವರಿಗೂ ಸೇರಿರುವಂತಹ ಕರ್ನಾಟಕವನ್ನು ಒಟ್ಟಿಗೆ ಅಭಿವೃದ್ಧಿ ಮಾಡುವುದಕ್ಕೆ ಆಲೋಚನೆ ಮಾಡಿ ಕೆಲಸ ಮಾಡುತ್ತಿರುವಂತಹ ಈ ಸಂದರ್ಭದಲ್ಲಿ ಇಂತಹ ಬಜೆಟ್ ಅನ್ನು ನಾವೆಲ್ಲರೂ ಸ್ವಾಗತ ಮಾಡುತ್ತೇವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ನಾವು ಸಾಲದ ಬಗ್ಗೆ ಮಾತನಾಡುವಾಗ ತಾವು ಆಡಳಿತ ಪಕ್ಷವನ್ನು ನಡೆಸುವಂತಹ ಸಂದರ್ಭದಲ್ಲಿ ವಿರೋಧ ಪಕ್ಷದವರು ೩.೦೫ ಲಕ್ಷ ಕೋಟಿ ರೂಪಾಯಿಗಳಿಂದ ೫.೦೫ ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡು ಹೋಗಿರುವಂತಹ ಕೀರ್ತಿ ಯಾರಾದರೂ ಇದ್ದರೆ ಅದು ಬಿ.ಜೆ.ಪಿ., ಸರ್ಕಾರದ ಸಂದರ್ಭದಲ್ಲಿ ಮಾಡಿರುವಂತಹ ವಿಚಾರವನ್ನು ಹೇಳುತ್ತೇನೆ. ಬಡವರಿಗೆ ಅನ್ನ ಕೊಡುವುದು, ಮಹಿಳೆಯರಿಗೆ ಸಹಾಯ ಮಾಡುವುದು, ಯಾರಿಗೆ ಸಮಸ್ಯೆಯಾಗಿದೆ ಎನ್ನುವ ವಿಚಾರವನ್ನು ನೋಡಿದಾಗ ಬಿ.ಜೆ.ಪಿ., ಪಕ್ಷದವರು ಇಲ್ಲಸಲ್ಲದ ಆರೋಪಗಳನ್ನು ನಮ್ಮ ಸರ್ಕಾರದ ಮೇಲೆ ಮಾಡುವಂತಹದ್ದನ್ನು ನಾವು ಒಪ್ಪುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಬಿ.ಜೆ.ಪಿ., ಸರ್ಕಾರವು ಚುನಾವಣೆ ಸಂದರ್ಭದಲ್ಲಿ ಹಲವಾರು ಯೋಜನೆಗಳನ್ನು ಪ್ರಾರಂಭ ಮಾಡಿ ಅರ್ಧಕ್ಕೆ ಬಿಟ್ಟು ಕೇವಲ ಶಂಕು ಸ್ಥಾಪನೆ ಮಾಡಿ ಹೊರಟು ಹೋಗಿರುತ್ತಾರೆ. ಅದೆಲ್ಲಾ ಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡಿ ಕೆಲಸ ಮಾಡಿರುವುದು ಇದ್ದರೆ, ನಮ್ಮ ಸರ್ಕಾರ ೨೦೨೩ನೇ ಸಾಲಿನಲ್ಲಿ ಅಧಿಕಾರಕ್ಕೆ ಬಂದ ನಂತರ ಆಗಿದೆ ಎನ್ನುವ ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಒಂದು ಕಡೆ ಆರ್ಥಿಕ ಶಿಸ್ತನ್ನು ಕಾಪಾಡಿಕೊಳ್ಳುವಂತಹದ್ದು, ಇನ್ನೊಂದು ಕಡೆ ಉದ್ಯೋಗಗಳನ್ನು ಸೃಷ್ಟಿ ಮಾಡಿಕೊಳ್ಳುವಂತಹದ್ದು, ಮತ್ತೊಂದು ಕಡೆ infrastructure development ಮಾಡಿಕೊಳ್ಳುವುದು, ಇನ್ನೊಂದು ಕಡೆ Law & Order ಅನ್ನು ಕಾಪಾಡಿಕೊಳ್ಳುವುದು, ಇನ್ನೊಂದು ಕಡೆ ಗುಣಮಟ್ಟದ ಶಿಕ್ಷಣವನ್ನು ಕೊಡುವಂತಹದ್ದು, ಕೊಟ್ಟ ಮಾತಿನಂತೆ ಎಲ್ಲಾ ಭರವಸೆಗಳನ್ನು ಈಡೇರಿಸುವಂತಹ ಕೆಲಸಗಳನ್ನು ಕೂಡ ಮಾನ್ಯ ಸಿದ್ದರಾಮಯ್ಯನವರು ಮಾಡಿರುವಂತಹದ್ದನ್ನು ನಾನು ಖಂಡಿತವಾಗಿಯೂ ಸ್ವಾಗತ ಮಾಡುತ್ತೇನೆ. ಒಟ್ಟಾರೆಯಾಗಿ, ಶಿಕ್ಷಣ ಇರಬಹುದು, infrastructure ಇರಬಹುದು, employment ಇರಬಹುದು, welfare schemes ಇರಬಹುದು, ನಾವು ಎಲ್ಲವನ್ನೂ ಕೂಡ ಸಮತೋಲನವಾಗಿ ಮಾಡಿಕೊಂಡು ಬಂದಿರುವಂತಹ ಈ ಸಂದರ್ಭದಲ್ಲಿ ಇಂತಹ ಒಂದು ಅದ್ಭುತವಾದ ಬಜೆಟ್ ಅನ್ನು ನಾವು ಖಂಡಿತವಾಗಿಯೂ ಸ್ವಾಗತ ಮಾಡುತ್ತೇವೆ ಮತ್ತು ರಾಜ್ಯವು ಇನ್ನು ಕೂಡ ಬಲಿಷ್ಠವಾಗಿ ಬೆಳೆಯುವುದಕ್ಕೆ ಮಾನ್ಯ ಸಿದ್ದರಾಮಯ್ಯನವರು ಹಾಕಿಕೊಟ್ಟಿರುವಂತಹ ಭದ್ರ ಬುನಾದಿ ಈ ಬಜೆಟ್‌ನಲ್ಲಿ ಕಾಣುತ್ತಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಅದೇ ರೀತಿ public transport ಗೆ ಸುಮಾರು ದುಡ್ಡನ್ನು ಮೀಸಲಿಟ್ಟಿರುವುದನ್ನು ನಾವು ನೋಡಿದ್ದೇವೆ. ಬೆಂಗಳೂರು ನಗರದಲ್ಲಿರುವಂತಹ public transport ಇರಬಹುದು ಮತ್ತು ಹಳ್ಳಿಗಳಲ್ಲಿ ಇರುವಂತಹ

transport ಇರಬಹುದು, ಮೆಟ್ರೋ, ಬಸ್ಸು ಮತ್ತು ರೈಲು ಸಂಪರ್ಕಗಳು ಇರಬಹುದು, ಕೇಂದ್ರ ಸರ್ಕಾರದ ಯೋಜನೆಗಳಿಗೆ ರಾಜ್ಯ ಸರ್ಕಾರವು ಕೊಡಬೇಕಾಗಿರುವಂತಹ ಷೇರನ್ನು ಕೂಡ ಯಾವುದೇ ಕಾರಣಕ್ಕೂ ತಡ ಮಾಡದೇ ಅವರಿಗೆ ಜಾಗಗಳನ್ನು ಕೊಡುವುದರ ಜೊತೆಗೆ ಹಣಕಾಸಿನ ನೆರವನ್ನು ಕೊಡುವಂತಹ ರೀತಿಯಲ್ಲಿಯೂ ಕೂಡ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿರುವುದನ್ನು ನೋಡಿದಾಗ ಕೇಂದ್ರ ಸರ್ಕಾರದ ಜೊತೆಗೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಂಡು ಈ ರಾಜ್ಯವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಈ ಬಜೆಟ್‌ನಲ್ಲಿ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ.

ಅಲ್ಪ ಸಂಖ್ಯಾತರ ವಿಚಾರಗಳು ಬಂದಾಗಲೂ ಕೂಡ ಅವರ ಆರೋಗ್ಯ ವಿಚಾರಗಳು ಇರಬಹುದು, ಶಿಕ್ಷಣದ ವಿಚಾರಗಳು ಇರಬಹುದು, welfare schemes ಗಳು ಇರಬಹುದು. ಯಾವುದರಲ್ಲಿಯೂ ಕೂಡ ಕಡಿಮೆ ಮಾಡದೇ ಇರುವಂತಹ ರೀತಿಯಲ್ಲಿ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಮೌಲಾನಾ ಆಜಾದ್ ಮಾದರಿ ಶಾಲೆಗಳು ಇರಬಹುದು, ಹೊಸ ಸಂತ ಶಿಶುನಾಳ ಷರೀಫರ ವಸತಿ ಶಾಲೆಗಳು ಇರಬಹುದು, ಇವೆಲ್ಲವುದರ ಬಗ್ಗೆ ಹೇಳುವುದಕ್ಕೆ ಹೋದರೆ ಬಹಳ ಸಮಯವಾಗುತ್ತದೆ. ವಿಶೇಷವಾಗಿ ಅಲ್ಪಸಂಖ್ಯಾತರ ಶಿಕ್ಷಣಕ್ಕೆ ಖರ್ಚು ಮಾಡುತ್ತಿರುವಂತಹದ್ದು, ಆ ವರ್ಗಗಳು ಶಿಕ್ಷಣಕ್ಕೆ ಒಳಗಾಗಬೇಕು. ಉತ್ತಮವಾದ ಗುಣಮಟ್ಟದ ಶಿಕ್ಷಣವನ್ನು ಕೊಡಬೇಕೆನ್ನುವ ರೀತಿಯಲ್ಲಿ ಅಲ್ಪಸಂಖ್ಯಾತರ ಕಾರ್ಯಕ್ರಮಗಳನ್ನು ಕೊಟ್ಟಿರುವಂತಹದ್ದು.

ನಾನು ಎಸ್.ಸಿ., ಎಸ್.ಟಿ., ಬಗ್ಗೆ ಮಾತನಾಡಿದ್ದೇನೆ. ಅಲ್ಪಸಂಖ್ಯಾತರ ಬಗ್ಗೆಯೂ ಮಾತನಾಡಿದ್ದೇನೆ. ಹಿಂದುಳಿದ ವರ್ಗಗಳಿಗೆ ಹಾಸ್ಟೆಲ್‌ಗಳನ್ನು ಕಟ್ಟುವುದಕ್ಕೂ ಕೂಡ ಕೋಟ್ಯಾಂತರ ರೂಪಾಯಿಗಳನ್ನು ಮೀಸಲಿಟ್ಟು, ಸುಮಾರು 3,800 ಕೋಟಿ ರೂಪಾಯಿಗಳು ಹಿಂದುಳಿದ ವರ್ಗಗಳ ಅಭಿವೃದ್ಧಿಗೋಸ್ಕರ ಕೆಲಸ ಮಾಡಿದ್ದೇವೆ. ವಿಶೇಷವಾಗಿ ಹೇಳಬೇಕೆಂದರೆ, 2012ನೇ ಸಾಲಿನಲ್ಲಿ ಕ್ಯಾಟಗರಿ-1 ಮಕ್ಕಳಿಗೆ, in par with ಎಸ್.ಸಿ. ಎಸ್.ಟಿ., ಶಿಕ್ಷಣದ ಸೌಲಭ್ಯಗಳು ಸಿಗುತ್ತಿತ್ತೋ, ಅದನ್ನು ಮಾನ್ಯ ಯಡಿಯೂರಪ್ಪನವರು 2012ನೇ ಸಾಲಿನಲ್ಲಿ ಇದ್ದಾಗ ಕಿತ್ತೊಗೆದಿದ್ದರು.

(ಮುಂದು)

(311) 11.3.2026 1.50 ಪಿಕೆ:ವಿಕೆ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಎಂ.ನಾಗರಾಜು(ಮುಂದು):**

ಇವತ್ತಿನ ದಿವಸ ಅದನ್ನು ಮರುಸ್ಥಾಪನೆ ಮಾಡಿದ್ದಾರೆ. ಎಸ್.ಸಿ/ಎಸ್.ಟಿ ಗಳಿಗೆ ಕೊಡುವಂತಹ ಎಲ್ಲಾ ಸೌಲಭ್ಯಗಳನ್ನು ಕೊಡುವುದಕ್ಕೆ ಈ ಬಜೆಟ್‌ನಲ್ಲಿ ಕ್ರಮ ಕೈಗೊಂಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಎಸ್.ಸಿ/ಎಸ್.ಟಿ ವರ್ಗಕ್ಕೆ, ಶೋಷಿತ ವರ್ಗದವರಿಗೆ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ. ಅದೇರೀತಿ ಬೇರೆಯವರಿಗೂ ಕೊಡುವುದಕ್ಕೆ ಆಲೋಚನೆ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಗೆಂದು 24.1% ಕಾರ್ಯಕ್ರಮಗಳನ್ನು ಕೊಡಲಾಗಿದೆ; ಅವರ ಜನಸಂಖ್ಯೆಗೆ ಅನುಗುಣವಾಗಿ ಕೊಡಲಾಗಿದೆ. ಹಿಂದುಳಿದ ವರ್ಗದ ಜನ 51% ಇದ್ದರೂ, ಅವರಿಗೆ ಕಡಿಮೆ ಕೊಟ್ಟರೂ, ಎಸ್.ಸಿ./ಎಸ್.ಟಿ. ವರ್ಗ ಚೆನ್ನಾಗಿರಬೇಕು, ನಮ್ಮ ಸಹೋದರರು ಚೆನ್ನಾಗಿರಬೇಕು. ಅದು ಅವರ ಸಂವಿಧಾನದ ಹಕ್ಕಾಗಿದೆ. ಏಕೆಂದರೆ ಅವರು ಶೋಷಣೆಗೆ ಒಳಗಾದ ಜನ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಶಾಸಕರು ಮಾತನಾಡುತ್ತಿರುವಾಗ ಅವರನ್ನು ಡಿಸ್ಟರ್ಬ್ ಮಾಡಬಾರದು ಎನ್ನುವ ಕಾರಣಕ್ಕೆ ಸುಮ್ಮನೆ ಇದ್ದೆ. ಅವರು ಮಂಡಿಸಿರುವ ಬಜೆಟ್ ಬಗ್ಗೆ ಎಷ್ಟು ಬೇಕಾದರೂ ಮಾತನಾಡಲಿ. ಆದರೆ ಪದೇ ಪದೇ ಹಿಂದಿನ ಸರ್ಕಾರ, ಹಿಂದಿನ ಸರ್ಕಾರ ಎಂದು ಹೇಳುತ್ತಲೇ ಇದ್ದಾರೆ. ಅವರನ್ನು ತೆಗಳುವ ಅವಶ್ಯಕತೆ ಈಗಿಲ್ಲ. ಅಲ್ಲದೇ ಈಗ ನೀವು ಸರ್ಕಾರದಲ್ಲಿದ್ದೀರಿ. ಇವತ್ತೇನು ಅವರು ಜನರಿಗೆ ಏನು ಕೊಡುತ್ತಿದ್ದಾರೋ ಅವುಗಳನ್ನು ಹೇಳಲಿ. ಪರಿಶಿಷ್ಟ ವರ್ಗಗಳ ಬಗ್ಗೆ ಮಾತಾನಾಡುತ್ತಾ, ಜನಸಂಖ್ಯೆಗೆ ಅನುಗುಣವಾಗಿ ಕೊಟ್ಟಿದ್ದೇವೆ ಎಂದು ಹೇಳಿದಿರಿ. ಅವರಿಗೆ ಸರ್ಕಾರ ಎಷ್ಟು ದೋಖಾ ಮಾಡಿದೆ ಎನ್ನುವುದರ ಬಗ್ಗೆ ನಾನು ಹೇಳುತ್ತೇನೆ. ರೂ. 44,000 ಕೋಟಿ ಅವರಿಗೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ.. ಕೊಟ್ಟ ಮೇಲೆ ಏನಾಯಿತು, ಅದನ್ನು ಹೇಳಿ. ಆ ಜನರಿಗೆ ಮುಟ್ಟುತ್ತಿದೆಯೇ? ಇದು ಮೋಸ, ಅನ್ಯಾಯ ಅಲ್ಲವೇ? ರೂ. 44,000 ಕೋಟಿಯಲ್ಲಿ ರೂ. 15,000 ಕೋಟಿಗಳನ್ನು ಗ್ಯಾರಂಟಿಗೆಂದು ತೆಗೆದಿದ್ದಾರೆ. ಆ ಗ್ಯಾರಂಟಿಗಳಿಗೆ ಇಟ್ಟಿದ್ದ ದುಡ್ಡು ಅವರಿಗಿಲ್ಲವೇ? ಗ್ಯಾರಂಟಿಗಳಿಗೆ ಇಟ್ಟಿರುವ ರೂ. 54,000 ಕೋಟಿಯಲ್ಲಿ ದಲಿತರ ಪಾಲು ಎಷ್ಟು ಎಂಬುದನ್ನು ಹೇಳಲಿ. ಅದರಲ್ಲಿ ನೀವು ದಲಿತರಿಗೆ ಕೊಡುವುದಿಲ್ಲ. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯಲ್ಲಿ ಇಟ್ಟಿರುವುದನ್ನೇ ಮತ್ತೆ ಅವರಿಗೆ ಕೊಟ್ಟು ಅವರಿಗೆ ಮೋಸ ಮಾಡುತ್ತಿದ್ದೀರಿ. ಇದು 3 ವರ್ಷಗಳಿಂದ ಸತತವಾಗಿ ನಡೆದುಕೊಂಡು ಬರುತ್ತಿದೆ. ಅದರ ಬಗ್ಗೆ ಮಾತನಾಡಲಿ. ಇದನ್ನು ಅವರು ಒಪ್ಪಿದರೆ ನಾನು ಅಪ್ರಿಷಿಯೇಟ್ ಮಾಡುತ್ತೇನೆ. ಇಲ್ಲದಿದ್ದರೆ ಅವರು ಮೋಸ ಮಾಡುತ್ತಿದ್ದೀರಿ ಎಂದು ಕೊನೆಯವರೆಗೆ ಹೇಳಬೇಕಾಗುತ್ತದೆ. ಈ ಬಜೆಟ್ ಬಗ್ಗೆ ನೀವು ಎಷ್ಟು ಬೇಕಾದರೂ ಮಾತನಾಡಿರಿ. ಇನ್ನೂ ಚೆನ್ನಾಗಿ ಮಾತನಾಡಿ. ಇದರಲ್ಲಿರುವ ಅಂಕಿಅಂಶಗಳು ಯಾವರೀತಿ ರಾಜ್ಯದ ಜನರಿಗೆ ಅನುಕೂಲವಾಗುತ್ತದೆ ಎಂಬುದನ್ನು ಹೇಳಲಿ. ಅವರು ಕೊಟ್ಟಿರುವ ಬಜೆಟ್‌ನಿಂದ

ಏನೇನು ಕಾರ್ಯಕ್ರಮಗಳು ಆಗುತ್ತವೆ ಎಂಬುದನ್ನು ಹೇಳಿ, ಅದನ್ನು ಅಪ್ರಿಷಿಯೇಟ್ ಮಾಡುತ್ತೇವೆ. ಅದು ಬಿಟ್ಟು ಹಿಂದಿನದ್ದೆಲ್ಲಾ ಹೇಳಲಿ, ಆಗ ಆಗಿರಲಿಲ್ಲ, ಈಗ ಆಗಿದೆ ಎಂದು ಏಕೆ ಹೇಳುತ್ತಾರೆ? ಆ ಪ್ರಶ್ನೆ ಈಗ ಬರುವುದಿಲ್ಲ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ರಾಜ್ಯಪಾಲರ ಭಾಷಣ ಮತ್ತು ಬಜೆಟ್ ಮೇಲೆ ಮಾತನಾಡುವಾಗ ಈ ರೀತಿ ಹೋಲಿಕೆ ಮಾಡಿಕೊಂಡು ಮಾತನಾಡುವುದು ಇದ್ದೇ ಇರುತ್ತದೆ. ನಾವು ಯಾವರೀತಿ ಇಂಪ್ರೂವ್ ಮಾಡಿದ್ದೇವೆ, ಹಿಂದೆ ಏಕೆ ಈ ರೀತಿ ಆಗಲಿಲ್ಲ ಎಂದು ಹೇಳಲೇಬೇಕಾಗುತ್ತದೆ. ಅದರಲ್ಲಿ ತಪ್ಪೇನಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾನಾಯಕರು ಹೇಳುತ್ತಿರುವುದು ಸರಿ ಇದೆ. ಆದರೆ ಇಲ್ಲಿ ಹೋಲಿಕೆ ಮಾಡುವಂಥದ್ದು ಆಗುತ್ತಿಲ್ಲ. ಹಿಂದಿನದ್ದನ್ನು ಟೀಕೆ ಮಾಡುವಂತಹ ಕೆಲಸ ಆಗುತ್ತಿದೆ.

**ಶ್ರೀ ಎನ್.ಎಸ್.ಬೋಸರಾಜು:-** ಅವರ ಸರ್ಕಾರ ಇದ್ದಾಗ ಎಸ್‌ಸಿ/ಎಸ್‌ಟಿಗೆಂದು ಇಟ್ಟಿದ್ದ ಹಣದಲ್ಲಿ ರೂ. 12,000 ಕಡಿತವಾಯಿತು. ಎಸ್.ಸಿ./ಎಸ್.ಟಿ. ಗಳಿಗೆ ಬಳಸಬೇಕಿದ್ದ ಹಣ ದುರುಪಯೋಗವಾಗಿದ್ದೇ ಅವರ ಸರ್ಕಾರ ಇದ್ದಾಗ ಎಂದು ಹೇಳಬೇಕಾಗುತ್ತದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಸರ್ಕಾರ, ನಾವು ರೂ. 54,000 ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಇಟ್ಟಿದ್ದೇವೆ, ಇದರಿಂದಲೇ ದಲಿತರಿಗೆ ಕೊಡುತ್ತಿದ್ದೇವೆ, ದಲಿತರ ಪಾಲು ಇದರಲ್ಲಿ ಇದೆ ಎಂದು ಹೇಳಿಬಿಡಲಿ. ರೂ. 15,000 ಕೋಟಿ ಹಣವನ್ನು . . . .

**(ಗೊಂದಲ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಗಳೆ, ನಾನು ಮಾತನಾಡುತ್ತಿರುವುದು ತಪ್ಪಾಗಿದ್ದರೆ ಆಗ ಮಧ್ಯದಲ್ಲಿ ಎದ್ದು ನಿಂತು ಹೇಳಲಿ. ನಾನು ಮಾತನಾಡುವಾಗ, ನನಗೆ ಮಾತನಾಡಲು ಸಮಯ ಕೊಟ್ಟಿರುವಾಗ ಆ ಸಮಯದಲ್ಲಿ ಅವರು ಭಾಷಣ ಮಾಡುವುದಕ್ಕೆ ಅಧಿಕಾರ ಇಲ್ಲ. ಅವರು ಮಾತನಾಡುವ ಸಂದರ್ಭದಲ್ಲಿ ವಿಷಯಗಳನ್ನು ಪ್ರಸ್ತಾಪ ಮಾಡಲಿ. **(ಗೊಂದಲ) ಮಾನ್ಯ ಸಭಾಪತಿಗಳೆ,** ನಾನೊಬ್ಬ ಹಿಂದುಳಿದ ವರ್ಗದವನಾಗಿ ಸರ್ಕಾರ ದೀನ-ದಲಿತರಿಗೆ ಕೊಟ್ಟಿರುವುದನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಅದನ್ನು ಏಕೆ ಅನ್ಯಥಾ ಭಾವಿಸುತ್ತಾರೋ ಅರ್ಥವಾಗುವುದಿಲ್ಲ. ಅವರಿಗೆ ನಿಜವಾದ ಕಾಳಜಿ ಇದ್ದಿದ್ದೇಯಾದರೆ ಕೇಂದ್ರ ಸರ್ಕಾರ ಕೂಡ ಇಂತಹ ಯೋಜನೆಗಳನ್ನು ಅನುಷ್ಠಾನ ಮಾಡುವುದಕ್ಕೆ ಪ್ರಯತ್ನ ಮಾಡಲಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ನಿಂತು ಮಾತನಾಡುವಾಗ ಅದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಅವರ ಮಾತಿನಿಂದ ನಿಮಗೆ ಇನ್ನೊಂದು ಪಾಯಿಂಟ್ ಸಿಗಬಹುದು.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಗಳೆ, ನಾನು ನಿಮ್ಮ ಮಾತಿಗೆ ಗೌರವ ಕೊಡುತ್ತೇನೆ.

**ಶ್ರೀಮತಿ ಕೆ. ಹೇಮಲತಾ ನಾಯಕ್:-** ಮಾನ್ಯ ಸಭಾಪತಿಗಳೆ, ಹಿಂದುಳಿದ ವರ್ಗಗಳಿಗೆ ಕೊಟ್ಟಿದ್ದೇವೆ, ಕೊಟಿದ್ದೇವೆ ಎಂದು ಹೇಳುತ್ತಿದ್ದಾರೆ. ಹಿಂದುಳಿದವರಿಗೆ, ಎಸ್.ಸಿ./ಎಸ್.ಟಿ ವರ್ಗಕ್ಕೆ ಆಯವ್ಯಯದಲ್ಲಿ ಎಷ್ಟು ಕೊಟ್ಟಿದ್ದಾರೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. 5 ಗ್ಯಾರಂಟಿಗಳಿಗೆ ಇಟ್ಟಿರುವ ರೂ. 54,000 ಕೋಟಿ ಮೊತ್ತದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಗೆ ಎಷ್ಟು ಕೊಟ್ಟಿದ್ದಾರೆ ಎಂದು ಕೇಳಿದರೆ ಅದಕ್ಕೆ ಉತ್ತರ ಇಲ್ಲ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಬೇರೆ ಸದಸ್ಯರು ಮಾತನಾಡುತ್ತಿರುವಾಗ ಏಕೆ ಮಧ್ಯದಲ್ಲಿ ಈ ರೀತಿ ಎದ್ದುನಿಂತು ಮಾತನಾಡುತ್ತಾರೆ? ಹಿಂದಿನ ಸರ್ಕಾರದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯಲ್ಲಿ ಎಷ್ಟು ಹಣವನ್ನು ಡೈವರ್ಟ್ ಮಾಡಿದರು ಎನ್ನುವುದನ್ನು ನಾವು ಹೇಳುತ್ತೇವೆ.

(ಗೊಂದಲ)

**ಶ್ರೀಮತಿ ಕೆ. ಹೇಮಲತಾ:-** ಎಸ್.ಸಿ/ಎಸ್.ಟಿ.ಗಳಿಗೆ ಹಣ ಕೊಡುತ್ತಿದ್ದೇವೆ ಎಂದು ಹೇಳುತ್ತಿರುವುದು ಸರಿ. ಆದರೆ ಎಷ್ಟು ಅಭಿವೃದ್ಧಿ ಆಗಿದೆ ಎಂದು ಹೇಳುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ ಬಜೆಟ್ ಬಗ್ಗೆ ಮಾತನಾಡುವವರ ಪಟ್ಟಿಯಲ್ಲಿ ನಿಮ್ಮ ಹೆಸರೂ ಕೂಡ ಇದೆ. ನೀವು ಏನೋ ಬೇರೆ ಪಾಯಿಂಟ್ ಹೇಳುತ್ತೀರಿ ಎಂದು ನಾನು ನಿಮಗೆ ಮಾತನಾಡಲು ಅವಕಾಶ ಕೊಟ್ಟೆ. ನಿಮಗೆ ಬೇಕಾಗಿರುವ ಕ್ಲ್ಯಾರಿಫಿಕೇಷನ್ ಕೇಳಲು ಪಾಯಿಂಟ್‌ಗಳನ್ನು ಬರೆದಿಟ್ಟುಕೊಳ್ಳಿ. ನಿಮಗೆ ಅವಕಾಶ ಕೊಟ್ಟಾಗ ನೀವು ಮಾತನಾಡಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಗಳೆ, ರೂ. 44,632 ಕೋಟಿ ಹಣವನ್ನು ಎಸ್.ಸಿ./ಎಸ್‌ಟಿ ವರ್ಗಗಳಿಗೆ ಇಟ್ಟಿರುವುದನ್ನು ನಾವು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇವೆ. ಆ ವರ್ಗಗಳಿಗೆ ಕೊಡಲೇ

ಬೇಕು. ಎಸ್.ಸಿ.ಎಸ್.ಪಿ.ಗೆ ರೂ. 31,804 ಕೋಟಿ ಮತ್ತು ಟಿ.ಎಸ್.ಪಿ.ಗೆ ರೂ. 12,828 ಕೋಟಿ ಮೀಸಲಿಟ್ಟಿದ್ದಾರೆ. ಅಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಹಣವನ್ನು ಇಟ್ಟಿದ್ದಾರೆ. ನಾನು ಏಕೆ ಈ ಮಾತನ್ನು ಹೇಳಿದೆ ಎಂದರೆ, ಜನಸಂಖ್ಯೆಗೆ ಅನುಗುಣವಾಗಿ ಕೊಟ್ಟಿರುವುದು ದೊಡ್ಡ ಸಾಧನೆಯಾಗಿದೆ. ನಾನು 51% ಇರುವಂತಹ ವರ್ಗದಿಂದ ಬಂದಿದ್ದೇನೆ. ನಮಗೆ ಕೇವಲ ರೂ. ರೂ.3,800 ಕೋಟಿ ಕೊಟ್ಟಿದ್ದಾರೆ. ಇನ್ನೊಬ್ಬರಿಗೆ ಹೆಚ್ಚು ಕೊಟ್ಟಿದ್ದಾರೆ ಎಂದು ಅಸೂಯೆ ಪಡುವುದಿಲ್ಲ; ಅದನ್ನು ಸ್ವಾಗತ ಮಾಡುತ್ತೇವೆ. ಆ ಭಾವನೆಯನ್ನು ಅರ್ಥ ಮಾಡಿಕೊಳ್ಳಬೇಕು. ಮೇಲ್ವರ್ಗದ ಜನ ಅವರ ಜನಸಂಖ್ಯೆಗೆ ಅನುಗುಣವಾಗಿ ಹಣ ಕೊಡಬೇಕೆಂದು ಕೇಳಲು ಪ್ರಾರಂಭಿಸಿದರೆ ಅದು ಎಲ್ಲಿ ಹೋಗುತ್ತದೆ ಎಂದು ಆಲೋಚನೆ ಮಾಡಬೇಕು. ದಲಿತರ ಅಭಿವೃದ್ಧಿಗೆಂದು ಏನು ಹಣ ಇಟ್ಟಿದ್ದಾರೋ ಅದನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ. ಮಹಿಳಾ ಆಯವ್ಯಯದ ಹಂಚಿಕೆಗೆ ರೂ. 94,663 ಕೋಟಿ ಕೊಟ್ಟಿದ್ದಾರೆ.

(ಈ ಹಂತದಲ್ಲಿ ಮಾನ್ಯ ರಮೇಶ್ ಬಾಬುರವರು ಸದನದಿಂದ ನಿರ್ಗಮಿಸುತ್ತಿದ್ದರು)

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ, ಮಾನ್ಯ ನಾಗರಾಜುರವರು ಮಾತನಾಡುತ್ತಿರುವಾಗ ಎದ್ದು ಹೋದರೆ ಹೇಗೆ? ದಯವಿಟ್ಟು ಕುಳಿತುಕೊಳ್ಳಿ.

(ಸದನದಲ್ಲಿ ನಗು)

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಗಳೆ, ನೀವು ಒಳ್ಳೆಯ ಮಾತನ್ನು ಹೇಳಿದಿರಿ. ಮಾನ್ಯ ರವಿಕುಮಾರ್‌ರವರು ಪ್ರೀತಿಯಿಂದ ಕುಳಿತುಕೊಂಡು ಕೇಳುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ನಾಗರಾಜುರವರು ಮಾತನಾಡುವಾಗ ಎಲ್ಲರೂ ಕುಳಿತುಕೊಂಡಿರಬೇಕಾಗುತ್ತದೆ.

**ಶ್ರೀ ಎಂ.ನಾಗರಾಜು:- ಮಾನ್ಯ** ರವಿಕುಮಾರ್‌ರವರು ಮಧ್ಯದಲ್ಲಿ ಏನೂ ಮಾತನಾಡಿಲ್ಲ. ಅದಕ್ಕೋಸ್ಕರ ಅವರ ಹೆಸರನ್ನು ಹೇಳಿದೆ.

**ಶ್ರೀ ಎನ್.ರವಿಕುಮಾರ್:-** ಅವರು ಮನಸ್ಸಿನಲ್ಲಿರುವುದನ್ನು ಮಾತನಾಡಿ. ಹೊರಗಡೆ ಇರುವುದನ್ನು ಏಕೆ ಸುಮ್ಮನೆ ಮಾತನಾಡುತ್ತಿದ್ದಾರೆ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ. ನಾಗರಾಜು:-** ನನ್ನ ಮನಸ್ಸು, ಹೃದಯ ಎಲ್ಲವೂ ಕಾಂಗ್ರೆಸ್‌ನ ಸಿದ್ಧಾಂತದ ಮೇಲೆಯೇ ಇರುತ್ತದೆ.

**ಶ್ರೀ ಎನ್.ರವಿಕುಮಾರ್:-** ನಾವಿಬ್ಬರು ಬಜೆಟ್ ಬಗ್ಗೆ ಏನು ಮಾತನಾಡಿದೆವೋ ಅದನ್ನು ಕುರಿತು ಹೇಳಿ.

(ಸದನದಲ್ಲಿ ನಗು)

**ಸಭಾಪತಿಯವರು:-** ಏನು ಮಾತನಾಡಿದ್ದೀರಿ ಹೇಳಿ. ನೀವಿಬ್ಬರು ಏನು ಮಾತನಾಡಿದ್ದೀರಿ ಎಂಬುದನ್ನು ಹೇಳಬೇಕು.

**ಶ್ರೀ ಎಂ.ನಾಗರಾಜು:-** ಅದನ್ನೇ ಹೇಳುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್:-** ಬಜೆಟ್ ಏನೇನೂ ಉಪಯೋಗವಿಲ್ಲ ಎಂದು ಹೇಳಿದ್ದಾರೆ.

**ಶ್ರೀ ಎಂ.ನಾಗರಾಜು:-** ಬಿ.ಜೆ.ಪಿ.ಯ ಬಜೆಟ್‌ಗಳು ಏನೇನೂ ಉಪಯೋಗವಿಲ್ಲ ಎಂದು ಹೇಳಿರುವುದು ನಿಜ, ಬಿ.ಜೆ.ಪಿ.ಯವರು ಜನಗಳ ಪರ ಇಲ್ಲ ಎಂದು ಹೇಳಿರುವುದು ನಿಜ, ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯವನ್ನು ಮಲತಾಯಿ ಧೋರಣೆಯಿಂದ ನೋಡುತ್ತಿದೆ ಎಂದು ಹೇಳಿರುವುದು ನಿಜ, ಇವರು ಮೋಸಗಾರರು ಎಂದು ಹೇಳಿರುವುದು ನಿಜ. ಆದರೆ ಕಾಂಗ್ರೆಸ್ ಪಕ್ಷ ಆ ತಪ್ಪುಗಳನ್ನು ಸರಿ ಮಾಡುವಂತಹ ಕೆಲಸವನ್ನು ಮಾಡುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಖಾಲಿ ಇರುವ 56,432 ಹುದ್ದೆಗಳನ್ನು ತುಂಬಿಕೊಳ್ಳುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿರುವುದು ಬಹಳ ದೊಡ್ಡ ವಿಚಾರವಾಗಿದೆ. ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಂತಹ ಕೆಲಸ ಮಾಡುತ್ತಿದ್ದೇವೆ. ಆದರೆ ದೇಶದಲ್ಲಿ ಹಿಂದಿನ 45 ವರ್ಷಗಳ ಅವಧಿಯಲ್ಲಿ ಇಲ್ಲದೇ ಇದ್ದ ನಿರುದ್ಯೋಗ ಸಮಸ್ಯೆಯ ಪ್ರಮಾಣ ಈಗಿರುವ ಕೇಂದ್ರ ಸರ್ಕಾರ ಬಂದ ಮೇಲೆ ಅತಿ ಹೆಚ್ಚಾಗಿದೆ ಎಂದು ಹೇಳಬೇಕಾಗುತ್ತದೆ. ನಾವು ಟೀಕೆ-ಟಿಪ್ಪಣಿಗಳನ್ನು ಮಾಡುವಾಗ ಇವರು ಸಹಿಸಿಕೊಳ್ಳುವುದಿಲ್ಲ. ಅವರು ಹಲವಾರು ಬಾರಿ ನಮ್ಮ ಸರ್ಕಾರವನ್ನು ಟೀಕೆ ಮಾಡುವಾಗ ಅದನ್ನು ಸ್ವಾಗತ ಮಾಡಿದ್ದೇವೆ. ತಪ್ಪಿದ್ದರೆ ತಿದ್ದಿಕೊಳ್ಳುವಂತಹ ಕೆಲಸ ಕೂಡ ಮಾಡುತ್ತೇವೆ. ಕಳೆದ ಬಾರಿ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸುಮಾರು ರೂ. 8,600 ಕೋಟಿ ಖರ್ಚು ಮಾಡಿರುವುದನ್ನು ಮಾನ್ಯ ಸಿದ್ದರಾಮಯ್ಯನವರು ದಾಖಲೆ ಸಮೇತ ಹೇಳಿದ್ದಾರೆ. ಈ ವರ್ಷ ಅದೇರೀತಿ ರೂ. 4,000 ಕೋಟಿಗಳನ್ನು ಕೇವಲ ರಸ್ತೆಗಳಿಗೆ ಮತ್ತು ಅಭಿವೃದ್ಧಿ ಕೆಲಸಗಳಿಗೆ ನೀಡಲಾಗಿದೆ.

(ಮುಂದು)

(312) 11-3-2026 2.00 ಡಿಎಸ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ತಮಗೆ ಇನ್ನು ಎಷ್ಟು ನಿಮಿಷ ಬೇಕು?

**ಶ್ರೀ ಎಂ.ನಾಗರಾಜು:-** 10 ನಿಮಿಷ ಬೇಕಾಗುತ್ತದೆ.

**ಸಭಾಪತಿಯವರು:-** ಇನ್ನು 5 ನಿಮಿಷದಲ್ಲಿ ಮುಕ್ತಾಯಗೊಳಿಸಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಆಗಲಿ; ತಾವು ಹೇಳಿದ ಮಾತನ್ನು ನಾನು ದಾಟುವುದಿಲ್ಲ.

ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ವಿಚಾರ ಬಂದಾಗಲೂ ಕೂಡ 26,559 ಕೋಟಿ ರೂಪಾಯಿಗಳನ್ನು ಬಹಳ ಪ್ರಮುಖವಾಗಿರುವಂತಹ ಕಾರ್ಯಕ್ರಮಗಳಿಗೆ ಖರ್ಚು ಮಾಡಲಾಗಿದೆ. ಇಲ್ಲಿ ನಮಗೆ ಅನ್ಯಾಯವಾಗಿರುವುದು ಜಲ ಜೀವನ್ ಮಿಷನ್ ಯೋಜನೆಯಡಿ ಕೇಂದ್ರ ಸರ್ಕಾರ ಕೊಡಬೇಕಾಗಿರುವ ಅನುದಾನಗಳಲ್ಲಿ ಹಲವಾರು ಬಾರಿ ನಮಗೆ ಖೋತಾ ಆಗಿರುವುದನ್ನು ನೋಡಿದಾಗ ನಾವು ಎಲ್ಲೋ ಒಂದು ಕಡೆ ಸಾಲ ಮಾಡುವುದಕ್ಕೆ ಅದು ಕೂಡ ಒಂದು ಕಾರಣ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಜಲ ಜೀವನ್ ಮಿಷನ್ ಯೋಜನೆ ಎನ್ನತಕ್ಕಂಥದ್ದು ಮನೆ ಮನೆಗೆ ನೀರು ಕೊಡುವಂತಹ ವಿಚಾರದಲ್ಲಿ ಕರ್ನಾಟಕ ಸರ್ಕಾರವು ಸಹಕಾರ ವ್ಯಕ್ತಪಡಿಸಿದ್ದರೂ ಕೂಡ ಸಾವಿರಾರು ಕೋಟಿ ರೂಪಾಯಿಗಳು ಇವತ್ತಿನವರೆಗೆ ಪೆಂಡಿಂಗ್ ಇಟ್ಟುಕೊಂಡಿರುವುದರಿಂದ ನಾವು ಕಳೆದ ಬಾರಿ ನಮ್ಮ ಬಜೆಟ್‌ನಲ್ಲಿ ಕೊರತೆಯಾಗುವುದಕ್ಕೆ ಕಾರಣವಾಯಿತು ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಅದನ್ನು ಮುಂದಿನ ದಿನಗಳಲ್ಲಿ ಬಿ.ಜೆ.ಪಿ. ಪಕ್ಷದ ಸದಸ್ಯರುಗಳು ಕೇಂದ್ರ ಸರ್ಕಾರದೊಂದಿಗೆ ಮಾತನಾಡಿ ಅದನ್ನು ಸರಿ ಮಾಡುವಂತಹ ಕೆಲಸ ಮಾಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

ಬೆಂಗಳೂರು ನಗರದ ಅಭಿವೃದ್ಧಿಗೋಸ್ಕರ 7,000 ಕೋಟಿ ರೂಪಾಯಿಗಳ ಅನುದಾನವನ್ನು ಮೀಸಲು ಇಟ್ಟುಕೊಂಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ನಗರಾಭಿವೃದ್ಧಿಯಲ್ಲಿ ರಾಯಚೂರು, ಬೀದರ್, ಮತ್ತು ಹಾಸನ ಮಹಾನಗರ ಪಾಲಿಕೆಗಳಿಗೆ ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ 2.0 ಅಡಿಯಲ್ಲಿ ಸುಮಾರು 200 ಕೋಟಿ ರೂಪಾಯಿಗಳನ್ನು ಇಟ್ಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಧಾರವಾಡದಲ್ಲಿ ನಾಲ್ಕು ಮತ್ತು ಬೆಂಗಳೂರಿನಲ್ಲಿ ಎರಡು ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಆಲೋಚನೆ ಮಾಡಿರುವಂಥದ್ದು ಬಹಳ ಸ್ವಾಗತಾರ್ಹ ಕ್ರಮ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲೂ ಕೂಡ ಹೆಚ್ಚು ಒತ್ತನ್ನು ನೀಡಿ Artificial Intelligence ಯನ್ನು ಕೂಡ ಅಭಿವೃದ್ಧಿಗೊಳಿಸುವುದಕ್ಕೋಸ್ಕರ ಸುಮಾರು ಹಣವನ್ನು

ಮೀಸಲಿಟ್ಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಹೊಸ ತಾರಾಲಯಗಳನ್ನು ವಿಜಯನಗರ, ಬಳ್ಳಾರಿ, ಚಿತ್ರದುರ್ಗ, ಯಾದಗಿರಿ, ಕೊಪ್ಪಳ ಹಾಗೂ ಬೀದರ್ ಜಿಲ್ಲೆಗಳಲ್ಲಿ ಒಟ್ಟು 24 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು ಎಂದು ಆಯವ್ಯಯದಲ್ಲಿ ಹೇಳಲಾಗಿದೆ. ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಸದನದಲ್ಲೇ ಇರುವುದರಿಂದ ಕೇಳಿಕೊಳ್ಳಬಹುದು. ಗ್ರಾಮೀಣ ಪ್ರದೇಶದ ಯುವಕರಿಗೆ ಬಹಳ ಉಪಯೋಗವಾಗುವಂತಹ ಕಾರ್ಯಕ್ರಮ ಕೊಟ್ಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ.

ಲೋಕೋಪಯೋಗಿ ಇಲಾಖೆಗೂ ಕೂಡ ನಮ್ಮ ರಾಜ್ಯ ಸರ್ಕಾರದಲ್ಲಿರುವಂತಹ State Highway ಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ 11,424 ಕೋಟಿ ರೂಪಾಯಿಗಳನ್ನು ಕೊಟ್ಟು ಈ ರಾಜ್ಯದ ಹೆದ್ದಾರಿಗಳನ್ನು ಅಭಿವೃದ್ಧಿಗೊಳಿಸುವುದಕ್ಕೋಸ್ಕರ ಕ್ರಮ ಕೈಗೊಂಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ.

ಗೃಹಜ್ಯೋತಿ ಯೋಜನೆಗೆ ಮತ್ತು KUSUM-C ಯೋಜನೆಯಡಿ 2,777 ಮೆಗಾವ್ಯಾಟ್ ಸಾಮರ್ಥ್ಯದ ಸೋಲಾರ್ ವಿದ್ಯುತ್ ಉತ್ಪಾದನೆ ಮಾಡುವುದಕ್ಕೋಸ್ಕರ ಹಣಕಾಸನ್ನು ಮೀಸಲಿಡಲಾಗಿದೆ. ರೈತರಿಗೆ ಸೌರ ಕೃಷಿ ಯೋಜನೆ ಎಂಬ ಹೊಸ ಯೋಜನೆಗೆ 10,500 ಕೋಟಿ ರೂಪಾಯಿಗಳ ವೆಚ್ಚದಲ್ಲಿ 3,000 ಮೆಗಾವ್ಯಾಟ್ ವಿದ್ಯುತ್ ಸ್ಥಾವರಗಳನ್ನು ಸ್ಥಾಪನೆ ಮಾಡುವುದಕ್ಕೆ ಆಲೋಚನೆ ಮಾಡಿರುವುದು ಕೂಡ ಪ್ರಗತಿಪರವಾಗಿರುವಂತಹ ಗ್ರಾಮೀಣಾಭಿವೃದ್ಧಿಗೆ ಮಾಡುತ್ತಿರುವಂತಹ ಬಹು ದೊಡ್ಡ ಕೊಡುಗೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಶಕ್ತಿ ಯೋಜನೆ ಬಗ್ಗೆ ನಿನ್ನೆಯೂ ಕೂಡ ಮಾನ್ಯ ರಾಮಲಿಂಗಾರೆಡ್ಡಿಯವರು ಮಾತನಾಡಿದ್ದಾರೆ. ಬೆಂಗಳೂರು ನಗರದ ಬಗ್ಗೆ ಬಹಳ ಪ್ರೀತಿ ತೋರಿಸುವಂತಹ ಜನರು ಇದ್ದಾರೆ. 3-3 ಎಂ.ಪಿ.ಗಳು ಗೆದ್ದಿರುವಂಥವರು ಇದ್ದಾರೆ. ಆದರೆ ಬೆಂಗಳೂರು ನಗರದಲ್ಲಿರುವ ಮೆಜೆಸ್ಟಿಕ್ ಅನ್ನು ಅಭಿವೃದ್ಧಿಗೊಳಿಸಬೇಕೆನ್ನುವ ಬಗ್ಗೆ ಕಾಳಜಿ ಇರಲಿಲ್ಲ. ನಮ್ಮ ಸಚಿವರು ಅದರ ಬಗ್ಗೆ ಆಲೋಚನೆ ಮಾಡಿ ಸಿಂಗಾಪುರ ಮಾದರಿಯಲ್ಲಿ ಮಾಡುತ್ತೇನೆ ಎಂದು ಹೇಳಿದ್ದಾರೆ. ಅದಕ್ಕೆ ರಾಜ್ಯ ಸರ್ಕಾರದ ಅನುಮತಿ ಮತ್ತು ಬೆಂಬಲ ಕೂಡ ಇದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಏಕೆಂದರೆ, ಬೆಂಗಳೂರು ನಗರ, it is a fastest growing city in the world. ಅದನ್ನು ಅಭಿವೃದ್ಧಿ ಮಾಡುವ ಕೆಲಸದಲ್ಲಿ ಬೆಂಗಳೂರು ನಗರಕ್ಕೆ investment ಜೊತೆಗೆ ಶಿಕ್ಷಣ, ಆರೋಗ್ಯ, ನಗರಾಭಿವೃದ್ಧಿ ಮತ್ತು ಉದ್ಯೋಗಗಳನ್ನು ಸೃಷ್ಟಿ ಮಾಡುವಂತಹ ಕೆಲಸ ಇರಬಹುದು. ಟೆಕ್ನಾಲಜಿಯಲ್ಲೂ ಕೂಡ ಮುಂಚೂಣಿಯಲ್ಲಿರುವಂತಹ ರಾಜ್ಯಕ್ಕೆ ಕೋಟ್ಯಾಂತರ ರೂಪಾಯಿಗಳ ಸಹಾಯ ಮತ್ತು ಅನುದಾನಗಳನ್ನು ಕೊಟ್ಟು

ಎಲ್ಲರೂ ಸರ್ವತೋಮುಖವಾಗಿ ಬೆಂಗಳೂರಿನ ಜೊತೆಗೆ ಎಲ್ಲಾ ಭಾಗಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಈ ಬಜೆಟ್‌ನಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ವಿಶೇಷವಾಗಿ ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕದ ಅಭಿವೃದ್ಧಿ ಮಂಡಳಿಗಳಿಗೋಸ್ಕರ ಸಾವಿರಾರು ಕೋಟಿ ರೂಪಾಯಿಗಳನ್ನು ಈ ಬಜೆಟ್‌ನಲ್ಲಿ ಮೀಸಲಿಟ್ಟಿರುವುದರಿಂದ ಒಟ್ಟಾರೆಯಾಗಿ ಕಲ್ಯಾಣ ಕರ್ನಾಟಕ, ಮಧ್ಯ ಕರ್ನಾಟಕ, ಕಿತ್ತೂರು ಕರ್ನಾಟಕ ಮತ್ತು ಹಳೆ ಮೈಸೂರು, ಬೆಂಗಳೂರು ಒಳಗೊಂಡಂತೆ ಪ್ರಗತಿಪರವಾಗಿರುವಂತಹ ರಾಜ್ಯವನ್ನು ಕಟ್ಟುವುದಕ್ಕೆ ಮಾನ್ಯ ಸಿದ್ಧರಾಮಯ್ಯನವರು ಕೊಟ್ಟಿರುವಂತಹ ಬಜೆಟ್ ಅನ್ನು ನಾನು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ. ನಾನು ಸದನದಲ್ಲೂ ಮನವಿ ಮಾಡುತ್ತೇನೆ, ಇಂತಹ ಪಗ್ರತಿಪರವಾದ ಬಜೆಟ್ ಅನ್ನು ಸರ್ವಾನುಮತದಿಂದ ಒಪ್ಪಿಗೆ ನೀಡಿ ರಾಜ್ಯವನ್ನು ಒಟ್ಟಾರೆಯಾಗಿ ಬೆಳವಣಿಗೆ ಮಾಡಬೇಕಾಗುತ್ತದೆ. ಚುನಾವಣೆ ಸಂದರ್ಭದಲ್ಲಿ ನಾವು ಬೇರೆ ಇರಬಹುದು, ಅವರು ಬೇರೆ ಇರಬಹುದು, ರಾಜ್ಯವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಬೇಕಾಗುತ್ತದೆ. ಮಾನ್ಯ ರವಿಕುಮಾರ್‌ರಂಥವರು ಕೊಂಕು ಮಾತುಗಳನ್ನಾಡದೆ ಇದನ್ನು ಸ್ವಾಗತ ಮಾಡಲಿ ಎಂದು ಹೇಳುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಸಭಾಪತಿಯವರು:-** ನಾನು ಇಬ್ಬರೂ ಮುಖ್ಯ ಸಚೇತಕರುಗಳಿಗೆ ಹೇಳುತ್ತಿದ್ದೇನೆ. ಮುಖ್ಯವಾದ ವಿಷಯಗಳನ್ನು ಮಾತನಾಡುತ್ತಿರುತ್ತಾರೆ. ಮಧ್ಯಾಹ್ನ ಮಾನ್ಯ ಸದಸ್ಯರುಗಳು ಇರಬೇಕು ಮತ್ತು ಮಾನ್ಯ ಸಚಿವರುಗಳು ಸದನದಲ್ಲಿರಬೇಕು. ಇಷ್ಟೆಲ್ಲಾ ಮಾತನಾಡುತ್ತಿರುತ್ತಾರೆ, ಸದಸ್ಯರುಗಳು ಇಲ್ಲ ಎಂದರೆ ಹೇಗೆ? ಸದಸ್ಯರುಗಳು ಕುಳಿತುಕೊಂಡು ಅವರ ಮಾತುಗಳನ್ನು ಕೇಳಬೇಕಾಗುತ್ತದೆ. ಡಾ॥ ತಳವಾರ್ ಸಾಬಣ್ಣರವರೇ, ಅವರು ಮಾತುನಾಡುವುದನ್ನು ಕೇಳಬೇಕು. ನೀವು ನನ್ನ ಜೊತೆಯಲ್ಲಿ ಜಗಳ ಮಾಡುತ್ತಿದ್ದೀರಿ. ಅವರು ಅದನ್ನೇ ಮಾತನಾಡಿದ್ದಾರೆ. ನೀವು ಅವರು ಮಾತನಾಡುವುದನ್ನು ಕೇಳಬೇಕು.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ನಾನು ಕೇಳಿಸಿಕೊಳ್ಳದಿದ್ದರೂ ಶಬ್ದಗಳು ಕಿವಿಯೊಳಗೆ ಹೋಗುತ್ತವೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕೆಲವನ್ನು ಕೇಳಬೇಕು ಎಂದುಕೊಳ್ಳುತ್ತೇವೆ. ಆದರೆ ಸಮಸ್ಯೆ ಏನೆಂದರೆ, ಅವರು ಹೋಗುವ ಸ್ಪೀಡ್‌ನಲ್ಲಿ ಅವರು ಏನು ಹೇಳಿದರು ಎಂದು ಯಾರಿಗೂ ಗೊತ್ತಿರುವುದಿಲ್ಲ. ಮತ್ತೆ ಯಾರೂ ಮಾತನಾಡುವುದಿಲ್ಲ.

**ಸಭಾಪತಿಯವರು:–** ಇವತ್ತು ಸ್ಪೀಡ್ ಇಲ್ಲ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಅವರಿಗೆ ಅಸೂಯೆ ಅಷ್ಟೆ. ನಮ್ಮ ಹಳೆ ಕಥೆಯೆಲ್ಲಾ ಹೇಳುತ್ತಾರಲ್ಲಾ, ನಾವು ಬಿ.ಜೆ.ಪಿ.ಯವರು ಇಷ್ಟು ಸಾಲ ಮಾಡಿದ್ದೇವೆಯೇ, ಇದೆಲ್ಲಾ ಹೇಳುತ್ತಿದ್ದಾರೆ ಎಂದು ಅಸೂಯೆ ಪಟ್ಟುಕೊಳ್ಳುತ್ತಾರೆಯೇ ಹೊರತು ಬೇರೆ ಏನು ಇರುವುದಿಲ್ಲ. ಮಾನ್ಯ ನಾರಾಯಣಸ್ವಾಮಿಯವರಿಗೆ ಎಲ್ಲಾ ಅರ್ಥವಾಗುತ್ತದೆ. ಆದರೆ ಆ ರೀತಿ pretend ಮಾಡುತ್ತಾರೆ. ಏಕೆಂದರೆ, ಅವರಿಗೆ ಸತ್ಯವನ್ನು ಒಪ್ಪಿಕೊಳ್ಳುವಂತಹ ಧೈರ್ಯವಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಸಭಾಪತಿಯವರು:–** ಸದನವನ್ನು ಮಧ್ಯಾಹ್ನ 3 ಗಂಟೆ 15 ನಿಮಿಷಗಳವರೆಗೆ ಮುಂದೂಡಲಾಗಿದೆ.

**(ಭೋಜನಕ್ಕಾಗಿ ಅಪರಾಹ್ನ 2 ಗಂಟೆ 6 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಅಪರಾಹ್ನ 3 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

(313) 11.03.2026 03.40 ಎಸ್‌ವಿ-ಎಂಡಿ

**(ಭೋಜನ ವಿರಾಮಕ್ಕಾಗಿ ಅಪರಾಹ್ನ 2 ಗಂಟೆ 6 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಅಪರಾಹ್ನ 03 ಗಂಟೆ 45 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು)**

**ಸಭಾಪತಿಯವರು:-** ಮಾನ್ಯ ಶಿವರಾಜ್ ತಂಗಡಗಿಯವರೆ, ಕೆಳಮನೆಯಲ್ಲಿರುತ್ತೇನೆಂದು ಹೇಳಿದಿರಿ..ನಾನು ಬೇಡವೆಂದು ಹೇಳಿದೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಾದ ರಹೀಂ ಖಾನ್ ಅವರನ್ನು ಸ್ವಲ್ಪ ಕರೆಸಿ. ಕಳೆದ ಮೂರು ದಿನಗಳಿಂದ ಕೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಹೇಮಲತಾ ನಾಯಕ್ ಅವರೆ, ಹೇಳಿ ಕಳುಹಿಸಿದ್ದೇನೆ. ಮಾನ್ಯ ಸಭಾನಾಯಕರೆ, ಮಾನ್ಯ ರಹೀಂ ಖಾನ್ ಅವರನ್ನು ಕರೆಸಿ. ನಿಮ್ಮ ವಿಷಯ ಕೊನೆಯಲ್ಲಿದೆ. ಮಾನ್ಯ ಕೇಶವ ಪ್ರಸಾದ್‌ರವರು ಸದನದಲ್ಲಿ ಉಪಸ್ಥಿತರಿಲ್ಲ.

ಮಾನ್ಯ ಕಂದಾಯ ಮಂತ್ರಿಗಳು ಇನ್ನೂ ಬಂದಿಲ್ಲ. ಮಾನ್ಯ ತಂಗಡಗಿಯವರ ವಿಷಯ ಯಾವುದು? ಮಾನ್ಯ ತಳವಾರ್ ಸಾಬಣ್ಣ ಅವರೆ, 5 ನಿಮಿಷ ಮಾತನಾಡಿ. ಮುಂಜಾನೆ ಬಹಳ ಗರಂ ಆಗಿದ್ದರು. ಅದಕ್ಕೆ ಸ್ವಲ್ಪ ಸಮಾಧಾನ ಮಾಡೋಣ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೆ, ನನ್ನ ಮೇಲಿನ ಸಿಟ್ಟು ಕಡಿಮೆಯಾಗಿದೆಯೆಂದು ಭಾವಿಸಿದ್ದೇನೆ. ಇಲ್ಲದಿದ್ದರೆ ಹೆದರಿಕೊಳ್ಳುತ್ತಾ ಮಾತನಾಡಬೇಕು.

**ಸಭಾಪತಿಯವರು:-** ನಿಮಗೆ ಸಮಾಧಾನವಾಗಿದೆಯೇ? ಏಕೆಂದರೆ ನಾವೂ-ನೀವೂ ಒಂದೇ ಜಾತಿ, ಶಿಕ್ಷಕರ ಜಾತಿ. ಐದು ನಿಮಿಷ ಮಾತನಾಡಿ.

## ೬. ನಿಯಮ ೩೩೦ರ ಮೇರೆಗೆ ಚರ್ಚೆ

**ಅ) ವಿಷಯ: ಹಿಂದುಳಿದ ವರ್ಗಗಳಲ್ಲಿ ಬರುವ ಜಾತಿಗಳ ಕುಲಕಸುಬುಗಳು ನಶಿಸುತ್ತಿರುವುದರಿಂದ ಅವುಗಳನ್ನು ಉತ್ತೇಜಿಸಿ ಆರ್ಥಿಕ ಭದ್ರತೆ ಕಲ್ಪಿಸುವ ಕುರಿತು.**

---------

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಆಗಲಿ ಮಾನ್ಯ ಸಭಾಪತಿಯವರೆ, ಧನ್ಯವಾದಗಳು.

ಇದೊಂದು ವಿಶಿಷ್ಟವಾಗಿರುವಂತಹ ವಿಷಯ. ವಾಸ್ತವದಲ್ಲಿ ಹಲವಾರು ಸಮಾಜಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ಬಹಳ ನಿರಾಶೆಯಾಗುವಂತಹ ಭಾವನೆ ಮತ್ತು ಜೀವನವನ್ನು ನಡೆಸುತ್ತಿದ್ದಾರೆ. ಅದು ಯಾವುವೆಂದರೆ ಜಾತಿಗಳ ಕುಲ-ಕಸುಬುಗಳು ಎಂದು ನಾನು ತೆಗೆದುಕೊಂಡಿದ್ದೇನೆ. ನಮ್ಮ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಯು ಪ್ರಮುಖವಾಗಿದೆ. ಇತಿಹಾಸಕಾರರ ಪ್ರಕಾರ ಈ ಎಲ್ಲಾ ಜಾತಿಗಳು ಕಸುಬುಗಳ ಆಧಾರಿತವಾಗಿದೆ. ಅಂದರೆ ಒಂದೊಂದು ಕಸುಬಿಗೆ ಒಂದೊಂದು ಜಾತಿ ಹುಟ್ಟುತ್ತಾ ಹೋಯಿತು. ಈ ಕಸುಬುಗಳು ಜಾತಿ ಆಧಾರಿತವಾಗಿರುವುದರಿಂದ ಇವುಗಳನ್ನು ಆಯಾ ಜಾತಿಯ ಕುಲಕಸುಬುಗಳು ಎಂದು ಕರೆಯುತ್ತೇವೆ. ಒಂದು ಕುಲವನ್ನು ಅಥವಾ ಒಂದು ಜಾತಿಯನ್ನು ಗುರುತಿಸುವ ಕಸುಬಿಗೆ ಕುಲಕಸುಬು ಎಂದು ಹೇಳುತ್ತೇವೆ. ಅವರ ಜೀವನ ಆ ಒಂದು ಕಸುಬಿನ ಮೇಲೆ ಅವಲಂಬನೆಗೊಂಡಿರುತ್ತದೆ. ಏಕೆಂದರೆ ನಮ್ಮ ಭಾರತ ದೇಶದಲ್ಲಿ, ನಮ್ಮ ಕರ್ನಾಟಕದಲ್ಲಿ ಇರುವ ಸಾಮಾಜಿಕ ವ್ಯವಸ್ಥೆಯಲ್ಲಿ ಸಾವಿರಾರು ಕುಟುಂಬಗಳು ಸಾವಿರಾರು ವರ್ಷಗಳಿಂದ ಈ ಕುಲ ಕಸುಬುಗಳನ್ನು ನೆಚ್ಚಿಕೊಂಡೇ ತಮ್ಮ ಜೀವನ ನಡೆಸುತ್ತಿದ್ದಾರೆ. ಅವರ ಸಾಮಾಜಿಕ ಸ್ಥಿತಿ, ಆರ್ಥಿಕ ಸ್ಥಿತಿ ಪ್ರತಿಯೊಂದು ಅವರ ಕುಲ ಕಸುಬಿನ ಮೇಲೆ ಆಧಾರಿತವಾಗಿದೆ. ಯಾರನ್ನು ಕರೆಯಬೇಕಾದರೂ ಈ ಸಮಾಜದವರು ಅಥವಾ ಈ ಜಾತಿಯವರು ಇಂಥ ಕಸುಬನ್ನು ಮಾಡುವವರು ಎಂದು ಸಹಜವಾಗಿ ಹೇಳುತ್ತಿರುತ್ತಾರೆ. ಅಂಥ ಕುಟುಂಬಗಳ ಅಸ್ತಿತ್ವವು ಕಸುಬುಗಳ ಆಧಾರಿತವಾಗಿದೆ. ಇಂಥ ಸಾಂಪ್ರದಾಯಿಕವಾದ ಕುಲಕಸುಬು ಇವತ್ತು ಆಧುನಿಕ ಯುಗದ ಸುಂಟರಗಾಳಿಗೆ ಸಿಲುಕಿ ತತ್ತರಿಸಿ ಹೋಗುತ್ತಿರುವುದರಿಂದ ಆ ಕುಲಕಸುಬುಗಳನ್ನು ನೆಚ್ಚಿಕೊಂಡಿರುವಂಥ ಕುಟುಂಬಗಳ ಜೀವನವೂ ಸಹ ತತ್ತರಿಸಿ ಹೋಗುತ್ತಿದೆ. ಬಹಳ ಗಂಭೀರವಾಗಿರುವಂಥ ಪರಿಸ್ಥಿತಿಯನ್ನು ನಾವಿಲ್ಲಿ ಕಾಣುತ್ತೇವೆ. ಆಧುನಿಕ ಮತ್ತು ತಾಂತ್ರಿಕ ಯುಗದಲ್ಲಿ ತಾಂತ್ರಿಕತೆ ಪ್ರತಿದಿನ, ಪ್ರತಿಕ್ಷಣ ಬದಲಾವಣೆಯಾಗುತ್ತಿದೆ. ತಾಂತ್ರಿಕತೆ ಬದಲಾವಣೆಯಾದಂತೆ ಆರ್ಥಿಕ ಜೀವನವೂ ಸಹ ಬದಲಾವಣೆಯಾಗುತ್ತಾ ಹೋಗುತ್ತದೆ. ಆರ್ಥಿಕ ಜೀವನವು ಬದಲಾವಣೆಯಾದಂತೆ

ವಸ್ತುಗಳಿಗೆ ಇರುವಂಥ ಬೇಡಿಕೆಯೂ ಸಹ ಬದಲಾವಣೆಯಾಗುತ್ತಾ ಹೋಗುತ್ತದೆ. ಈ ಬೇಡಿಕೆಯಲ್ಲಿ ಆಗಿರುವ ಬದಲಾವಣೆಯ ಕಾರಣಕ್ಕಾಗಿ ಇವತ್ತು ಈ ಕುಲಕಸುಬುಗಳು ಬಹಳ ಚಿಂತಾಜನಕ ಸ್ಥಿತಿಯಲ್ಲಿರುವುದನ್ನು ನಾವಿಲ್ಲಿ ಕಾಣುತ್ತಿದ್ದೇವೆ. ಈ ಎಲ್ಲಾ ಕುಟುಂಬಗಳು ಸಾಮಾನ್ಯವಾಗಿ ಕುಲಕಸುಬುಗಳನ್ನು ಆಧರಿಸಿದಂತೆ ಕೆಲಸ ಮಾಡುತ್ತಿರುತ್ತವೆ.

ಉದಾಹರಣೆಗೆ ಪ್ರಜಾವಾಣಿ ಪತ್ರಿಕೆಯಲ್ಲಿ "ಅಕ್ಕಸಾಲಿಗರು" ಎಂಬ ವಿಷಯದ ಬಗ್ಗೆ ಒಂದೂವರೆ ಪುಟದಷ್ಟು ಬಹಳ ಅದ್ಭುತವಾದ ಒಂದು ಲೇಖನ ಬಂದಿತ್ತು. ಅದು ನನ್ನ ಬಳಿಯಿದೆ. ಇವತ್ತು ಕಲ್ಯಾಣ್ ಜ್ಯುವೆಲರ್ಸ್‌ನಂಥ ದೊಡ್ಡ ದೊಡ್ಡ ಜ್ಯುವೆಲರಿ ಅಂಗಡಿಗಳನ್ನು ನಾನು ನಗರ ಪ್ರದೇಶಗಳಲ್ಲಿ ನೋಡುತ್ತೇವೆ. ಅಲ್ಲಿ ಶ್ರೀಮಂತರು ಮತ್ತು ಮಧ್ಯಮವರ್ಗದವರು ಹೋಗುತ್ತಾರೆ.

(ಮುಂದು)

(314) 11.03.2026 3.50 ಕೆಜಿ:ಎಕೆ (ಸಭಾಪತಿಯವರ ಉಪಸ್ಥಿತಿ)

**ಡಾ॥ ತಳವಾರ್ ಸಾಬಣ್ಣ (ಮುಂದು):**

ಆದರೆ, ಹಳ್ಳಿಯಲ್ಲಿರುವಂತಹ ಅಕ್ಕಸಾಲಿಗರು ಅವರ ಕುಲಕಸುಬಿನ ಮೇಲೆ ಅವಲಂಬಿತರಾಗಿರುತ್ತಾರೆ. ಅವರ ಜೀವನ ಯಾವ ರೀತಿ ನಡೆಯಬೇಕು? ಇವತ್ತಿನ ದಿವಸ ಹಳ್ಳಿಯಲ್ಲಿರುವವರು ಸಹ ಪಟ್ಟಣಕ್ಕೆ ಬರುತ್ತಾರೆ. ಸಾಮಾನ್ಯವಾಗಿ ಮದುವೆಯ ಸಮಾರಂಭ ಆಗಿರಬಹುದು ಅಥವಾ ಹಬ್ಬಗಳ ಸಮಾರಂಭ ಆಗಿರಬಹುದು ಬಂಗಾರದ ಆಭರಣಗಳನ್ನು ಮಾಡಿಸಿಕೊಳ್ಳಬೇಕಾದರೆ ಅಥವಾ ready made ಆಭರಣಗಳನ್ನು ಖರೀದಿ ಮಾಡಬೇಕಾದರೆ ಪಟ್ಟಣಗಳಿಗೆ ಬರುತ್ತಾರೆ. ಹೀಗಾಗಿ, ಇವತ್ತಿನ ದಿವಸ ಅಕ್ಕಸಾಲಿಗರು ಉದ್ಯೋಗ ಇಲ್ಲದೆ ಒದ್ದಾಡುತ್ತಿದ್ದಾರೆ.

ಮಾನ್ಯ ಸಭಾಪತಿಯವರೇ, ಅದೇ ರೀತಿಯಾಗಿ ಸುಣ್ಣಗಾರರು, ಈ ಸುಣ್ಣವನ್ನು ತಯಾರು ಮಾಡಿ ಅದನ್ನು ಹಳ್ಳಿಗಳಲ್ಲಿ ಮಾರಾಟ ಮಾಡಿಕೊಳ್ಳುತ್ತಾರೆ. ಆದರೆ, ಈಗ ಹಲವಾರು ರೀತಿಯ ಕಂಪನಿಗಳ paint ಗಳು ಬಂದಿವೆ. ಈ ರೀತಿಯ paint ಗಳು ಬಂದಿರುವುದರಿಂದ ಈ ಸುಣ್ಣಗಾರರು ತಯಾರಿಸುವಂತಹ ಸುಣ್ಣಕ್ಕೆ ಬೇಡಿಕೆ ಇಲ್ಲದಂತಾಗಿದೆ. ಈ ರೀತಿಯಾಗಿ ಬಡಿಗರು, ಕುಂಬಾರರು, ಕಂಬಾರರು, ಬುಟ್ಟಿ ನೇಯುವವರು, ಕಲ್ಲು ಹೊಡೆಯುವವರು, ಕಂಬಳಿ ನೇಯುವವರು, ಗಾಣದಿಂದ ಎಣ್ಣೆ ತೆಗೆಯುವವರು, Hair Cutting ಮಾಡುವವರು, ಉಪ್ಪು ತಯಾರಿಸುವವರು, ಗೊಂದಲು ಹಾಕುವವರು ಮತ್ತು ಬಟ್ಟೆ ನೇಯುವವರು ಇದ್ದಾರೆ. ಇದು ಮಾನ್ಯ ಸಚಿವರಿಗೆ ಚೆನ್ನಾಗಿ ಗೊತ್ತಿದೆ. ಈ ಎಲ್ಲಾ ಸಮುದಾಯದವರು ಸಾಮಾನ್ಯವಾಗಿ ಅವರ ಕುಲಕಸುಬುಗಳನ್ನೇ

ಅವಲಂಬಿಸಿಕೊಂಡಿದ್ದಾರೆ. ಈ ಕುಲಕಸುಬುಗಳನ್ನೇ ಅವಲಂಬಿಸಿಕೊಂಡಿರುವಂತಹ ಈ ಸಮುದಾಯದ ಹಿರಿಯರು ತುಂಬಾ ಅಭಿಮಾನದಿಂದ ಅವರ ಕುಲಕಸುಬುಗಳನ್ನು ಬಿಡಲು ಸಿದ್ಧರಿಲ್ಲ. ನಮ್ಮ ಜೀವನವನ್ನೇ ಬೇಕಾದರೆ ಬಿಡುತ್ತೇವೆ. ಆದರೆ, ನಮ್ಮ ಕುಲಕಸುಬುಗಳನ್ನು ಬಿಡುವುದಿಲ್ಲವೆಂದು ಹೇಳುತ್ತಾರೆ.

ಮಾನ್ಯ ಸಭಾಪತಿಯವರೇ, ಇನ್ನೊಂದು ಕಡೆಗೆ ಇಂದಿನ ಯುವಪೀಳಿಗೆ ಈ ಕುಲಕಸುಬುಗಳ ಬಗ್ಗೆ ಬಹಳ ತಾತ್ಸಾರ ತೋರಿಸುತ್ತಾರೆ. ಅವರು ಆಧುನಿಕ ಯುಗದ ಬಗ್ಗೆ, ಆಧುನಿಕ ಉದ್ಯೋಗದ ಬಗ್ಗೆ ಮತ್ತು ಆಧುನಿಕ ಜೀವನ ಶೈಲಿಯ ವ್ಯಾಮೋಹಕ್ಕೆ ಒಳಗಾಗಿ ಈ ಕುಲಕಸುಬುಗಳ ಬಗ್ಗೆ ಆಸಕ್ತಿಯನ್ನು ತೋರಿಸುತ್ತಿಲ್ಲ. ಆದ್ದರಿಂದ, ಈ ಕುಲಕಸುಬುಗಳನ್ನು ಅವಲಂಬಿಸಿಕೊಂಡಿರುವಂತಹ ಈ ಸಮುದಾಯಗಳಿಗೆ ಅವರ ಆರ್ಥಿಕ ಮತ್ತು ಸಮಾಜಿಕ ಭದ್ರತೆಯನ್ನು ಒದಗಿಸಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಹಾಗೆಯೇ, ಈಗಿನ ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಈ ಕುಲಕಸುಬುಗಳನ್ನು ಬದಲಾವಣೆ ಮಾಡಬೇಕಾಗಿದೆ. ಬಡಿಗರು, ಕುಂಬಾರರು ಮತ್ತು ಕಂಬಾರರು ಆಧುನಿಕತೆಗೆ ಬರಬಹುದು. ಆದರೆ, ಅದಕ್ಕೆ ತಕ್ಕಂತೆ ಹಣಕಾಸಿನ ಬೆಂಬಲ, ಸೂಕ್ತ ತರಬೇತಿ ಕೊಡುವುದು ಮತ್ತು ಅದಕ್ಕೆ ಬೇಕಾದಂತಹ ಮಾರುಕಟ್ಟೆಯನ್ನು ಒದಗಿಸಬೇಕಾಗುತ್ತದೆ. ಈ ಮೂಲಕ ಸರ್ಕಾರ ಅವರ ಬೆಂಬಲಕ್ಕೆ ಬರಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಕೊನೆಯದಾಗಿ, ಈ ಕುಲಕಸುಬುಗಳನ್ನು ಕಾಯ್ದುಕೊಂಡು ಹೋಗುವುದಕ್ಕಾಗಿ ಮತ್ತು ಅದನ್ನು ಪೋಷಣೆ ಮಾಡಿಕೊಂಡು ಹೋಗುವುದಕ್ಕಾಗಿ, ನಾವು ಆ ಕುಟುಂಬಗಳಿಗೆ ಬೆಂಬಲ ಕೊಡುವುದಕ್ಕಾಗಿ ನಿಗಮ ಮಾಡುವುದು ಸ್ವಲ್ಪ ಸೂಕ್ತವೆನಿಸುತ್ತದೆ. ನಮ್ಮ ರಾಜ್ಯದಲ್ಲಿ ಹಲವಾರು ನಿಗಮಗಳು ಇವೆ. ಆ ನಿಗಮಗಳು ಯಾವುವು ಸಹ ಈ ಕೆಲಸಕ್ಕೆ ಆಗುತ್ತಿಲ್ಲ. ಹಾಗಾಗಿ, ಈ ಎಲ್ಲಾ ವಿಷಯಗಳನ್ನು ಒಳಗೊಂಡಿರುವಂತಹ ಒಂದು ನೀತಿಯು ಸಹ ಸರ್ಕಾರದಿಂದ ಬರಬೇಕಾಗಿದೆ. ಮಾನ್ಯ ಸಚಿವರು ಇದಕ್ಕೆ ನೀಡುವಂತಹ ಉತ್ತರವನ್ನು ಕೇಳಿ ಕೊನೆಗೆ ನಾನು ಒಂದು ನಿಮಿಷ clarification ಅನ್ನು ಕೇಳುತ್ತೇನೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ,

(ಉತ್ತರವನ್ನು ಲಗತ್ತಿಸಲಾಗಿದೆ)

ಮಾನ್ಯ ಸದಸ್ಯರಾದ ಡಾ॥ ತಳವಾರ್ ಸಾಬಣ್ಣನವರು ನಿಯಮ 330 ರಡಿ ಈ ವಿಷಯವನ್ನು ಕೇಳಿದ್ದು, ಇದಕ್ಕೆ ಈಗಾಗಲೇ ಉತ್ತರವನ್ನು ತಮ್ಮಗೆ ಕಳುಹಿಸಿದ್ದೇನೆ. ಅದು ತಮ್ಮ ಬಳಿ ಇದೆ. ಈ ವಿವಿಧ ಸಮುದಾಯವರ ಉದ್ಯೋಗದ ಮೇಲೆ ಹಾಗೂ ಅವರ ಜೀವನ ಪದ್ಧತಿಯ ಮೇಲೆ ಕೆಲಸವನ್ನು ನಿರ್ವಹಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಈಗಾಗಲೇ 11 ನಿಗಮಗಳನ್ನು ಸ್ಥಾಪನೆ ಮಾಡಲಾಗಿದೆ. ಈ ನಿಗಮಗಳನ್ನು ಸ್ಥಾಪನೆ ಮಾಡುವುದರ ಮೂಲಕ ಈಗಾಗಲೇ ವಿಶ್ವಕರ್ಮ ಜನಾಂಗದವರಿಗೆ 'ಪಂಚವೃತ್ತಿ ಯೋಜನೆ'ಯನ್ನು ಕೊಡುತ್ತಿದ್ದೇವೆ. ಅದೇರೀತಿ ಮರಾಠ ನಿಗಮದಲ್ಲಿ 'Military Hotel' ಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಲಿಂಗಾಯಿತ ಸಮುದಾಯದವರಿಗೆ 'ವಿಭೂತಿ ಘಟಕ'ವನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅಲ್ಲದೇ, ಮಡಿವಾಳ ಸಮುದಾಯಕ್ಕೆ ಸೇರಿದವರಿಗೆ 'ದೋಬಿ ವೃತ್ತಿ'ಯನ್ನು ಮಾಡುವುದಕ್ಕೆ ಬೇಕಾದಂತಹ ಸಲಕರಣೆಗಳನ್ನು ಕೊಡಿಸುವಂತಹದ್ದನ್ನು ಮಾಡುತ್ತಿದ್ದೇವೆ. ಅದೇರೀತಿ ಸವಿತಾ ಸಮುದಾಯದವರಿಗೆ ಅವರ 'ಕ್ಷೌರ ವೃತ್ತಿ'ಗೆ ಬೇಕಾದಂತಹ ಸಲಕರಣೆಗಳನ್ನು ಖರೀದಿ ಮಾಡುವುದಕ್ಕೆ ಮತ್ತು Beautician ಅನ್ನು ಮಾಡುವುದಕ್ಕೆ ಹಾಗೂ ಅವರಲ್ಲಿ 'ನಾದಸ್ವರ'ಗಳನ್ನು ನುಡಿಸುವಂತಹ ವೃತ್ತಿಗಳು ಇದ್ದು, ಇವರೆಲ್ಲರಿಗೂ ಸಹ ಕೊಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, ಅದೇರೀತಿ ಬೆಸ್ತ ಸಮುದಾಯದವರಿಗೆ 'ಮೀನುಗಾರಿಕೆ' ಗೆ ಮತ್ತು ಕುರುಬ ಸಮುದಾಯದವರಿಗೆ 'ಕುರಿ ಸಾಕುವುದಕ್ಕೆ' ಮತ್ತು 'ಕಂಬಳಿ ನೇಯುವುದಕ್ಕೆ' ಹಾಗೂ ದೇವಾಂಗ ಸಮುದಾಯದವರಿಗೆ 'ನೇಕಾರಿಕೆ' ಮಾಡುವುದಕ್ಕೆ ಈಗ 'ಉದ್ಯೋಗ ನೇರ ಸಾಲ ಯೋಜನೆ' ಎಂದು ಮಾಡುತ್ತಿದ್ದೇವೆ. ಈ 'ಉದ್ಯೋಗ ನೇರ ಸಾಲ ಯೋಜನೆ' ಯಲ್ಲಿ ಒಬ್ಬ ವ್ಯಕ್ತಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಅದರೊಳಗೆ ರೂ.20,000 ಗಳ ಸಬ್ಸಿಡಿ ಇರುತ್ತದೆ. ಅವರು ರೂ.80,000.00 ಗಳನ್ನು ಮಾತ್ರ ತುಂಬುತ್ತಾರೆ. ಅದೇ ರೀತಿಯಾಗಿ ನೇರವಾಗಿ ಎರಡು ಲಕ್ಷ ರೂಪಾಯಿಗಳ ಸಾಲವನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇವೆ. ಇದಕ್ಕೆ ಅವರು ಅವರಿಗೆ ಸೇರಿದ ಯಾವುದಾದರೊಂದು ಜಮೀನನ್ನು ಬ್ಯಾಂಕ್ ಗ್ಯಾರಂಟಿಯಾಗಿ ಕೊಟ್ಟರೆ, ಅವರಿಗೆ ಎರಡು ಲಕ್ಷ ರೂಪಾಯಿಗಳ ಸಾಲವನ್ನು ಕೊಡುತ್ತೇವೆ. ಇದಕ್ಕೆ ನಾವು ರೂ.30,000 ಗಳ ಸಬ್ಸಿಡಿ ಅನ್ನು ಕೊಡುತ್ತೇವೆ. ಅವರಿಗೆ ರೂ.1,70,000.00 ಗಳನ್ನು ಮಾತ್ರ ತುಂಬುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದನ್ನು ನೇರ ಸಾಲದ ಮುಖಾಂತರ ಕೊಡುತ್ತೇವೆ.

ಮಾನ್ಯ ಸಭಾಪತಿಯವರೇ, ಇನ್ನೊಂದು 'ಸ್ವಯಂ ಉದ್ಯೋಗ ಯೋಜನೆ' ಇದ್ದು, ಇದು ಬ್ಯಾಂಕಿನ ಸಂಯೋಗದೊಂದಿಗೆ ಕನಿಷ್ಠ ಒಂದು ಲಕ್ಷ ರೂಪಾಯಿಗಳನ್ನು ಹೂಡಿಕೆ ಮಾಡಿದರೆ, ಅಂದರೆ, ಐದು ಲಕ್ಷ

ರೂಪಾಯಿಗಳನ್ನು ಕೊಟ್ಟರೆ, ನಾವು ರಾಜ್ಯ ಸರ್ಕಾರದಿಂದ ಒಂದು ಲಕ್ಷ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತೇವೆ. ಈ ರೀತಿಯ ಎಲ್ಲಾ ಸಮುದಾಯಗಳಿಗೆ ನಾವು ನಿಗಮಗಳಿಂದ ನೇರ ಸಾಲದ ಜೊತೆಗೆ, ಯಾರಾದರೂ ರೈತರು ಇದ್ದು ಅವರ ಹೊಲ ಇದ್ದರೆ ಅವರಿಗೆ ಗಂಗಾ ಕಲ್ಯಾಣ ಯೋಜನೆಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಈ ಮೊದಲು ಈ ಯೋಜನೆಯಿಂದ ಕನಿಷ್ಠ ಎರಡು ಲಕ್ಷ ರೂಪಾಯಿಗಳನ್ನು ಕೊಡಲಾಗುತ್ತಿತ್ತು. ನಾವು ಬಂದ ಮೇಲೆ ಕಳೆದ ವರ್ಷದಿಂದ 3.75 ಲಕ್ಷ ರೂಪಾಯಿಗಳನ್ನು ಮಾಡಿದ್ದೇವೆ. ಈ 3.75 ಲಕ್ಷ ರೂಪಾಯಿಗಳಲ್ಲಿ 3.25 ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಕೊಡುತ್ತೇವೆ. ರೂ.50,000.00 ಗಳನ್ನು ಅವರಿಗೆ ಸಾಲದ ರೂಪದಲ್ಲಿ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಅಂದರೆ, ಈ ಎಲ್ಲಾ ಕುಲಕಸುಬುಗಳನ್ನು ಉಳಿಸಬೇಕೆಂಬ ಪ್ರಯತ್ನ ಒಂದು ಕಡೆ ಆಗಿದೆ. ಅದರ ಜೊತೆಗೆ ಇವತ್ತಿನ ಈ ತಂತ್ರಜ್ಞಾನದ ಯುಗದೊಳಗೆ ಸಣ್ಣ ಸಣ್ಣ ಸಮುದಾಯವರು ಬದುಕಬೇಕೆಂಬ ದೃಷ್ಟಿಕೋನವನ್ನು ಇಟ್ಟುಕೊಂಡು ಇವೆಲ್ಲವನ್ನು ಸರ್ಕಾರ ಕಡೆಯಿಂದ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, ಈಗ ಉದಾಹರಣೆಗೆ ಮಾನ್ಯ ಸದಸ್ಯರು ಪಂಚವೃತ್ತಿಯ ಬಗ್ಗೆ, ವಿಶ್ವಕರ್ಮ ಸಮುದಾಯದವರ ಹಾಗೂ ಅಕ್ಕಸಾಲಿಗರ ಸಮಾಜದ ಬಗ್ಗೆ ಮಾತನಾಡಿದ್ದಾರೆ. ಈಗ ಚಿನ್ನ ಮತ್ತು ಬೆಳ್ಳಿ ಕೆಲಸ ಮಾಡುವವರಿಗೂ ಸಹ ಒಂದು ಕೆಲಸವನ್ನು ಕೊಡುತ್ತೇವೆ. ಅವರಿಗೆ ಕೆತ್ತನೆ ಕೆಲಸ ಮಾಡುವಂತಹ ಶಿಲ್ಪಕಲೆ ಮಾಡುವವವರಿಗೆ ಮರದ ಕೆಲಸ, ಬಡಿಗಾರರು ಇವರಿಗೂ ಸಹ ಈ ಎಲ್ಲಾ ಕುಲಕಸುಬು ಜೊತೆಗೆ ನೇರ ಸಾಲವನ್ನು ಅವರ ಸಮುದಾಯಕ್ಕೆ ಸಂಬಂಧಪಟ್ಟ ಕೆಲಸವನ್ನು ಮಾಡುವುದಕ್ಕೆ ನಾವು ಅವರಿಗೆ ಅನುಕೂಲವನ್ನು ನಿಗಮದ ಮೂಲಕ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದನ್ನು ಬಿಟ್ಟು ಇನ್ನು ಬೇರೆ ಒಳ್ಳೆಯ ವಿಚಾರಗಳನ್ನು ಹಂಚಿಕೊಂಡರೆ, ಈ ವರ್ಷದ ಬಜೆಟ್‌ಅನ್ನು ಮಾನ್ಯ ಮುಖ್ಯಮಂತ್ರಿಯವರು ಮಂಡನೆ ಮಾಡಿದ್ದಾರೆ. ಸಮಾಜಕ್ಕೆ ನೇರವಾಗಿ ಮುಟ್ಟುಂತಹ ಅಂತಹ ಯೋಜನೆ ಏನಾದರೂ ಇದ್ದರೆ, ಈ ಬಾರಿ ನಿಗಮದಲ್ಲಿ ಅಂತಹವುಗಳನ್ನು ಮತ್ತು ಅದರ ಜೊತೆಗೆ vegetable ಮಾರಾಟ ಮಾಡುವಂತಹವರಿಗೆ Food Cart ಕೊಡುವಂತಹ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಅಂತಹವರಿಗೆ ಮೂರು ಗಾಲಿವುಳ್ಳ, ಕರೆಂಟ್‌ನಿಂದ charge ಮಾಡುವಂತಹ Electric Vehicle ಅನ್ನು ಕೊಟ್ಟು ಅದರ ಮೂಲಕ ಅವರು ತರಕಾರಿಯನ್ನು ಮಾರಾಟ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ನಮ್ಮ ನಿಗಮಗಳಿಂದ ಕೊಡುವುದಕ್ಕೆ ಏನೇನು ಸಾಧ್ಯತೆ ಇದೆ, ಅದು ಕುಲಕಸುಬು ಇರಬಹುದು ಮತ್ತು ಆ ಕಸುಬಿನ

ಮೇಲೆ ಅವಲಂಬಿತರಾಗಿರುವವರಿಗೆ ನೇರವಾದ ಸಾಲ ಇರಬಹುದು ಮತ್ತು ಗಂಗಾ ಕಲ್ಯಾಣ ಯೋಜನೆ ಇರಬಹುದು, ಅದರ ಜೊತೆಗೆ ಅವರ ಮಕ್ಕಳು ವಿದೇಶದಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ಈ ಮೊದಲು ವಿದೇಶದಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ರೂ.20 ಲಕ್ಷ ರೂಪಾಯಿಗಳ ಸಹಾಯಧನ ಕೊಡುವಂತಹ ವ್ಯವಸ್ಥೆ ಇತ್ತು. ನಾವೀಗ ಅದನ್ನು ರೂ.40 ರಿಂದ 50 ಲಕ್ಷ ರೂಪಾಯಿಗಳವರೆಗೆ ಸಹಾಯಧನವನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ನಂತರ ಅವರು ತುಂಬುವಂತಹದ್ದು ಇರುತ್ತದೆ. ನಾವು ಅದನ್ನು ಹೆಚ್ಚಿಗೆ ಮಾಡಿದ್ದೇವೆ. ಏಕೆಂದರೆ, 20 ಲಕ್ಷ ರೂಪಾಯಿಗಳು ಇದ್ದರೆ, ಕೆಲವೊಂದು ದೇಶಗಳಿಗೆ ಹೋಗುವವರಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ 40 ರಿಂದ 50 ಲಕ್ಷ ರೂಪಾಯಿಗಳ ಸಹಾಯಧನವನ್ನು ಕೊಡುವಂತಹದ್ದನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ತಂದಂತಹ ಎಲ್ಲಾ ವಿಚಾರಗಳನ್ನು ಸರ್ಕಾರ ಗಮನಿಸಿದೆ. ಅದರಲ್ಲೂ ವಿಶೇಷವಾಗಿ ಹಿಂದುಳಿದ ವರ್ಗದಲ್ಲಿ 11 ನಿಗಮಗಳು ಈ ಕೆಲಸವನ್ನು ಮಾಡುತ್ತಿವೆ. ಈ ವರ್ಷ ಮತ್ತೆ 6 ನಿಗಮಗಳನ್ನು ಸ್ಥಾಪನೆ ಮಾಡುವುದಕ್ಕೆ ಈಗಾಗಲೇ ಬಜೆಟ್‌ನಲ್ಲಿ ಘೋಷನೆಯಾಗಿದೆ. ಅದಕ್ಕೆ ರೂಪುರೇಷೆಗಳನ್ನು ಸಿದ್ಧಪಡಿಸವಂತಹ ಕೆಲಸಗಳನ್ನು ಮಾಡುತ್ತೇವೆ. ಅದಕ್ಕೆ ಮಾನ್ಯ ಸದಸ್ಯರಿಗೆ ಏನಾದರೂ ಒಳ್ಳೆಯ idea ಗಳಿದ್ದು ಅದನ್ನು ಹೇಳಿದರೆ. ಅದರಿಂದ ನಿಶ್ಚಿತವಾಗಿ ಆ ಸಮುದಾಯದವರಿಗೆ ಒಳ್ಳೆಯದಾಗುತ್ತದೆ ಎಂದರೆ, ಅದನ್ನು ಅಳವಡಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಸಭಾಪತಿಯವರು:-** ಶ್ರೀಮತಿ ಹೇಮಲತಾ ನಾಯಕ್‌ರವರೇ, ತಾವು ಮಾತನಾಡಿ. ಆದರೆ, ಭಾಷಣ ಮಾಡಬೇಡಿ. ನೇರವಾಗಿ ಕೇಳಿ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಭಾಗ್ಯ ನಗರದಲ್ಲಿ ಬೊಂಬೆಗಳನ್ನು ತಯಾರಿಕೆ ಮಾಡುವವರು ಇದ್ದಾರೆ. ಈ ಸಮುದಾಯದವರಿಗೆ ನಿಜವಾಗಲೂ ಮನೆಗಳು ಸಿಕ್ಕಿರುವುದಿಲ್ಲ. ಸರ್ಕಾರದಿಂದ ಅರ್ಧ ಜನರಿಗೆ ಸಿಕ್ಕಿದೆ, ಅರ್ಧ ಜನರಿಗೆ ಸಿಕ್ಕಿರುವುದಿಲ್ಲ. ಅವರು ಸಹ ಒಂದು ಕುಲಕಸುಬುನ್ನು ಮಾಡುತ್ತಾರೆ. ಬೊಂಬೆ ತಯಾರಿಕೆ ಮಾಡುವವರು ಸಹ ಮರಾಠ ಸಮುದಾಯದಲ್ಲಿ ಬರುತ್ತಾರೆ. ಎರಡನೆಯದಾಗಿ, ಭಾಗ್ಯ ನಗರದಲ್ಲಿ ನೇಕಾರಿಕೆ ಮಾಡುವವರು ಸಹ ಇದ್ದಾರೆ. ಮಾನ್ಯ ಸಚಿವರಿಗೆ ಇದು ಗೊತ್ತಿದೆ. ಇವರಿಗೂ ಸಹ ನಿಗಮಗಳಿಂದ ಒಂದಷ್ಟು ಮನೆಗಳನ್ನು ಕೊಟ್ಟರೆ ಬಹಳ ಒಳ್ಳೆಯದು. ಈಗ ಮಾನ್ಯ ಸಚಿವರು ನಿಗಮ ಮಾಡುತ್ತೇವೆಂದು ಹೇಳಿದ್ದಾರೆ. ಹಾಗಾಗಿ, ಅವರಿಗೂ ಅನುಕೂಲ ಮಾಡಿಕೊಡಬೇಕಾಗುತ್ತದೆ ಎಂಬುದನ್ನು ಮಾನ್ಯ ಸಚಿವರು ನೋಡಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹಿಂದುಳಿದ ನಿಗಮಗಳ ಬಗ್ಗೆ ಹೇಳಿದ್ದಾರೆ. ಹಿಂದುಳಿದ ವರ್ಗಗಳು ಸಾಮಾನ್ಯವಾಗಿ ಶಿಕ್ಷಣಕ್ಕೆ ಮತ್ತು ಗಂಗಾ ಕಲ್ಯಾಣ ಯೋಜನೆಯಂತಹವುಗಳಿಗೆ ಹಣಕಾಸಿನ ವ್ಯವಸ್ಥೆ ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳನ್ನು ಹಿಂದುಳಿದ ವರ್ಗಗಳ ನೇತಾರರು ಎಂದು ಕರೆಯುತ್ತಾರೆ. ಅದು ಸಹಜ. ನಾನು ಒಪ್ಪುತ್ತೇನೆ. ನಾವು ಅದನ್ನು ಬಹಳ ಅಭಿಮಾನದಿಂದ ಒಪ್ಪುತ್ತೇವೆ. ಆದರೆ, ಮಾನ್ಯ ಮುಖ್ಯಮಂತ್ರಿಯವರು ಅಧಿಕಾರಕ್ಕೆ ಬಂದ ಮೇಲೆ ಈ ನಿಗಮಗಳಿಗೆ ಹಣಕಾಸಿನ ಪೂರೈಕೆಯ ವ್ಯವಸ್ಥೆ ಕಡಿಮೆಯಾಗಿದೆ ಎನ್ನುವುದನ್ನು ಮಾನ್ಯ ಸಚಿವರು ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

(ಮುಂದು)

(315) 11.03.2026/4.00/ಎಂವಿ-ಎಕೆ **(ಸಭಾಪತಿಯವರ ಉಪಸ್ಥಿತಿ)**

**ಡಾ: ತಳವಾರ್ ಸಾಬಣ್ಣ (ಮುಂದು):**

ಆದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದ ಮೇಲೆ ಈ ನಿಗಮಗಳಿಗೆ ಹಣಕಾಸಿನ ಪೂರೈಕೆಯ ವ್ಯವಸ್ಥೆ ಕಡಿಮೆಯಾಗಿದೆ ಎಂಬುದನ್ನು ಮಾನ್ಯ ಸಚಿವರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಒಂದು ಉದಾಹರಣೆ ನೀಡುತ್ತೇನೆ. ನಾನು ಈ ಸದನಕ್ಕೆ ಬಂದಾಗ, ಹಿಂದಿನ ಸರ್ಕಾರವು ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೆ ಸುಮಾರು 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ನಂತರ ಬಂದಂತಹ ಮುಖ್ಯಮಂತ್ರಿಗಳು ಕೋವಿಡ್-19 ಸಂದರ್ಭದಲ್ಲಿಯೂ ಸಹ ಸುಮಾರು 25 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಆದರೆ, ದುರಾದೃಷ್ಟವಶಾತ್ ಕಳೆದ ವರ್ಷ ಮತ್ತು ಈ ವರ್ಷ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೆ ಕೇವಲ 12 ಕೋಟಿ ರೂಪಾಯಿಗಳನ್ನು ಮಾತ್ರ ನೀಡಿದ್ದಾರೆ. ಅದೇ ರೀತಿಯಾಗಿ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ಮತ್ತು ಇನ್ನಿತರೆ ನಿಗಮಗಳು ಇವೆ. ನಾನು ಹೇಳುವ ಉದ್ದೇಶ ಇಷ್ಟೆ. ಹಿಂದುಳಿದ ವರ್ಗಗಳ ನೇತಾರರು ಎನಿಸಿಕೊಂಡಿರುವ ಮಾನ್ಯ ಮುಖ್ಯಮಂತ್ರಿಗಳ ಕಾಲದಲ್ಲಿ ನಿಗಮಗಳಿಗೆ ಕೊಡುವಂತಹ ಹಣಕಾಸಿನ ಒಂದು ಬೆಂಬಲ ತೀರಾ ಕಡಿಮೆಯಾಗಿದೆ. ಎರಡನೆಯದಾಗಿ, ನನ್ನ ಆದ್ಯತೆ ಏನಿದೆ ಎಂದರೆ, ಈ ಕುಲಕಸಬುಗಳು ಆಧಾರಿತವಾಗಿರುವಂತಹ ಕುಟುಂಬಗಳು ಉತ್ಪಾದನೆ ಮಾಡುವಂತಹ ವಸ್ತುಗಳಿಗೆ ಮಾರುಕಟ್ಟೆ ಒದಗಿಸಿ ಕೊಡಬೇಕು. ಈಗ ಕುಂಬಾರರು ಇದ್ದಾರೆ. ಈಗಿನ ಪ್ಲಾಸ್ಟಿಕ್ ಯುಗದಲ್ಲಿ ಅವರ ವಸ್ತುಗಳಿಗೆ ಬೇಡಿಕೆಯೇ ಇಲ್ಲ. ಅವರು ಉತ್ಪಾದನೆ ಮಾಡಿದಂತಹ ಗಡಿಗೆಗಳನ್ನು ಯಾರು ತೆಗೆದುಕೊಳ್ಳಬೇಕು? ಅಲ್ಲಿ ಈ ರೀತಿಯಾಗಿರುವಂತಹ ಅಸ್ಥಿರತೆ ಇದೆ. ಹಾಗಾಗಿ, ಈ ಕುಲಕಸಬು ಅನ್ನು ನೆಚ್ಚಿಕೊಂಡಿರುವಂತಹ ಈ ಸಮುದಾಯಗಳು ಬಹಳ ಮುಜುಗರದ ಸ್ಥಿತಿಯಲ್ಲಿದ್ದಾರೆ. ಇದಕ್ಕೆ

ನನ್ನ ಒತ್ತಾಯ ಇಷ್ಟೆ. ಹಿಂದುಳಿದ ವರ್ಗದಲ್ಲಿ ಇರತಕ್ಕಂತಹ ಈ ಒಂದು ಸಮುದಾಯಗಳಿಗೆ ತಾವು ಒಂದು ಸಮಗ್ರವಾಗಿರುವಂತಹ ನೀತಿ ತಂದರೆ, ನಮ್ಮ ಸಾಂಪ್ರದಾಯಿಕತೆ ಮತ್ತು ಸಂಸ್ಕೃತಿ ಉಳಿಯುತ್ತದೆ. ಮತ್ತೆ ಈ ಕುಟುಂಬಗಳಿಗೆ ಬೆಂಬಲ ಕೊಟ್ಟಂತೆ ಆಗುತ್ತದೆ. ಆ ಒಂದು ನಿಟ್ಟಿನಲ್ಲಿ ಮಾನ್ಯ ಸಚಿವರು ಯೋಚನೆ ಮಾಡಬೇಕು. ಮತ್ತೆ ನಿಗಮಗಳಿಗೆ ಹೆಚ್ಚಿನ ಹಣ ಕೊಡಬೇಕು. ಏಕೆಂದರೆ, ನಿಗಮಗಳಿಗೆ ಶೇಕಡಾ 50ರಷ್ಟು minus ಮಾಡಿದ್ದಾರೆ. ಅದನ್ನು ಸ್ವಲ್ಪ ಹೆಚ್ಚಿಗೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಡಾ: ತಳವಾರ್ ಸಾಬಣ್ಣನವರೆ, ಹಿಂದಿನ ಸರ್ಕಾರದಲ್ಲಿಯೂ ಸಹ ಕಡಿಮೆ ಇತ್ತು. ಅದಾದಮೇಲೆ 2023ರಲ್ಲಿಯೂ ಸಹ ಕಡಿಮೆ ಇತ್ತು. ಆದರೆ, ನಾನು ಕಳೆದ ವರ್ಷ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿ ಸುಮಾರು 1,600 ಕೋಟಿ ರೂಪಾಯಿಗಳನ್ನು ನಿಗಮಗಳಿಗೆ ತೆಗೆದುಕೊಂಡಿದ್ದೇವೆ. ಉದಾಹರಣೆಗೆ: ಯಾವ್ಯಾವ ನಿಗಮಗಳಿಗೆ ಎಷ್ಟೆಷ್ಟು ಹಣ ನೀಡಲಾಗಿದೆ ಎಂಬುದರ ಪಟ್ಟಿ ನನ್ನ ಬಳಿ ಇದೆ. ನಾನು ಆ ಪಟ್ಟಿಯನ್ನು ಅವರಿಗೆ ಕಳುಹಿಸಿಕೊಡುತ್ತೇನೆ. ಆದರೆ, ಈ ವರ್ಷ ಸ್ವಲ್ಪ ಕಡಿಮೆಯಾಗಿದೆ.

**ಸಭಾಪತಿಯವರು:-** ತಾವು ಅದರ ಪಟ್ಟಿಯನ್ನು ಆಮೇಲೆ ಕಳುಹಿಸಿಕೊಡಿ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಈ ಬಜೆಟ್‌ನಲ್ಲಿ ಕಡಿಮೆಯಾಗಿದೆ. ಅದಕ್ಕೆ ಮತ್ತೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವಂತಹ ಕೆಲಸವನ್ನು ಮಾಡುತ್ತೇನೆ. ಆದರೆ, ಕಳೆದಬಾರಿ ಸುಮಾರು 1,600 ಕೋಟಿ ರೂಪಾಯಿಗಳ ಹಣವನ್ನು ನೀಡಿದ್ದೇವೆ. ಎಲ್ಲಾ ಸಮುದಾಯಕ್ಕೂ ಅತಿ ಹೆಚ್ಚು ಕೊಡುವಂತಹ ಕೆಲಸ ಮಾಡಿದ್ದೇವೆ. ಅಂದರೆ, ಹಿಂದುಳಿದ ವರ್ಗದ ನಿಗಮಗಳಿಗೆ ಇತಿಹಾಸದಲ್ಲಿ ಅಷ್ಟೊಂದು ಪ್ರಮಾಣದ ಹಣವನ್ನು ಕೊಟ್ಟಿರಲಿಲ್ಲ. ಆದರೆ, ಈ ವರ್ಷ ಸ್ವಲ್ಪ ಕಡಿಮೆಯಾಗಿದೆ. ಇದು ನನ್ನ ಗಮನಕ್ಕೂ ಸಹ ಬಂದಿದೆ. ಇವತ್ತು ನಾನು ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಅದಕ್ಕೆ ನಾನು ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ. ಅಂದರೆ, ಏನಾದರೂ ಮಾಡಿ, ಕಳೆದ ಬಾರಿ ಎಷ್ಟು ಹಣ ಕೊಟ್ಟಿದ್ದರು, ಅದಕ್ಕಿಂತ ಇನ್ನು ಸ್ವಲ್ಪ ಜಾಸ್ತಿ ಹಣ ಕೊಟ್ಟರೂ ಪರವಾಗಿಲ್ಲ ಎಂಬ ವಿನಂತಿಯನ್ನು ಮಾಡುತ್ತೇನೆ. ಈಗ ಸಮುದಾಯವಾರು ನಿಗಮಗಳ ಮುಖಾಂತರ ಮತ್ತೆ ಏನಾದರೂ ಇದ್ದರೆ ನಾನು ಅದನ್ನು ನಿಶ್ಚಿತವಾಗಿ ಅಳವಡಿಸಿಕೊಳ್ಳುತ್ತೇವೆ. ಏಕೆಂದರೆ, ಅದರ ಅವಶ್ಯಕತೆ ಇದೆ. ನಮ್ಮ ಸನ್ಮಾನ್ಯ ಸಿದ್ಧರಾಮಯ್ಯ ಸಾಹೇಬರು ಮತ್ತು ಉಪ ಮುಖ್ಯಮಂತ್ರಿಗಳಾದಂತಹ ಶ್ರೀ

ಡಿ.ಕೆ.ಶಿವಕುಮಾರ್ ರವರು ಹಿಂದುಳಿದ ವರ್ಗದವರ ಬಗ್ಗೆ ವಿಶೇಷವಾದಂತಹ ಕಾಳಜಿ ವಹಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಏಕೆಂದರೆ, ಪ್ರತಿಯೊಂದು ವಿಚಾರದಲ್ಲೂ ಹಿಂದುಳಿದ ವರ್ಗದ ಸಮುದಾಯದ ವಿಚಾರಕ್ಕೆ ನಾವು ಏನಾದರೂ ಬೇಕು ಎಂದು ಕೇಳಿದಾಗ ಅವರು ಇಲ್ಲವೆಂದು ಎಂದೂ ಸಹ ಹೇಳಿಲ್ಲ. ಆ ರೀತಿ ಕೊಟ್ಟಿರುವಂತಹ ಸಾಕಷ್ಟು ಉದಾಹರಣೆಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಮತ್ತೆ ಕಳೆದ ವರ್ಷ ಎಷ್ಟು ನೀಡಿದ್ದೇವೆ ಎಂಬುದನ್ನು ಡಾ: ತಳವಾರ್ ಸಾಬಣ್ಣನವರಿಗೆ ನಿಗಮಗಳಿಂದ ಕಳುಹಿಸಿಕೊಡುತ್ತೇನೆ. ಈಗ ಹೊಸದಾಗಿ ಆರು ನಿಗಮಗಳನ್ನು ಸ್ಥಾಪನೆ ಮಾಡುವುದಕ್ಕೆ ಬಜೆಟ್‌ನಲ್ಲಿ ಘೋಷಣೆಯಾಗಿದೆ. ಆ ನಿಗಮಗಳಿಗೂ ಸಹ ಏನೇನು ಬೇಕಾಗಿದೆ ಎಂದು ನಿಯಮಾನುಸಾರವಾಗಿ ನೀಡಲಾಗುವುದು ಮತ್ತು ಈಗ ಸದ್ಯದ ಮಟ್ಟಿಗೆ ಮತ್ತು ಇವತ್ತಿನ ಹೊಸ ಯುಗಕ್ಕೆ ಸಂಬಂಧಪಟ್ಟಂತೆ, ಉದಾಹರಣೆಗೆ ಮಡಿವಾಳ ಸಮುದಾಯಕ್ಕೆ Spa ಗಳನ್ನು ಮಾಡುತ್ತಿದ್ದಾರೆ. ಮೊದಲು ಕೇವಲ ಇಸ್ತ್ರಿ ಪೆಟ್ಟಿಗೆಗಳನ್ನು ಕೊಡುತ್ತಿದ್ದರು. ಈಗ ಹೊಸದಾಗಿ ಅವರಿಗೂ 5,00,000/- ದವರೆಗೆ ಸಾಲ ಕೊಡಬೇಕೆಂಬ ನಿರ್ಧಾರವನ್ನು ಮಾಡಿ, ಬಜೆಟ್‌ನಲ್ಲಿ ಘೋಷಣೆ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಮತ್ತೆ ಕಳೆದ ವರ್ಷದ ಬಜೆಟ್‌ನಲ್ಲಿ ಏನೇನು ಕೊಟ್ಟಿದ್ದೇವೆ ಎಂಬ ಪೂರ್ಣ ಮಾಹಿತಿಯನ್ನು ಡಾ: ತಳವಾರ್ ಸಾಬಣ್ಣನವರಿಗೆ ಕಳುಹಿಸಿಕೊಡುತ್ತೇವೆ.

ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ರವರು ಮಾತನಾಡುತ್ತಾ, ಅವರಿಗೆ ಮನೆಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಆದರೆ, ನಾವು ಮನೆ ಕೊಡುವುದಕ್ಕೆ provision ಇಲ್ಲ. ನಿಗಮದಿಂದ ಮನೆಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ನಿಗಮದಿಂದ ನೇರಸಾಲ, ಗಂಗಾಕಲ್ಯಾಣ ಮತ್ತು ಸ್ವಯಂ ಉದ್ಯೋಗ ಇವುಗಳನ್ನು ಕೊಡುವುದಕ್ಕೆ ನಿಗಮದಲ್ಲಿ provision ಇದೆ. ವಸತಿ ಇಲಾಖೆಯಿಂದ ಮನೆಗಳನ್ನು ಕೊಡುವುದಕ್ಕೆ...

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವರು ಅದನ್ನೂ ಸಹ ಕೊಡುತ್ತಿಲ್ಲ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಅದನ್ನು ಎಲ್ಲರಿಗೂ ಸಹ ಕೊಟ್ಟಿದ್ದೇವೆ. ಅದರ ಪಟ್ಟಿ ಮಾನ್ಯ ಸದಸ್ಯರಾದ ಎನ್.ರವಿಕುಮಾರ್ ರವರಿಗೆ ಬೇಕು ಎಂದರೆ ಅದನ್ನು ಅವರಿಗೆ ಕಳುಹಿಸಿಕೊಡುತ್ತೇನೆ. ಈಗ ಹಿಂದಿನ ಸರ್ಕಾರ ಏನು ಕೊಟ್ಟಿದೆ? ಈಗಿನ ಸರ್ಕಾರದಲ್ಲಿ ಏನು ಕೊಟ್ಟಿದ್ದೇವೆ ಮತ್ತೆ ಕಳೆದ

ವರ್ಷ ಏನು ಕೊಟ್ಟಿದ್ದೇವೆ ಎಂಬ ಪೂರ್ಣ ಪ್ರಮಾಣದ ಮಾಹಿತಿಯನ್ನು ಶ್ರೀ ಎನ್.ರವಿಕುಮಾರ್‌ರವರಿಗೆ ಮತ್ತು ಡಾ:ತಳವಾರ್ ಸಾಬಣ್ಣನವರಿಗೆ ಕಳುಹಿಸುತ್ತೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅದು ಪೇಪರ್‌ನಲ್ಲಿ ಇದೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಅವರು ಪೇಪರ್‌ನಲ್ಲಿ ಮಾಡಿರುವುದು. ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್ ಒಂದು ವಿಷಯವನ್ನು ನೆನಪು ಮಾಡಿದ್ದಾರೆ. ನಾನು ಅದರ ಬಗ್ಗೆ ಹೇಳುತ್ತೇನೆ. ಈ ಹಿಂದೆ ಚುನಾವಣೆ ಸಂದರ್ಭದಲ್ಲಿ ಸುಮಾರು 11 ನಿಗಮಗಳನ್ನು ಪೇಪರ್‌ನಲ್ಲಿ ಪ್ರಿಂಟ್ ಮಾಡಿ, ಅದನ್ನು ಹಂಚಿಬಿಟ್ಟಿದ್ದರು. ಅಂದರೆ, ಕೋಶಗಳು ಮತ್ತು ನಿಗಮಗಳನ್ನು ಮಾಡಿಬಿಟ್ಟರು. ಈಗ ಯಾವುದೇ ಒಂದು ನಿಗಮ ಮಾಡಬೇಕಾದರೆ, ಅದಕ್ಕೆ ಕನಿಷ್ಠಪಕ್ಷ ಐದು ಕೋಟಿ ರೂಪಾಯಿ ಹಣ ಇಟ್ಟು ನಿಗಮವನ್ನು ಪ್ರಾರಂಭ ಮಾಡಬೇಕು. ಅದನ್ನು Companies Act ಅಡಿಯಲ್ಲಿ registration ಮಾಡಿಸಬೇಕು. ಅದು ಆಗಲಾರದೇ ಕೇವಲ ಪೇಪರ್‌ನಲ್ಲಿ ಮಾಡಿರುವುದು, ನಮ್ಮ ಸರ್ಕಾರದಲ್ಲಿ ಪೇಪರ್‌ನಲ್ಲಿ ಆಗುವಂತಹ ಪ್ರಶ್ನೆಯೇ ಇಲ್ಲ. ನಾನು ಅದಕ್ಕೆ ಪೇಪರ್ ಸಮೇತ, document ಸಮೇತ ಶ್ರೀ ಎನ್.ರವಿಕುಮಾರ್ ಮತ್ತು ಡಾ: ತಳವಾರ್ ಸಾಬಣ್ಣನವರಿಗೆ ಕಳುಹಿಸುವಂತಹ ಕೆಲಸ ಮಾಡುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನಗೆ ಐದು ನಿಮಿಷ ಸಮಯ ನೀಡಿ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ರವಿಕುಮಾರ್ ರವರು ಐದು ನಿಮಿಷವಲ್ಲ ಹತ್ತು ನಿಮಿಷ ಸಮಯ ತೆಗೆದುಕೊಳ್ಳಲಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ಆ) ವಿಷಯ:-ರಾಜ್ಯದ ಬಯಲುನಾಡಿನ ಜಿಲ್ಲೆಗಳಾದ ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸುವ ಕುರಿತು.**

---------

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ ಬಯಲುಸೀಮೆಯ ಜಿಲ್ಲೆಗಳಾದ ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸುವ ಕುರಿತು ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದೆ. ಮಾನ್ಯ ಸದಸ್ಯರಿಗೆ ಏನಾದರೂ clarification ಇದ್ದರೆ ಕೇಳಲಿ.

**ಸಭಾಪತಿಯವರು:-** ನಿಯಮ 330ರ ಅಡಿಯಲ್ಲಿ ನೀವು ಮಾತನಾಡಿ. ನೀವು ಏನಾದರೂ ಹೇಳಬೇಕಲ್ಲವೇ?

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಾನು ಮಧ್ಯ ಕರ್ನಾಟಕದ ಬಯಲು ಸೀಮೆಯವನು. ನಿಯಮ 330ರ ಅಡಿ ಚರ್ಚೆ ಇರುವಂಥದ್ದು ಏನೆಂದರೆ, ಬಯಲು ಸೀಮೆಯ ಜಿಲ್ಲೆಗಳಿಗೆ ಕುಡಿಯುವ ನೀರಿಗೆ ತೀವ್ರವಾದಂತಹ ಸಮಸ್ಯೆಗಳು ಇವತ್ತಿನದಲ್ಲ ಇದು ದಶಕಗಳ ಕಾಲದಿಂದಲೂ ಇದೆ. ಆ ಸಮಸ್ಯೆಗಳನ್ನು ಕುರಿತಾಗಿ, ಇವತ್ತು ರಾಜ್ಯ ಸರ್ಕಾರ ಅದಕ್ಕೆ ಪರಿಹಾರದ ರೂಪದಲ್ಲಿ ಏನೆಲ್ಲಾ ಮಾಡುತ್ತಿದೆ ಎಂಬುದನ್ನು ನಾವು ಕೇಳಿದ್ದೇವೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಕೊಟ್ಟಿರುವ ಉತ್ತರದಲ್ಲಿ ಎತ್ತಿನಹೊಳೆ ಯೋಜನೆಯಲ್ಲಿ 24 ಟಿ.ಎಂ.ಸಿ. ನೀರು ಮತ್ತು ಜನವಸತಿಗೆ 8 ಟಿ.ಎಂ.ಸಿ. ನೀರನ್ನು ಕೊಡುವಂಥದ್ದು. ಜಲಸಂಪನ್ಮೂಲ ಇಲಾಖೆಯ ವತಿಯಿಂದ ಕಾಮಗಾರಿ ನಡೆಯುತ್ತಿದೆ ಎಂಬ ಮಾಹಿತಿಯನ್ನು ನೀಡಿದ್ದಾರೆ. ನಾನು ಮಾನ್ಯ ಸಚಿವರ ಗಮನಕ್ಕೆ ತರುವಂಥದ್ದು ಏನೆಂದರೆ, ನಾವು ಕಳೆದ ಎರಡು ತಿಂಗಳ ಹಿಂದೆ ಸಮಿತಿಯ ವತಿಯಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಒಟ್ಟಾರೆಯಾಗಿ ಎತ್ತಿನಹೊಳೆ ಯೋಜನೆಯ ಬಗ್ಗೆ ಏನು ಪ್ರಗತಿಯಾಗಿದೆ ಎಂಬ ಮಾಹಿತಿಯನ್ನು ಪಡೆದುಕೊಂಡಂತಹ ಸಂದರ್ಭದಲ್ಲಿ ಪೂರ್ಣವಾದಂತಹ ವಿವರವನ್ನು ವಿಶ್ವೇಶ್ವರಯ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮತ್ತು ಇತರ ಅಧಿಕಾರಿಗಳು ನೀಡಿದರು. ಇವತ್ತು ಏನಾಗಿದೆ ಎಂದರೆ, ಎತ್ತಿನಹೊಳೆ ಅಥವಾ ಭದ್ರಾ ಮೇಲ್ದಂಡೆ ಯೋಜನೆ, ತುಂಗಭದ್ರಾ ಹಿನ್ನೀರಿನ ಯೋಜನೆಯಲ್ಲಿ ಕುಡಿಯುವ ನೀರಿಗೆ ಎಂದು ನೀರನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಗದಿ ಮಾಡಿದ್ದರೂ ಸಹ ಇವತ್ತು ಆ ಯೋಜನೆ ಪೂರ್ಣ ಅನುಷ್ಠಾನವಾಗಿ ಜನರ ಮನೆ ಬಾಗಿಲಿಗೆ ಕುಡಿಯುವ ನೀರನ್ನು ಕೊಡುವಂತಹ ಹಂತದಲ್ಲಿ ಯಾವ ಯೋಜನೆಗಳು ಕೂಡ ಆ ಪ್ರಮಾಣದ ಕಾಮಗಾರಿ ಆಗಿಲ್ಲ. ಉದಾಹರಣೆಗೆ: ನಾವು ಎತ್ತಿನಹೊಳೆಯ ಬಗ್ಗೆ ಕೇಳಿದಾಗ, ಈ ಎತ್ತಿನಹೊಳೆ ಯೋಜನೆಯಲ್ಲಿ ಮೊದಲನೆ ಹಂತದ ಪ್ರಾಯೋಗಿಕವಾದಂತಹ ನೀರನ್ನು ಅವರು ಪೈಪ್‌ಲೈನ್ ಮುಖಾಂತರ ಈಗ ವಾಣಿವಿಲಾಸ ಸಾಗರ ಡ್ಯಾಂಗೆ ತರುತ್ತಿದ್ದಾರೆ. ಅಲ್ಲಿಂದ ಅದು ಮತ್ತೆ ಮೂರು ಸ್ಟೇಜ್‌ಗಳಲ್ಲಿ ಮುಂದೆ ಕಾಮಗಾರಿಯಾಗಿ ಕೊನೆಯ ಜಿಲ್ಲೆಯಾದ ಕೋಲಾರ ಜಿಲ್ಲೆಗೆ ಹೋಗಬೇಕಾಗಿದೆ. ಮತ್ತೊಂದು ಅವರಿಗೆ ಗೊತ್ತಿದೆ. ಅವರು ಕೂಡ ಅದಕ್ಕೆ ಸಂಬಂಧಪಟ್ಟಂತೆ ಒಂದು ಅಧಿಕೃತ ಪ್ರವಾಸವನ್ನು ಮಾಡಿದ್ದಾರೆ. ತುಂಗಭದ್ರಾ ಹಿನ್ನೀರಿನಿಂದ ಪಾವಗಡ ತಾಲ್ಲೂಕಿಗೆ ಅಂದರೆ ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು, ಚಳ್ಳಕೆರೆ ಮತ್ತು ಪಾವಗಡ ಈ ಮೂರಕ್ಕೂ ಕೂಡ ತುಂಗಭದ್ರಾ ಹಿನ್ನೀರಿನಿಂದ ಪೈಪ್‌ಲೈನ್ ತರುವುದಕ್ಕೆ ಸಚಿವರೇ ಸ್ಥಳ ಪರಿಶೀಲನೆಗೋಸ್ಕರ ಬಂದಿದ್ದರು. ಮತ್ತೊಂದು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಭದ್ರ ಮೇಲ್ದಂಡೆ ಯೋಜನೆಯಲ್ಲಿ ಬರುವಂತಹ ನೀರನ್ನು ತೆಗೆದುಕೊಂಡು ಎರಡೂ ತಾಲ್ಲೂಕುಗಳಿಗೆ ಕುಡಿಯುವ ನೀರನ್ನು ಕೊಡುವುದಕ್ಕೋಸ್ಕರ ಯೋಜನೆ approval ಆಗಿದೆ. ಅದು ವಿವಿಧ ಹಂತದ ಕಾಮಗಾರಿಯಲ್ಲಿದೆ. ಆದರೆ, ನಮ್ಮ ಆತಂಕ ಏನೆಂದರೆ, ಇವತ್ತು ಮೂಲ ನೀರನ್ನು ತರುವಂಥದ್ದಕ್ಕೆ ಸಾಕಷ್ಟು ಸಮಯ ಕಳೆದುಬಿಟ್ಟಿದ್ದೇವೆ. ಈಗ ಆ ಯೋಜನೆ ಪೂರ್ಣ ಆಗಬೇಕು. ಆ ಯೋಜನೆ ಪೂರ್ಣ ಆದನಂತರ ಮನೆ ಬಾಗಿಲುಗಳಿಗೆ ನೀರು ತಲುಪಿಸುವುದಕ್ಕೆ ಬೇಕಾದಂತಹ ಪೈಪ್‌ಲೈನ್ ಇತ್ಯಾದಿ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು.

(ಮುಂದು)

(316) 11.03.2026 04.10 LL-RN (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್. ನವೀನ್(ಮುಂದು):**

ಆದರೆ, ದುರದೃಷ್ಟವಶಾತ್ ಏನಾಗಿದೆಯೆಂದರೆ, ಇವೊತ್ತಿನ ದಿವಸ ನಾವು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದವರನ್ನು ಕೇಳಿದರೆ, ನಾವು ಸೋರ್ಸ್ ಆಫ್ ದಿ ವಾಟರ್‌ವರೆಗೂ ಕೊಡುವಂಥದ್ದೇ ನಮ್ಮ ಕೆಲಸ. ನಮಗೆ ಯಾವ್ಯಾವ ಪಾಯಿಂಟ್‌ಗೆ ನೀರನ್ನು ತಲುಪಿಸಬೇಕೆಂದು ಹೇಳಿದ್ದಾರೆ. ನಾವು ಅಷ್ಟನ್ನು ಮಾತ್ರ ಮಾಡುತ್ತೇವೆ. ಉಳಿದಿರುವಂಥದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇದೆ. ಅದರ ಮೂಲಕ ಕುಡಿಯುವ ನೀರನ್ನು ಒದಗಿಸುವ ಕೆಲಸದ ನಿರ್ವಹಣೆ ಆಗುತ್ತದೆ. ಆದರೆ, ಇಲ್ಲಿ ಸಮಸ್ಯೆ ಇರುವುದೇನೆಂದರೆ, ಮೂರ್ನಾಲ್ಕು

ಇಲಾಖೆಗಳ ಇಂಟಿಗ್ರೇಷನ್ ಅಥವಾ ಆ ಎಲ್ಲಾ ಇಲಾಖೆಗಳ ಪಾಲ್ಗೊಳ್ಳುವಿಕೆಯಿಂದ ಈ ಕೆಲಸಗಳು ಆಗಬೇಕು. ಮಾನ್ಯ ಸಚಿವರು ಚಿತ್ರದುರ್ಗ ಜಿಲ್ಲೆಗೆ ಬಂದಾಗ, ಅದನ್ನು ಗಮನಿಸಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಅಂದರೆ, ತುಂಗಾಭದ್ರಾ ಹಿನ್ನೀರಿನಿಂದ ನೀರು ಹೋಗುವಂತಹ ಕಡೆ ಫಾರೆಸ್ಟ್ ಕ್ಲಿಯರೆನ್ಸ್ ಇರುವುದಿಲ್ಲ. ಅದು ಇಲ್ಲದೇ ಇರುವ ಕಾರಣಕ್ಕೆ, ನೀರನ್ನು ಅರ್ಧ ಭಾಗಕ್ಕೆ ಮಾತ್ರ ತಂದು ಬಿಟ್ಟಿರುತ್ತಾರೆ. ಅಲ್ಲಿಂದ ಮುಂದಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತಿಲ್ಲ. ಅದೇ ರೀತಿ, ಇಲ್ಲಿ ತುಂಗಾಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಬಹುಗ್ರಾಮ ಕುಡಿಯುವ ನೀರಿಗೆ ನೂರಾರು ಕೋಟಿ ರೂಪಾಯಿಗಳ ಹಣ ವೆಚ್ಚ ಮಾಡಿದ್ದರೂ ಸಹ, ಇಲ್ಲಿಯವರೆಗೂ ಅದನ್ನು ಟ್ರಯಲ್ ಮಾಡಿ, ನೀರು ಬಿಡುಗಡೆ ಮಾಡಿ, ಆ ನಗರಗಳಿಗೆ ಹಾಗೂ ಗ್ರಾಮಗಳಿಗೆ ನೀರು ಕೊಡುವಂತಹ ವ್ಯವಸ್ಥೆ ಯಾವುದೂ ಕೂಡ ಆಗಿರುವುದಿಲ್ಲ. ಎತ್ತಿನಹೊಳೆ ಯೋಜನೆಯಲ್ಲಿಯೂ ಸಹ ನಾವು ಅಲ್ಲಿಯೇ ನಿಂತಿರುತ್ತೇವೆ. ಆದರೆ, ನಾನು ಹೇಳುತ್ತಿರುವುದೇನೆಂದರೆ, ಈ ಕೆಲಸವನ್ನು ಎಲ್ಲಾ ಇಲಾಖೆಗಳು comprehensive ಆಗಿ ಮಾಡಬೇಕಾಗಿರುವಂತಹ ಒಂದು ಪ್ರಯತ್ನ ಆಗಿರುತ್ತದೆ. ಅದು ಕೇವಲ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದಲೇ ಆಗುತ್ತದೆ ಅಥವಾ ಜಲಸಂಪನ್ಮೂಲ ಇಲಾಖೆ, ಅರಣ್ಯ ಇಲಾಖೆ ಒಂದರಲ್ಲಿ ಆಗುತ್ತದೆ ಎಂದು ಹೇಳಿದರೆ, ಇದಕ್ಕೆ ಪರಿಹಾರ ಸಿಗುವುದಿಲ್ಲ. ನಾನು ಕೂಡ ಅದೇ ಭಾಗದಿಂದ ಬಂದಿರುವಂಥವನು ಆಗಿದ್ದೇನೆ. ನಾವು ನಮ್ಮ ಕರ್ನಾಟಕದ ಬೀದರ್ ಜಿಲ್ಲೆಯಿಂದ ಹಿಡಿದು ಕೋಲಾರ ಜಿಲ್ಲೆಯವರೆಗೂ ಭೂಪಟದ ಮಧ್ಯ ಭಾಗದಲ್ಲಿ ಏನಾದರೂ ಒಂದು ಗೆರೆ ಎಳೆದರೆ, ಎಡಭಾಗದಲ್ಲಿರುವಂತಹ ಜಿಲ್ಲೆಗಳು ಏನಿವೆ, ಅದರಲ್ಲಿ ಬಳ್ಳಾರಿ ಜಿಲ್ಲೆಯಿಂದ ಕೊಪ್ಪಳ ಜಿಲ್ಲೆ ಸೇರಿದಂತೆ, ಕೋಲಾರ ಜಿಲ್ಲೆಯವರೆಗೂ ಶಾಶ್ವತವಾಗಿ ಕುಡಿಯುವ ನೀರಿನ ಸಮಸ್ಯೆಗೆ ಪ್ರತಿ ವರ್ಷ ಬೇಸಿಗೆಯಲ್ಲಿ ಸಿಕ್ಕಿಹಾಕಿಕೊಳ್ಳುವಂತಹ ಜಿಲ್ಲೆಗಳಾಗಿರುತ್ತವೆ. ನಾವು ಇಷ್ಟು ವರ್ಷಗಳ ಕಾಲದಿಂದಲೂ ಪ್ರಯತ್ನ ಮಾಡಿದರೂ ಸಹ, ಸಾವಿರಾರು ಕೋಟಿ ರೂಪಾಯಿಗಳ ಹಣ ಖರ್ಚು ಮಾಡಿದರೂ ಸಹ, ಈ ಯಾವ ಜಿಲ್ಲೆಗಳಿಗೂ ಕೂಡ ನ್ಯಾಯ ಒದಗಿಸುವಂತಹ ಕೆಲಸ ಆಗಿರುವುದಿಲ್ಲ. ನಾನು ಕೇವಲ ಹೋಲಿಕೆಗಾಗಿ ಒಂದು ವಿಷಯವನ್ನು ಹೇಳುತ್ತೇನೆ. ಅದೇನೆಂದರೆ, ಸುಮಾರು 50 ವರ್ಷ ವಯಸ್ಸಾಗಿರುವಂತಹ ಶಿವಮೊಗ್ಗ ಜಿಲ್ಲೆಯ ಒಬ್ಬ ವ್ಯಕ್ತಿ ಮತ್ತು ಸುಮಾರು 50 ವರ್ಷ ವಯಸ್ಸಾಗಿರುವಂತಹ ನಮ್ಮ ಜಿಲ್ಲೆಯ ಒಬ್ಬ ವ್ಯಕ್ತಿಯನ್ನು ಪಕ್ಕದಲ್ಲಿ ನಿಲ್ಲಿಸಿ ತಾವು ಆ ಇಬ್ಬರನ್ನೂ ಹೋಲಿಕೆ ಮಾಡಬೇಕು. ಅವರ ದೇಹರಚನೆ, ಅವರಿಗೆ ಎಷ್ಟು ವಯಸ್ಸಾಗಿರುತ್ತದೆ, ಒಟ್ಟಾರೆಯಾಗಿ...

**ಸಭಾಪತಿಯವರು:–** ಶಿವಮೊಗ್ಗ ಜಿಲ್ಲೆಯ ವ್ಯಕ್ತಿಯನ್ನು ತಮ್ಮ ಪಕ್ಕದಲ್ಲಿ ನಿಲ್ಲಿಸಿದರೆ ಹೇಗೆ?

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ಪಕ್ಕದಲ್ಲಿ ನಿಲ್ಲಿಸಿದರೆ... ದೇವರ ದಯೆಯಿಂದ ನಾನು ಆ ರೀತಿಯ ಶೋಷಣೆಗೆ ಒಳಗಾಗಿರುವುದಿಲ್ಲ. ನಾನು ಶೋಷಣೆಗೆ ಒಳಗಾಗಿರುವಂತಹವರ ಬಗ್ಗೆ ಮತ್ತು ಬಡವರ ಪರವಾಗಿ ಮಾತ್ರ ಮಾತನಾಡುತ್ತಿದ್ದೇನೆ. ಅದರ ಹೊರತಾಗಿ, ನನ್ನ ಪಕ್ಕದಲ್ಲಿ ನಿಲ್ಲಿಸುವುದು ಅಥವಾ ಇನ್ನೊಬ್ಬರ ಪಕ್ಕದಲ್ಲಿ ನಿಲ್ಲಿಸುವುದು ದೊಡ್ಡದಲ್ಲ. ಇವೊತ್ತಿನ ದಿವಸ ಈ ಜಿಲ್ಲೆಗಳಲ್ಲಿ ಶೋಷಣೆಗೆ ಒಳಗಾಗಿರುವ ಜನ ಕುಡಿಯುವ ನೀರಿಗೆ ಪರದಾಡುವಂತಹ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಿದ್ದೇನೆ. ಮಾನ್ಯ ಸಚಿವರು ಸಹ, ಈ ಭಾಗದ ಜಿಲ್ಲೆಗಳ ಜನರ ಲ್ಯಾಬೋರೇಟರಿ ವರದಿಯನ್ನು ಒಮ್ಮೆ ನೋಡಬೇಕು. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ, "ಬೋರ್‌ವೆಲ್‌ಗಳ ನೀರಿನಿಂದ ನಾವು ಕುಡಿಯುವ ನೀರನ್ನು ಕೊಡುವುದಕ್ಕೆ ಕೆಲವು ಪ್ರಯತ್ನಗಳನ್ನು ಮಾಡಿದ್ದೇವೆ" ಎಂದು ಹೇಳಿರುತ್ತೀರಿ. ಆ ನೀರಿನಲ್ಲಿ ಶೇಕಡವಾರು ಎಷ್ಟು fluoride, nitrate and arsenic ಇದೆ ಮತ್ತು ಎಷ್ಟು ನೀರು ಕುಡಿಯುವುದಕ್ಕೆ ಯೋಗ್ಯವಾಗಿದೆ ಎಂಬುದನ್ನು ನಾವು ಕುಡಿಯುವ ನೀರು ಕೊಡುವುದಕ್ಕಿಂತಲೂ ಮೊದಲು ನೋಡಬೇಕಾದಂತಹ ಅನಿವಾರ್ಯತೆ ಇದೆ. ಆದರೆ, ನಾವು ಇದೆಲ್ಲವನ್ನೂ ಮಾಡದೇ, ಶುದ್ಧ ಕುಡಿಯುವ ನೀರನ್ನು ಕೊಡುವಂತಹದ್ದರಲ್ಲಿ ನಾವು ದಶಕಗಳನ್ನು ಕಳೆದರೆ, ಇವೊತ್ತಿನ ದಿವಸ ಆ ಭಾಗದ ಜನ ಖಂಡಿತವಾಗಿಯೂ ಕೂಡ ಕ್ಯಾನ್ಸರ್‌ನಂತಹ ಭಯಾನಕವಾದಂತಹ ಸಮಸ್ಯೆಗಳಿಂದ ನರಳಿ–ನರಳಿ ಸಾಯುತ್ತಿದ್ದಾರೆ. ಹಾಗಾಗಿ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಈ ವಿಚಾರದಲ್ಲಿ ಏನು ಮೂರ್ನಾಲ್ಕು ಇಲಾಖೆಗಳ ಇಂಟಿಗ್ರೇಷನ್ ಇದೆ, ಅದನ್ನು ಮಾಡಿ ಮಾನ್ಯ ಸಚಿವರು ಉತ್ತರ ನೀಡುವಾಗ, "ಈ ಅಷ್ಟು ಜಿಲ್ಲೆಗಳು ಅಂದರೆ, ಬಯಲುಸೀಮೆ ಮತ್ತು ಮಧ್ಯ ಕರ್ನಾಟಕದ ಜಿಲ್ಲೆಗಳು ಬಹು ದಶಕಗಳಿಂದ ನೀರಿಗೋಸ್ಕರ ಹಪಹಪಿಸುತ್ತಿದ್ದಾರೆ, ಅವರ ಹಸಿವನ್ನು, ಅವರ ಬಾಯಾರಿಕೆಯನ್ನು ಮತ್ತು ಅವರ ನೀರಿನ ಹಾಹಾಕಾರವನ್ನು ತಣಿಸುವಂತಹ ಕೆಲಸವನ್ನು ಯಾವಾಗ ಮಾಡುತ್ತಾರೆ" ಎಂಬುದನ್ನು ದಯಮಾಡಿ ಹೇಳಬೇಕು. ಏಕೆಂದರೆ, ಈ ವಿಚಾರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೇ ಅಂತಿಮ ಇಲಾಖೆಯಾಗಿರುತ್ತದೆ. ಅಂದರೆ, ಪ್ರತಿಯೊಬ್ಬರ ಮನೆಗೆ ಕುಡಿಯುವ ನೀರು ತಲುಪಿಸುವಂತಹವರು ಅವರೇ ಆಗಿರುತ್ತಾರೆ. ಜಲ ಸಂಪನ್ಮೂಲ ಇಲಾಖೆಯವರು ನೀರನ್ನು ತಂದು, ಕೆರೆಗಳಿಗೆ ತುಂಬಿಸಬಹುದು. ಇನ್ಯಾರೋ ಅಣೆಕಟ್ಟುಗಳನ್ನು ನಿರ್ಮಿಸಬಹುದು. ಮತ್ಯಾರೋ ಪೈಪ್‌ಲೈನ್‌ಗಳನ್ನು ಅಳವಡಿಸಬಹುದು. ಆದರೆ, ಪ್ರತಿಯೊಂದು ಮನೆ ಬಾಗಿಲಿಗೆ ಕುಡಿಯುವ ನೀರು ಪೂರೈಸುವ ಜವಾಬ್ದಾರಿಯುತ ಸ್ಥಾನದಲ್ಲಿ ಮಾನ್ಯ ಸಚಿವರು ಇದ್ದಾರೆ. ಹಾಗಾಗಿ, ಈ ವಿಚಾರದ ಬಗ್ಗೆ ಅವರು ಮೊದಲು ಉತ್ತರ ನೀಡಲಿ. ನಂತರ, ನಾನು ಮಾತನಾಡುತ್ತೇನೆ.

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಿನ್ನೆಯ ದಿವಸ ಈ ವಿಷಯ ನಿಯಮ 330 ರಲ್ಲಿ ಪ್ರಸ್ತಾಪ ಆದಾಗ, ಇದು ಸಣ್ಣ ನೀರಾವರಿ ಇಲಾಖೆಗೆ ಅಲಾಟ್ ಮಾಡಿದ್ದೇವೆಂದು ಹೇಳಿರುತ್ತೀರಿ. ಆಗ ನಾನೇ ಸ್ವತಃ ಮಾನ್ಯ ಸಭಾನಾಯಕರ ಬಳಿ ಹೋಗಿ, "ಈ ವಿಷಯವನ್ನು ತಮ್ಮ ಇಲಾಖೆಗೆ ಕೊಟ್ಟಿದ್ದಾರೆ. ಆದರೆ, ಇದರಲ್ಲಿ ಎತ್ತಿನಹೊಳೆ ಯೋಜನೆ ಎಂದು ಬಹಳ ಸ್ಪಷ್ಟವಾಗಿ ನಮೂದು ಮಾಡಲಾಗಿದೆ" ಎಂದು ಹೇಳಿರುತ್ತೇನೆ. ನಾನು ಸಹ ಭಾವಿಸಿಕೊಂಡಿರುವುದೇನೆಂದರೆ, ಇವೊತ್ತಿನ ದಿವಸ ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ಕುಡಿಯುವ ನೀರಿನ ವಿಚಾರ ಬಂದಾಗ, ಅದು ಎತ್ತಿನಹೊಳೆ ಯೋಜನೆ ಇರಬಹುದು ಅಥವಾ ತುಂಗಾಭದ್ರಾ ಮೇಲ್ದಂಡೆ ಯೋಜನೆ ಇರಬಹುದು ಅಥವಾ ಈ ಸರ್ಕಾರ ಹೊಸದಾಗಿ ಹುಟ್ಟಿ ಹಾಕಿರುವಂತಹ ಮೇಕೆದಾಟು ಯೋಜನೆ ಇರಬಹುದು, ಇದು ಯಾವುದರಿಂದಲಾದರೂ ನಮ್ಮ ಭಾಗಕ್ಕೆ ಕುಡಿಯುವ ನೀರಿನ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇದೆ ಎಂದು ನಾನು ತಮಗೆ ಚೀಟಿಯನ್ನು ಕಳುಹಿಸಿರುತ್ತೇನೆ. ಏಕೆಂದರೆ, ಈ ವಿಷಯದಲ್ಲಿ ಮೊದಲು ನನ್ನ ಹೆಸರು ಇರಲಿಲ್ಲ. ನಾನು ಸಹ ಎತ್ತಿನಹೊಳೆ ಯೋಜನೆಯ ನೀರಿಗಾಗಿ ಸುಮಾರು 15 ವರ್ಷಗಳಿಂದ ಎದುರು ನೋಡುತ್ತಿರುವಂತಹ ಒಬ್ಬ ವ್ಯಕ್ತಿಯಾಗಿರುತ್ತೇನೆ. ಈ ಎತ್ತಿನಹೊಳೆ ಯೋಜನೆಯು ಅವೊತ್ತಿನ ದಿವಸ ಸನ್ಮಾನ್ಯ ಶ್ರೀ ಸದಾನಂದಗೌಡರವರ ಕಾಲದಲ್ಲಿ ಕೇವಲ ರೂ.12,000 ಕೋಟಿಗಳ ಈ ಯೋಜನೆಗೆ ಒಪ್ಪಿಗೆ ಸೂಚಿಸಿ, ರೂಪಿಸಿದಂತಹ ಯೋಜನೆಯಾಗಿರುತ್ತದೆ. ಅದು ಏತಕ್ಕೋ ಅಥವಾ ಏನೋ ಗ್ರಹಗತಿಯೋ ಗೊತ್ತಿಲ್ಲ. ನಮ್ಮ ಕೋಲಾರ ಜಿಲ್ಲೆಗೆ ಬೆಂಗಳೂರು  ನಗರದಿಂದ ಕೊಳಚೆ ನೀರನ್ನು ತರುವಂತಹ ಕೆಲಸ ಎಷ್ಟು ವೇಗವಾಗಿ ಆಯಿತೋ, ಅಷ್ಟೇ ವೇಗವಾಗಿ ಎತ್ತಿನಹೊಳೆ ಯೋಜನೆಯಲ್ಲಿ ಕೆಲಸ ಆಗಿದ್ದರೆ, ಶುದ್ಧ ಕುಡಿಯುವ ನೀರು ನೇರವಾಗಿ ನಮ್ಮ ಕೋಲಾರ ಜಿಲ್ಲೆಗೆ ಬರುವಂತಹ ಕೆಲಸ ಆಗುತ್ತಿತ್ತು. ಈ ವಿಚಾರದಲ್ಲಿ ಸರ್ಕಾರ ಯಾವ ರೀತಿ ಚಿಂತನೆ ಮಾಡಿರುತ್ತದೆಯೋ ಅದು ನನಗೆ ಗೊತ್ತಿರುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ನವೀನ್‌ರವರು ಮಾತನಾಡುತ್ತಾ, ಕೋಲಾರ ಜಿಲ್ಲೆಯ ಬಗ್ಗೆ ಹೇಳಿದರು. ಆದರೆ, ಅವರಿಗೆ ಬೆಂಗಳೂರು ನಗರದ ಕೊಳಚೆ ನೀರನ್ನು ಬಳಕೆ ಮಾಡುವಂತಹ ಭಾಗ್ಯ ಇಲ್ಲದೇ ಇರುವಂಥದ್ದು, ಅವರ ಒಂದು ದೊಡ್ಡ ಪುಣ್ಯ ಎಂದು ನಾನಂತೂ ಭಾವಿಸಿದ್ದೇನೆ. ಬಹಳ ಮುಖ್ಯವಾಗಿ ಕಳೆದ 3 ವರ್ಷಗಳ ಹಿಂದೆ, ಈಗಿನ ಮುಖ್ಯಮಂತ್ರಿಗಳಾಗಿರುವಂತಹ ಶ್ರೀ ಸಿದ್ಧರಾಮಯ್ಯನವರು ಕೋಲಾರ ಭಾಗದಲ್ಲಿ "ಯರಗೋಳು ಕುಡಿಯುವ ನೀರಿನ ಯೋಜನೆ" ಯನ್ನು ಉದ್ಘಾಟನೆ ಮಾಡಿರುತ್ತಾರೆ. ಬಹಳ ದುರದೃಷ್ಟ ಏನೆಂದರೆ, ಕೋಲಾರ ಭಾಗಕ್ಕೆ ಶುದ್ಧ ಕುಡಿಯುವ ನೀರು ಹರಿದು ಬರುವಂತಹ ವ್ಯವಸ್ಥೆ ಮಾಡುವುದಕ್ಕಾಗಿ ಯರಗೋಳು

ಗ್ರಾಮದ ಬಳಿ ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಲಾಗಿರುತ್ತದೆ. ಆದರೆ, ಇವೊತ್ತಿನ ದಿವಸ ಬೆಂಗಳೂರು ನಗರದ ಕೊಳಚೆ ನೀರನ್ನು ಅರ್ಧಂಬರ್ಧ ಶುದ್ಧೀಕರಣ ಮಾಡಿ, ಕೋಲಾರ ಜಿಲ್ಲೆಯ ಕೆರೆಗಳನ್ನು ತುಂಬಿಸಲು ಹರಿಸಲಾಗುತ್ತಿದೆ. ಆ ನೀರು ಮಳೆ ನೀರಿನೊಂದಿಗೆ ಮಿಶ್ರಣ ಆಗಿ, ಅಣೆಕಟ್ಟಿಗೆ ಬರುತ್ತಿದೆ. ಅದೇ ನೀರನ್ನೇ ಕೋಲಾರ ಜಿಲ್ಲೆಗೆ ಸರಬರಾಜು ಮಾಡುವಂತಹ ಕೆಲಸ ಆಗುತ್ತಿದೆ. ಮಾನ್ಯ ನವೀನ್‌ರವರು ಆಗಲೇ ಮಾತನಾಡುತ್ತಾ, "ಅಣೆಕಟ್ಟನ್ನು ಯಾರೇ ಕಟ್ಟಲಿ, ಕಾಲುವೆಗಳನ್ನು ಯಾರೇ ಮಾಡಲಿ, ಪೈಪ್‌ಲೈನ್‌ಗಳನ್ನು ಯಾರೇ ಅಳವಡಿಸಲಿ. ಆದರೆ, ಅಂತಿಮವಾಗಿ ಕುಡಿಯುವ ನೀರನ್ನು ಪ್ರತಿ ಮನೆಗಳಿಗೆ ಸರಬರಾಜು ಮಾಡುವುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು" ಎಂದು ಹೇಳಿರುತ್ತಾರೆ. ಆದರೆ, ಆ ಇಲಾಖೆಯವರು ಏನೇ ಮಾಡಬೇಕೆಂದರೂ ಸಹ, ನೀರು ಬಂದರೆ ಮಾತ್ರ ಅವರು ಸರಬರಾಜು ಮಾಡುತ್ತಾರೆ. ಹಾಗಾಗಿ, ಮಾನ್ಯ ಸಚಿವರು ನೀಡಿರುವಂತಹ ಉತ್ತರದಲ್ಲಿ ನಿರ್ದಿಷ್ಟವಾಗಿ ಹೇಳಿರುವುದಿಲ್ಲ. ಬದಲಾಗಿ, ಅವರು ಕೊಟ್ಟಿರುವ ಉತ್ತರದಲ್ಲಿ . "...ಅಲ್ಲಿಂದ ನೀರನ್ನು ಶುದ್ಧೀಕರಿಸಿ ಗ್ರಾಮೀಣ ಜನವಸತಿಗಳಿಗೆ ಸರಬರಾಜು ಮಾಡಲು ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಬೇಕಾಗಿರುತ್ತದೆ" ಎಂದು ಹೇಳಿರುತ್ತಾರೆ. ಆದರೆ, ಅದು ಯಾವಾಗ? ಏಕೆಂದರೆ, ಈಗಾಗಲೇ ಸುಮಾರು 15 ವರ್ಷಗಳಾಗಿರುತ್ತದೆ. ಮಾನ್ಯ ಸಚಿವರು ಇವೊತ್ತಿನ ದಿವಸ ಉತ್ತರ ಕೊಡುವಂತಹ ಸಂದರ್ಭದಲ್ಲಿ... ಮೊನ್ನೆಯ ದಿವಸ ಈ ಸದನದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡುತ್ತಾ, "2027ನೇ ಇಸವಿಗೆ ಎತ್ತಿನಹೊಳೆ ಯೋಜನೆಯ ನೀರನ್ನು ನಾವು ಕೋಲಾರಕ್ಕೆ ಹರಿಸುತ್ತೇವೆ" ಎಂದು ಹೇಳಿರುತ್ತಾರೆ. ಆದರೆ, ಇಲ್ಲಿಯವರೆಗೂ ಕೂಡ ಅಥವಾ ಬಜೆಟ್‌ನಲ್ಲಿಯೂ ಕೂಡ ನಿರ್ದಿಷ್ಟವಾಗಿ ಈ ಯೋಜನೆಯ ಬಗ್ಗೆ ಏನನ್ನೂ ಹೇಳಿರುವುದಿಲ್ಲ. ಬಹಳ ಮುಖ್ಯವಾದ ಕುಡಿಯುವ ನೀರಿನ ಬಗ್ಗೆ ಮಾತನಾಡುವುದಕ್ಕೆ ತಾವು ನನಗೆ ಅವಕಾಶ ಕೊಟ್ಟಿದ್ದೀರಿ. ಮಾನ್ಯ ಕೃಷ್ಣ ಬೈರೇಗೌಡರವರು ಸಹ ಈ ಸದನದಲ್ಲಿ ಇದ್ದಾರೆ. ಅವರು ಇನ್ನು ಚಿಕ್ಕ ಹುಡುಗ ಇದ್ದಂತಹ ಸಂದರ್ಭದಲ್ಲಿ ಎಂದು ಕಾಣಿಸುತ್ತದೆ... ಹಿಂದಿನ ಸರ್ಕಾರಗಳು ಕೋಲಾರ ಜಿಲ್ಲೆಯಲ್ಲಿ ಒಂದು ಕಛೇರಿ ಮಾಡಿ, ಭದ್ರಾ ಮೇಲ್ದಂಡೆ ಯೋಜನೆಯ ನೀರು ಕೋಲಾರ ಜಿಲ್ಲೆಗೆ ಬರುವುದಕ್ಕೆ ಸುಮಾರು 25 ವರ್ಷ ಅಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ತೆರೆದು, ಅವರಿಗೆ ಸಂಬಳ ಕೊಟ್ಟುಕೊಂಡು ಕಾಲಹರಣ ಮಾಡಿರುತ್ತಾರೆ. ಆದರೆ, ಎತ್ತಿನಹೊಳೆ ಯೋಜನೆ ಬಂದ ನಂತರ, ಭದ್ರಾ ಮೇಲ್ದಂಡೆ ಯೋಜನೆ ಮಾಯವಾಗಿರುತ್ತದೆ. ಎತ್ತಿನಹೊಳೆ ಯೋಜನೆ ಹೆಸರು ಹೇಳಿಕೊಂಡು, ನಮ್ಮ ಕೋಲಾರ ಜಿಲ್ಲೆಯ ಜನತೆಗೆ ಈ ಸರ್ಕಾರಗಳು, ಅದು ಯಾವುದೇ ಸರ್ಕಾರ ಆಗಿರಬಹುದು, ನಮಗೆ ಶೋಷಣೆ ಮಾಡುತ್ತಿವೆ. ಸನ್ಮಾನ್ಯ ಸಚಿವರಾದ ಶ್ರೀ ಪ್ರಿಯಾಂಕ ಖರ್ಗೆಯವರು ಉತ್ತರ

ಕೊಡುವಂತಹ ಸಂದರ್ಭದಲ್ಲಿ, ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಅವರು ಕೂಡ ಕೋಲಾರ ಜಿಲ್ಲೆಯ ಜನರ ಕಷ್ಟಗಳನ್ನು ನೋಡಿರುತ್ತಾರೆ. ಕಲಬುರಗಿ ಜಿಲ್ಲೆಯಲ್ಲಿ ಏನು ಕಷ್ಟ ಇದೆ, ಅದಕ್ಕಿಂತಲೂ ಹೆಚ್ಚಿನ ಕಷ್ಟ ನಮ್ಮ ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಇದೆ. ಇವೊತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವುದಕ್ಕಾಗಿ, ಲಕ್ಷಾಂತರ ಕೋಟಿ ರೂಪಾಯಿಗಳ ಹಣವನ್ನು ಬೋರ್‌ವೆಲ್ ಕೊರೆಸುವುದಕ್ಕಾಗಿ ಖರ್ಚು ಮಾಡಿರುತ್ತಾರೆ. ಆ ಬೋರ್‌ವೆಲ್ ಕೊರೆಯುವಂತಹ ವಾಹನಗಳ ಡೀಸೆಲ್‌ಗೆ ಖರ್ಚು ಮಾಡಿದಂತಹ ಹಣವನ್ನು, ಸರ್ಕಾರ ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಖರ್ಚು ಮಾಡಿದ್ದರೆ, ಇವೊತ್ತಿನ ದಿವಸ ಈ ಎಲ್ಲಾ ಜಿಲ್ಲೆಗಳಿಗೂ ಸಹ, ಸಮೃದ್ಧಿಯಾಗಿ ಕುಡಿಯುವ ನೀರನ್ನು ಕೊಡುವಂತಹ ವ್ಯವಸ್ಥೆ ಆಗುತ್ತಿತ್ತು. ಈಗಲಾದರೂ ಸಹ, ಈ ಸರ್ಕಾರಕ್ಕೆ ಏನಾದರೂ ಕಮಿಟ್‌ಮೆಂಟ್ ಇದ್ದರೆ, ಕೋಲಾರ ಜಿಲ್ಲೆಗೆ ಶುದ್ಧ ಕುಡಿಯುವ ನೀರು ಕೊಡುವಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಿದರೆ, ಆ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ ಎನ್ನುವ ಮಾತನ್ನು ಹೇಳುತ್ತಾ, ಕುಡಿಯುವ ನೀರನ್ನು ಆದಷ್ಟು ಬೇಗ ನಮ್ಮ ಕೋಲಾರ ಜಿಲ್ಲೆಗೆ ಕೊಡಿ ಎಂದು, ಎಲ್ಲಾ ಕೋಲಾರ ಜನರ ಪರವಾಗಿ ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮೊದಲಿಗೆ ನಾನು ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ನವೀನ್‌ರವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ಅವರು ಬಹಳ ಒಳ್ಳೆಯ ವಿಷಯವನ್ನು ಕೈಗೆತ್ತಿಕೊಂಡಿರುತ್ತಾರೆ. ಈ ಸದನದಲ್ಲಿ ಶ್ರೀಯುತ ಪ್ರಿಯಾಂಕ ಖರ್ಗೆಯವರು ಸಹ ಇದ್ದಾರೆ. ಜೊತೆಗೆ, ಕೃಷ್ಣ ಬೈರೇಗೌಡರವರು ಸಹ ಇದ್ದಾರೆ. ವಿಶೇಷವಾಗಿ ಕೋಲಾರ, ಚಿಕ್ಕಬಳ್ಳಾಪುರ, ರಾಯಚೂರು, ಯಾದಗಿರಿ, ಕಲಬುರಗಿ, ಬಳ್ಳಾರಿ, ಚಿತ್ರದುರ್ಗ, ಹಾವೇರಿ, ತುಮಕೂರಿನಲ್ಲಿ ಸ್ವಲ್ಪ ಅಂದರೆ, ಮುಕ್ಕಾಲು ಭಾಗ.

(ಮುಂದು)

(317) 11.03.2026 ವೈಎಲ್-ಆರ್‌ಎನ್ 4.20 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್ (ಮುಂದು):**

ಅಂದರೆ, ಕಲುಷಿತ ನೀರನ್ನು ಕುಡಿಯುವುದರಿಂದ ಆರೋಗ್ಯ ಹಾಳಾಗುತ್ತಿದ್ದು, ಕ್ಯಾಲ್ಸಿಯಂ ವಾಟರ್ ಅವಶ್ಯಕತೆ ಇದೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿನ ಬಾತ್‌ರೂಮ್ ಮತ್ತು ಕೋಲಾರದ ಬಾತ್‌ರೂಮ್ ಹೋಲಿಕೆ ಮಾಡಿ ನೋಡಿದಾಗ, ಒಂದು ವರ್ಷ ತರುವಾಯ ಬೆಂಗಳೂರಿನಲ್ಲಿ ಉಪಯೋಗಿಸಿರುವಂಥ ಬಾತ್‌ರೂಮ್ ಹೇಗೆ ಇರುತ್ತದೆ

ಎಂಬುದನ್ನು ನೋಡಿ. ಹಾಗೆಯೇ ಕೋಲಾರದಲ್ಲಿನ ಬಾತ್‌ರೂಮ್ ಮತ್ತು ಅಲ್ಲಿನ ಬಕೆಟ್ ಹಾಗೂ ತಲೆ ಮೇಲೆ ಹಾಕಿಕೊಳ್ಳುವಂಥ ನೀರಿನ ಚೊಂಬು ಯಾವ ಬಣ್ಣದಲ್ಲಿರುತ್ತದೆಯೋ, ಅಂತಹ ನೀರನ್ನು ನಾವು ಕುಡಿಯುತ್ತಿದ್ದೇವೆ. ಈಗಾಗಲೇ ಮಾನ್ಯ ಸದಸ್ಯರೊಬ್ಬರು ಹೇಳಿದ ಹಾಗೆ, ಚಿತ್ರದುರ್ಗದಲ್ಲಿನ ರೈತನನ್ನು ಮತ್ತು ಶಿವಮೊಗ್ಗದಲ್ಲಿನ ರೈತನನ್ನು ಇಬ್ಬರನ್ನೂ ಪಕ್ಕದಲ್ಲಿ ನಿಲ್ಲಿಸಿ, ಅವರುಗಳ ವಯಸ್ಸು, ದೇಹದಾರ್ಢ್ಯತೆ, ಫಿಟ್‌ನೆಸ್ ಎಲ್ಲವನ್ನೂ ನೋಡಿದಾಗ ಚಿತ್ರದುರ್ಗದವರು ಸುಮಾರು 70, 80 ವರ್ಷಗಳಾಗಿರುವ ರೀತಿ ಕಾಣಿಸಿದರೆ, ಶಿವಮೊಗ್ಗದವರು ಸುಮಾರು 40 ವರ್ಷಗಳಾಗಿರುವಂತೆ ಕಾಣಿಸುತ್ತಾರೆ. ಈಗಲೂ ಸಹ ಏನು ಬೋರ್‌ವೆಲ್ ನೀರನ್ನು ಕುಡಿಯಲು ಉಪಯೋಗಿಸುತ್ತಿದ್ದೇವೆ, ಆ ಬೋರ್‌ವೆಲ್ ಅನ್ನು ಯಾವುದೋ ಒಂದು ಕಾಲದಲ್ಲಿ ನೀರು ಸಿಗದೇ ಇದ್ದ ಪಕ್ಷದಲ್ಲಿ ಅಳವಡಿಸಲಾಗುತ್ತಿತ್ತು. ಇವತ್ತು ಏನಾದರೂ ಮಾಡಿ, ಒಂದು ಪುಣ್ಯದ ಕೆಲಸ ಮಾಡಬೇಕಾಗಿದೆ. ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಸಮಸ್ಯೆ ಏನೇ ಇರಲಿ, ಅದನ್ನು ಬಿಟ್ಟು ಮನುಷ್ಯತ್ವದ ಕೆಲಸವನ್ನು ನಾವು ಮಾಡಬೇಕಾಗಿದೆ. ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ, ಮೊದಲನೆಯದಾಗಿ, ನದಿ ಸಿಹಿ ನೀರನ್ನು ಕುಡಿಯಲಿಕ್ಕೆ ಅನುಕೂಲ ಮಾಡಿಕೊಡಬೇಕು. ಊಟ, ತಿಂಡಿಗೆ ಎರಡನೆಯ ಆದ್ಯತೆ ನೀಡೋಣ. ಇಲ್ಲದಿದ್ದರೆ ಬಹಳ ಸಮಸ್ಯೆಗಳಾಗುತ್ತವೆ. ಉದಾಹರಣೆಗೆ ಹೇಳುವುದಾದರೆ, ಬೋರ್‌ವೆಲ್ ವಾಟರ್, ಆ ನೀರನ್ನು ಕುಡಿಯುವುದರಿಂದ ಹಲ್ಲು, ಮೂಳೆ, ಆರೋಗ್ಯದ ಸಮಸ್ಯೆಗಳೆಲ್ಲವೂ ಉದ್ಭವಿಸುತ್ತದೆ. ಮಾನ್ಯ ಪ್ರಿಯಾಂಕ್ ಖರ್ಗೆಯವರಿಗೆ ಗುಲ್ಬರ್ಗಾ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಯಾವ ರೀತಿ ನೀರು ಇದೆ ಎಂಬುದು ಬಹಳ ಚೆನ್ನಾಗಿಯೇ ಅರ್ಥವಾಗಿದೆ. ಉದಾಹರಣೆಗೆ ಭೀಮಾ ನದಿ ನೀರು, ಕೃಷ್ಣ ನದಿ ನೀರು ಎಷ್ಟು ತಾಲ್ಲೂಕುಗಳಿಗೆ ಸಿಗುತ್ತಿವೆ. ಸಿರಿಗೆರೆ ಸ್ವಾಮೀಜಿರವರು 'ಗಂಗಾ ಸ್ನಾನ; ತುಂಗಾ ಪಾನ' ಮಾಡಬೇಕೆಂದು ಹೇಳುತ್ತಾರೆ. ಸ್ವಾಮೀಜಿಗಳು ಎಲ್ಲಿಯಾದರೂ ಪ್ರಯಾಣ ಮಾಡಿದರೆ, ಕುಡಿಯುವ ಸಲುವಾಗಿಯೇ ಆ ನೀರನ್ನೇ ತೆಗೆದುಕೊಂಡು ಹೋಗುತ್ತಾರೆ. ಎಲ್ಲಿ ಆ ರೀತಿ ನೀರು ಸಿಗುತ್ತದೆ? ಹಾಗಾಗಿ, ಏನಾದರೂ ಮಾಡಿ ಬೋರ್‌ವೆಲ್ ನೀರು ಕುಡಿಯುವುದನ್ನು ನಿಲ್ಲಿಸಬೇಕು. ಅದಕ್ಕೆ ಎಷ್ಟೇ ಖರ್ಚಾದರೂ ಪರವಾಗಿಲ್ಲ. ನದಿ ನೀರು ಎಲ್ಲರೂ ಕುಡಿಯಲು ಸಿಗುವ ರೀತಿಯಲ್ಲಿ connectivity ಮಾಡಬಹುದೇ ಎಂಬುದನ್ನು ನೋಡಬೇಕು. ಎಲ್ಲಿ ಅಂತಹ ವ್ಯವಸ್ಥೆ ಇದೆ ಎಂಬುದರ ಬಗ್ಗೆ ಅಧ್ಯಯನವಾಗಬೇಕು.

ಉದಾಹರಣೆಗೆ ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಏನಿದೆ, ಬಹಳಷ್ಟು ಕಡೆ ವೈಫಲ್ಯವಾಗಿದ್ದು, ಇದರ ಬಗ್ಗೆ ಸಹ ಸ್ವಲ್ಪ ಅಧ್ಯಯನವಾಗಬೇಕು. ಮಾನ್ಯ ಕೃಷ್ಣ ಬೈರೇಗೌಡರವರು ಈಗ ತಾನೇ ಸದನದಿಂದ ಹೊರಗೆ ಹೋದರು. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ

tertiary treatment ಆಗದೆಯೇ ಕೆ.ಸಿ.ವ್ಯಾಲಿಯಿಂದ ನೀರನ್ನು ಕೊಡುತ್ತಿದ್ದಾರೆ. ಅವರ ಗೋಳು ನೋಡಲು ಆಗುವುದಿಲ್ಲ. ಈ ಸಂಬಂಧ tertiary treatment ನಡೆಸದೇ ಏತಕ್ಕೆ ನೀರನ್ನು ಕೊಡುತ್ತಿದ್ದಾರೆ ಎಂದು ಅಲ್ಲಿನ ಜನರು ಹೋರಾಟ ಮಾಡುತ್ತಿದ್ದಾರೆ. First of all, ಆ ನೀರನ್ನು ಕೊಡಬಾರದಿತ್ತು. ಅಲ್ಲಿ ಬೆಳೆಯುವಂಥ ತರಕಾರಿ ತಿನ್ನುವ ರೀತಿ ಇದೆಯೇ? ಆ ತರಕಾರಿಯನ್ನು ಪರೀಕ್ಷಿಸಿದರೆ ಯಾವ ಪರಿಸ್ಥಿತಿ ಇದೆ ಎಂಬುದನ್ನು ನೋಡಬೇಕಾಗಿದೆ. ಉತ್ತರ ಕರ್ನಾಟಕ ಭಾಗದವರು ತರಕಾರಿ ವಿಚಾರದಲ್ಲಿ ಬಹಳ ಪುಣ್ಯವಂಥರು. ಬೆಂಗಳೂರಿನ ಕಡೆ ಉತ್ತರ ಕರ್ನಾಟಕದವರು ಬರುವಾಗ ತರಕಾರಿಯನ್ನು ಕೈಯಲ್ಲಿಟ್ಟುಕೊಂಡು ಬಂದು ಇಲ್ಲಿ ಊಟ ಮಾಡುತ್ತಾರೆ. ಹಾಗಾಗಿ, ಕೋಲಾರ, ಚಿಕ್ಕಬಳ್ಳಾಪುರ, ಮಧ್ಯ ಕರ್ನಾಟಕದ ಭಾಗದಲ್ಲಿ ಎಲ್ಲೆಲ್ಲಿ ಗಡುಸು ನೀರನ್ನು ಕುಡಿಯುವಂಥ ಪರಿಸ್ಥಿತಿ ಇದೆ, ಅದನ್ನು ಏನಾದರೂ ಮಾಡಿ, ಬದಲಾಯಿಸುವಂಥ ಭಗೀರಥ ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ಹೇಳಬಯಸುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಕೆ.ಎಸ್.ನವೀನ್‌ರವರು, ಮಾನ್ಯ ಗೋವಿಂದರಾಜುರವರು, ಮಾನ್ಯ ಎನ್.ರವಿಕುಮಾರ್‌ರವರು ಸದರಿ ವಿಚಾರದ ಕುರಿತು ಸಾಕಷ್ಟು ಮಾತನಾಡಿದ್ದಾರೆ. ಮಾನ್ಯ ಗೋವಿಂದರಾಜುರವರು ಹೇಳಿದ ಹಾಗೆ irrigation work ಸಂಪೂರ್ಣವಾಗಿ ಮುಗಿದ ಮೇಲೆ ನಮ್ಮ ಕೆಲಸ ಪ್ರಾರಂಭವಾಗುತ್ತದೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಏನಿದೆ, ಇದು ನಮ್ಮ ಸರ್ಕಾರದ ಪ್ರಮುಖವಾದ ಯೋಜನೆಯಾಗಿದೆ. ಕಳೆದ ಸರ್ಕಾರದಲ್ಲಿ ಅಂದಾಜು ಮೊತ್ತ ರೂ.15,000 ಕೋಟಿಗಳಾಗಿದ್ದು, ಈಗ ಸುಮಾರು ರೂ.23,751 ಕೋಟಿಗಳಷ್ಟು ಅಂದಾಜು ಮೊತ್ತವಾಗಿದೆ. ತಮಗೂ ತಿಳಿದಿರುವ ಹಾಗೆ 24.01 ಟಿ.ಎಂ.ಸಿ. ಕುಡಿಯುವ ನೀರನ್ನು ತುಮಕೂರು, ರಾಮನಗರ, ಕೋಲಾರ, ಬೆಂಗಳೂರು ಗ್ರಾಮೀಣ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಿಗಾಗಿ ಮೀಸಲಿರಿಸಲಾಗಿದೆ. ಈ 24.01 ಟಿ.ಎಂ.ಸಿ. ಕುಡಿಯುವ ನೀರಿನಲ್ಲಿ 8.93 ಟಿ.ಎಂ.ಸಿ. ನೀರು ಗ್ರಾಮೀಣ ಭಾಗಕ್ಕೆ ಮೀಸಲಿರಿಸಲಾಗಿದ್ದು, ಇದರಿಂದಾಗಿ 5 ಜಿಲ್ಲೆಗಳಲ್ಲಿ ಸುಮಾರು 21 ತಾಲ್ಲೂಕಿನ ಸುಮಾರು 7,100 ಜನ ವಸತಿ ಪ್ರದೇಶಕ್ಕೆ ನೀರನ್ನು ಒದಗಿಸಲು ಪ್ಲಾನ್ ಮಾಡಿಕೊಂಡಿದ್ದೇವೆ. ಈಗಾಗಲೇ ಹೇಳಿದ ಹಾಗೆ V.J.N.L (Visvesvaraya Jala Nigam Limited) ರವರು ಈ ಕಾಮಗಾರಿಯನ್ನು ಮುಗಿಸಬೇಕಾಗಿದ್ದು, ಸದರಿಯವರು ತುಮಕೂರು ಕೆನಾಲ್ ಕಾಮಗಾರಿ ಕೆಲಸವನ್ನು ಜೂನ್ 2026 ರೊಳಗೆ ಪೂರ್ಣಗೊಳಿಸಿ, subject to forest clearance, ಹಸ್ತಾಂತರ ಮಾಡುತ್ತೇವೆ ಎಂದು

ಹೇಳಿದ್ದಾರೆ. Now, forest clearance is lying with Union Government of India. ಆದಾದ ತರುವಾಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕು. Drinking water source ಅನ್ನು ತರುವುದು ಸಣ್ಣ ನೀರಾವರಿ ಇಲಾಖೆಯವರ ಜವಾಬ್ದಾರಿಯಾಗಿದೆ. ನಾವು ಸಹ ಅಕ್ಟೋಬರ್ 2027 ವರೆಗೂ ಅಥವಾ ಜೂನ್ 2026 ರವರೆಗೂ ಕಾಯುತ್ತಾ ಕುಳಿತರೆ, ಈಗಾಗಲೇ ಹಿಂದಿನ ತಿಂಗಳಿನಲ್ಲೇ Preliminary Scheme Report for multi-village scheme ಗೆ ಅನುಮೋದನೆ ನೀಡಿದ್ದೇನೆ. Preliminary Scheme Report ತರಿಸುವ ಸಲುವಾಗಿಯೇ ರೂ.11.27 ಕೋಟಿ ಭರಿಸಲಾಗಿದೆ. PSR Report ಏನೆಂದರೆ, impounding reservoir, ವಾಟರ್ ಟ್ರೀಟ್‌ಮೆಂಟ್ ಪಾಯಿಂಟ್, zonal balancing tanks ಎಲ್ಲಿ ಬರುತ್ತದೆ, ಪೈಪ್‌ಲೈನ್ ನೆಟ್‌ವರ್ಕ್ಸ್ ಹೇಗೆ ಅಳವಡಿಸಬೇಕು, O.S.T ಎಲ್ಲಿ ಬರಬೇಕು, in village infrastructure upto functional House tap ಎಂಬುದರ ಕುರಿತು ನೀಲಿ ನಕ್ಷೆ ತಯಾರಿಸಲಾಗುತ್ತದೆ. ಆದಾದ ತರುವಾಯ ಡಿ.ಪಿ.ಆರ್. ಮಾಡಬೇಕಾಗುತ್ತದೆ. P.S.R ಸಲುವಾಗಿ ಈಗಾಗಲೇ ತಯಾರಿ ಮಾಡಿಕೊಂಡಿದ್ದೇವೆ. Parallel working with the Irrigation Department. As well as Minor Irrigation Department. M.I.R.L ರವರ ಜವಾಬ್ದಾರಿ ಬರುತ್ತದೆ. ಕೆಲವು ಟ್ಯಾಂಕ್‌ಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಲಾಗುತ್ತಿದೆ, ಅಲ್ಲಿ ಭಾಗಶಃ ಜವಾಬ್ದಾರಿಯನ್ನು ತೆಗೆದುಕೊಂಡಿದ್ದು, ಒಪ್ಪಿಗೆಯನ್ನು ಸೂಚಿಸಿದ್ದಾರೆ. ಎರಡು ಇಲಾಖೆಯಲ್ಲಿ ಸ್ವಲ್ಪ ತಾಂತ್ರಿಕ ಸಮಸ್ಯೆ ಇತ್ತು. ಏಕೆಂದರೆ, ownership dispute ಆಗುತ್ತದೆ. ಇದು Z.P tank or M.I tank ಗಳ ಬಗ್ಗೆ ಅಧಿಕಾರಿಗಳ ಮಟ್ಟದಲ್ಲಿ ಒಂದು ಒಮ್ಮತಕ್ಕೆ ಬಂದು we have decided it on a sharing basis. ಹಾಗಾಗಿ, ಯಾವುದೇ ಸಮಯ ವಿಳಂಬವಾಗದಂತೆ ಈಗಾಗಲೇ ಪಿ.ಎಸ್.ಆರ್. ಮಾಡಲು ಅವಕಾಶ ಕಲ್ಪಿಸಲಾಗಿದೆ.

ಎರಡನೆಯದಾಗಿ, ಎಲ್ಲಾ ಸದಸ್ಯರು ಒಳಗೊಂಡ ಹಾಗೆ ಇನ್ನೊಂದು ಪ್ರಮುಖವಾದ ವಿಚಾರವಾದ ಕುಡಿಯುವ ನೀರಿನ ಶುದ್ಧತೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಬಹಳ ಗಂಭೀರವಾಗಿ ಸರ್ಕಾರ ಕ್ರಮ ಕೈಗೊಂಡಿದೆ. ಇವತ್ತು ವಿಚಾರ ಪ್ರಸ್ತಾಪವಾಗುತ್ತದೆ ಎಂಬುದು ನನಗೆ ಗೊತ್ತಿರಲಿಲ್ಲ. ಗೊತ್ತಿದ್ದರೆ ಅದರ ಅಂಕಿಅಂಶಗಳನ್ನು ತೆಗೆದುಕೊಂಡು ಬರುತ್ತಿದ್ದೆನು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹೆಚ್ಚಿನ ಒತ್ತನ್ನು portability of water, ಕುಡಿಯುವ ನೀರಿನ ಶುದ್ಧತೆಗೆ ಆದ್ಯತೆ ನೀಡುತ್ತಿದ್ದೇವೆ. ಲಕ್ಷಾಂತರ ಪರೀಕ್ಷೆಯನ್ನು bacterial contamination and chemical contamination ಗಳನ್ನು ಮಾಡಲಾಗುತ್ತಿದೆ. ಜೊತೆಗೆ ಬೇಸಿಗೆ ಕಾಲ ಇರಬಹುದು, ಮಳೆಗಾಲ ಇರಬಹುದು Standard Operating Procedures ಕೊಡಲಾಗುತ್ತಿದೆ. Field Testing Kits ಅನ್ನು

ಸಾವಿರಾರು ಕಡೆ ಕೊಡುತ್ತಿದ್ದೇವೆ. ಅದನ್ನು ಹೊರತುಪಡಿಸಿ Both for Biological as well as chemical contamination ಗೆ ಹೊಸ ಲ್ಯಾಬ್‌ಗಳನ್ನು ಎಲ್ಲಾ ಜಿಲ್ಲೆಗಳಲ್ಲಿ setup ಮಾಡಿದ್ದೇವೆ. ವಿಶೇಷವಾಗಿ ಮಳೆಗಾಲ, ಬರಗಾಲ ಸಮಯದಲ್ಲಿ Standard Operating Procedures ಗೆ ಹೆಚ್ಚಿನ ಒತ್ತನ್ನು ನೀಡಲಾಗುತ್ತಿದೆ. ಮಾನ್ಯ ಎನ್.ರವಿಕುಮಾರ್‌ರವರು ಹೇಳಿದ ಹಾಗೆ ಸುಮಾರು 1,000 O.S.T (Operating System Tools) ಗಳನ್ನು ಮಾಡಿಕೊಂಡಿದ್ದೇವೆ. ಎಲ್ಲಿ ಶೀತಲತೆಯಿಂದಾಗಿರಬಹುದು ಅಥವಾ ಎಲ್ಲಿ ಬಹಳ ವರ್ಷಗಳಿಂದ ನೀರನ್ನು ಹರಿಸಿರುವುದಿಲ್ಲ ಅಥವಾ ಕಲುಷಿತ ನೀರು ಇರಬಹುದು, ಅದನ್ನು ಸರಿಪಡಿಸುವ ಸಲುವಾಗಿ ಸುಮಾರು 1,000 O.S.T ಗಳನ್ನು ಮಾಡುವ ಕುರಿತು ಈ ಸಾಲಿನ ಬಜೆಟ್ ಪುಸ್ತಕದಲ್ಲಿ ಅದರ ಬಗ್ಗೆಯೂ ಒಂದು ಪ್ಯಾರಾ ನಮೂದಿಸಲಾಗಿದೆ.

(ಮುಂದು)

(318) 11.03.2026/4.30/ ಎಸ್‌ಕೆ.ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಿಯಾಂಕ್ ಖರ್ಗೆ (ಮುಂದು):-**

ಈ ವರ್ಷ 1,000 O.S.T. ಗಳನ್ನು ತೆಗೆದುಕೊಂಡಿದ್ದೇವೆ. ಏಕೆಂದರೆ ಅಲ್ಲಿಂದ ನೀರು ಹಳ್ಳಿಗಳಿಗೆ ಸರಬರಾಜು ಆಗುತ್ತದೆ. ಅದನ್ನು ಕೂಡ ನಾವು ಒಂದು ಪ್ರಯೋಗವನ್ನು ಮಾಡುತ್ತಿದ್ದೇವೆ. ಒಂದು ವಿನೂತನವಾದಂತಹ ಪ್ರಯೋಗದ ಬಗ್ಗೆ ಕಳೆದ ಐದಾರು ತಿಂಗಳ ಹಿಂದೆ ಈ ಸದನದಲ್ಲಿ ನಾನು ಮಾತುಕೊಟ್ಟಿದ್ದೆ. ಒಂದು Center of Excellence for water ಕೂಡ ಮಾಡುತ್ತಿದ್ದೇವೆ. ಐ.ಟಿ. ಮತ್ತು ಬಿ.ಟಿ., ಇಲಾಖೆ ಮತ್ತು Rural Water Supply, World Bank Funds ನಿಂದ ಮಾಡುತ್ತಿದ್ದೇವೆ. ಇದರಲ್ಲಿ ತಾವು ಹೇಳಿರುವಂತೆ, potability of water ಇರಬಹುದು. ನೀರಿಗೋಸ್ಕರ ಹೊಸ ತಂತ್ರಜ್ಞಾನ ಇರಬಹುದು. ಕೆಲವು ತಂತ್ರಜ್ಞಾನ ನೋಡಿದರೆ ಸಮುದ್ರದಿಂದ ಶುದ್ಧ ಕುಡಿಯುವ ನೀರನ್ನು ಮಾಡಬಹುದು. ಗಾಳಿಯಿಂದಲೂ ನೀರು ಮಾಡಬಹುದು ಎಂದು ಕೆಲವು ಜನರು ಹೇಳುತ್ತಾರೆ. Basically water sources ಅನ್ನು conserve ಹೇಗೆ ಮಾಡಬಹುದು. Water tables ಹೇಗಿದೆ? ಅದಕ್ಕೆ ನಮ್ಮ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ Minor Irrigation and Rural Water Supply ನವರ ಜೊತೆ ಜಂಟಿಯಾಗಿ task force ಮಾಡಿ, ಈಗಾಗಲೇ Minor Irrigation ಅವರು Water Atlas ಎಂದು ಮಾಡುತ್ತಿದ್ದಾರೆ. ISRO ಮುಖಾಂತರ ಇರಬಹುದು ಮತ್ತು Karnataka State Remote Sensing Applications Centre ಇರಬಹುದು. ಇದಕ್ಕೆ ಸಂಬಂಧಪಟ್ಟ ಮಾಹಿತಿಗಳು ಬೇರೆ ಬೇರೆ ಕಡೆಗಳಲ್ಲಿ ಇದೆ. ನಾವು ಅದನ್ನು ಒಂದೇ ಕಡೆ ಸಮಗ್ರವಾಗಿ ಇಟ್ಟುಕೊಂಡು, Urban Water Supply building ಅನ್ನು ಯಲಹಂಕದಲ್ಲಿ

ಮಾಡಿರುವುದನ್ನು ನಾವು ನೋಡಿದ್ದೇವೆ. Center of Excellence for water ಕೂಡ ನಾವು ಮಾಡಿದ್ದೇವೆ. Chemical parameters across the State ಗೋಸ್ಕರ ಇದೊಂದಕ್ಕೆ 2025-26ರಲ್ಲಿ 2,7,677 ಲ್ಯಾಬ್ ಟೆಸ್ಟ್‌ಗಳನ್ನು ಮಾಡಿದ್ದೇವೆ. ನಮ್ಮ ಪ್ರಯತ್ನ ಪ್ರಾಮಾಣಿಕವಾಗಿದೆ ಮತ್ತು ನಿರಂತರವಾಗಿ ಇದೆ. ಶುದ್ಧ ಕುಡಿಯುವ ನೀರು ಒದಗಿಸುವ ಜವಾಬ್ದಾರಿ ನಮ್ಮ ಸರ್ಕಾರದ್ದಾಗಿದೆ. ಸರ್ಕಾರ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದೆ. Center of Excellence ಮುಖಾಂತರ ಇದನ್ನು ಹೆಚ್ಚು ಚುರುಕುಗೊಳಸುತ್ತೇವೆ.

**ಸಭಾಪತಿಯವರು:-** ಮಾನ್ಯ ಕೇಶವ್ ಪ್ರಸಾದ್‌ರವರೇ, ತಾವು ಮಾತನಾಡಿ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ತಾವು ಈಗ ಕುಳತುಕೊಳ್ಳಿ. ಶ್ರೀಮತಿ ಹೇಮಲತಾ ನಾಯಕರವರ ಕೇಳರವಂತಹದ್ದಕ್ಕೆ ಪೌರಾಡಳ ಮತ್ತು ಹಜ್ ಮಂತ್ರಿಗಳಂದ ಉತ್ತರ ಬಂದಿದೆ. ಮಾನ್ಯ ಸಚಿವರು ಈಗ ಸದನಕ್ಕೆ ಬರಬೇಕಲ್ಲವೇ? ನಾನು ಬೆಳಗ್ಗೆ ಹೇಳದ್ದೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾಳೆಯವರೆಗೂ ಸ್ವಲ್ಪ ಸಮಯ ಬೇಕಾಗಿದೆ.

**ಸಭಾಪತಿಯವರು:-** ತಾವು ಉತ್ತರ ಕೊಡುತ್ತೀರಾ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ನಾಳೆ ನೋಡುತ್ತೇನೆ. ಅವರು ಬಂದರೆ ಉತ್ತರ ಕೊಡುತ್ತಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಅವರು ಹೋಗಬೇಕೆಂದರೆ permission ತೆಗೆದುಕೊಳ್ಳಬೇಕಲ್ಲವೇ? ಅವರು ಏನು ಹೇಳದ್ದಾರೆಂಬ ಬಗ್ಗೆ ನನಗೆ ಗೊತ್ತಾಗಬೇಕಲ್ಲ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು detail ಆಗಿ ಬಂದು ಉತ್ತರ ಕೊಡುತ್ತಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಸಚಿವರಿಗೆ ಹೇಳುವುದು ಕೇಳುವುದು ಏನೂ ಗೊತ್ತಿಲ್ಲವೇ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರಿಂದ reply ಬಂದ ಕೂಡಲೇ...

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಹೌದು. ಅವರು ನನಗಾದರೂ ಹೇಳಬೇಕಲ್ಲವೇ?

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಹೌದು

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಶಿವರಾಜ ಎಸ್. ತಂಗಡಗಿಯವರು ಸದನಕ್ಕೆ ಬರುವುದಿಲ್ಲ ಎಂದು ತಾವು ಹೇಳದಿರಿ. ಅದಕ್ಕೆ ನಾನು ಆಯಿತು ಎಂದೆನು. ಆಗ ಅವರು ಸದನಕ್ಕೆ ಬಂದರು.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರನ್ನು ಸದನಕ್ಕೆ ಕರೆಯಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾನು ಇದನ್ನು ಒಪ್ಪುವುದಿಲ್ಲ. ಅವರು ಮಂತ್ರಿ ಇರಬಹುದು. ಆದರೆ ಅವರು ನನ್ನ ಅನುಮತಿಯನ್ನು ಪಡೆದುಕೊಂಡು ಹೋಗಬೇಕು. ಮಾನ್ಯ ಕೇಶವ ಎಸ್ ಪ್ರಸಾದ್‌ರವರೇ, ತಾವು ಮಾತನಾಡಿ.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದೇ ಒಂದು clarification ಇದೆ. ಮಾನ್ಯ ಸಚಿವರು ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಜಂಟಿ ಕ್ರಿಯಾ ಸಮಿತಿ ಆ ತರಹ ಎಲ್ಲಾ ಇಲಾಖೆಗಳನ್ನೊಳಗೊಂಡಂತೆ ನಾಲ್ಕು ಮಂತ್ರಾಲಯಗಳನ್ನು ಸೇರಿಸಿ ಒಂದು Action Task Force ಎಂಬುದಾಗಿ ಮಾಡಿ. ನನ್ನ practical ಅನುಭವವನ್ನು ಹೇಳುತ್ತೇನೆ. Jackwell ಅನ್ನು ಒಂದು ಕಡೆ ಮಾಡಬೇಕು. ಅಲ್ಲಿ land dispute ಇದೆ. It is the dispute between the Urban Local Bodies and Rural Local Bodies. ಅವರು jackwell ಮಾಡುವುದಕ್ಕೆ ಅಲ್ಲಿ ಅನುಮತಿಯನ್ನು ಕೊಡುತ್ತಿಲ್ಲ. ಈಗ ಅದಕ್ಕೆ ತಮ್ಮ ಇಲಾಖಾಧಿಕಾರಿಗಳು immediately sort out ಮಾಡುವುದಿಲ್ಲ. ಮಾನ್ಯ ಗೃಹ ಸಚಿವರಾದ ಶ್ರೀ ಪರಮೇಶ್ವರ ಕ್ಷೇತ್ರದಲ್ಲಿ ಎತ್ತಿನಹೊಳೆಯದ್ದೇ ಒಂದು reservoir ಅನ್ನು ಕೊರಟಗೆರೆನಲ್ಲಿ ಮಾಡಿದ್ದಾರೆ. ಅಲ್ಲಿಂದ ಮುಂದಕ್ಕೆ ಆಗಬೇಕಾಗಿರುವ ಕಾಮಗಾರಿಗಳು ಸಾಕಷ್ಟು ಇವೆ. ಅಲ್ಲಿ ಕೂಡ ಸಮಸ್ಯೆಗಳಿವೆ. ನಾನು ಹೇಳುವುದೇನೆಂದರೆ, ತಾವು ಒಂದು official ಆಗಿ declare ಮಾಡಿ. ಈ ತರಹ ನಾಲ್ಕು ಇಲಾಖೆಗಳು ಸೇರಿ ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಎಲ್ಲಾ ಕಾನೂನುಗಳ ಅಡೆತಡೆಗಳು ಅಥವಾ ಇತರೆ approval ಗಳ ಅಡೆತಡೆಗಳು ಬಂದರೆ ತ್ವರಿತವಾಗಿ ಅನುಷ್ಠಾನ ಮಾಡುವಂತಹದ್ದಕ್ಕೆ ಸಮಿತಿಯನ್ನು ಮಾಡುತ್ತೇವೆ. ತಿಂಗಳಿನಲ್ಲಿ ಒಂದು ಸಭೆ ಸೇರುತ್ತೇವೆ ಎನ್ನುವ ಬಗ್ಗೆ ಸದನಕ್ಕೆ ಒಂದು ಆಶ್ವಾಸನೆ ಕೊಡಿ. ಇಲ್ಲವೆಂದರೆ, ಇನ್ನೊಂದು ಮಾಡಿ. ಅವರು ಆ ಶುದ್ಧ ನೀರು ಕುಡಿಯುವ ತನಕ ನಮ್ಮ ಸದನಕ್ಕೆ ಅದೇ ನೀರನ್ನು ತರಿಸಿಕೊಟ್ಟುಬಿಡಿ. ಅವರು ಎಂತಹ ನೀರು ಬೇಕಾದರೂ ಅಂತಹದ್ದು ನೀರು ಕುಡಿಬಹುದು. ನಾವು ಸ್ವಚ್ಛವಾದ ನೀರು ಕುಡಿಯಬೇಕಾ?

**ಸಭಾಪತಿಯವರು:-** ಆಯಿತು.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಆರ್.ಡಿ.ಪಿ.ಎ.ಆರ್., ಸಚಿವರ ಒಪ್ಪಿಗೆಯೊಂದಿಗೆ ಅವರು ಹೇಳಿರುವಂತಹದ್ದಕ್ಕೆ ಈಗಾಗಲೇ ಆರ್.ಡಿ.ಪಿ.ಎ.ಆರ್., ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು Steering Committee ಇದೆ. ಅದರ ಕೆಳಗಡೆ ಯು.ಡಿ., ಮತ್ತು ನೀರಾವರಿ ಇಲಾಖೆ, ಸಣ್ಣ ನೀರಾವರಿ ಇಲಾಖೆ ಹಾಗೂ ಸಂಬಂಧಪಟ್ಟಂತಹ ಎಲ್ಲಾ ಇಲಾಖೆಗಳನ್ನೊಳಗೊಂಡಂತೆ ಬರುತ್ತವೆ. ಇದರ ಜವಾಬ್ದಾರಿಯನ್ನು ನೀರಾವರಿ ಇಲಾಖೆಗೆ ಕೊಟ್ಟಿಲ್ಲ. Ultimately ಕುಡಿಯುವ ನೀರಿನ ವಿಭಾಗವಾಗಿರುವುದರಿಂದ ಉದ್ದೇಶಪೂರ್ವಕಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳಿಗೆ ಕುಡಿಯುವ ನೀರಿನ ವಿಭಾಗವನ್ನು ಕೊಟ್ಟಿದೆ. Municipal Administration ಕೂಡ ಸೇರಿಕೊಂಡಿದೆ. ತಾವು ಮಾತನಾಡುವಾಗ ಅದನ್ನು ಬಿಟ್ಟುಬಿಟ್ಟಿರಿ.

ಗ್ರಾಮಗಳ ಬಗ್ಗೆ ಮಾತನಾಡಿದಿರಿ. ಈ ಯೋಜನೆಯಲ್ಲಿ ನೀರನ್ನು ಮುನಿಸಿಪಾಲಿಟಿಗೂ ಕೂಡ bulk water ಸೇರಿಸಿ ಮಾಡಿರುವಂತಹದ್ದು. ಎಲ್ಲಾ ಏರಿಯಾಗಳಲ್ಲಿ ಎಲ್ಲೆಲ್ಲಿ ಮುನಿಸಿಪಾಲಿಟಿಗಳಿವೆ? ಅಲ್ಲಿ ಕೂಡ ಈ ತರಹ permanent source ಆಗಿಲ್ಲ. ಆ ಮುನಿಸಿಪಾಲಿಟಿಗಳು ಕೂಡ cover ಆಗಿದೆ. ಅವರು ಕೂಡ ಈ ಕಮಿಟಿಯಲ್ಲಿ ಸದಸ್ಯರಾಗಿರುತ್ತಾರೆ, headed by R.D.P.R. Secretary. ಇನ್ನೂ ಯೋಜನೆಯ ಬಗ್ಗೆ ವಿವರವಾಗಿ ಹೇಳುತ್ತೇನೆ. ಇದು ವಿಳಂಬವಾಗಿದ್ದು ಏತಕ್ಕೆಂದರೆ, ಅಲ್ಲಿ ಒಂದು ಐಡಿಹಳ್ಳಕಾವಲು ಎಂಬುದು ಇದೆ. ಹಿಂದಿನಿಂದಲೂ ಕಂದಾಯ ದಾಖಲೆಯಲ್ಲಿ ಸರ್ಕಾರಿ ಭೂಮಿ ಎಂಬುದು ಇತ್ತು. 1898ನೇ ಇಸವಿ ಅಥವಾ 1928ನೇ ಇಸವಿಯಲ್ಲಿ ಆ ಜಾಗವನ್ನು ಅರಣ್ಯ ಇಲಾಖೆಗೆ ಕೊಟ್ಟು ಬಿಟ್ಟಿದ್ದಾರೆ. ಆದರೆ ಅಲ್ಲಿಂದ ಇಲ್ಲಿಯವರೆವಿಗೂ ದಾಖಲೆಯಲ್ಲಿ ಬಂದಿರಲಿಲ್ಲ. ಆ ಜಾಗವನ್ನು ಕಂದಾಯ ಇಲಾಖೆಯ ಜಾಗ ಎಂದು ಇಲ್ಲಿಯವರೆವಿಗೂ ನಾವು ತಿಳಿದುಕೊಂಡಿದ್ದೀವಿ. ಅರಣ್ಯ ಇಲಾಖೆಯವರು ಇದು ನಮ್ಮ ಜಾಗ ಎಂದು ಹೇಳಿದರು. ಆ ಸರ್ವೆ ನಂಬರ್‌ನಲ್ಲಿ 9,700 ಎಕರೆ ಜಾಗ ಇದೆ. ನಾವು 2,200 ಎಕರೆ ಅರಣ್ಯ ಇಲಾಖೆಗೆ ಸಂಬಂಧಿಸಿದ್ದು, ಇನ್ನುಳಿದ ಜಾಗ ಕಂದಾಯ ಇಲಾಖೆಯದ್ದು ಎಂದು ಹೇಳಿದಿವಿ. ಅರಣ್ಯ ಇಲಾಖೆಯವರು ಇಡೀ ಸರ್ವೆ ನಂಬರ್‌ನಲ್ಲಿ ಜಾಗ ನಮಗೆ grant ಆಗಿದೆ ಎಂದು ದಾಖಲೆಯನ್ನು ತೆಗೆದುಕೊಂಡು ಬಂದರು. ಇದೆಲ್ಲವೂ ಒಂದೂವರೆ ವರ್ಷಗಳ ಹಿಂದೆಯೇ ಆಗಿದ್ದು. ಕೊನೆಯದಾಗಿ ನಾವು ಏನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ, ನಾವು ಅದನ್ನು ಒಪ್ಪಿಕೊಂಡಿವಿ. 1960-70ನೇ ಇಸವಿಯಲ್ಲಿ ಅರಣ್ಯ ಇಲಾಖೆಗೆ ಸೇರಿರುವ ಜಾಗ ಎಂದು ಹೇಳುತ್ತಿರುವುದನ್ನು ನೋಡಿದರೆ, ಅದು ರೈತರಿಗೆ ಮಂಜೂರಾಗಿದೆ. ರೈತರು ಸಾಗುವಳಿ ಮಾಡಿಕೊಂಡಿದ್ದಾರೆ. ಈ ಯೋಜನೆಯಲ್ಲಿ ರೈತರಿಗೆ ಈಗಾಗಲೇ ಪರಿಹಾರ ರೂಪದಲ್ಲಿ ಹಣವನ್ನು ಪಾವತಿ ಮಾಡಿದ್ದೇವೆ. ಈ ಜಾಗ ಅರಣ್ಯಕ್ಕೆ ಸೇರಿದ್ದು ಎಂದ ಮೇಲೆ ಕೇಂದ್ರ ಸರ್ಕಾರಕ್ಕೆ Forest Clearance ಗೆ apply ಮಾಡಿದ್ದೇವೆ. ಅದರ ಬಗ್ಗೆ ಈಗಾಗಲೇ ಮಾನ್ಯ ಸಚಿವರು ಹೇಳಿದರು. ಅವರು Forest Clearance ಕೊಡುವುದಕ್ಕೆ ನಮಗೆ ಒಂದೂವರೆ ವರ್ಷ ಸಮಯ ತೆಗೆದುಕೊಂಡರು. ಅದಕ್ಕೆ ನೂರೊಂದು ಪ್ರಶ್ನೆಗಳನ್ನು ಕೇಳಿದರು. ಕೊನೆಯದಾಗಿ, ನಮ್ಮ ಭೂಮಿಗೆ ರೈತರಿಗೆ ಏತಕ್ಕೆ ಪರಿಹಾರ ಕೊಟ್ಟಿರಿ ಎಂದು ಕೇಳಿದರು. ಆಯಿತು ಸ್ವಾಮಿ ಇದು ex-gratia ಎಂದು ಕೊಟ್ಟಿದ್ದೇವೆ. ಅದು ಬಿಡಿ ನಾವು ಕೊಟ್ಟಿರುವುದು ತಾನೇ, ಅದು ನಿಮಗೇಕೆ? ನಿಮ್ಮದಂತೂ ಹಕ್ಕನ್ನು ನಾವು ಕಡಿಮೆ ಮಾಡುತ್ತಿಲ್ಲ. ಆಯಿತು ಬಿಡಿ ಎಂದು ನಾವು ಅವರಿಗೆ ಮನವಿ ಮಾಡಿಕೊಂಡೆವು. ಅದರಲ್ಲಿ ಐದು ಕಿಲೋ ಮೀಟರ್‌ಗಳಷ್ಟು ನಾಲೆ ಹೋಗುತ್ತದೆ. ಅಲ್ಲಿ ಹೋಗಬೇಕಾದರೆ, ನಾಲೆ ತೆಗೆಯುವುದಕ್ಕೆ permission ಕೊಡುತ್ತೇವೆ. ಅದನ್ನು ತೆಗೆದಿರುವ ಮಣ್ಣನ್ನು ಪಕ್ಕಕ್ಕೆ dump ಮಾಡಬೇಕಲ್ಲ. ನೀವು ಇಲ್ಲಿ dump ಮಾಡಬೇಡಿ ಎಂದು ಹೇಳಿದರು. ಏಕೆಂದರೆ ಅಲ್ಲಿ ಅರಣ್ಯ ಜಾಗ cover ಆಗುತ್ತದೆ. ಅಲ್ಲಿ ಯಾವ ಅರಣ್ಯ ಕೂಡ ಇಲ್ಲ. ಅಲ್ಲಿ ಒಂದು ಸಾಸಿವೆ ಕಾಳಷ್ಟು ಗಿಡವಿಲ್ಲ. ಆದರೆ ಅವರು ನಮ್ಮ ಭೂಮಿ cover ಆಗಿಬಿಡುತ್ತದೆ ಎಂದರು. ಕೊನೆಯದಾಗಿ 170 ಕೋಟಿ ರೂಪಾಯಿಗಳನ್ನು extra ಮಾಡಿ, ಕಾಲುವೆಗೆ ತೆಗೆದಂತಹ ಮಣ್ಣನ್ನು ಹೊರಗಡೆ transport ಮಾಡುವುದಕ್ಕೆ additional work slip ಕೊಟ್ಟು, ಅಲ್ಲಿ ಈಗ ಮಾಡುತ್ತೇವೆಂದು ಹೇಳಿದ ಮೇಲೆ ಫೆಬ್ರವರಿ 28ನೇ

ತಾರೀಖಿನಂದು ಅನುಮತಿ ಕೊಟ್ಟಿದ್ದಾರೆ. ಐದು ಕಿಲೋ ಮೀಟರ್‌ಗಳಾದರೆ ತುಮಕೂರಿಗೆ ಬಂದು ಬಿಡುತ್ತದೆ. ತುಮಕೂರಿನಿಂದ ಮುಂದಕ್ಕೆ ಬರಬೇಕೆಂದರೆ, ತುಮಕೂರು ದೊಡ್ಡಬಳ್ಳಾಪುರ border ಗೆ ಬರುತ್ತದೆ. ಮಾನ್ಯ ಗೃಹ ಸಚಿವರ ಕ್ಷೇತ್ರವಾಗಿದ್ದು, ಅದು ಕೊರಟಗೆರೆಯವರಿಗೂ ಬಂದು ಬಿಡುತ್ತದೆ. ಈ ವರ್ಷ rainy season ನಲ್ಲಿ ಅಲ್ಲಿಗೆ ಬರುತ್ತದೆ. ಅಲ್ಲಿಂದ ಮುಂದಕ್ಕೆ ಮೂರು ಲೈನ್ ಹೋಗುತ್ತದೆ. ಒಂದು ಲೈನ್ ಗೌರಿಬಿದನೂರಿಗೆ ಹೋಗುತ್ತದೆ. ಇನ್ನೊಂದು ಲೈನ್ ದೇವನಹಳ್ಳಿ ಮಾರ್ಗವಾಗಿ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಮುಳಬಾಗಿಲುಗೆ ಹೋಗುತ್ತದೆ. ಇನ್ನೊಂದು ಲೈನ್ ದೇವನಹಳ್ಳಿ ಮಾರ್ಗವಾಗಿ ಹೊಸಕೋಟೆ, ಕೋಲಾರ, ಬಂಗಾರಪೇಟೆಗೆ ಹೋಗುತ್ತದೆ. ಈ ಲೈನ್‌ಗಳಿಗೂ ಕೂಡ award ಆಗಿಬಿಟ್ಟಿದ್ದು, ಕೆಲಸ ಕೂಡ ಪ್ರಾರಂಭವಾಗಿದೆ. ಏಕೆಂದರೆ ಆ ನೀರು ಬರುವಷ್ಟರೊಳಗೆ ನೀರು lift ಆಗಬೇಕು. ಈಗ ಅಲ್ಲಿ ಒಂದು ಜಲಾಶಯ (reservoir) ಮಾಡಬೇಕಾಗಿತ್ತು. Reservoir ಅನ್ನು ಮಾಡುವುದಕ್ಕೆ ಜಾಗದ ಬಗ್ಗೆ ಕೊರಟಗೆರೆ ದೊಡ್ಡಬಳ್ಳಾಪುರ ಭಾಗದ ರೈತರಿಗೆ ಏನೆಲ್ಲಾ ಅಭಿಪ್ರಾಯಗಳಿತ್ತು. ಇವರಿಗೆ ಸಹಮತ ಮೂಡಿಸುವುದಕ್ಕೆ ಮಾನ್ಯ ಗೃಹ ಸಚಿವರು ಏನೆಲ್ಲಾ ಪ್ರಯತ್ನ ಮಾಡಿದರು. ಅದು ಆಗಲಿಲ್ಲ ಎಂದು ಕೊನೆಗೆ reservoir ಅನ್ನು ಮಾಡುವುದು ವಿಳಂಬವಾಗುತ್ತದೆ. Reservoir ಅನ್ನು ಮಾಡುವುದಕ್ಕೆ ಈ ವರ್ಷಕ್ಕೆ ಆಗುವುದಿಲ್ಲ. ಇದನ್ನು ಮಾಡುವುದಕ್ಕೆ ತುಂಬ ಸಮಯ ತೆಗೆದುಕೊಳ್ಳುತ್ತದೆ. ಭೂಸ್ವಾಧೀನಪಡಿಸಕೊಂಡು, ಎರಡೂವರೆಯಿಂದ ಮೂರು ಟಿ.ಎಂ.ಸಿ.,ಗೆ ಡ್ಯಾಂ ಕಟ್ಟಬೇಕು. ಅದು ವಿಳಂಬವಾಗುತ್ತದೆ ಎಂದು ಈಗ ಏನು ಮಾಡುತ್ತಿದ್ದೇವೆಂದರೆ, ಆ ನೀರು ಬಿದ್ದಿರುವುದನ್ನು ಹಾಗೆಯೇ live pumping ಮಾಡುವುದು. ಅದನ್ನು ತೆಗೆದುಕೊಂಡು ಬಂದು ಈ ಜಿಲ್ಲೆಗಳಲ್ಲಿರುವ ಕೆರೆಗಳಲ್ಲಿ storage ಮಾಡಿಕೊಳ್ಳುವುದು. ಆ ರೀತಿಯ ಪ್ಲ್ಯಾನ್‌ನ್ನು ಮಾಡಿ, ಕಳೆದ ತಿಂಗಳು ಸಭೆ ಮಾಡಿದೆ. ದಾರಿಯ ಉದ್ದಕ್ಕೂ ಮೂರು ಲೈನ್‌ಗಳಿಗೂ ಭೂಸ್ವಾಧೀನಕ್ಕೆ ತೊಂದರೆಯಾಗಬಾರದೆಂದು ಅದನ್ನು speedup ಮಾಡಿಸಿ, ಈಗ ಪೈಪ್ ಕಾಮಗಾರಿಯನ್ನು ಕೂಡ ಮಾಡುತ್ತಿದ್ದೇವೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಹೇಳಿದಂತೆ ಮುಂದಿನ ವರ್ಷ ಅಕ್ಟೋಬರ್ ತಿಂಗಳಿಗೆ bulk water ಅನ್ನು delivery ಮಾಡಬೇಕು.

(ಮುಂದು)

(319) 11.03.2026 4.40 ಟಿ.ಸಿ.ಹೆಚ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣ ಭೈರೇಗೌಡ (ಮುಂದು)**

ಆ ಮೀಟಿಂಗ್ ಆದನಂತರ bulk water delivery ಆದಲ್ಲಿ distribution ಆಗಬೇಕು ಎಂದು ನಾನು ಅವರಿಗೆ request ಮಾಡಿದಾಗ, ಅವರು ಕೂಡಲೇ P.S.R (Preliminary Scheme Report) ಮಾಡುವುದಕ್ಕೆ ಈಗ ಒಂದು ಏಜೆನ್ಸಿಗೆ ಆದೇಶವನ್ನು ಕೊಟ್ಟಿದ್ದಾರೆ. P.S.R ಆದನಂತರ D.P.R ಆಗುತ್ತದೆ. D.P.R ಆದನಂತರ ಟೆಂಡರ್ ಆಗುತ್ತದೆ. next year ನಾವು ಹಳ್ಳಿಗೆ distribution ಮಾಡುವುದಕ್ಕೆ ಆಗುವುದಿಲ್ಲ. ಆದರೆ bulk water ಅನ್ನು ಕೆರೆಗಳವರೆಗೂ ತರುವುದಕ್ಕೆ ಮಾನ್ಯ ಸದಸ್ಯರು ಹೇಳಿದಂತೆ step by step ನಾವು monitor ಮಾಡುತ್ತಿದ್ದೇವೆ.

Co-ordination ಕೂಡ ಇದೆ. ಅವರು ಎಲ್ಲೋ ಒಂದುಕಡೆ jackwell ಹಾಕಬೇಕು ಎಂದು ತಕರಾರು ಬರುತ್ತದೆ ಎಂದು ಹೇಳಿದರು. ಇಂತಹ cases ಇರುತ್ತದೆ. But there is a coordination mechanism. ನಾವು ಕೂಡ ಮೇಲುಸ್ತುವಾರಿ ಮಾಡುತ್ತಿದ್ದೇವೆ. ಮಾನ್ಯ ನೀರಾವರಿ ಸಚಿವರು ಕೂಡ ಏನಾದರೂ ಮಾಡಿ ನೀರು ತರಬೇಕೆಂದು ಬಹಳ serious ಇದ್ದಾರೆ. ತುಮಕೂರು ಜಿಲ್ಲೆಗಾಗಲೀ ಅಥವಾ ಈ ಕಡೆ 3 ಜಿಲ್ಲೆಗಳಿಗಾಗಲೀ all of us. ಎಲ್ಲರೂ ಜೊತೆಗೆ ಕೆಲಸ ಮಾಡುತ್ತಿದ್ದೇವೆ. ಆರ್.ಡಿ.ಪಿ.ಆರ್ ಮತ್ತು ನೀರಾವರಿ ಇಲಾಖೆ ಅವರಿಗೆ assistance ಆಗಿ Revenue Department ನವರು ಎಲ್ಲರೂ ಸೇರಿ ಕೆಲಸ ಮಾಡುತ್ತಿದ್ದೇವೆ. We will ensure that. ಇದಕ್ಕೆ ಏನಾದರೂ ಒಂದು ತಾರ್ಕಿಕ ಅಂತ್ಯಕ್ಕೆ ಬರಬೇಕು. ಅಷ್ಟಕ್ಕೆ ನಾವು ಗಂಭೀರ ಪ್ರಯತ್ನ ಮಾಡುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ಕಳೆದ ಬಾರಿ ಶ್ರೀ ಕಿಶೋರ್ ಕುಮಾರ್‌ಪುತ್ತೂರು ರವರದು ಮನ್ರೇಗಾದಲ್ಲಿ ಆದಂತಹ ಭ್ರಷ್ಟಾಚಾರದ ಸಂಬಂಧ ಸುಮಾರು 15 ದಿವಸದಲ್ಲಿ ನಾನು ಉತ್ತರ ಕೊಡುತ್ತೇವೆಂದು ಹೇಳಿದ್ದೀರಿ. ಇನ್ನೂ ಉತ್ತರ ಕಳುಹಿಸಿಲ್ಲ. ಸ್ವಲ್ಪ ಬೇಗ ಉತ್ತರ ಕೊಡಿ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, yes sir, ತರಿಸಿಕೊಂಡು ಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ಅದು ಶ್ರೀ ಕಿಶೋರ್ ಕುಮಾರ್ ಪುತ್ತೂರು ರವರದ್ದು. ಈಗ ಇದು ಬಹಳ important ಇದೆ. 15 ದಿನಸದಲ್ಲಿ ಉತ್ತರ ತರಿಸಿಕೊಂಡು ಕೊಡುತ್ತೇವೆಂದು ನೀವೇ ಹೇಳಿದ್ದೀರಿ. ಅದನ್ನು ನೀವು ಸ್ವಲ್ಪ ನೋಡಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, yes sir. ತರಿಸಿಕೊಂಡು ಕೊಡುತ್ತೇನೆ.

**ಇ)) ವಿಷಯ:- ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು ಟೇಕಲ್ ಹೋಬಳಿ, ಅಗಲಕೋಟೆ ಗ್ರಾಮದಲ್ಲಿ ಶಿಕ್ಷಣ ಇಲಾಖೆಗೆ ದಾನವಾಗಿ ನೀಡಲಾದ ಭೂಮಿಯ ಅತಿಕ್ರಮಣ ಹಾಗೂ ದಾಖಲೆಯ ವಂಚನೆ ಕುರಿತು.**

------

**ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ನಾನು ನಿಯಮ 330ರ ಅಡಿಯಲ್ಲಿ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮಾಲೂರು ತಾಲ್ಲೂಕು, ಟೇಕಲ್ ಹೋಬಳಿ, ಅಗಲಕೋಟೆ ಗ್ರಾಮದಲ್ಲಿ ಶಿಕ್ಷಣ ಇಲಾಖೆಗೆ ದಾನವಾಗಿ ಕೊಟ್ಟಿರುವ ಜಾಗ. ಅಂದರೆ ಶಿಕ್ಷಣ ಇಲಾಖೆಗೆ ದಾನವಾಗಿ ಕೊಟ್ಟಿದ್ದಾರೆ ಎನ್ನುವುದಕ್ಕೆ ದಾನ ಪತ್ರದ ಸಂಖ್ಯೆಯನ್ನು ಕೂಡ ಕೊಡಲಾಗಿದೆ. ದಾನ ಪತ್ರದ ಸಂಖ್ಯೆ.1785/55-56.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಅಂದರೆ ಇದು 1956ನೇ ಇಸವಿಯದ್ದು. ಹಾಗೆಯೇ ಒಟ್ಟು ಸುಮಾರು 50.26 ಎಕರೆ ವಿಸ್ತೀರ್ಣ ಇದೆ. ಈ ಜಾಗವನ್ನು ಸಾರ್ವಜನಿಕವಾಗಿ ಶಾಲಾ ಒಂದು ವ್ಯವಸ್ಥೆಗಾಗಿ ಕೊಟ್ಟಿದ್ದಾರೆ. ಅವೊತ್ತು ಶಿಕ್ಷಣದ ಮಹತ್ವವನ್ನು ಯಾರು ಅರಿತಿದ್ದರೋ ಅವರು ಈ ಜಾಗವನ್ನು ದಾನ ಮಾಡಿದ್ದರು. ಇಂತಹ ದಾನ ಮಾಡಿರುವಂತಹ ಒಂದು ವ್ಯವಸ್ಥೆ ಸರ್ಕಾರದ ಭದ್ರತೆಯಲ್ಲಿರಬೇಕು. ಅದಕ್ಕೆ Encumbrance Certificate ಕೂಡ ಕೊಡಲಾಗಿದೆ. ಅದನ್ನು ಮ್ಯುಟೇಷನ್ ಮಾಡಿಲ್ಲ. ಎರಡು ಬಾರಿ ಮ್ಯುಟೇಷನ್‌ಗಾಗಿ ಅರ್ಜಿ ಸಲ್ಲಿಸಲಾಗಿದೆ. 1997ರಲ್ಲಿ ಒಂದು ಬಾರಿ ಅರ್ಜಿ ಸಲ್ಲಿಸಲಾಗಿದೆ ಮತ್ತು 2024ರಲ್ಲಿ ಒಂದು ಬಾರಿ ಅರ್ಜಿ ಸಲ್ಲಿಸಲಾಗಿದೆ. ಎರಡು ಬಾರಿ ಮ್ಯುಟೇಷನ್ ಮಾಡಿ ಎಂದು ಮನವಿ ಮಾಡಿಕೊಂಡರೂ ಕೂಡ ಇದಕ್ಕೆ ಯಾವುದೇ ರೀತಿಯಾದಂತಹ ಪ್ರಕ್ರಿಯೆ ಕಂದಾಯ ಇಲಾಖೆಯಿಂದ ಬಂದಿಲ್ಲ. ಹಾಗೆಯೇ ಸುಮಾರು 30 ವರ್ಷಗಳಿಂದ ಈ ಜಾಗ ಯಾರಿಗೆ ಸೇರಿದೆ ಮತ್ತು ಏನಾಗಿದೆ ಎನ್ನುವಂಥದ್ದು ನಡೆಯುತ್ತಲೇ ಇದೆ. ಈಗ ಭೂಮಿ ಬೆಲೆ ಜಾಸ್ತಿಯಾಗಿದೆ. ಸುಮಾರು 50 ಎಕರೆ ಜಾಗ ಇದೆಯೆಂದರೆ ಎಲ್ಲರಿಗೂ ಅದರ ಮೇಲೆ ಕಣ್ಣು ಬಿದ್ದಿದೆ. ಅದಕ್ಕೆ private owner's ಇದು ನಮ್ಮ ಜಾಗ ಎಂದು ಈಗಾಗಲೇ claim ಮಾಡುತ್ತಿದ್ದಾರೆ. United Estates and United Green Woods ಎಂಬುವರು ಈ ಜಾಗ ನಮ್ಮದು ಎಂದು ಹೇಳಿಕೊಳ್ಳುತ್ತಿದ್ದಾರೆ. ಈ ಜಾಗಕ್ಕೆ ಸಂಬಂಧಪಟ್ಟಂತೆ ಅವರು ಅಲ್ಲಿ ಮುಂದಿನ ಕ್ರಮಗಳನ್ನು ಕೈಗೊಳ್ಳುವಂಥ ರೀತಿಯಲ್ಲಿ ಕಂಡುಬರುತ್ತಿದೆ. ಅಂದರೆ ಇಷ್ಟು ದೊಡ್ಡ ಜಾಗವನ್ನು ಸರ್ಕಾರ ಅದಕ್ಕೂ ನನಗೆ ಯಾವುದೇ ಸಂಬಂಧವಿಲ್ಲ ಎನ್ನುವಂಥ ರೀತಿಯಲ್ಲಿ ಬಿಟ್ಟಿರುವುದು ಸರಿಯಲ್ಲ. ಇದಕ್ಕಾಗಿ ಸರಿಯಾದಂತಹ ರೀತಿಯಲ್ಲಿ enquiry ಆಗಬೇಕು. ಆ ಜಾಗವನ್ನು ಶಾಲೆಗೆ ಏನು ದಾನ ಮಾಡಿದ್ದಾರೋ, ಆ ದಾನ ಕೊಟ್ಟಿರುವಂತಹ ವ್ಯಕ್ತಿಗೆ ತೊಂದರೆ ಆಗದ ರೀತಿಯಲ್ಲಿ ಅದು ಅವರಿಗೆ ಸೇರಬೇಕು ಎಂದು ನಾನು ನಿಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ. ಹಾಗೆಯೇ, ಈ ಭೂಮಿಯನ್ನು ಈಗಾಗಲೇ ಯಾರು ಸ್ವಾಧೀನಪಡಿಸಿಕೊಳ್ಳುತ್ತಿದ್ದಾರೋ ಅವರಿಗೆ ಹಕ್ಕುಪತ್ರ ಏನಿದೆ? ಯಾವ ಆಧಾರದ ಮೇಲೆ ಅವರು

ಸ್ವಾಧೀನಪಡಿಸಿಕೊಂಡಿದ್ದಾರೆ? ಅವರು ವಿರುದ್ಧ ಒಂದು enquiry ಆಗಿದೆಯೇ? ಸರ್ಕಾರ ಇದರ ಬಗ್ಗೆ ಒಂದು ತನಿಖೆಯನ್ನು ಮಾಡಿ ಯಾವುದೇ ರೀತಿಯಾದಂತಹ ವರದಿಯನ್ನು ಅವರಿಂದ ಪಡೆದುಕೊಂಡಿದೆಯೇ ಎನ್ನುವಂಥದ್ದರ ವಿವರಗಳು ನನಗೆ ಬೇಕು. ಹಾಗೆಯೇ ಯಾರಾದರೂ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆಯೇ? ಇಷ್ಟು ದೊಡ್ಡ ಜಾಗವನ್ನು ಬೇರೆಯವರಿಗೆ ಪರಭಾರೆ ಮಾಡುವಂಥ ಒಂದು ಪ್ರಕ್ರಿಯೆಗೆ ಸಹಾಯ ಮಾಡಿದ್ದಾರೆಯೇ? ಆ ರೀತಿ ಏನಾದರೂ ಅಧಿಕಾರಿಗಳು ಶಾಮೀಲಾಗಿದ್ದರೆ ಅಧಿಕಾರಿಗಳ ವಿರುದ್ಧ ಕೂಡ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಆಗ್ರಹಿಸುತ್ತೇನೆ. ನನಗೆ ಒಂದು ಅರ್ಥವಾಗದೇ ಇರತಕ್ಕಂಥ ವಿಚಾರ ಏನೆಂದರೆ, ನಾನು ನಿಯಮ 330ರ ಅಡಿಯಲ್ಲಿ ಈ ಪ್ರಶ್ನೆಯನ್ನು ಎತ್ತಿದ್ದೇನೆ. ನನಗೆ ಮಾನ್ಯ ಕಂದಾಯ ಸಚಿವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಕಂದಾಯ ಸಚಿವರು ಉತ್ತರ ಕೊಡುವುದರ ಜೊತೆಗೆ ನಾನು ಈ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಗೂ ಕೂಡ ಪ್ರಶ್ನೆ ಹಾಕಿದ್ದೆನು. ಅದೊಂದು ಚುಕ್ಕೆರಹಿತ ಪ್ರಶ್ನೆಯಾಗಿತ್ತು. ಅದಕ್ಕೆ ನನಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಂದಲೂ ಕೂಡ ಉತ್ತರ ಬಂದಿದೆ. ಅವರು ಅತ್ಯಂತ ಸ್ಪಷ್ಟವಾದಂತಹ ಉತ್ತರವನ್ನು ಕೊಡುತ್ತಿದ್ದಾರೆ. ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಅಗಲಕೋಟೆ ಗ್ರಾಮದಲ್ಲಿ ಶಿಕ್ಷಣ ಇಲಾಖೆಗೆ ಸೇರಿದ ಜಾಗ ಎಷ್ಟು ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಅವರು 'ಸುಮಾರು 50.26 ಎಕರೆ ಜಮೀನು ಶಾಲಾ ಶಿಕ್ಷಣ ಇಲಾಖೆಗೆ ಸೇರಿದೆ' ಎಂದು ಉತ್ತರ ಕೊಟ್ಟಿದ್ದಾರೆ. ಹಾಗೆಯೇ, ಈ ಜಾಗ ಯಾರಿಗೆ ಸೇರಿದೆ ಎಂದು ನಾನು ಕೇಳಿದಂಥ ಪ್ರಶ್ನೆಗೆ, 'ಅದು ಶ್ರೀ ಟಿ.ಜಿ. ಶ್ರೀನಿವಾಸಲು ರವರಿಗೆ ಸೇರಿದೆ, ಹೌದು. ದಿನಾಂಕ 17.12.1955ರಲ್ಲಿ ಶಾಲಾ ಶಿಕ್ಷಣ ಇಲಾಖೆಗೆ 50.26 ಎಕರೆ ಜಮೀನನ್ನು ದಾನವಾಗಿ ಕೊಟ್ಟು ಉಪ ನೋಂದಣಾಧಿಕಾರಿಯವರ ಕಚೇರಿಯಲ್ಲಿ ದಸ್ತಾವೇಜಿನ ಸಂಖ್ಯೆ.1785/1955-56, ದಿನಾಂಕ 06.08.1955 ರಂದು ದಾನ ಪತ್ರ ಮಾಡಿಕೊಟ್ಟಿರುತ್ತಾರೆ' ಎಂದು ಉತ್ತರ ಬಂದಿದೆ. ಹಾಗೆಯೇ ಇನ್ನು ಒಂದು ಪ್ರಶ್ನೆಗೆ, 'ರಾಜ್ಯದಲ್ಲಿ ಯಾವುದೇ ಸರ್ಕಾರಿ ಶಾಲೆಯ ಜಾಗ ಒತ್ತುವರಿಯಾಗಿದ್ದರೆ, ಆ ಒತ್ತುವರಿಯನ್ನು ನಾವು ಸಹಿಸುವುದಿಲ್ಲ, ಸರ್ಕಾರ ಆ ಜಾಗವನ್ನು ಮತ್ತೇ ತನ್ನ ಸುಪರ್ದಿಗೆ ಪಡೆದುಕೊಂಡು ಯಾವ ಮೂಲ ಉದ್ದೇಶಕ್ಕೆ ಅದನ್ನು ದಾನ ಕೊಡಲಾಗಿತ್ತೋ, ಆ ಮೂಲ ಉದ್ದೇಶಕ್ಕೆ ಅದು ಉಪಯೋಗ ಆಗುವಂತಹ ರೀತಿಯಲ್ಲಿ ಬಳಸುವುದಕ್ಕೆ ಎಲ್ಲಾ ವ್ಯವಸ್ಥೆಯನ್ನು ಮಾಡಲಾಗುತ್ತದೆ ಎಂದು ಅವರ ಉತ್ತರದಲ್ಲಿ ಹೇಳಿದ್ದಾರೆ. ಇದಕ್ಕೆ ಪೂರಕವಾಗಿ ಅವರು ಕೋಲಾರದ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಕ್ರಮ ತೆಗೆದುಕೊಳ್ಳುವುದಕ್ಕೆ ಆಗ್ರಹಿಸಿದ್ದೇವೆ. ಹಾಗೆಯೇ ನಮ್ಮ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೂ ಕೂಡ ಪತ್ರವನ್ನು ಬರೆದಿದ್ದೇವೆ. ಈ ಜಾಗವನ್ನು ನಮ್ಮ ಶಿಕ್ಷಣ ಇಲಾಖೆಗೆ ಉಳಿಸಿಕೊಳ್ಳುತ್ತೇವೆ' ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಮಾನ್ಯ ಕಂದಾಯ ಸಚಿವರು ಕೂಡ ಉತ್ತರ ಕೊಟ್ಟಿದ್ದಾರೆ. ಷರತ್ತುಗಳನ್ನು ವಿಧಿಸಿ, ದಿನಾಂಕ 08.07.2025 ರಂದು ವಸತಿ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಯವರು ಭೂ ಪರಿವರ್ತನೆಗೆ ಆದೇಶವನ್ನು ಹೊರಡಿಸಿರುತ್ತಾರೆ. ಇವೆರಡೂ ಕೂಡ ವೈರುಧ್ಯಗಳಿಂದ ಕೂಡಿರತಕ್ಕಂಥ ಉತ್ತರ ನನ್ನ ಕೈಗೆ ಬಂದಿದೆ. ಹಾಗಾಗಿ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಬಯಸುವುದೇನೆಂದರೆ, ಇದು ಒಂದು ಅತ್ಯಂತ ಉನ್ನತವಾದಂಥ ವಿಚಾರ. 1955ರಲ್ಲಿ ಶ್ರೀ ಶ್ರೀನಿವಾಸಲು

ಎಂಬುವರು ಕೊಟ್ಟಿರುವಂಥ ದಾನ. ಈ ದಾನಕ್ಕೆ ಆಗ ಪ್ರೇರಣೆ ಏನಾಗಿತ್ತೋ ಅದಕ್ಕೆ ಈ ದಾನ ಉಳಿಯಬೇಕು. ಮತ್ತೆ ಇದರಲ್ಲಿ ಯಾವುದೇ ರೀತಿಯಾದಂಥ ವ್ಯಕ್ತಿಗಳ ಒತ್ತಡ ಅಥವಾ ಅಧಿಕಾರಿಗಳ ಶಾಮೀಲು ಏನೇ ಇದ್ದರೂ ಕೂಡ ತೆರವುಗೊಳಿಸಬೇಕು. ಅದು ಶಿಕ್ಷಣ ಇಲಾಖೆಗೆ ಉಪಯೋಗ ಆಗಬೇಕು. ಹಾಗಾಗಿ, ಇದಕ್ಕೆ ಸಂಬಂಧಪಟ್ಟಂತೆ ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಬಯಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ,

(ಉತ್ತರವನ್ನು ಲಗತ್ತಿಸಲಾಗಿದೆ)

ಈ ಒಂದು ವಿಷಯದಲ್ಲಿ ಒಂದು ಸಮಾಧಾನ ಏನೆಂದರೆ, ಬಹುತೇಕ ದಾಖಲೆಗಳಿವೆ. ಸುಮಾರು 1943ನೇ ಇಸವಿಯಿಂದ ನೋಡಿದಾಗ ಅವರು ಹೇಳಿದಂತಹ ದಾಖಲೆಗಳನ್ನು ತೆಗೆದುಕೊಂಡು ನೋಡಿದರೆ ಹೆಚ್ಚುಕಡಿಮೆ trail ಎಂದು ಹೇಳುತ್ತೇವೆ. ಹೆಚ್ಚುಕಡಿಮೆ ಪೂರ್ತಿ ದಾಖಲೆಗಳಿವೆ. ಇದರಲ್ಲಿ ದಾಖಲೆಗಳು ಇರುವುದು ಆಶ್ಚರ್ಯವಾಗುತ್ತದೆ. ಕೆಲವು ಪ್ರಕರಣಗಳಲ್ಲಿ ಅರ್ಧ ದಾಖಲೆಗಳೇ ಸಿಗುವುದಿಲ್ಲ. ಆದರೆ ಕೊನೆಪಕ್ಷ ಇದರಲ್ಲಿ ಉತ್ತರ ಕೊಡುವುದಕ್ಕೆ ಪೂರಕವಾಗಿ ದಾಖಲೆಗಳಿವೆ. ಇನ್ನು ಸ್ವಲ್ಪ ಹಿಂದಕ್ಕೆ ಹೋಗಿ ಹೇಳುವುದಾದರೆ 1943-44ರಲ್ಲಿ ಶ್ರೀ ಡಿ.ಹೆಚ್.ಗಂಗಪ್ಪ ಬಿನ್ ಹನುಮಪ್ಪ ಎನ್ನುವವರು ಕ್ರಯ ಪತ್ರದ ಮುಖಾಂತರ ಶ್ರೀ ವೆಂಕಟೇಶ ಶಾಸ್ತ್ರಿ ಅವರಿಂದ ಮತ್ತು ಅಣ್ಣತಮ್ಮಂದಿರಾದ ಶ್ರೀ ವೆಂಕಟೇಶ್ ಶಾಸ್ತ್ರಿ, ಶ್ರೀ ಅನಂತ ಶಾಸ್ತ್ರಿ, ಶ್ರೀ ವೆಂಕಟ ಸುಬ್ಬಯ್ಯ, ವೆಂಕಟರಾಮಯ್ಯ ಮತ್ತು ಪಾಪಣ್ಣ ಹೀಗೆಯೇ ಇನ್ನೂ ಯಾರ್ಯಾರೋ ಅವರೆಲ್ಲರಿಂದಲೂ ಕೂಡ Sale Deed ಮಾಡಿಸಿಕೊಂಡು ಜಾಗಗಳನ್ನು purchase ಮಾಡಿದ್ದಾರೆ. ಒಟ್ಟು ವಿಸ್ತೀರ್ಣ 313 ಎಕರೆ 5 ಗುಂಟೆ ಇದೆ. ಇಷ್ಟನ್ನೂ ಕೂಡ 40ನೇ ದಶಕದಲ್ಲಿ ಶ್ರೀ ಡಿ.ಹೆಚ್.ಗಂಗಪ್ಪನವರು purchase ಮಾಡಿದ್ದಾರೆ.

(ಮುಂದು)

(320) 11-03-2026 4-50 KH/BNS (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣ ಬೈರೇಗೌಡ (ಮುಂದು):**

ಶ್ರೀ ಟಿ.ಹೆಚ್.ಗಂಗಪ್ಪನವರು ಖರೀದಿ ಮಾಡಿದ್ದಾರೆ. ಶ್ರೀ ಟಿ.ಹೆಚ್.ಗಂಗಪ್ಪನವರಿಗೆ ಶ್ರೀಮತಿ ಕಾವೇರಮ್ಮನವರ ಜೊತೆ ಮದುವೆ ಆಗುತ್ತದೆ. ಇವರಿಗೆ 6 ಜನ ಮಕ್ಕಳು. ಅವರ ಹೆಸರುಗಳೆಂದರೆ, ಟಿ.ಜಿ.ಶ್ರೀನಿವಾಸಲು, ಪಾರ್ವತಮ್ಮ, ಜಿ.ಎಸ್.ನಾಯ್ಡು, ಟಿ.ಜಿ.ವೆಂಕಟಪತಿ, ಟಿ.ಜಿ. ಕೃಷ್ಣಮೂರ್ತಿ, ಟಿ.ಜಿ.ಪುಷ್ಪ ರವರು ಆಗಿರುತ್ತಾರೆ. 1956ನೇ ಇಸವಿಯಲ್ಲಿ ಶ್ರೀ ಟಿ.ಹೆಚ್.ಗಂಗಪ್ಪನವರು ತೀರಿ ಹೋಗಿದ್ದಾರೆ. ಆದರೆ, ಅವರು ವಿಲ್ ಮಾಡಿ ಇಟ್ಟಿರಲಿಲ್ಲ. ಆದರೆ, ಅಲ್ಲಿಯವರೆಗೂ ಶ್ರೀ ಟಿ.ಹೆಚ್.ಗಂಗಪ್ಪನವರ ಹೆಸರಿನಲ್ಲಿಯೇ ಈ ಭೂಮಿ ಇದೆ. ಇದು ಶ್ರೀ ಟಿ.ಹೆಚ್.ಗಂಗಪ್ಪನವರು, ಶ್ರೀಮತಿ ಕಾವೇರಮ್ಮನವರು ಹಾಗೂ ಅವರ 6 ಮಕ್ಕಳ ಒಟ್ಟು ಆಸ್ತಿ ಆಗಿರುತ್ತದೆ. ಇದು ಶ್ರೀ ಟಿ.ಹೆಚ್.ಗಂಗಪ್ಪನವರ ಸ್ವಯಾರ್ಜಿತ ಆಸ್ತಿ ಆಗಿದೆ. ಅವರು ಇನ್ನು ಮಕ್ಕಳಿಗೆ ಹಕ್ಕು ಬಿಟ್ಟುಕೊಟ್ಟಿಲ್ಲ. ಮಕ್ಕಳಿಗೆ ಸ್ವಾಭಾವಿಕವಾಗಿ ಪ್ರಿತಾರ್ಜಿತವಾಗಿ ಬಂದಂತಹ ಆಸ್ತಿಯಾದರೆ ಹಕ್ಕು ಬರುತ್ತದೆ. ಇದು ಶ್ರೀ ಟಿ.ಹೆಚ್.ಗಂಗಪ್ಪನವರ ಸ್ವಯಾರ್ಜಿತ ಆಸ್ತಿಯಾಗಿದೆ. ನಂತರ ಶ್ರೀ ಟಿ.ಹೆಚ್.ಗಂಗಪ್ಪನವರು ನವೆಂಬರ್-1956 ರಲ್ಲಿ ತೀರಿ ಹೋಗಿದ್ದಾರೆ. ತಾವು ಹೇಳಿದ ಹಾಗೆ ದಿನಾಂಕ:06-08-1955 ರಂದು ಅಂದರೆ, ತಂದೆಯವರು ಸಾಯುವುದಕ್ಕಿಂತ ಒಂದು ವರ್ಷದ ಮೊದಲೇ ಶ್ರೀ ಟಿ.ಜಿ.ಶ್ರೀನಿವಾಸಲು ಎನ್ನುವವರು 50 ಎಕರೆ 26 ಗುಂಟೆ ಜಮೀನನ ದಾನ ಪತ್ರವನ್ನು ನೋಂದಣಿ ಮಾಡಿ ಶಿಕ್ಷಣದ ಉದ್ದೇಶಕ್ಕಾಗಿ ಮೈಸೂರು ಮಹಾರಾಜರಿಗೆ ದಾನ ಪತ್ರವನ್ನು ಮಾಡಿಕೊಟ್ಟಿದ್ದರು. ಆದರೆ, ಇಲ್ಲಿ ಇರುವಂತಹ ಸಮಸ್ಯೆಯೇನೆಂದರೆ,

ಆ ದಿನ ಅವರ ತಂದೆ ಶ್ರೀ ಟಿ.ಹೆಚ್.ಗಂಗಪ್ಪನವರು ಬದುಕಿದ್ದರು. ಆಗ ಆಸ್ತಿ ಶ್ರೀ ಟಿ.ಹೆಚ್.ಗಂಗಪ್ಪನವರಾಗಿತ್ತು. ಶ್ರೀ ಟಿ.ಹೆಚ್.ಗಂಗಪ್ಪನವರು ಮಕ್ಕಳಿಗೆ ಪಾಲು ಕೊಟ್ಟಿಲ್ಲ. ಶ್ರೀ ಟಿ.ಜಿ.ಶ್ರೀನಿವಾಸಲು ರವರಿಗೆ ಹಕ್ಕು ಬಂದಿಲ್ಲ. ಶ್ರೀ ಟಿ.ಜಿ.ಶ್ರೀನಿವಾಸಲು ರವರಿಗೆ ಈ ವಿಷಯದಲ್ಲಿ ಯಾವುದೇ ರೀತಿಯಾಗಿ ದಾನ ಮಾಡುವುದಕ್ಕೆ ಹಕ್ಕು ಇರಲಿಲ್ಲ ಎಂದು ನನಗೆ ದಾಖಲೆಗಳಿಂದ ಕಾಣುತ್ತಿದೆ. I will stand corrected otherwise. He had no locus standi to gift this property. ಇದು ಅಲ್ಲಿಗೆ ಮುಗಿಯುವುದಿಲ್ಲ. ಇವರು ದಾನ ಬರೆದುಕೊಟ್ಟು ಒಂದು ವರ್ಷದ ನಂತರ 1956 ರಲ್ಲಿ ತಂದೆ ತೀರಿ ಹೋಗಿದ್ದಾರೆ. ಆದಾದ ಮೇಲೆ ತಮಗೆ ಗೊತ್ತಿರುವ ಹಾಗೆ ಕರ್ನಾಟಕದಲ್ಲಿ ಇನಾಂ ಅಬಾಲಿಷನ್ ಕಾಯ್ದೆ ಬಂದಿದೆ. ಈ ಕಾಯ್ದೆ ಪ್ರಕಾರ 1959 ರಲ್ಲಿ ಈ ಎಲ್ಲಾ ಜಮೀನುಗಳು ಕೂಡ ಸರ್ಕಾರದ ವಶಕ್ಕೆ ಬಂದಿದೆ. ಏಕೆಂದರೆ, ಅವರು ನೋಂದಣಿ ಮಾಡಿಕೊಟ್ಟಿರುವುದಕ್ಕೆ ಕಾನೂನಿನಲ್ಲಿ ಮಾನ್ಯತೆ ಇಲ್ಲ. ಏಕೆಂದರೆ, ಅವರಿಗೆ ಹಕ್ಕು ಇಲ್ಲ. ಅವರಿಗೆ ಹಕ್ಕು ಇಲ್ಲದೇ ಇರುವಾಗ ನೋಂದಣಿ ಮಾಡಿಕೊಟ್ಟರೆ ಅದಕ್ಕೆ ಮಾನ್ಯತೆ ಸಿಗುವುದಿಲ್ಲ. ಎಲ್ಲಾ ಜಮೀನುಗಳು ಅವರ ತಂದೆಯವರ ಹೆಸರಿನಲ್ಲಿಯೇ ಇತ್ತು. ಶ್ರೀ ಟಿ.ಹೆಚ್.ಗಂಗಪ್ಪನವರಿಂದ ದಿನಾಂಕ:01-02-1959 ರಂದು ಅವರ ವೈಯಕ್ತಿಕ ಹಾಗೂ ಇತರೆ ಇನಾಂ ರದ್ದಾಯಿತಿ ಕಾಯ್ದೆ ಪ್ರಕಾರ ಮೈಸೂರು ಸರ್ಕಾರಕ್ಕೆ ನಿಹಿತವಾಗುತ್ತದೆ. ಇದಾದ ಮೇಲೆ ಶ್ರೀ ಟಿ.ಜಿ.ಶ್ರೀನಿವಾಸಲುರವರು ಇನಾಂ ಅಬಾಲಿಷನ್ ಕಾಯ್ದೆ ಪ್ರಕಾರವಾಗಿ ಕಲಂ 9ರ ಪ್ರಕಾರ 209 ಎಕರೆ ಜಮೀನಿಗೆ ಅನುಭೋಗದ ಹಕ್ಕನ್ನು ನನಗೆ ಕೊಡಬೇಕೆಂದು ಅವರು 1962ನೇ ಇಸವಿಯಲ್ಲಿ Inam Special D.C. ಗೆ ಅರ್ಜಿ ಕೊಡುತ್ತಾರೆ. ಈ ವಿಚಾರ ತಮಗೆಲ್ಲಾ ಗೊತ್ತಿರುವಂತಹದ್ದೇ ಆಗಿದೆ. Inam Special D.C. ಗೆ re-grant ಮಾಡುವುದಕ್ಕೆ ಅವಕಾಶ ಇತ್ತು. ಇದರಲ್ಲಿ 209 ಎಕರೆ ಜಮೀನು ಅವರಿಗೆ re-grant ಆಗುತ್ತದೆ. ನಾನು ಆಗಲೇ ಒಟ್ಟು 313 ಎಕರೆ ಜಮೀನು ಎಂದು ಹೇಳಿದ್ದೇನೆ. Re-grant ಮಾಡುವಾಗ 90 ಎಕರೆ 21 ಗುಂಟೆ ಕೆರೆ ಜಮೀನನ್ನು ಹೊರತುಪಡಿಸಿ ಅವರಿಗೆ re-grant ಮಾಡುತ್ತಾರೆ. ಅಲ್ಲಿಗೆ 209 ಎಕರೆ ಜಮೀನಿನ ಮೇಲೆ ಶ್ರೀ ಟಿ.ಜಿ.ಶ್ರೀನಿವಾಸಲು ರವರಿಗೆ ಹಕ್ಕು ಬಂದಿತು. ಶಿಕ್ಷಣ ಇಲಾಖೆಯೂ Inam Special D.C. ಮುಂದೆ ಹೋಗಿ ಈ ಜಮೀನು ನಮಗೆ ದಾನ ಆಗಿದೆ ಎಂದು ತಕರಾರು ಕೊಡಲಿಲ್ಲ. ಇವರ ಅರ್ಜಿಯನ್ನು Inam Special D.C. ಯವರು ಮಾನ್ಯ ಮಾಡಿ 209 ಎಕರೆ ಜಮೀನು ಸರ್ಕಾರದಿಂದ ಇವರಿಗೆ ಕನ್‌ಫರ್ಮ್ ಆಯಿತು. ಅಲ್ಲಿಗೆ title clean ಆಯಿತು. ಸರ್ಕಾರದಿಂದ ಅವರಿಗೆ ಜಮೀನು ಬಂದಿತು. ಅವರಿಗೆ 209 ಎಕರೆ ಜಮೀನು ಬಂದ ಮೇಲೆ ಬಹುಶಃ ಅವರು ಕೂಡ 1971 ರಲ್ಲಿ ಶ್ರೀ ಟಿ.ಜಿ.ಶ್ರೀನಿವಾಸಲು ರವರು ಮದುವೆ ಆಗುತ್ತಾರೆ. ಇವರಿಗೆ 12 ಜನ ಮಕ್ಕಳು. ಶ್ರೀ ಟಿ.ಜಿ.ಶ್ರೀನಿವಾಸಲು ರವರ ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು ಈ ಕುಟುಂಬಕ್ಕೆ ಸೇರಿದ ಮದ್ರಾಸಿನಲ್ಲಿರುವ ಆಸ್ತಿಯನ್ನು ಅವರು ತೆಗೆದುಕೊಂಡು, ಈ ಆಸ್ತಿಯ ಸಂಪೂರ್ಣ ಹಕ್ಕನ್ನು ಶ್ರೀ ಟಿ.ಜಿ.ಶ್ರೀನಿವಾಸಲು ರವರಿಗೆ ಬಿಟ್ಟು ಕೊಡುತ್ತಾರೆ. ಶ್ರೀ ಟಿ.ಜಿ.ಶ್ರೀನಿವಾಸಲು ರವರ ಹೆಂಡತಿ ಮತ್ತು ಇವರಿಗೆ 12 ಜನ ಮಕ್ಕಳು ಇರುತ್ತಾರೆ.

ಇವರ ಕುಟುಂಬದವರು ಶ್ರೀ ಟಿ.ಜಿ.ಶ್ರೀನಿವಾಸಲು, ಶ್ರೀ ಎ.ಎಸ್.ನಂದಗೋಪಾಲ, ಶ್ರೀ ಎ.ಎಸ್.ಸುರೇಶ್ ಎನ್ನುವವರು 209 ಎಕರೆ ಜಮೀನನ್ನು ಪಾಲು ಮಾಡಿಕೊಳ್ಳುತ್ತಾರೆ. ಆಮೇಲೆ 1987ನೇ ಇಸವಿಯಲ್ಲಿ ಶ್ರೀ ಟಿ.ಜಿ.ಶ್ರೀನಿವಾಸಲು ರವರು ನಿಧನರಾಗುತ್ತಾರೆ. ಶ್ರೀ ಟಿ.ಜಿ.ಶ್ರೀನಿವಾಸಲು ರವರು ನಿಧಾನರಾದ ಮೇಲೆ ಅವರ ಕುಟುಂಬದವರು ಅವರ ಭಾಗಕ್ಕೆ ಬಂದಂತಹ ಜಮೀನುಗಳನ್ನು ಶ್ರೀ ಜಿ.ಕೆ.ಕೃಷ್ಣಪ್ಪ ಮತ್ತು ಅವರ ಕುಟುಂಬದವರಿಗೆ 1996-97 ರಲ್ಲಿ ಶ್ರೀ ಟಿ.ಜಿ.ಶ್ರೀನಿವಾಸಲು ರವರ ಹಕ್ಕುದಾರರಿಂದ ಖರೀದಿ ಮಾಡಿದ್ದಾರೆ. ಇಷ್ಟು ಜಮೀನುಗಳನ್ನು ಶ್ರೀ ಜಿ.ಕೆ.ಕೃಷ್ಣಪ್ಪ ಎನ್ನುವವರು ಖರೀದಿ ಮಾಡಿ ಪಡೆದುಕೊಂಡಿದ್ದಾರೆ. ಏತನ್ಮಧ್ಯೆ, 1993ನೇ ಇಸವಿಯಲ್ಲಿ ಶಿಕ್ಷಣ ಇಲಾಖೆಯವರು ನಮಗೆ ದಾನ ಆಗಿದೆ. ಇದು ನಮ್ಮ ಹೆಸರಿಗೆ ಖಾತೆ ಮಾಡಿಕೊಡಿ ಎಂದು ಅರ್ಜಿ ಕೊಟ್ಟಿದ್ದಾರೆ. ಈ ಅರ್ಜಿಯನ್ನು ಕೊಟ್ಟಾಗ ತಹಶೀಲ್ದಾರ್‌ರವರು ಆವತ್ತೇ ಉತ್ತರ ಕೊಟ್ಟಿದ್ದಾರೆ. ದಾನ ಪತ್ರ ಮಾಡಿಕೊಟ್ಟಿರುವ ಶ್ರೀ ಟಿ.ಜಿ.ಶ್ರೀನಿವಾಸಲು ಹೆಸರಿಗೆ ಖಾತೆ ಇರುವುದಿಲ್ಲ ಮತ್ತು ವಿಭಾಗ ಪತ್ರದಂತೆ ಈಗಾಗಲೇ ಆಗಿರುವ ಖಾತೆಯ ಬದಲಾವಣೆ ರದ್ದು ಮಾಡಲು ಈ ಕಛೇರಿ ಅಧಿಕಾರ ವ್ಯಾಪ್ತಿಯಲ್ಲಿ ಕಾನೂನು ರೀತಿಯ ರಹ ಇರುವುದಿಲ್ಲ. ಆದುದರಿಂದ, ತಮ್ಮ ಕೋರಿಕೆಯಂತೆ ಖಾತೆ ಬದಲಾವಣೆ ಮಾಡಲು ರಹ ಇಲ್ಲದ ಕಾರಣ ನಿಮ್ಮ ಅರ್ಜಿಯನ್ನು ವಿಲೇ ಮಾಡಲಾಗಿದೆ ಎಂದು ಶಿಕ್ಷಣ ಇಲಾಖೆಯ ಅರ್ಜಿಯನ್ನು 1993ನೇ ಇಸವಿಯಲ್ಲಿ ತಿರಸ್ಕಾರ ಮಾಡಿದ್ದಾರೆ. ಏಕೆಂದರೆ, 1962 ರಲ್ಲಿ Inam Special D.C. ರವರು ಇವರಿಗೆ ಗ್ರಾಂಟ್ ಮಾಡಿದ್ದಾರೆ. ಅದಾದ ಮೇಲೆ ಕುಟುಂಬದವರೆಲ್ಲರೂ ಸೇರಿ ಇವರಿಗೆ ಕ್ರಯ . . . ಕ್ರಯ ಇನ್ನು ಆ ದಿನಾಂಕಕ್ಕೆ ಆಗಿಲ್ಲ. ಆ ದಿನಾಂಕದಲ್ಲಿ ಶ್ರೀ ಟಿ.ಜಿ.ಶ್ರೀನಿವಾಸಲು ರವರ ಕುಟುಂಬದಲ್ಲಿಯೇ ಇತ್ತು. ಈ ಜಮೀನು ಮಾರಾಟವಾಗುವ ಮೊದಲೇ ಇವರು ಅರ್ಜಿ ಕೊಟ್ಟಿದ್ದಾರೆ. ಈ ಅರ್ಜಿಯನ್ನು ತಹಶೀಲ್ದಾರ್ ರವರು ತಿರಸ್ಕಾರ ಮಾಡಿದ್ದಾರೆ. ಏಕೆಂದರೆ, ಅವರ ಕುಟುಂಬಕ್ಕೆ ಹಕ್ಕು, flow of rights ಸರಿಯಾಗಿ ಇದೆ. ಹಾಗಾಗಿ ನಿಮಗೆ ಖಾತೆ ಮಾಡಿಕೊಡುವುದಕ್ಕೆ ಬರುವುದಿಲ್ಲ ಎಂದು ಅರ್ಜಿಯನ್ನು ತಿರಸ್ಕಾರ ಮಾಡಿದ್ದಾರೆ. ತದನಂತರ 1996-97ರಲ್ಲಿ ಶ್ರೀ ಜಿ.ಕೆ.ಕೃಷ್ಣಪ್ಪ ನವರು ಖರೀದಿ ಮಾಡಿದ್ದಾರೆ. ಈಗ ಅವರು ಮತ್ತು ಶ್ರೀ ನಂಜುಂಡಪ್ಪ ನವರ ವಾರಸುದಾರರು ಸೇರಿ 235 ಎಕರೆ ಜಮೀನನ್ನು M/s. United Green woods ಎನ್ನುವವರಿಗೆ ಮಾರಾಟ ಮಾಡಿದ್ದಾರೆ. ಅವರು ಮಾರಾಟ ಮಾಡಿ, ಅವರು conversion ಗೆ ಅಪ್ಲೈ ಮಾಡಿ ಈಗ conversion ತೆಗೆದುಕೊಂಡಿದ್ದಾರೆ. ಇದು ನನಗೆ ದಾಖಲೆಗಳ ಪ್ರಕಾರ ಇರುವಂತಹ ಇತಿಹಾಸ.

ಈಗ ಸಾರಾಂಶ ಏನೆಂದರೆ, ಅವರು 1955ನೇ ಇಸವಿಯಲ್ಲಿ ಮಾಡಿಕೊಟ್ಟ ದಾನ ಪತ್ರಕ್ಕೆ ಯಾವುದೇ ಕಾನೂನಿನ ಮಾನ್ಯತೆ ಇರಲಿಲ್ಲ. ಏಕೆಂದರೆ, ಅವರಿಗೆ ಹಕ್ಕು ಇರಲಿಲ್ಲ. ಹಾಗಾಗಿ ಆ ಕಾರಣದಿಂದ ತದನಂತರ ಇನಾಂ ನಲ್ಲಿ re-grant ಆಗಿದೆ. Re-grant ಆದ ಮೇಲೆ continuously without any dispute rights flow ಆಗಿದೆ. ಅದರ ಪ್ರಕಾರ ಇವರು ಮಾರಾಟವನ್ನು ಮಾಡಿದ್ದಾರೆ. ಇದು ನನಗೆ ದಾಖಲೆಗಳಿಂದ ಲಭ್ಯ ಇರುವಂತಹ

ವಿಷಯ. ಮಾನ್ಯ ಸದಸ್ಯರು ಕಳೆದ ಅಧಿವೇಶನದಲ್ಲಿಯೂ ಕೂಡ ಪ್ರಶ್ನೆ ಕೇಳಿದ್ದರು. ಅದಾದ ಮೇಲೆ ನಾನು ಸ್ಥಳೀಯವಾಗಿ ವಿಚಾರಣೆ ಮಾಡಿ ಎಂದು ಹೇಳಿದ್ದೇನೆ. ಇದು ದಾಖಲೆಗಳಿಂದ ಗೊತ್ತಾಗಿದೆ. ಇದರ ಬಗ್ಗೆ ವಿಚಾರಣೆ ಮಾಡಿಸಿದರೆ ಏನು ಬರುತ್ತದೆ ಎಂದು ನೋಡೋಣ. ನಂತರ ಇದನ್ನು ತಮ್ಮ ಜೊತೆಗೆ ಹಂಚಿಕೊಳ್ಳುತ್ತೇನೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತೇನೆ. ಶಿಕ್ಷಣ ಇಲಾಖೆಯಿಂದ ಇನ್ನೊಂದು ಬಾರಿ ಅರ್ಜಿಯನ್ನು ತೆಗೆದುಕೊಂಡು, ಅವರಿಗೆ ಹಕ್ಕು ಕೊಡುವುದಕ್ಕೆ ಬರುತ್ತದೆಯೇ ಎಂದು ನ್ಯಾಯಾತ್ಮಕವಾಗಿ ಪರಿಶೀಲನೆ ಮಾಡಿ ಎಂದು ಹೇಳುತ್ತೇನೆ. ನಾನು ಸ್ವಲ್ಪ ಉತ್ತರವನ್ನು ಪಕ್ಕಕ್ಕೆ ಸರಿದು ಹೇಳುವುದಾದರೆ, ತಾವು ಈ ರೀತಿ ಹೇಳುತ್ತೀರಾ ಎಂದು ಅಂದುಕೊಳ್ಳಬಹುದು. ನಾನು practical ಆಗಿ ಮಾತನಾಡುತ್ತಿದ್ದೇನೆ. ಇರುವ ಸತ್ಯವನ್ನು ಹೇಳುತ್ತಿದ್ದೇನೆ. Education Department ನವರು rights assert ಮಾಡಬೇಕೆಂದರೆ ಬಹುಶಃ ಅವರು ಸಿವಿಲ್ ಕೋರ್ಟ್‌ಗೆ ಹೋಗಬೇಕಾಗುತ್ತದೆ.

(ಮುಂದು)

(321) 11.3.2026 5.00 ಪಿಕೆ:ಬಿಎನ್‌ಎಸ್ (ಉಪ ಸಭಾಪತಿಗಳ ಉಪಸ್ಥಿತಿ)

**ಶ್ರೀ ಕೃಷ್ಣ ಭೈರೇಗೌಡ (ಮುಂದು)**

ಕಂದಾಯ ಮಂತ್ರಿಯಾಗಿ ನೀವು ಹೀಗೆ ಹೇಳಬಹುದೇ ಎಂದು ನೀವು ಕೇಳಬಹುದು. ಆದರೆ ಕಾನೂನು ಆ ರೀತಿ ಇದೆ. ಅದು ನಾನು ಹೇಳುವಂಥದ್ದಲ್ಲ. ಈಗ ಅವರಿಗೆ rights confirm ಆಗಿದೆ. ಆದರೆ Education Department is free to approach the Civil Court and assert their rights also. ಅದು ಏನೇ ಇರಲಿ, ಅವರು ಕೋರ್ಟಿಗೆ ಹೋಗುತ್ತಾರೋ ಬಿಡುತ್ತಾರೋ ಅದು ಬೇಕಾಗಿಲ್ಲ. ಜಿಲ್ಲಾಧಿಕಾರಿಗಳಿಗೆ, ಶಿಕ್ಷಣ ಇಲಾಖೆಯಿಂದ ಇನ್ನೊಂದು ಬಾರಿ ಅರ್ಜಿ ತೆಗೆದುಕೊಂಡು, ನೀವೇ ಅವರನ್ನು ಕರೆಸಿ as a District Commissioner ಅವರಿಂದ ನೀವೇ ಅರ್ಜಿಯನ್ನು ತೆಗೆದುಕೊಂಡು, ಅವರ ಹೆಸರಿಗೆ ಕಾನೂನಿನ ಪ್ರಕಾರ ಮಾಡಿಕೊಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಪರಿಶೀಲನೆ ಮಾಡಿ ಎಂದು ನಾನು ಸೂಚನೆ ಕೊಡುತ್ತೇನೆ.

**ಶ್ರೀ ಎಸ್. ಕೇಶವ ಪ್ರಸಾದ್:-** ಮಾನ್ಯ ಸಭಾಪತಿಗಳೆ, ಈ ವೈರುಧ್ಯಗಳ ಬಗ್ಗೆ ಅಷ್ಟೇ ನನಗೆ ಕಾಡುತ್ತಿತ್ತು. ನೀವು ಸ್ಪಷ್ಟೀಕರಣ ಕೊಟ್ಟಿದ್ದೀರಿ. ನಾನು ಶಿಕ್ಷಣ ಇಲಾಖೆ ಮತ್ತು ಕಂದಾಯ ಇಲಾಖೆಗೆ ಪ್ರಶ್ನೆ ಕೇಳಿದ್ದೇನೆ. ಕಂದಾಯ ಇಲಾಖೆಯವರು ಕೊಟ್ಟಿರುವಂತಹ ಉತ್ತರದಲ್ಲಿ ಈ ರೀತಿ ಬಂದಾಗ, ಶಿಕ್ಷಣ ಇಲಾಖೆಯವರು ಈ ರೀತಿ ನಿಲುವನ್ನು ಏಕೆ ತೆಗೆದುಕೊಂಡರು? ಅಂದರೆ, ಶಿಕ್ಷಣ ಇಲಾಖೆಯವರು, ಕಂದಾಯ ಇಲಾಖೆಯವರನ್ನು ಒಮ್ಮೆ ಸಂಪರ್ಕಿಸಬೇಕು, ಈ ರೀತಿ ನಿಮಗೆ ಸಂಬಂಧಪಟ್ಟಂತೆ ಒಂದು ಪ್ರಕರಣ ಇದೆ ಎಂದು ಏಕೆ ಕೇಳಲಿಲ್ಲ? ಇಲಾಖೆಗಳ ಮಧ್ಯದಲ್ಲಿ

ಸಮನ್ವಯದ ಕೊರತೆ ಇದೆಯೇ? ಇದು ಗಂಭೀರವಾದ ಪ್ರಶ್ನೆ. 1955ನೇ ಇಸವಿಗೆ ಸಂಬಂಧಪಟ್ಟಿದ್ದಾಗಿದೆ. ದಾಖಲೆಗಳಲ್ಲಿ ಸಾಕಷ್ಟು ವ್ಯತ್ಯಾಸಗಳಾಗಿರುತ್ತವೆ; ಏರುಪೇರುಗಳಾಗಿರುತ್ತವೆ. ಹಾಗಾಗಿ ಒಮ್ಮೆ ಕಂದಾಯ ಇಲಾಖೆಯನ್ನು ಕೇಳಿಕೊಂಡು ಉತ್ತರ ಕೊಡೋಣ ಎನ್ನುವ ಒಂದು ಎಚ್ಚರಿಕೆಯ ಗಂಟೆ ಇಲ್ಲಿ ಕಾಣಿಸುತ್ತಿಲ್ಲ. ಸರ್ಕಾರದ ಮಧ್ಯೆ ಎಲ್ಲೋ ಒಂದು ಕಡೆ ಈ ಸಮನ್ವಯದ ಅವಶ್ಯಕತೆ ಇದೆ. ಇಲ್ಲದೇ ಇದ್ದರೆ, ಇವೆರಡನ್ನೂ ಇಟ್ಟುಕೊಂಡು ಸಾರ್ವಜನಿಕವಾಗಿ ತಪ್ಪು ಸಂದೇಶ ಹೋಗಬಾರದು. ವಾಸ್ತವತೆ ಏನಿದೆಯೋ ಅದು ಇದ್ದೇ ಇದೆ. ಮಾನ್ಯ ಸಚಿವರು ಸ್ಪಷ್ಟೀಕರಣ ಕೂಡ ಕೊಟ್ಟಿದ್ದಾರೆ. ಹಾಗಾಗಿ, ಇದನ್ನು ಗಂಭೀರವಾದ ಸಂಗತಿ ಎಂದು ತೆಗೆದುಕೊಳ್ಳಬೇಕು. ಹಿಂದಿನ ಪ್ರಶ್ನೆಯನ್ನು ಮಾನ್ಯ ನವೀನ್‌ರವರು ಏನು ಕೇಳಿದ್ದರೋ ಆಗ ನೀವು, ಸಮನ್ವಯ ಸಾಧಿಸಿದ್ದೇವೆ ಎಂದು ಹೇಳಿದಿರಿ. ಇದರಲ್ಲೂ ಸಮನ್ವಯದ ಅವಶ್ಯಕತೆ ಇದೆ ಎನ್ನುವುದು ನನ್ನ ಆಗ್ರಹವಾಗಿದೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಗಳೆ, ವಿನೋಬಾಭಾವೆಯವರ ಭೂದಾನ ಚಳುವಳಿಯಲ್ಲಿ ಸುಮಾರು ಸಾವಿರಾರು ಎಕರೆ ಜಾಗವನ್ನು ದಾನ ಕೊಟ್ಟರು. ಆದರೆ ಆಗ ದಾಖಲೆಗಳನ್ನು ಮಾಡಿಕೊಂಡಿಲ್ಲ. ಈಗ ಒದ್ದಾಡುತ್ತಿದ್ದಾರೆ. ಕೆಲವರ ಹತ್ತಿರ ದಾನ ಪತ್ರ ಕೂಡ ಇಲ್ಲ. It is a historical legacy problem. ನಾನು ಸುಮ್ಮನೆ ದೂಷಣೆ ಮಾಡುತ್ತಿಲ್ಲ. Record keeping ನಮ್ಮಲ್ಲಿ ಸರಿ ಇಲ್ಲದೇ ಇರುವುದರಿಂದ, ದಾನ ಮಾಡಿಕೊಟ್ಟಿದ್ದ ದಾನ ಪತ್ರ ಇಲ್ಲ. ಇನ್ನು ಕೆಲವರು ಬಾಯಿ ಮಾತಿನಲ್ಲಿ ಬಿಟ್ಟುಕೊಟ್ಟಿದ್ದಾರೆ. ಇಂಥದ್ದನ್ನು ಹೇಗೆ ಪರಿಹರಿಸಬೇಕೆಂದು ಶಿಕ್ಷಣ ಇಲಾಖೆಯವರು ಒಂದು ಕಾನೂನನ್ನೇ ಮಾಡಬೇಕು ಎನ್ನುವ ಚಿಂತನೆಯಲ್ಲಿದ್ದಾರೆ. ಕಂದಾಯ ಇಲಾಖೆಯವರು ಎಲ್ಲಾ ದಾಖಲೆಗಳನ್ನು ಇಡುವಂತಹ ಕೆಲಸ ಮಾಡುತ್ತದೆ. We are the record keepers. ಇದನ್ನು ಹೇಗೆ ಇತ್ಯರ್ಥ ಮಾಡಬೇಕೆಂದು ನಾವೂ ಕೂಡ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಈ ಸಮಸ್ಯೆಗೆ ಸಂಬಂಧಪಟ್ಟಂತೆ ನಾನು ಹೇಳುತ್ತಿಲ್ಲ. ಇಂತಹ ಸಾವಿರಾರು ಎಕರೆ ಜಾಗ ಶಿಕ್ಷಣ ಇಲಾಖೆಯ ಹೆಸರಿಗೆ ಖಾತೆಯಾಗಿಲ್ಲ. ಆದರೆ ನಾವು ಮತ್ತು ಶಿಕ್ಷಣ ಇಲಾಖೆಯವರು ಮಾತನಾಡಿಕೊಂಡು, ಯಾವುದನ್ನು ದಾಖಲೆಗೆ ತರುವುದಕ್ಕೆ ಸಾಧ್ಯವೋ ಅವುಗಳನ್ನು drive mode ನಲ್ಲಿ, ರಾಜ್ಯದಲ್ಲಿ ಈ ರೀತಿ ಎಲ್ಲೆಲ್ಲಿ ದಾಖಲೆ ಇದೆ, ಅವುಗಳೆಲ್ಲವನ್ನೂ ಕೂಡ ಆರ್.ಟಿ.ಸಿ.ಯಲ್ಲಿ ಇಂಡೀಕರಣ ಮಾಡಬೇಕು ಮತ್ತು ಅವುಗಳನ್ನು survey sketch ಮಾಡಿ ಪೋಡಿ ದುರಸ್ತ್ ಮಾಡಬೇಕು ಎಂದು ಜಾಯಿಂಟ್ coordination ನಲ್ಲಿ ಮಾಡುತ್ತಿದ್ದೇವೆ. ಅದಲ್ಲದೇ ಖಾಸಗಿ ಜಾಗದಲ್ಲಿ ಇರುವುದನ್ನು Column 11 ನಲ್ಲಿ, ಶಾಲೆ ಇದೆ ಎಂದು ಎಂಟ್ರಿ ಮಾಡಿ, ಕನಿಷ್ಠ ಎಲ್ಲೋ ಒಂದು ಕಡೆ ಎಂಟ್ರಿಯನ್ನಾದರೂ ಕ್ರಿಯೇಟ್ ಮಾಡುವುದಕ್ಕೆ ಆಗುತ್ತದೆಯೇ ಎಂದು ನೋಡುತ್ತಿದ್ದೇವೆ. ಏಕೆಂದರೆ ದಾನ ಕೊಟ್ಟವರ ಮೊಮ್ಮಕ್ಕಳು ಹುಟ್ಟಿಕೊಂಡು ಅದನ್ನು ಮಾರಾಟ ಮಾಡುವುದು; ಶಾಲೆಗಳನ್ನು ಒಕ್ಕಲೆಬ್ಬಿಸುವುದು ಕೆಲವು ಕಡೆ ನಡೆಯುತ್ತಿದೆ. ಸಾವಿರಕ್ಕೆ ಎರಡು ಕಡೆ ಈ ರೀತಿ ನಡೆಯುತ್ತಿದೆ. 90% disturb ಮಾಡುತ್ತಿಲ್ಲ. ಕೆಲವು ಕಡೆ ಮೂರನೆಯ

ತಲೆಮಾರಿನ ವಾರಸುದಾರರು ಅಲ್ಲಿ ಇಲ್ಲಿ ಮಾರಾಟ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರುವುದು ನಡೆಯುತ್ತಿದೆ. ಈ ಸಮಸ್ಯೆ ನಮ್ಮ ಗಮನದಲ್ಲಿದೆ. We will address that.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ನಿನ್ನೆ ನಿಲುವಳಿ ಸೂಚನೆಯೊಂದನ್ನು ನಿಯಮ 330ಕ್ಕೆ ಕನ್‌ವರ್ಟ್ ಮಾಡಿದ್ದರು. ಮುಖ್ಯಮಂತ್ರಿಗಳು ಬರುತ್ತಾರೆಯೇ ಕೇಳಿ ಎಂದು ಪೀಠ ಮಾನ್ಯ ಸಭಾನಾಯಕರನ್ನು ಕೇಳಿತ್ತು. ಅವರು ಏನನ್ನೂ ಹೇಳಿಲ್ಲ. ಈ ರೀತಿ ಒಂದೊಂದು ವಿಷಯಗಳನ್ನು ಮುಂದಕ್ಕೆ ಹಾಕಿಕೊಂಡು ಹೋದರೆ, ನಾಳೆ ಬರುವಂತಹ ವಿಷಯಗಳಿಗೆ ಸಮಯ ದೊರೆಯುವುದಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅದಕ್ಕೆ ಉತ್ತರ ಬಂದಿಲ್ಲ. ಉತ್ತರವಿಲ್ಲದೆಯೇ ಚರ್ಚೆ ಮಾಡುತ್ತೇವೆ ಎಂದರೆ ಅದಕ್ಕೆ ಅವಕಾಶ ಕೊಡುತ್ತೇನೆ. ಈ ಕುರಿತು ಮಾತನಾಡಲು 18 ಜನ ಹೆಸರುಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಉತ್ತರ ಬಂದಿಲ್ಲ. ಉತ್ತರ ಬರುವುದಕ್ಕಿಂತ ಮುಂಚೆಯೇ ನಾವು ಚರ್ಚೆ ಮಾಡುತ್ತೇವೆ ಎಂದರೆ ನಾನು ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಈ ವಿಷಯವಾಗಿ ಉತ್ತರಿಸಲು ಒಂದು ದಿವಸ ಸಮಯ ಕೊಡಿ ಎಂದು ಮಾನ್ಯ ಸಭಾಪತಿಯವರನ್ನು ಕೇಳಿದ್ದೇವೆ.

**ಉಪ ಸಭಾಪತಿಯವರು:-** ಇದಕ್ಕೆ ಉತ್ತರ ಬಂದಿಲ್ಲ. ಉತ್ತರ ಬರದೇ ಇದ್ದರೂ ಚರ್ಚೆ ಮಾಡುತ್ತೇವೆ ಎಂದರೆ ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಈಗ ನಾನು ಆಯವ್ಯಯದ ಮೇಲೆ ಮಾತನಾಡಲು ಮಾನ್ಯ ಡಿ.ಎಸ್.ಅರುಣ್‌ರವರ ಹೆಸರು ಕರೆದಿದ್ದೇನೆ. ಅವರು ಮಾತನಾಡಿದ ನಂತರ ನಿಮಗೆ ಸಮಯ ಕೊಡುತ್ತೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರು ಪೀಠದಲ್ಲಿದ್ದಾಗ, ಮುಖ್ಯಮಂತ್ರಿಗಳು ಬಂದಾಗ ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳಿದ್ದಾರೆ. ಆಗ ಅದನ್ನು ಅವರು ಒಪ್ಪಿಕೊಂಡರು. ಆದರೆ ಈಗ ಅವರ ಅನುಪಸ್ಥಿತಿಯಲ್ಲಿ ಈ ವಿಷಯವನ್ನು ಚರ್ಚೆ ಮಾಡಿದರೆ ಹೇಗೆ?

**ಉಪ ಸಭಾಪತಿಯವರು:-** ಆ ವಿಷಯವಾಗಿ ಮಾತನಾಡಲು 18 ಜನ ಹೆಸರು ಕೊಟ್ಟಿದ್ದಾರೆ. ಅವರು ಮಾತನಾಡುವುದಾದರೆ ಮಾತನಾಡಲಿ. ಉತ್ತರ ಬಂದಮೇಲೆ ಏನು ಕೇಳುತ್ತಾರೋ ನೋಡೋಣ.

## 7. ವಿತ್ತೀಯ ಕಾರ್ಯಕಲಾಪ

## 2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ

**ಶ್ರೀ. ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯದ ಮುಖ್ಯಂತ್ರಿಗಳು 17ನೇ ಬಾರಿ ಬಜೆಟ್ ಮಂಡಿಸಿದ್ದಾರೆ. ನಾನು ಒಬ್ಬ ವಾಣಿಜ್ಯ ವಿಷಯವನ್ನು ಓದಿದ ವಿದ್ಯಾರ್ಥಿಯಾಗಿದ್ದೇನೆ. ನಾನು ಡಿಗ್ರಿ ಓದುತ್ತಿರಬೇಕಾದರೆ ಬಜೆಟ್ ಬಗ್ಗೆ ಪತ್ರಿಕೆಯಲ್ಲಿ ಬರುತ್ತಿತ್ತು. ಒಂದಷ್ಟು ಜನ ಅದರ ಬಗ್ಗೆ ವಿಶ್ಲೇಷಣೆ ಮಾಡುತ್ತಿದ್ದರು. ಕಾಂಗ್ರೆಸ್‌ನ ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡಿದರೆ, ವಿರೋಧ ಪಕ್ಷದ ಅಥವಾ ಕಾಂಗ್ರೆಸ್‌ಯೇತರ ಪಕ್ಷದವರು ಒಂದಷ್ಟು ವಿಶ್ಲೇಷಣೆ ಮಾಡುತ್ತಿದ್ದರು. ಅದೇರೀತಿ ಬೇರೆ ಪಕ್ಷದ ಸರ್ಕಾರಗಳು ಬಜೆಟ್ ಮಂಡನೆ ಮಾಡಿದಾಗ ಕಾಂಗ್ರೆಸ್ ಪಕ್ಷದ ಸದಸ್ಯರು ಅದರ ಬಗ್ಗೆ ವಿರೋಧ ವ್ಯಕ್ತ ಮಾಡುವಂಥದ್ದನ್ನು ನಾವು ನೋಡುತ್ತಿದ್ದೆವು. ಬಜೆಟ್ ಮಂಡನೆ ಮಾಡಿದಾಗ, ಇದರಿಂದ ನಮ್ಮೂರಿಗೆ ಏನು ಸಿಕ್ಕಿದೆ, ನಮಗೇನು ಸಿಕ್ಕಿದೆ, ನಮ್ಮ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಏನಾದರೂ ಬದಲಾವಣೆ ಇದೆಯೇ ಎಂದು ಸ್ವಾಭಾವಿಕವಾಗಿ ನೋಡುವಂಥದ್ದು ಇಷ್ಟು ವರ್ಷಗಳ ಕಾಲ ನಡೆದುಕೊಂಡು ಬಂದಿದೆ. 2026-27ನೇ ಸಾಲಿನ ಬಜೆಟ್ ಮಂಡನೆ ಮಾಡಿ, ಅದು ಮಾರನೆಯ ದಿನದ ಪತ್ರಿಕೆಯಲ್ಲಿ ಬಂದಾಗ ನಮ್ಮದು ವಿರೋಧ, ಅವರದು ಪರವಾದಂಥ ನಿಲುವು ಇತ್ತು. ಸಂಪಾದಕೀಯ ನೋಡುತ್ತಾ ಹೋದರೆ ಈ ಬಜೆಟ್ ಪುಸ್ತಕದಲ್ಲಿ ಏನೂ ಇಲ್ಲ ಎನ್ನುವುದು ಜನರಿಗೆ ಅರಿವಾಯಿತು. ಏನೂ ಉಪಯೋಗವಿಲ್ಲ. ಬಜೆಟ್ ಮಂಡನೆ ಮಾಡಿ ಆಯಿತು; ಬಜೆಟ್‌ನಿಂದ ಯಾರಿಗೂ ಉಪಯೋಗ ಇಲ್ಲ ಎನ್ನುವುದು ಎಲ್ಲರ ಗಮನಬಕ್ಕೆ ಬಂತು. ಬಜೆಟ್‌ನ ಗಾತ್ರ ಸುಮಾರು ರೂ. 4 ಲಕ್ಷ 48 ಸಾವಿರ ಕೋಟಿಗಳು. ಅದರಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ಹಣ ಕೊಟ್ಟಿದ್ದಾರೆ, ಅದರಿಂದ ನಮಗೆ ಏನು ಸಹಾಯವಾಗುತ್ತದೆ ಎಂದು ನೋಡುತ್ತೇವೆ. ಕಳೆದ ವರ್ಷ 2025-26ರ ಬಜೆಟ್‌ನಲ್ಲಿ ಬಂಡವಾಳ ವೆಚ್ಚ, capital investment ಅಥವಾ capital expenditure ಅನ್ನು ನೋಡಿದಾಗ, ನಾನು Commerce Graduate ಆಗಿ ನನಗನಿಸಿದ್ದು, ಇವತ್ತು ನೂರು ರೂಪಾಯಿಗಳನ್ನು capital investment ಎಂದು ಮಾಡಿದರೆ, ಮುಂದಿನ 5 ವರ್ಷಕ್ಕೆ ಐದು ನೂರು ರೂಪಾಯಿಯಾಗಿ ಸರ್ಕಾರಕ್ಕೆ ಬರುತ್ತದೆ ಎಂದು ಭಾವಿಸುತ್ತೇವೆ. ಆ ದುಡ್ಡನ್ನು ರಸ್ತೆ ನಿರ್ಮಾಣಕ್ಕೋ, ಸೇತುವೆಯ ನಿರ್ಮಾಣಕ್ಕೋ ಬಳಸಬಹುದಾಗಿರುತ್ತದೆ. ಇದರಿಂದ employment generate ಆಗುತ್ತದೆ, tax collection ಆಗುತ್ತದೆ, ಇದರಿಂದ ಜನರಿಗೂ ಅನುಕೂಲವಾಗುತ್ತದೆ ಎಂದು ತಿಳಿದುಕೊಳ್ಳುತ್ತೇವೆ. ಅದೇ ನೂರು ರೂಪಾಯಿಗಳನ್ನು ಒಬ್ಬ ವ್ಯಕ್ತಿಯ ಕೈಗೆ ಕೊಟ್ಟರೆ ಅವರಿಂದ ಐದು ವರ್ಷವಾದ ಮೇಲೆ ಐವತ್ತು ರೂಪಾಯಿ ಕೂಡ ವಾಪಸ್ಸು ಬರುವುದಿಲ್ಲ. ಒಬ್ಬ Commerce Graduate ಗೆ ಅರ್ಥವಾಗುವ ರೀತಿಯಲ್ಲಿ ಇಂಥದ್ದನ್ನು ನಾವು ಅನುಭವಿಸಿದ್ದೇವೆ. ಈ ಸರ್ಕಾರ ಬಂದು ಮೂರು ವರ್ಷಗಳಾಗಿರುವುದರಿಂದ ಈಗಲಾದರೂ ಇದು ಸರಿ ಹೋಗುತ್ತದೆ ಎಂದು ಭಾವಿಸಿದೆವು. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು 15ನೇ ಬಜೆಟ್ ಮಂಡನೆ

ಮಾಡಬೇಕಾದರೆ, ಆ ಸರ್ಕಾರದ ಮೊದಲನೆ ಬಜೆಟ್ ಮಂಡನೆ ಮಾಡಬೇಕಾದರೆ, 15 ವರ್ಷದ ಅನುಭವ ಇದೆ; 15 ಬಾರಿ ಬಜೆಟ್ ಮಂಡನೆ ಮಾಡಿರುವಂತಹ ಮುಖ್ಯಮಂತ್ರಿಗಳು ತಪ್ಪುಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಭಾವಿಸಿದ್ದೆವು. ಗ್ಯಾರಂಟಿ ಯೋಜನೆಗಳ ಮುಖಾಂತರ ಈ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. 17 ನೇ ಬಜೆಟ್ ಮಂಡಿಸುವಾಗ ಅದು ಸರಿಹೋಗುತ್ತದೆ ಎಂದು ಭಾವಿಸಿದ್ದೆವು. ಅಂದರೆ, ಆವತ್ತಿನ ಬಂಡವಾಳ ವೆಚ್ಚವನ್ನು ನೋಡುತ್ತಾ ಹೋದರೆ, ಕಳೆದ 2025-26ನೇ ಸಾಲಿನಲ್ಲಿ ಏನು ಬಂಡವಾಳ ವೆಚ್ಚವನ್ನು ಮಾಡಿದ್ದಾರೆ, ಏನು ಸಾಧನೆ ಮಾಡಿದ್ದಾರೆ ಅದು deficit ಆಗಿದೆ, ಅದು ಕಡಿಮೆಯಾಗಿತ್ತು. ಏಕೆಂದರೆ ಅಲ್ಲಿ ದುಡ್ಡು ಇರಲಿಲ್ಲ.

(ಮುಂದು)

(322) 11-3-2026 5.10 ಡಿಎಸ್-ಕೆಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಎಸ್. ಅರುಣ್ (ಮುಂದು):**

ಆ ಬಂಡವಾಳ ವೆಚ್ಚ ಮಾಡಿರುವುದರಿಂದಲೂ ಕೂಡ ನಮಗೆ ಒಂದಷ್ಟು ನಂಬಿಕೆಗಳಿಲ್ಲ. ಅದನ್ನು ಕೂಡ ಮುಂದಿನ ದಿನಗಳಲ್ಲಿ ಚರ್ಚೆ ಮಾಡುವಂಥದ್ದು ಇದೆ. ಹಾಗಾಗಿ ಈ ಸಲ ಬಂಡವಾಳ ವೆಚ್ಚವನ್ನು ಹೇಗೆ ತೋರಿಸಿದ್ದಾರೆ ಎಂದರೆ ಆಶ್ಚರ್ಯವಾಗುತ್ತದೆ. ನಾನು ಒಂದು ವ್ಯಾಪಾರ ಮಾಡುತ್ತಿದ್ದೆ, ವ್ಯಾಪಾರ ಮಾಡಬೇಕಾದರೆ ನಾನು ಬ್ಯಾಂಕ್ ಲೋನ್‌ಗೆ ಹೋಗಬೇಕು. ಬ್ಯಾಂಕ್ ಲೋನ್‌ಗೆ ಹೋಗಬೇಕೆಂದರೆ ನಮ್ಮ ವ್ಯಾಪಾರದ ಗಾತ್ರ, ನನ್ನ ರೆವಿನ್ಯೂ, ನನ್ನ ಆದಾಯದ ಮೇಲೆ ಬ್ಯಾಂಕ್‌ನಿಂದ ಹಣ ಕೊಡುತ್ತಾರೆ. ಆ ಸ್ಥಿತಿ ನಮ್ಮ ಸರ್ಕಾರಕ್ಕೆ ಬಂದಿದೆಯೇ ಎಂದು ನನಗನಿಸುತ್ತಿದೆ. ನನ್ನ ಆದಾಯವನ್ನು ಜಾಸ್ತಿ ತೋರಿಸಿದರೆ ಇನ್ನು ಐದು ವರ್ಷಗಳಿಗೆ ನನ್ನ ಆದಾಯ 500 ರೂಪಾಯಿಗಳಿದ್ದರೆ 5,000 ರೂಪಾಯಿಗಳನ್ನು ತೋರಿಸಿದರೆ ನನಗೆ ಬ್ಯಾಂಕ್ ಲೋನ್ ಕೊಡುವುದು. Inflated Project Report ಅನ್ನು ನಾನು ಮಾಡಿ ಕೊಡುತ್ತೇನೆ. ನಮ್ಮ ವ್ಯಾಪಾರದಲ್ಲಿ ನಾವೆಲ್ಲರೂ ಅನುಭವಿಸಿರುವಂಥದ್ದೇ. ಸರ್ಕಾರ ಆ ಮಟ್ಟಕ್ಕೆ ಹೋಯಿತೇ? ನನಗೆ ಇದನ್ನು ಯಾರೋ ಸಾಧಾರಣ ಆಡಿಟರ್ ಮಾಡಿಸಿಕೊಡುತ್ತಿದ್ದರು. ಬ್ಯಾಂಕ್‌ಗೆ ನಾನು ಅರ್ಜಿಯನ್ನು ಹಾಕಬೇಕಾದರೆ ನನ್ನ ಪ್ರಾಜೆಕ್ಟ್ ರಿಪೋರ್ಟ್‌ಗೆ ಅದು ಸಾಧನೆ ಮಾಡುವುದಕ್ಕಾಗುವುದಿಲ್ಲ. ನನಗೆ ಏನು ಬೇಕು, ಆ ಸಮಯದಲ್ಲಿ ನನ್ನ ಕೈಯಿಂದ ಹಣ ಹಾಕುವುದಕ್ಕಾಗುವುದಿಲ್ಲ, ನನ್ನ ಪ್ರಾಜೆಕ್ಟ್ ನೂರು ರೂಪಾಯಿಗಳು, ನಾನು ಐನೂರು ರೂಪಾಯಿ ತೋರಿಸುವುದು, ನನ್ನ ಕೈಯಿಂದ ಏನು ಹಾಕುವ ಹಾಗೆ ಇಲ್ಲ. ನೂರು ರೂಪಾಯಿ ಅಲ್ಲಿಂದಲೇ ಸಾಲ ಬಂದುಬಿಟ್ಟರೆ ಸಾಕಲ್ಲಾ, ನಾನು ನೂರು ರೂಪಾಯಿಯೊಳಗೆ ಮ್ಯಾನೇಜ್ ಮಾಡಬಹುದಲ್ಲವೇ? ನನ್ನ ಸ್ವಂತ ಬಂಡವಾಳವೇ ಇಲ್ಲ. ಅದೇ ಸ್ಥಿತಿ ಒಬ್ಬ ಸಾಮಾನ್ಯ ಆಡಿಟರ್‌ಗಳು ಹೇಳಿಕೊಟ್ಟಿರುವ ರೀತಿಯಲ್ಲಿ ಇದು projected ಆಗಿದೆ. 4,48,000 ಕೋಟಿ ರೂಪಾಯಿಗಳನ್ನು ತೋರಿಸಿರುವಂಥದ್ದು ಇವರು ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ಎಷ್ಟು ಪರ್ಸೆಂಟ್ ನಾವು ಸಾಲ ತೆಗೆದುಕೊಳ್ಳುವುದಕ್ಕಾಗುತ್ತದೆ ಎಂದು ಎಲ್ಲಾ ಕಡೆ ನಿಯಮಾವಳಿಗಳು ಇವೆ. ಆ ಸಾಲ ಎಷ್ಟು ತೆಗೆದುಕೊಳ್ಳಬೇಕು ಎಂದು ಮೊದಲು ಪ್ಲಾನ್ ಮಾಡುವುದು, ಇದು ಉಲ್ಟಾ. ನನಗೆ ನೂರು ರೂಪಾಯಿಗಳು ಬೇಕು

ಎಂದು ನಾನು ೫೦೦ ರೂಪಾಯಿ ತೋರಿಸುವಂಥದ್ದನ್ನು ಇವತ್ತು ಬಜೆಟ್‌ನಲ್ಲಿ ನನಗೆ ತೋರಿಸಿ ಇದರೊಳಗೆ ಇವರು receipts ನಿಂದ ಸಾಧನೆ ಮಾಡಬೇಕು. ಆದಾಯ ಬರಬೇಕು, ಆದಾಯ ನಾಲ್ಕು ಹಂತಗಳಲ್ಲಿ ಬರುವಂಥದ್ದು ಇದೆಯಲ್ಲಾ ಇವತ್ತು ಕಮರ್ಷಿಯಲ್ ಟ್ಯಾಕ್ಸ್, ನೋಂದಣಿ ಮತ್ತು ಮುದ್ರಾಂಕ ಶುಲ್ಕ, ಮೋಟಾರ್ ವಾಹನ ತೆರಿಗೆ, ಅಬಕಾರಿ, ಇವುಗಳಿಂದ ಸಾಧನೆ ಮಾಡಬೇಕೆಂದರೆ ಇವರಿಗೆ ಬರುವಂತಹ receipts or revenue ಈ ನಾಲ್ಕು ಇಲಾಖೆಗಳಿಂದ ಹೇಗೆ ತೋರಿಸಿದ್ದಾರೆಂದರೆ, ಹಿಂದಿನ ವರ್ಷ ಒಂದು ಸಲ ನೋಡಬೇಕಲ್ಲವೇ? ಕಮರ್ಷಿಯಲ್ ಟ್ಯಾಕ್ಸ್‌ನಿಂದ ಎಷ್ಟು ಬಂದಿದೆ, ಎಷ್ಟು ಸಾಧನೆಯಾಗುತ್ತದೆ? ಇದರೊಳಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯನ್ನು ಬೇರೆ ಮಾಡುವುದಕ್ಕಾಗಲಿಲ್ಲ. ಇವರು ಎಲ್ಲವನ್ನು ಜಾಸ್ತಿ ಮಾಡುತ್ತಾ ಹೋದರು. ಟ್ಯಾಕ್ಸ್ ಸ್ಲಾಬ್ ಅನ್ನು ಜಾಸ್ತಿ ಮಾಡುತ್ತಾ ಹೋದರು. ಬಹಳ ಬೇಜಾರು ಎಂದರೆ ಅಬಕಾರಿ ಇಲಾಖೆ. ೩೫,೦೦೦ ಕೋಟಿ ರೂಪಾಯಿಗಳು ಇದ್ದದ್ದನ್ನು 41,೦೦೦ ಕೋಟಿ ಬರುತ್ತದೆಂದು ಅದನ್ನು achieve ಹೇಗೆ ಮಾಡಿದರೂ ಎಂದರೆ ನಿಜವಾಗಿಯೂ ನಮಗೆ ನಂಬುವುದಕ್ಕಾಗುವುದಿಲ್ಲ. ಇತ್ತೀಚೆಗೆ CL-7 ತೆಗೆದುಕೊಂಡಿರುವಂತಹ ನನ್ನ ಸ್ನೇಹಿತ ಎಷ್ಟು ಹಣ ಕೊಟ್ಟೆ ಎಂದು ಹೇಳುತ್ತಾನೆ. ಒಂದು ರೀತಿ ಓಪನ್ ಆಕ್ಷನ್ ಆಗಿದೆ. ಅಂದರೆ, ಎಲ್ಲರಿಗೂ ಕೊಡುವುದು. Open auction ಆಗಿ ತೆಗೆದುಕೊಂಡಿರುವುದು ಸರ್ಕಾರದ್ದು ಬೇರೆ. ಅವರ ಖಜಾನೆ ಗಟ್ಟಿಯಾಗಬೇಕಲ್ಲವೇ? Inflated ವರದಿಯನ್ನು ತೋರಿಸಿ ಅವರಿಗೆ ಸರ್ಕಾರಕ್ಕೆ ಹೇಗೆ ಬರಬೇಕು ಎಂದು ತೋರಿಸುವಂಥದ್ದು. ಆ ರೀತಿ ಇವತ್ತು ಅಬಕಾರಿ ಇಲಾಖೆಯಲ್ಲಿ ನಡೆಯುತ್ತಿರುವುದನ್ನು ನೋಡಿದರೆ ನಾಚಿಕೆಯಾಗುತ್ತದೆ. ಇವತ್ತು ಎಣ್ಣೆ ದರ ಎಷ್ಟು ಜಾಸ್ತಿ ಮಾಡಿಟ್ಟಿದ್ದಾರೆ ಎಂದರೆ ಇವತ್ತು ನಮ್ಮ ಯುವಕರ ಸ್ಥಿತಿ ಏನಾಗುತ್ತಿದೆ ಎಂದರೆ ಗಾಂಜಾಕ್ಕೆ ಹೋಗುತ್ತಿರುವ ಕಾರಣವೇ ಈ ಸರ್ಕಾರ. ಇವರು ಮಾಡಿರುವಂತಹ ಅನ್ಯಾಯ, ಏನೋ ಒಂದು quarter ಕುಡಿದು ಹೋಗುತ್ತಿದ್ದ, ಅವನಿಗೆ ಆ quarter ಕುಡಿಯುವುದಕ್ಕೂ ಅವನ ಕೈಯಲ್ಲಿ ಹಣವಿಲ್ಲ. ಏಕೆಂದರೆ ಹೊರಗಡೆ ಯಾವುದೇ ಅಭಿವೃದ್ಧಿ ಕಾರ್ಯಗಳಾಗುತ್ತಿಲ್ಲ. ಅವನ ಕೈಯಲ್ಲಿ ಹಣ ಹುಟ್ಟುತ್ತಿಲ್ಲ. ಇವರಿಗೆ ಗಾಂಜಾ ಸುಲಭವಾಗಿ ಸಿಗುವ ಹಾಗೆ ಇದೇ ಸರ್ಕಾರ ಮಾಡುತ್ತಿದೆ. ಅವನು ಗಾಂಜಾ ತೆಗೆದುಕೊಳ್ಳುವುದಕ್ಕೆ ಹೋಗುತ್ತಿದ್ದಾನೆ. ಈ ರೀತಿ ನಿರಂತರವಾಗಿ ಕಳೆದ ಮೂರು ವರ್ಷಗಳಿಂದ ಮಾಡುತ್ತಿದ್ದಾರೆ. ಬಜೆಟ್‌ನಲ್ಲಿ ಸರಿ ಹೋಗುತ್ತದೆ ಎಂದು ಪ್ರತಿ ಸಲ ಹೇಳುತ್ತಾರೆ. ನಾವು ೫ ಗ್ಯಾರಂಟಿಗಳನ್ನು ಕೊಟ್ಟಿರುವ ಕಾರಣಕ್ಕೆ ಇವತ್ತು ರಾಜ್ಯ ಅತ್ಯುತ್ತಮ ಸ್ಥಿತಿಯಲ್ಲಿದೆ ಎಂದು ಹೇಳುತ್ತಾರೆ, ಅತ್ಯುತ್ತಮ ಸ್ಥಿತಿ ಎಲ್ಲಿದೆ? ಇವರು ಸ್ವಲ್ಪ calculation ಮಾಡಬೇಕಾಗುತ್ತದೆ. ಎಷ್ಟು ಆದಾಯ ಬರುತ್ತದೆ, ನಾನು ಎಷ್ಟು ಖರ್ಚು ಮಾಡಬೇಕು ಎಂದು ನಮ್ಮ ಮನೆಯ ಹೆಣ್ಣುಮಕ್ಕಳಿಗೆ ಕೇಳಿದರೆ ಹೇಳುತ್ತಾರೆ. ಮಕ್ಕಳಿಗೆ ಸೈಕಲ್ ಕೊಡಿಸಬೇಕೆಂದರೆ ನಮ್ಮ ತಾಯಂದಿರು ನೂರು ನೂರು ರೂಪಾಯಿ ಜೋಡಿಸಿ ಕೊಡುತ್ತಿದ್ದರು. ಅದೊಂದು capital investment ಆಗುತ್ತಿತ್ತು. ಖರ್ಚು ಜಾಸ್ತಿ ಇದೆ ಎಂದು ಗೊತ್ತಿದ್ದರೆ, ನನಗೆ ಆದಾಯ ಎಷ್ಟಿದೆ ಎಂದು ನಮ್ಮ ಮನೆಯ ಹೆಣ್ಣುಮಕ್ಕಳು ತಿಳಿದುಕೊಂಡು ಮನೆಯನ್ನು ಹೇಗೆ ನಡೆಸಬೇಕೆಂದು ಹೇಳುತ್ತಾರೆ. ಇದೇನು ದೊಡ್ಡದಲ್ಲ, ಸರ್ಕಾರ ಒಂದು ಮನೆ ಹೇಗೆ ನಡೆಯುತ್ತದೆ ಎಂದು ತಿಳಿದುಕೊಂಡಿದ್ದರೆ ಸಾಕಾಗುತ್ತಿತ್ತು. ೫೩,೦೦೦ ಕೋಟಿ ರೂಪಾಯಿಗಳು ಖರ್ಚಾಗುತ್ತದೆ

ಎಂದು ಗೊತ್ತಿಲ್ಲದೆ ಏನಾದರೂ ಮಾಡಿದ್ದಾರೆಯೇ? ಈಗ ಎಲ್ಲದಕ್ಕೂ ನಾವು 5 ಯೋಜನೆಗಳನ್ನು ಕೊಟ್ಟಿದ್ದೇವೆ, ನಿಮಗೆ ನಾಳೆ ನೀರು ಕುಡಿಯುವುದಕ್ಕೆ ಇಲ್ಲ, ನಾಳೆ ನಾವು ಯಾವ ಕಟ್ಟಡವನ್ನು ಕಟ್ಟುವುದಿಲ್ಲ ಎಂದರೆ ನಮಗೆ ನಾಚಿಕೆಯಾಗುತ್ತದೆ. ಇಲ್ಲಿಯವರೆವಿಗೂ ನಮ್ಮ ಎಂ.ಎಲ್.ಎ.ಗಳು ನಮ್ಮ ಊರಿನಲ್ಲಿ ಗುದ್ದಲಿ ಪೂಜೆ ಮಾಡಿರುವ ಫೋಟೋಗಳನ್ನು ನಾವು ನೋಡಲಿಲ್ಲ. ನಾವು ಹಿಂದೆ ಹಕ್ಕುಬಾಧ್ಯತಾ ಸಮಿತಿಗೆ ನನ್ನನ್ನು ಗುದ್ದಲಿ ಪೂಜೆಗೆ ಕರೆಯಲಿಲ್ಲ, ನನಗೆ ಸರ್ಕಾರದ ಕಾರ್ಯಕ್ರಮಕ್ಕೆ ಕರೆಯಲಿಲ್ಲ, ನನಗೆ ಹಕ್ಕುಚ್ಯುತಿ ಆಗಿದೆ ಎಂದು ಹಕ್ಕುಚ್ಯುತಿ ಪ್ರಸ್ತಾವವನ್ನು ಹಾಕುತ್ತಿದ್ದೆವು. ಈಗ ಮೂರು ವರ್ಷಗಳಿಂದ ಆ ರೀತಿ ನಾವೇನು ನೋಡಲಿಲ್ಲ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನೇ ಸೊರಬ ತಾಲ್ಲೂಕಿಗೆ ಬಂದು 60 ಕೋಟಿ ರೂಪಾಯಿಗಳ ಬ್ಯಾರೇಜ್‌ಗಳನ್ನು ಮಾಡಿ ಈಗಾಗಲೇ ಬ್ಯಾರೇಜ್‌ಗಳು ಪೂರ್ಣಗೊಳ್ಳುತ್ತಿವೆ. ನಾನೇ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದೇನೆ. 2008 ರಲ್ಲಿ ಮಾನ್ಯ ಯಡಿಯೂರಪ್ಪನವರು ಪ್ರಾರಂಭ ಮಾಡಿರುವಂತಹ ಲಿಫ್ಟ್ ಇರಿಗೇಷನ್ ಬಂದ್ ಆಗಿದ್ದರೆ ರಾತ್ರಿ 11 ಗಂಟೆಗೆ ಬಂದು ಸರ್ಕ್ಯೂಟ್ ಹೌಸ್‌ನಲ್ಲಿ review ಮಾಡುತ್ತಿದ್ದೆ. ಆ ಸಮಯದಲ್ಲಿ ಮುಖಂಡರೆಲ್ಲರೂ ಬಂದು ಕೇಳಿದರೆ tour programme ಅನ್ನು ರದ್ದುಗೊಳಿಸಿ ಮರು ದಿನವೇ ವಿಸಿಟ್ ಮಾಡಿ ಅದಕ್ಕೆ 9 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಮಾರ್ಚ್ 31ನೇ ತಾರೀಖಿನಂದು ಮಾಡಿಕೊಡುತ್ತಿದ್ದೇನೆ. ಲೋಕಸಭಾ ಸಂಸದರಾದ ಮಾನ್ಯ ರಾಘವೇಂದ್ರರವರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ ಎಂದು ಹೇಳಿದರು. ನಮ್ಮ ತಂದೆಯವರಿದ್ದ ಕಾಲದಿಂದಲೂ 2008 ರಿಂದಲೂ ಆಗಿರಲಿಲ್ಲ ಎಂದು ಅವರೇ ಬಂದು ಹೇಳಿದರು. ಇವರು ಹೇಳುತ್ತಿರುವುದಕ್ಕೆ ನಾನು ಹೇಳುತ್ತಿದ್ದೇನೆ, ನಾನು ಕಾಮೆಂಟ್ ಮಾಡುತ್ತಿಲ್ಲ. ಮಾರ್ಚ್ 31ನೇ ತಾರೀಖಿಗೆ ಮಾನ್ಯ ಸದಸ್ಯರನ್ನೆ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. 2008 ರಲ್ಲಿ ಮಾನ್ಯ ಯಡಿಯೂರಪ್ಪನವರು ಪ್ರಾರಂಭ ಮಾಡಿಸಿದ್ದರು, ಅದು ಆಗಿರಲಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರು ಶಿವಮೊಗ್ಗಕ್ಕೆ ಮಾಡಿರುವಂತಹ ಅಭಿವೃದ್ಧಿ ಕೆಲಸಗಳ ಬಗ್ಗೆ ಕಾಂಗ್ರೆಸ್ ಪಕ್ಷ, ಬಿ.ಜೆ.ಪಿ. ಪಕ್ಷ, ಯಾವ ಪಕ್ಷದವರ ಹತ್ತಿರವಾದರೂ ಕೇಳಲಿ ಅಥವಾ ಅಂಕಿ-ಅಂಶಗಳನ್ನು ತೆಗೆಯಿರಿ. ಅವರ ಅವಧಿಯಲ್ಲಿ ಶಿವಮೊಗ್ಗ ಅಭಿವೃದ್ಧಿಯಾಗಿರುವಷ್ಟು ಯಾರ ಅವಧಿಯಲ್ಲೂ ಆಗಿಲ್ಲ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ ಶಿವಮೊಗ್ಗದಲ್ಲಿ ಅಭಿವೃದ್ಧಿಯಾಗಿದೆ, ಇಲ್ಲ ಎಂದು ಹೇಳುತ್ತಿಲ್ಲ. ಅವರು ಆಗಿಲ್ಲ ಎಂದು ಹೇಳಿದಕ್ಕೆ ನಮ್ಮ ಇಲಾಖೆಯಿಂದ ಮಾಡಿರುವುದನ್ನು ನಾನು ಹೇಳುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರು 2008 ರಲ್ಲಿ ಲಿಫ್ಟ್ ಇರಿಗೇಷನ್ ಮಾಡಿರುವುದೇ ಆಗಿಲ್ಲ, ಹಾಗೆಯೇ ಬಂದ್ ಆಗಿದೆ. ಅವರಿಗೆ ಗೊತ್ತಿಲ್ಲ, ತಿಳಿದುಕೊಳ್ಳಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ, ನನಗೆ ಸಮಯ ಕಡಿಮೆಯಾಗುತ್ತದೆ. ಶಿವಮೊಗ್ಗದ್ದು ಎಂದು ಹೇಳಿದಾಗ ನಾನು 60 ಕೋಟಿ ರೂಪಾಯಿಗಳನ್ನು ಕೇಳಿದೆ. ಮೂರು ವರ್ಷಗಳಲ್ಲಿ 60 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ನಾನು 75 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ನಾನು ಅವರಿಗೆ ಲೆಕ್ಕ ಕೊಡುತ್ತೇನೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನಾವು ಒಂದೊಂದು ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ಕೇಳಿದವರು. ನಮ್ಮ ಶಿವಮೊಗ್ಗದ ಅಭಿವೃದ್ಧಿ ಬಗ್ಗೆ ದಯಮಾಡಿ ಅವರು ಮಾತನಾಡುವುದು ಬೇಡ. ನಮ್ಮ ಹತ್ತಿರ ಸಾವಿರಾರು ಕೋಟಿ ರೂಪಾಯಿಗಳನ್ನು ತಂದು ಹೇಗೆ ಅಭಿವೃದ್ಧಿ ಮಾಡಿದ್ದಾರೆ ಎಂಬುದನ್ನು ಅವರು ಒಂದು ಸಲ ಬಂದು ನೋಡಲಿ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದ ಹಣವನ್ನು ತೆಗೆದುಕೊಂಡು ಹೋಗಿ ಶಿವಮೊಗ್ಗಕ್ಕೆ ಹಾಕಿದ್ದಾರೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಆ ಸಂದರ್ಭದಲ್ಲಿ ಎಲ್ಲಾ ಊರಿನಲ್ಲೂ ಅಭಿವೃದ್ಧಿಯನ್ನು ಮಾಡಿದ್ದಾರೆ. ಹಾಗಾಗಿ ಅಭಿವೃದ್ಧಿ ಕಾರ್ಯದಲ್ಲಿ ಇವತ್ತಿನ ಸ್ಥಿತಿ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಅವರು ಇಲ್ಲಿ ಏನು ಬೇಕಾದರೂ ಮಾತನಾಡಬಹುದು, ನಾವು ಹೊರಗಡೆ ಹೋಗಿ ಎಂ.ಎಲ್.ಎ., ಎಂ.ಎಲ್.ಸಿ.ಗಳ ಹತ್ತಿರ ಏನಾದರೂ ಕೇಳಿದರೆ ಇವತ್ತಿನ ಸ್ಥಿತಿ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ. ಯಾವ ಪತ್ರಕ್ಕೂ ಯಾವುದೇ ರೀತಿಯಾಗಿ ಮಂಜೂರಾಗಿರುವಂಥದ್ದನ್ನು ನಾವು ನೋಡಿಲ್ಲ. ಹಾಗಾಗಿ ಬಜೆಟ್‌ನಲ್ಲೇ ನಮಗೆ ಅನುದಾನಗಳು ಬರಬೇಕಾಗಿದೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ.....

**ಉಪ ಸಭಾಪತಿಯವರು:-** ಮಾನ್ಯ ಸೀತಾರಾಂರವರೇ, ತಾವು ಕುಳಿತುಕೊಳ್ಳಿ. ಬಜೆಟ್‌ನಲ್ಲಿ ಅವರ ವಿಚಾರಗಳನ್ನು ಮಾತನಾಡಬಹುದು.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಇವತ್ತಿನ ಸ್ಥಿತಿ ಗ್ಯಾರಂಟಿ ಎಂದು ಹೇಳುತ್ತಾ ಬಜೆಟ್‌ನಲ್ಲೂ ಕೂಡ ಗ್ಯಾರಂಟಿ ಹೇಳಿದ್ದಾರೆ. 4,48,000 ಕೋಟಿ ರೂಪಾಯಿಗಳಲ್ಲಿ ಅವರು ಎಲ್ಲಿಗೆ ಹೋಗಿ ಮುಟ್ಟುತ್ತಾರೆ? ಕಳೆದ ಸಲ ಏನು ಮಾಡಿದ್ದಾರೆ, ಬಂಡವಾಳ ವೆಚ್ಚವನ್ನು ಎಲ್ಲೆಲ್ಲಿ ಮಾಡಿದ್ದಾರೆ, ಬಂಡವಾಳ ವೆಚ್ಚದಲ್ಲಿ

ಇನ್ನು ಎಷ್ಟು ಕಾಮಗಾರಿಗಳು ಬಾಕಿ ಇವೆ? ಈ ವರ್ಷ ಅದಕ್ಕೆ ಏನು projected ಮಾಡಿದ್ದಾರೆ ಎಂದು ಕೇಳುವಂತಹ ಅವಶ್ಯಕತೆ ಇದೆ. ಇವತ್ತು ಗ್ಯಾರಂಟಿ ಯೋಜನೆಗಳ ಮುಖಾಂತರ ಯಾವ ಸ್ಥಿತಿ ಬಂದಿದೆ ಎಂದರೆ, ನಾನು ಹೇಳುತ್ತಿದ್ದೆ, ನಾವು projected ಮಾಡಿಬಿಡುತ್ತೇವೆ. ಈಗ ಹೇಗೆ 4,48,000 ಕೋಟಿ ಬಜೆಟ್ ಎಂದು ಹೇಳಿದ್ದಾರಲ್ಲಾ, ಈಗ ಮೊದಲು ಸಾಲ ಬಂದುಬಿಡುತ್ತದೆ. ಏಕೆಂದರೆ, ಸಾಲ ತೆಗೆದುಕೊಳ್ಳುವುದಕ್ಕೆ ಇವರಿಗೆ ಎಲ್ಲಾ ಅರ್ಹತೆಗಳು ಇವೆ. ಇವತ್ತು ಎಲ್ಲಾ ಸಾಲಗಳು ಬರುತ್ತವೆ. ಇವರು revenue ಏನು collect ಮಾಡಬೇಕಲ್ಲ, ಅಲ್ಲಿ ಇವರಿಗೆ ಬಲವಾದ ಹೊಡೆತ ಬೀಳುತ್ತದೆ.

(ಮುಂದು)

(323) 11/03/2026 5:20 ಎಸ್‌ಪಿಆರ್/ಕೆಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಎಸ್.ಅರುಣ್ (ಮುಂದು):**

ಬಲವಾಗಿ ಹೊಡೆತ ಬಿದ್ದರೆ, ಏನೇನು ಆಗುತ್ತದೆ ಎನ್ನುವುದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಇವರಿಗೆ ಬಲವಾಗಿ ಹೊಡೆತ ಬಿದ್ದಾಗ ರೆವೆನ್ಯೂ ಸಂಗ್ರಹಣೆ ಆಗುವುದಿಲ್ಲ. ಹೀಗೆ ಆದಾಗ ಮೊದಲಿಗೆ ಪ್ರಾರಂಭವಾಗುವುದು ಏನೆಂದರೆ, ನಾವು ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲ. ನಾವು ಕಳೆದ ಮೂರು ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ನೋಡಿಲ್ಲ. ಪ್ರತಿ ವರ್ಷದ ಆಯವ್ಯಯದಲ್ಲಿ ದೊಡ್ಡ ಅಭಿವೃದ್ಧಿ ಕಾರ್ಯಗಳನ್ನು ನೋಡುವುದಷ್ಟೇ ಆಗಿದೆ. ಅದಕ್ಕೆ ಸಾವಿರ ಕೋಟಿ ರೂಪಾಯಿಗಳ ಅನುದಾನ, ಇದಕ್ಕೆ ಐದು ಸಾವಿರ ಕೋಟಿ ರೂಪಾಯಿಗಳ ಅನುದಾನ ಎಂಬುದಾಗಿ ಘೋಷಿಸುತ್ತಾರೆ. ಆದರೆ, ಯಾವುದಕ್ಕೂ ಸಹ ಸರ್ಕಾರವು ದುಡ್ಡನ್ನು ಹಾಕಿಲ್ಲ. ಇದಾದ ಮೇಲೆ, ಈಗ ಆಗುತ್ತಿರುವ ಸಮಸ್ಯೆಯ ಬಗ್ಗೆ ನಾನು ಈಗಾಗಲೇ ಹೇಳಿದೆ. ನನಗೆ ಯಾರೋ ಒಬ್ಬ ಆಡಿಟರ್ ವರದಿಯನ್ನು ಕೊಡುತ್ತಾರೆ. ಇದರ ಆಧಾರದ ಮೇಲೆ ನನಗೆ ಸಾಲ ದೊರೆಯುತ್ತದೆ. ಅದೇ ರೀತಿಯಾಗಿ ಪಾಪ! ನಮ್ಮ ಜನರು ಇವತ್ತಿನ ದಿವಸ ತಮ್ಮ ಬಿ.ಪಿ.ಎಲ್. ಕಾರ್ಡ್‌ಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಸಂಗತಿ ಗೊತ್ತಿದೆಯೇ? ಈ ಸರ್ಕಾರದ ನಿಯಮಗಳಿಂದಾಗಿ ಈ ರೀತಿಯಾಗಿ ಆಗುತ್ತಿದೆ. ಇವರುಗಳಿಗೂ ಸಹ ಪಾಪ ಯಾರೋ ಆಡಿಟರ್ ಸ್ವಲ್ಪ ಆದಾಯ ಜಾಸ್ತಿ ತೋರಿಸು, ಇದರಿಂದ ನಿನಗೆ ಯಾವುದಾದರೂ ಸಾಲ ಸಿಗುತ್ತದೆ ಎಂಬುದಾಗಿ ತಿಳಿಸಿದರು. ಇವತ್ತಿನ ದಿವಸ ಇವರುಗಳು ಪಾಪ! ತಮ್ಮ ಆದಾಯವನ್ನು ಹೆಚ್ಚಿಸಿ, ಈಗ ತಮ್ಮ ಬಿ.ಪಿ.ಎಲ್. ಕಾರ್ಡ್‌ಗಳನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿಯಾಗಿದೆ. ಈ ರಾಜ್ಯ ಸರ್ಕಾರ ಏನು ಮಾಡಿದೆ ಎಂದರೆ, ಕೆಲವು ಸಾಮಾಜಿಕ ಭದ್ರತಾ ಯೋಜನೆಗಳಿವೆ. 2020 ರಲ್ಲಿ ಬಿ.ಜೆ.ಪಿ. ಪಕ್ಷದ ಸರ್ಕಾರವು ಅದ್ಭುತವಾದ ಇಂತಹ ಯೋಜನೆಗಳಿಗೆ.... ಅವುಗಳು ಯಾವುವೆಂದರೆ, ನಿರ್ಗತಿಕ ವಿಧವಾ ಮಾಶಾಸನ, ವೃದ್ಧಾಪ್ಯ ಮಾಶಾಸನ, ಸಂಧ್ಯಾ ಸುರಕ್ಷಾ ಮಾಶಾಸನ, ಅಂಗವಿಕಲ ಪೋಷಣಾ ಮಾಶಾಸನ, ಮೈತ್ರಿ ಯೋಜನೆ ಮಾಶಾಸನ, ಮನಸ್ವಿನಿ ಯೋಜನಾ ಮಾಶಾಸನ, ರಾಷ್ಟ್ರೀಯ ಕುಟುಂಬ ಪರಿವಾರ ಮಾಶಾಸನ... ಇವುಗಳಿಗೆ ಒಂದು ರೀತಿಯಾದ ಅಪ್ಲಿಕೇಷನ್ (App)

ಅನ್ನು ಮಾಡಿ, ಕೇವಲ 24 ಗಂಟೆಗಳ ಅವಧಿಯಲ್ಲಿ ಯಾರು ಯಾರು ಬಿ.ಪಿ.ಎಲ್. ಕಾರ್ಡ್‌ದಾರರು ಇದ್ದಾರೆಯೋ, ಅವರಿಗೆಲ್ಲರಿಗೂ ಈ ಮಾಶಾಸನವನ್ನು ಕೊಡುವ ವ್ಯವಸ್ಥೆಯಾಗಿತ್ತು. ಆದರೆ, ಇವತ್ತಿನ ದಿವಸ ಸರ್ಕಾರ ಏನು ಆದೇಶ ಹೊರಡಿಸಿದೆ ಎಂದರೆ, 500 ಫಲಾನುಭವಿಗಳನ್ನು ಡಿಲೀಟ್ ಮಾಡಬೇಕೆಂದು ಸ್ಥಳೀಯ ತಾಲ್ಲೂಕು ಅಧಿಕಾರಿಗಳಿಗೆ ಟಾರ್ಗೆಟ್ ಅನ್ನು ನೀಡಿದ್ದಾರೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರದಿಂದ ಬಂದಿದೆ.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇದನ್ನು ರಾಜ್ಯ ಸರ್ಕಾರವು ಹೊರಡಿಸಿದೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೆ, ಇದು ಕೇಂದ್ರ ಸರ್ಕಾರದಿಂದ ಬಂದಿದೆ. ದೇಶದಲ್ಲಿ ಎಲ್ಲಿಯೂ ಸಹ ಇಲ್ಲ. 75% ಜನರಿಗೆ ಇಲ್ಲಿ ಇದನ್ನು ನೀಡಲಾಗುತ್ತಿದೆ, ಹೀಗಾಗಿ ಅದನ್ನು ಕಡಿಮೆ ಮಾಡುವಂತೆ ಕೇಂದ್ರ ಸರ್ಕಾರವು ತಿಳಿಸಿದೆ. ಈ ಸಂಬಂಧ ಕೇಂದ್ರ ಸರ್ಕಾರದಿಂದ ಪತ್ರವು ಬಂದಿದೆ. ಬೇಕಾದರೆ ಅದನ್ನು ನಿಮಗೆ ತೋರಿಸುತ್ತೇವೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೆ, ಇವು ಕೇಂದ್ರ ಸರ್ಕಾರವು ಯೋಜನೆಗಳಾಗಿದ್ದು, ಇದಕ್ಕೆ ರಾಜ್ಯ ಸರ್ಕಾರವು ಮ್ಯಾಚಿಂಗ್ ಗ್ರ್ಯಾಂಟ್ಸ್‌ಗಳನ್ನು ನೀಡಬೇಕಾಗಿರುತ್ತದೆ. ಕೇಂದ್ರ ಸರ್ಕಾರದ ಏನೇನು ಯೋಜನೆಗಳಿವೆಯೋ...., ಆದರೆ ಇವತ್ತಿನ ದಿವಸ ರಾಜ್ಯ ಸರ್ಕಾರದಿಂದಲೇ ಕೇಂದ್ರ ಸರ್ಕಾರಕ್ಕೆ ಹೋಗಿರುವ ಪತ್ರ ನಮ್ಮ ಹತ್ತಿರ ಇದೆ. ಅಲ್ಲಿನ ಇ.ಓ. ಗಳಿಗೆ ಕಳುಹಿಸಿದ್ದಾರೆ. ಒಂದು ಗ್ರಾಮ ಪಂಚಾಯಿತಿಯು ಈ ತಿಂಗಳ ಮುಕ್ತಾಯದೊಳಗೆ 30 ಬಿ.ಪಿ.ಎಲ್. ಕಾರ್ಡ್‌ದಾರರನ್ನು ಹೆಸರುಗಳನ್ನು ಡಿಲೀಟ್ ಮಾಡಿಸಬೇಕು. ಯಾರ ಆದಾಯವು 32,000/- ರೂಪಾಯಿಗಳಷ್ಟು ಇದೆಯೋ, ಇದು ಯಾವತ್ತಿನದು ಎಂದು ಹೇಳಿದರೆ, ಇದು 2011 ಹಾಗೂ 2013 ನೇ ಇಸ್ವಿಗಳ ಆದಾಯವಾಗಿರುತ್ತದೆ. ಇವರುಗಳು ಅವತ್ತಿನ ದಿವಸ ಬಿ.ಪಿ.ಎಲ್. ಕಾರ್ಡ್‌ಗೆ ಅರ್ಜಿ ಸಲ್ಲಿಸಿರುತ್ತಾರೆ. ಇವತ್ತಿನ ದಿವಸ ಯಾರು 32,000/- ರೂಪಾಯಿಗಳಷ್ಟು ಆದಾಯವನ್ನು ಹೊಂದಿದ್ದಾರೆಯೋ, ಅವರುಗಳ ಹೆಸರುಗಳು ಇವತ್ತಿನ ದಿವಸ ಡಿಲೀಟ್ ಆಗಿವೆ. ಅವರುಗಳ ಹೆಸರುಗಳು ಪಟ್ಟಿಯಲ್ಲಿ ಇರುವುದಿಲ್ಲ. ಈ ರೀತಿಯಾಗಿ ಏಕೆ ಆಗುತ್ತಿದೆ ಎಂದರೆ, ಸರ್ಕಾರದ ಬಳಿ ದುಡ್ಡು ಇಲ್ಲ ಸ್ವಾಮಿ! ನಮ್ಮ ಆಯವ್ಯಯದಲ್ಲಿಯೂ ಸಹ ಇದಕ್ಕಾಗಿ ಹಣವಿಲ್ಲ. ಹೀಗಾಗಿ ಈ ರೀತಿಯಾಗಿ ಏನೋ ಮಾಡಿ, ಹಣವನ್ನು ಉಳಿಸಲೇಬೇಕು ಎನ್ನುವಂತಾಗಿದೆ ಪರಿಸ್ಥಿತಿ. ನಾಳೆಯ ದಿನ ಗೃಹಲಕ್ಷ್ಮಿ ಯೋಜನೆಯಲ್ಲಿ ಇರುವ ತಾಯಂದಿರಿಗೆ, ಇವತ್ತಿನ ದಿವಸ ಯಾರು ಸರ್ಕಾರಿ ಬಸ್ಸುಗಳಲ್ಲಿ ಶಕ್ತಿ ಯೋಜನೆಯಲ್ಲಿ ಓಡಾಡುತ್ತಿದ್ದಾರೆಯೋ, ಅವರಿಗೆ... ಸರ್ಕಾರವು ಇದರ ಬಗ್ಗೆ ಏಕೆ ಯೋಚನೆ ಮಾಡಿಲ್ಲ ಎಂದು ನಮಗೂ ಸಹ ಆಶ್ಚರ್ಯವಾಗುತ್ತದೆ. ಗ್ಯಾರಂಟಿ ಯೋಜನೆಗಳಿಗಾಗಿ 53,000 ಕೋಟಿ ರೂಪಾಯಿಗಳಷ್ಟು ಅವಶ್ಯಕತೆ ಇದೆ. ಇಷ್ಟೊಂದು excess ಹಣ ರಾಜ್ಯ ಸರ್ಕಾರದ ಬಳಿ ಇತ್ತೇ? ನಮ್ಮ ರಾಜ್ಯಕ್ಕೆ

53,000 ಕೋಟಿ ರೂಪಾಯಿಗಳ ವೆಚ್ಚವನ್ನು ತಡೆದುಕೊಳ್ಳುವಷ್ಟು ಶಕ್ತಿ ಇತ್ತೇ? 15 ನೇ ಬಾರಿ ಆಯವ್ಯಯವನ್ನು ಮಂಡನೆ ಮಾಡಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಇದು ಅರ್ಥವಾಗಲಿಲ್ಲವೇ? ಇನ್ನು ಒಂದೆರೆಡು ವರ್ಷಕ್ಕೆ 53,000 ಕೋಟಿ ರೂಪಾಯಿಗಳಷ್ಟು ರೆವೆನ್ಯೂ ಹೇಗೆ ಜಾಸ್ತಿಯಾಗುತ್ತದೆ? ಇದನ್ನೆಲ್ಲವನ್ನು ಮುಂದುವರೆಸಬೇಕಲ್ಲವೇ? ಕೇಂದ್ರ ಸರ್ಕಾರದಿಂದ 53,000 ಕೋಟಿ ರೂಪಾಯಿಗಳಷ್ಟು ಅನುದಾನ ರಾಜ್ಯ ಸರ್ಕಾರಕೆಕ ಬರುವುದು ಯಾವುದಾದರೂ ಇತ್ತೆ?

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀಮತಿ ಭಾರತಿ ಶೆಟ್ಟಿ ರವರು ಸಭಾ ಪೀಠವನ್ನು ಅಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ಸಿನ ನಾಯಕರುಗಳಿಗೆ ವಿಚಿತ್ರವಾದ ಒಂದು ಚಾಳಿ ಇದೆ. ಅದು ಏನೆಂದರೆ, ಕೇಂದ್ರ ಸರ್ಕಾರಕ್ಕೆ ಬೈಯ್ಯುವುದು ಆಗಿದೆ. ಕೇಂದ್ರದಿಂದ ಅದು ಬಂದಿಲ್ಲ; ಇದು ಬಂದಿಲ್ಲ; ಅಲ್ಲಿಂದ ಕೊಟ್ಟಿಲ್ಲ; ನಮಗೆ ಅನ್ಯಾಯ ಮಾಡಿದ್ದಾರೆ. ಈ ರೀತಿಯಾಗಿ ಹೇಳುವುದು ಒಂದು ತರಹ fashion ಆಗಿ ಬಿಟ್ಟಿದೆ. ಪಾಪ! ನಮ್ಮ ಜನಗಳಿಗೆ, ರಾಜ್ಯದ ಮುಖ್ಯಮಂತ್ರಿಗಳು ಹೇಳುತ್ತಿರುವುದು ನಿಜ ಇರಬಹುದೇನೋ ಎಂದು ಅವರುಗಳು ನಂಬಿ ಬಿಡುತ್ತಾರೆ. ಮುಖ್ಯಮಂತ್ರಿಗಳು ಆ ರೀತಿಯಾಗಿ ಸುಳ್ಳನ್ನು ಹೇಳಬಾರದು. ಹೀಗಾಗಿ ಈ ಸದನದ ಹೊರಗಡೆ ಆಯವ್ಯಯ ವಿಶ್ಲೇಷಣೆಯನ್ನು...., ಏಕೆಂದರೆ ಇಲ್ಲಿ ಅದನ್ನು ಹೇಳಿದರೆ ಅದು authentic ಆಗಿ ಬಿಡುತ್ತದೆ. ಇಲ್ಲಿ ಹೇಳುವುದೆಲ್ಲವೂ ಸತ್ಯವಾಗಿರಬೇಕು. ಸದನದಲ್ಲಿ ಸುಳ್ಳನ್ನು ಹೇಳುವಂತಿಲ್ಲ. ಹೀಗಾಗಿ ಸದನದ ಹೊರಗಡೆ ಹೋಗಿ, ಆ ಸುಳ್ಳನ್ನೇ ಪಾಠದಂತೆ ಹೇಳುತ್ತಾರೆ. ಹೀಗಾಗಿ ಇವತ್ತಿನ ದಿವಸ ನಮ್ಮ ರಾಜ್ಯದ ಸ್ಥಿತಿಯನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದರೆ, ಕೇಂದ್ರ ಸರ್ಕಾರದ ಮೇಲೆ ಇಲ್ಲಸಲ್ಲದ ಆರೋಪ ಮತ್ತು ದೂರುಗಳನ್ನು ಹೇಳುತ್ತಾರೆ. Tax devolution ಬಗ್ಗೆ ಮಾತನಾಡಿದರು. ಇದರ ಬಗ್ಗೆ ನಾವು ಕೇಳುತ್ತಲೇ ಇದ್ದೇವೆ; ಏಕೆಂದರೆ, ತುಂಬಾ ಜನಕ್ಕೆ ಇದು ಅರ್ಥವಾಗುವುದಿಲ್ಲ. ಕೇಂದ್ರ ಸರ್ಕಾರದಿಂದ ಇಷ್ಟು ದುಡ್ಡು ಬರಬೇಕಾಗಿತ್ತು, ಆದರೆ, ಅದು ಇನ್ನೂ ಬಂದಿಲ್ಲ ಹಾಗೂ ಬರುತ್ತಿಲ್ಲ ಎಂಬುದಾಗಿ ಹೇಳುತ್ತಲೇ ಇರುತ್ತಾರೆ. ಕೇಂದ್ರ ಸರ್ಕಾರವನ್ನು ನಾವು ಬಹಳಷ್ಟು ಬಾರಿ ಕೇಳಿದ್ದೇವೆ, ಆದರೆ ಅವರು ಇನ್ನೂ ನಮಗೆ ಕೊಟ್ಟಿಲ್ಲ ಎಂಬುದಾಗಿ ಆರೋಪಿಸುತ್ತಾರೆ. ಕೇಂದ್ರ ಸರ್ಕಾರ ನಮ್ಮಿಂದ ತೆರಿಗೆಯನ್ನು ಸಂಗ್ರಹಣೆ ಮಾಡುತ್ತದೆ. ದೇಶದಲ್ಲಿಯೇ ನಾವು ಎರಡನೆಯ ಅತೀ ಹೆಚ್ಚು ತೆರಿಗೆಯನ್ನು ನೀಡುತ್ತೇವೆ. ಆದರೆ, ನಮಗೆ ಮಾತ್ರ ಅವರು ಕೊಡುವುದು 'ಚೊಂಬು' ಎಂಬುದಾಗಿ ಹೇಳುತ್ತಲೇ ಇರುತ್ತಾರೆ. ಅವರು ಈ ರೀತಿಯಾಗಿ ಹೇಳುವುದೇ? ಯಾರೋ ಸಾಮಾನ್ಯ ಜನಕ್ಕೆ ಹೇಳಿದರೆ ಅರ್ಥವಾಗದಿರಬಹುದು; ಆದರೆ, ನಮ್ಮಗಳಿಗೆ ಇದು ಅರ್ಥವಾಗುತ್ತದೆ. Tax devolution ಹೇಗೆ ಮಾಡುತ್ತಾರೆ; ಅದರಲ್ಲಿನ ಪಾಲನ್ನು ನಮ್ಮ ರಾಜ್ಯ ಹೇಗೆ ಕೊಡುತ್ತಾರೆ ಎನ್ನುವುದು ಗೊತ್ತಿದೆ. ಈ ಮೊದಲು 3.83% ರಷ್ಟು ನೀಡುತ್ತಿದ್ದು, ಈಗ ಅದನ್ನು 0.3% ರಷ್ಟು ಏಕೆ ಜಾಸ್ತಿ

ಮಾಡಿದರು. 2016 ನೇ ಇಸ್ವಿಯಲ್ಲಿ ನಮ್ಮದು ಒಟ್ಟು 32% ರಷ್ಟು ಪಾಲು ಇದ್ದ ಸಂದರ್ಭದಲ್ಲಿ ಶ್ರೀ ನರೇಂದ್ರ ಮೋದಿ ರವರು ಅದನ್ನು 42% ರಷ್ಟು ನೀಡಿದ್ದು, ಹೀಗೆ ನಮ್ಮ ರಾಜ್ಯದ ಪಾಲು ಹೇಗೆ ಜಾಸ್ತಿಯಾಯಿತು? ಅದೇ ರೀತಿಯಾಗಿ ದೇಶದ ಎಲ್ಲಾ ರಾಜ್ಯಗಳಿಗೆ ಅವರ ಪಾಲಿನಲ್ಲಿ ಜಾಸ್ತಿಯಾಯಿತು. ಈಗ 4.13% ರಷ್ಟು tax devolution ನಲ್ಲಿ ನಮಗೆ share ಸಿಗುತ್ತದೆ. ಕೇಂದ್ರ ಸರ್ಕಾರದಿಂದ 66 ಸಾವಿರ ಕೋಟಿ ರೂಪಾಯಿಗಳನ್ನು ನಿರೀಕ್ಷೆ ಮಾಡಲಾಗುತ್ತಿದೆ ಎಂದು ಈ ಸಾಲಿನ ಆಯವ್ಯಯದಲ್ಲಿ ತಿಳಿಸಿದ್ದಾರೆ. ಕಳೆದ ಬಾರಿ ಏನು ಬಂದಿತ್ತೋ, ಅದು ಈ ಬಾರಿಯೂ ಬಂದಿದೆ ಎಂದು ತಿಳಿಸಿದ್ದಾರೆ. ಇದನ್ನೇ ನಾವು ನಿರೀಕ್ಷೆ ಮಾಡುತ್ತಿದ್ದೇವೆ ಎಂಬುದಾಗಿಯೂ ಸಹ ತಿಳಿಸಿರುತ್ತಾರೆ. ಕೇಂದ್ರ ಸರ್ಕಾರವು ಕೇವಲ tax devolution ಒಂದರಲ್ಲಿಯೇ ಮಾತ್ರವೇ ನಮಗೆ ಹಣ ನೀಡುವುದಿಲ್ಲ. ರಾಜ್ಯದಲ್ಲಿ ಯಾವ ಯಾವ ರೀತಿಯ ಅಭಿವೃದ್ಧಿ ಕೆಲಸಗಳಾಗಿವೆ ಎಂಬುದರ ಬಗ್ಗೆ ಒಂದು ಬಾರಿ ಯೋಚನೆ ಮಾಡಿದರೆ, ಪ್ರತಿ ಇಲಾಖೆಯಲ್ಲಿಯೂ ಸಹ ಕೇಂದ್ರ ಸರ್ಕಾರದಿಂದ ಹಣ ಬಂದಿದೆ. ಇವತ್ತಿನ ದಿವಸ ಈ ಕೇಂದ್ರ ಸರ್ಕಾರದ ಯೋಜನೆಗಳು ನಮಗೆ …., ಇವತ್ತಿನ ದಿವಸ ರಾಜ್ಯ ಸರ್ಕಾರವು ಕೇಂದ್ರದ VB–G RAM G [Viksit Bharat – Guarantee for Rozgar and Ajeevika Mission (Gramin)] ಕಾಯ್ದೆಯನ್ನು ವಿರೋಧಿಸಿ, ವಾಪಸ್ಸು ಕಳುಹಿಸಿದರು. ಅವತ್ತಿನ ದಿವಸ ನಮಗೆ ಯಾರಿಗೂ ಸಹ ಮಾತನಾಡುವುದಕ್ಕೆ ಅವಕಾಶವನ್ನೇ ನೀಡಲಿಲ್ಲ. ಆಗ ಸುಮ್ಮನೆ ವಿಶೇಷ ಅಧಿವೇಶನ ಎಂದು ಮಾತ್ರ ಕರೆದರು. ಇದು ಎಂತಹ ಅದ್ಭುತವಾದ ಯೋಜನೆಯಾಗಿದೆ. ನರೇಗಾ ಯೋಜನೆಯಿಂದ ಅದು ಹೇಗೆ ಅಪ್‌ಗ್ರೇಡ್ ಆಯಿತು? ಇದರಿಂದ ಆಗುವ ಅನುಕೂಲಗಳ ಬಗ್ಗೆ ನಾವು ಮಾತನಾಡುವವರಿದ್ದೇವು. ಆದರೆ, ಅದನ್ನು ಬಿಟ್ಟು, ಇವರು ಸುಮ್ಮನೆ ಅದನ್ನು ವಿರೋಧಿಸಿದರು. ದೇಶದಲ್ಲಿ ಇಡೀ ಕಾಂಗ್ರೆಸ್ಸಿನವರು ಬಿ.ಜೆ.ಪಿ. ಯ ವಿರುದ್ಧ ಏನೇ, ಯಾವುದೇ ವಿರೋಧ ಮಾಡಿದರೂ ಕೂಡ ಅದನ್ನು ಯಾರೂ ನಂಬುತ್ತಿಲ್ಲ; ಒಪ್ಪುತ್ತಿಲ್ಲ. ಯಾವುದೇ ಒಂದು ಒಳ್ಳೆಯ ಯೋಜನೆ ಬಂದಾಗ ಅದರಿಂದ ಜನಕ್ಕೆ ಏನಾದರೂ ನಕಾರಾತ್ಮಕವಾಗಿ ಆಗುವುದಾದರೆ, ಅದನ್ನು ವಿರೋಧಿಸಬೇಕು. ಇವತ್ತಿನ ದಿವಸ ರಾಜ್ಯ ಸರ್ಕಾರವು ಮಂಡನೆ ಮಾಡಿರುವ ಆಯವ್ಯಯದಲ್ಲಿ ನರೇಗಾ ಅಥವಾ ವಿಬಿ–ಜಿ ರಾಮ್ ಜಿ ಗಾಗಿ ಯೋಜನೆಗಳಿಗಾಗಲೀ ಯಾವುದೇ ರೀತಿಯ ಅನುದಾನವನ್ನು ಮೀಸಲಿಟ್ಟಿಲ್ಲ. ಪಾಪ! ಅವರುಗಳೆಲ್ಲಾ ಕಾರ್ಡ್‌ಗಳನ್ನು ಇಟ್ಟುಕೊಂಡು ಕಾಯುತ್ತಿದ್ದಾರೆ. ಮುಂಬರುವ ಏಪ್ರಿಲ್ 1ನೇ ತಾರೀಖಿನಿಂದ ನರೇಗಾ ಯೋಜನೆಯು ಜಾರಿಯಲ್ಲಿ ಇರುವುದಿಲ್ಲ. ಹೀಗಾಗಿ ಅವರುಗಳಿಗೆ ನೀಡುವುದಿಲ್ಲ. ವಿಬಿ–ಜಿ ರಾಮ್ ಜಿ ಯೋಜನೆಯನ್ನು ಇವರು ಒಪ್ಪಿಲ್ಲ. ನಾಳೆಯಿಂದ ಇವರುಗಳ ಸ್ಥಿತಿ ಏನು? ಇವತ್ತಿನ ದಿವಸ ನಮ್ಮ ರಾಜ್ಯದ ಪಾಲು 40% ರಷ್ಟಾಗಿದೆ ಎನ್ನುವ ಒಂದೇ ಕಾರಣಕ್ಕಾಗಿ…., 6,000 ಕೋಟಿ ರೂಪಾಯಿಗಳು ಕಡಿಮೆ ಮೊತ್ತವೇನಲ್ಲ; ಇಷ್ಟು ಹಣವನ್ನು ಇವರು ಮೀಸಲಿಡಬೇಕಾಗಿತ್ತು. ಆದರೆ ಇಷ್ಟು ಹಣವನ್ನು ಇವರು ಎಲ್ಲಿ ಹಾಗೂ ಯಾವ ಲೆಕ್ಕ ಶೀರ್ಷಿಕೆಯಡಿ ಮೀಸಲಿಟ್ಟಿದ್ದಾರೆ? ಇದು ಕಡಿಮೆ ಮೊತ್ತವೇನಲ್ಲ. ಇದರ ಬಗ್ಗೆಯೂ ಸಹ ಆಯವ್ಯಯದಲ್ಲಿ ಹೇಳಿಲ್ಲ ಇವರಿಗೆ ವಿಬಿ–ಜಿ ರಾಮ್ ಜಿ ಯೋಜನೆಯು ಏಕೆ ಬೇಡ ಹಾಗೂ ನರೇಗಾ ಯೋಜನೆಯೇ ಏಕೆ ಬೇಕು ಎಂದು ನಾನು ಪ್ರಶ್ನಿಸಬಯಸುತ್ತೇನೆ.

ಇದೇ ವಿಷಯವನ್ನು ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು ನಿಯಮ-330 ರಡಿ ಪ್ರಸ್ತಾಪಿಸುವವನಿದ್ದೇನೆ. ಇದರ ಬಗ್ಗೆ ನಾನು ಶೃಂಗೇರಿಯ ಸಂಬಂಧಿತ ಒಂದು ಉದಾಹರಣೆಯನ್ನು ಹೇಳಲಿಚ್ಛಿಸುತ್ತೇನೆ. ಇವತ್ತಿನ ದಿವಸ ಕೇಂದ್ರ ಸರ್ಕಾರವು ಎಷ್ಟರಮಟ್ಟಿಗೆ ಪಾರದರ್ಶಕತೆಯನ್ನು ಜಾರಿಗೆ ತರುತ್ತಿದ್ದರೂ ರಾಜ್ಯ ಸರ್ಕಾರವು ಪಾರದರ್ಶಕತೆಯನ್ನು ಏಕೆ ಬೇಡವೆಂದು ಹೇಳುತ್ತಿದೆ? ನರೇಗಾ ಯೋಜನೆಯಡಿ ಇಡೀ ರಾಜ್ಯದಲ್ಲಿಯೇ ಹಗರಣ ಆಗಿದ್ದು, ಇದು ಇಡೀ ರಾಜ್ಯದಲ್ಲಿಯೇ ಆಗಿರುವ ಅತ್ಯಂತ ದೊಡ್ಡ ಹಗರಣವಾಗಿದೆ. ಇಲ್ಲಿ ಕೇವಲ ಒಂದು ಕಡೆ ಮಾತ್ರವೇ ನಮಗೆ ಸ್ಯಾಂಪಲ್ ದೊರೆತಿದೆ. ಇಲ್ಲಿನ ವ್ಯವಸ್ಥೆ ಹೇಗೆ ಇದೆ ಎಂದರೆ, ನರೇಗಾ ಯೋಜನೆಯಡಿ ಸಾಕಷ್ಟು ಜಲ್ ಜೀವನ್ ಮಿಷನ್‌ನ ಕೆಲಸಗಳು ನಡೆಯುತ್ತವೆ. ಅಲ್ಲಿನ ಹಗರಣವನ್ನು ನೋಡುತ್ತಿದ್ದರೆ, ಇದನ್ನು ಜಲ್ ಜೀವನ್ ಮಿಷನ್ ಎಂಬುದಾಗಿ ಅಲ್ಲ; ಜಲ್ ಜೀವನ್ ಕಮಿಷನ್ ಎಂಬುದಾಗಿ ಕರೆಯಬೇಕಾಗುತ್ತದೆ. ಈಗ ಇದು ಜೆ.ಜೆ.ಸಿ. ಎಂಬುದಾಗಿ ಆಗಿದೆ. ಇ-ಸ್ಟ್ಯಾಂಪು ಎಂಬುದಾಗಿ ಮಾಡುತ್ತಾರೆ. ಇದರಲ್ಲಾದ ತೆಲಗಿ ಹಗರಣವನ್ನೆಲ್ಲಾ ನಾವುಗಳು ನೋಡಿದ್ದೇವೆ. ಆ ಸಂದರ್ಭದಲ್ಲಾದ ಹಗರಣವನ್ನು ಪರಿಶೀಲಿಸಿದ ಸರ್ಕಾರವು, ಮತ್ತೆ ನಾನಾ ರೀತಿಯ ಬದಲಾವಣೆಗಳನ್ನು ಮಾಡಿ, ಈಗ ಕ್ಯೂಆರ್ ಕೋಡ್‌ನ ಮುಖಾಂತರ ನಮಗೆ ಇ-ಸ್ಟ್ಯಾಂಪು ನೀಡುತ್ತಾರೆ ಹಾಗೂ ಇದಕ್ಕೆ ಸರ್ಟಿಫಿಕೇಟ್ ನಂಬರ್ ಅನ್ನೂ ಸಹ ನೀಡುತ್ತಾರೆ. ಹೀಗೆ ನೀಡಲಾಗುವ ಇ-ಸ್ಟ್ಯಾಂಪಿನ ಬಗ್ಗೆ ನಾವು ಶೃಂಗೇರಿ ತಾಲ್ಲೂಕಿನಲ್ಲಿ ಚೆಕ್ ಮಾಡಿದಾಗ.... ಇ-ಸ್ಟ್ಯಾಂಪ್ ಎಂಬ ಒಂದು ತಂತ್ರಾಂಶವಿದ್ದು, ಇದರಲ್ಲಿ ಆ ಸರ್ಟಿಫೀಕೇಟಿನ ನಂಬರ್ ಅಥವಾ ಅದರ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ಹಾಕಿದರೆ, ಅದು existence ನಲ್ಲಿಯೇ ಇಲ್ಲ ಎಂಬುದಾಗಿ ತೋರಿಸುತ್ತದೆ. ಈ ರೀತಿಯ ಹಗರಣಗಳಾಗಿವೆ. ಒಂದೇ ಸರ್ಟಿಫೀಕೇಟ್ ನಂಬರಿಗೆ ಇವರುಗಳು ಎಷ್ಟೆಷ್ಟು ಅಗ್ರೀಮೆಂಟ್‌ಗಳನ್ನು ಮಾಡಿಕೊಂಡಿದ್ದಾರೆ ಎಂದರೆ, ಒಂದೊಂದು ಸರ್ಟಿಫೀಕೇಟ್ ನಂಬರಿಗೆ 9 ಬೇರೆ-ಬೇರೆ ಅಗ್ರೀಮೆಂಟ್‌ಗಳನ್ನು ಮಾಡಿಕೊಂಡಿದ್ದಾರೆ. ಆದರೆ ಇಲ್ಲಿ ಎಲ್ಲವನ್ನೂ ಬೇರೆ ಬೇರೆಯಾಗಿ ಹಾಕಬೇಕು. ಇದು ಹೋಗಲಿ ಎಂದರೆ, ಇವರು ಬೋರ್‌ವೆಲ್‌ಗಳನ್ನೂ ಸಹ ಕೊರೆಸಿದ್ದಾರೆ.

(ಮುಂದು)

(324)11-03-2026/5-30/bkp-md **(ವೈಸ್ ಛೇರ್ಮನ್ ರವರ ಉಪಸ್ಥಿತಿ)**

**ಶ್ರೀ ಡಿ.ಎಸ್.ಅರುಣ್ (ಮುಂದು)**

ಆ ಬೋರ್‌ವೆಲ್‌ಗಳನ್ನು ಒಂದು ಬಾರಿ ಚೆಕ್ ಮಾಡಲಿಕ್ಕೆ ಅರ್ಜಿಯನ್ನು ಆರ್.ಟಿ.ಐ ನಲ್ಲಿ ಹಾಕಬೇಕೆಂದರೆ ಹಣವನ್ನು ಕಟ್ಟಬೇಕು, ಇದರ ಬಗ್ಗೆ ಕೆಲವು ಕಡೆ ಚೆಕ್ ಮಾಡಬೇಕೆಂದು ಹೇಳಿ ನಮ್ಮ ಮಾಜಿ ಶಾಸಕರಾದ ಶ್ರೀಮಾನ್ ಜೀವರಾಜ್ ರವರು ಸುಮಾರು 10 ಕಡೆ ಬೋರ್‌ವೆಲ್‌ಗಳನ್ನು ಚೆಕ್ ಮಾಡಿಸಿದರು. ಅಲ್ಲಿ ಕೆಲವು ಕಡೆ 587 ಅಡಿಗೆ ಬಿಲ್ ಆಗುತ್ತದೆ, ಅದನ್ನು ಕ್ಯಾಮರಾ ಇಟ್ಟು ಚೆಕ್ ಮಾಡಿಸಿದ್ದಾರೆ. ಅದು 228 ಅಡಿ

ಮಾತ್ರ ಇದೆ. ಈ ರೀತಿಯಲ್ಲಿ 14 ಕಡೆಗಳಲ್ಲಿ ನೋಡಿದಾಗ ಸುಮಾರು 50%, 30%, 60% ಇಷ್ಟು ಮಾತ್ರ ಸಿಗುತ್ತದೆ. ಇದಕ್ಕೆ ಇವರಿಗೆ ಜೆಜೆಎಂ. ನರೇಗಾ, ವಿಬಿ ಜಿ-ರಾಂ-ಜಿ ಇವರಿಗೆ ಬೇಡ, ಇವರಿಗೆ ಪಾರದರ್ಶಕತೆ ಬೇಡ, ನಮಗೆ ಹೀಗೆಯೇ ಇರಬೇಕು, ನಮಗೆ ಏನೇನು ಹಗರಣಗಳಾಗಬೇಕೋ, ನಮಗೆ ಏನೇನು ಮಾಡಲಿಕ್ಕೆ ಸಾಧ್ಯವಿದೆಯೋ ಅದನ್ನು ಮಾಡುವಂತಹದ್ದಾಗಿದೆ. ಈ ರೀತಿಯಾದಂತಹ ಕೆಲಸಗಳನ್ನು ಮಾಡುತ್ತಾರೆ. ಕೇಂದ್ರ ಸರ್ಕಾರ ಯಾವುದೇ ಯೋಜನೆಗಳನ್ನು ತಂದರೂ ಸಹ ಅದನ್ನು ವಿರೋಧ ಮಾಡುವುದೇ ಆಗಿರುತ್ತದೆ. ಏಕೆಂದರೆ, ನಮ್ಮ ಬೇಳೆಯನ್ನು ಬೆಯಿಸಿಕೊಳ್ಳಲಿಕ್ಕೆ ಆಗುವುದಿಲ್ಲ, ನನಗೆ ದುಡ್ಡು ಬರುವುದಿಲ್ಲ ಎನ್ನುವ ರೀತಿಯಲ್ಲಿ ಇವರು ಹೇಳುವುದಾಗಿದೆ. ನಾವು ಕೇಂದ್ರ ಸರ್ಕಾರದಿಂದ ಇನ್ನು ಹೆಚ್ಚಿನ ನೆರವು ಕೇಳಬೇಕು. ಇದನ್ನು ಕೇಳಬೇಕೆಂದರೆ ಒಂದು ಮನಸ್ಥಿತಿ ಇರಬೇಕು. ಪ್ರಧಾನ ಮಂತ್ರಿಗಳಿಗೆ ಏಕವಚನದಲ್ಲಿ ಬೈಯ್ದರೆ ಯಾರು ಒಪ್ಪುತ್ತಾರೆ? ನಮ್ಮ ಹಣಕಾಸು ಸಚಿವರಿಗೆ ಬಾಯಿಗೆ ಬಂದ ರೀತಿಯಲ್ಲಿ ಮಾತನಾಡಿದರೆ ಯಾರು ಒಪ್ಪುತ್ತಾರೆ ಹೇಳಿ. ನಾನು ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಸಿಗಂದೂರ್‌ನಲ್ಲಿ ನಡೆಯಬೇಕಾದ ಕಾರ್ಯಕ್ರಮದಲ್ಲಿ ತಾವು ಸಹ ಇದ್ದೀರಿ. ಅದು ಸುಮಾರು 550 ಕೋಟಿ ರೂಪಾಯಿಗಳ ಸಿಗಂದೂರ್ ಸೇತುವೆ ಕಾಮಗಾರಿ ಕೆಲಸ. ಇದಕ್ಕೆ ಶ್ರೀಮಾನ್ ನಿತಿನ್ ಗಟ್ಕರಿಯವರು, ಶ್ರೀಮಾನ್ ಬಿ.ಎಸ್.ಯಡಿಯೂರಪ್ಪನವರು ಮತ್ತು ಸಂಸದರಾದ ಶ್ರೀಮಾನ್ ಬಿ.ವೈ ರಾಘವೇಂದ್ರವರು ಸೇರಿಕೊಂಡು ಬಹಳ ಕಷ್ಟಪಟ್ಟು ಆ ಸೇತುವೆಯನ್ನು ಉದ್ಘಾಟನೆಯನ್ನು ಮಾಡುತ್ತಾರೆ. ಇದು ಕೇಂದ್ರ ಸರ್ಕಾರದಿಂದ ಬಂದಂತಹ ದುಡ್ಡು ಆಗಿತ್ತು. ಅದಕ್ಕೆ ಬೇಕಾಗಿರುವಂತಹ ಪೂರ್ಣವಾದ ಸಹಕಾರವನ್ನು ರಾಜ್ಯ ಸರ್ಕಾರವೇ ಕೊಟ್ಟಿರುವುದಾಗಿದೆ. ಬೇರೆ ಬೇರೆ ಕಾರಣಗಳಿಗೋಸ್ಕರ ಅದನ್ನು ಬೇಗ ಉದ್ಘಾಟನೆ ಮಾಡಬೇಕೆಂದು ಹೇಳಿದರೆ ಅದಕ್ಕೆ ಸಹಕಾರ ಸಿಗಲಿಲ್ಲ. ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀಮಾನ್ ಸತೀಶ್ ಜಾರಕಿಹೊಳಿ ರವರು ಈಗ ಸದನದಲ್ಲಿ ಇರುವುದಿಲ್ಲ. ಅವರು ಕಾರ್ಯಕ್ರಮದ ಹಿಂದಿನ ದಿನ ಬಂದಿದ್ದರು. ನಾವುಗಳು ಅವರನ್ನು ಭೇಟಿ ಮಾಡಿದ್ದೆವು. ಮರುದಿನ ಇಲ್ಲಿಂದ ಒಂದು ಸಂದೇಶ ಬರುತ್ತದೆ. ಇದು ಪೂರ್ತಿ ಬಿಜೆಪಿ ಕಾರ್ಯಕ್ರಮವಾಗಿದೆ, ನೀವುಗಳು ಯಾರು ಹೋಗಬಾರದೆಂದು ಇಲ್ಲಿಂದ ಸಂದೇಶ ಬರುತ್ತದೆ. ಮಾನ್ಯ ಸತೀಶ್ ಜಾರಕಿಹೊಳಿಯವರು ನಿನ್ನೆಯ ದಿವಸ ರಾತ್ರಿ ಅಲ್ಲಿಯೇ ದಂಗಿದ್ದರು, ಬೆಳಗ್ಗೆ ಸಾಗರದಲ್ಲಿದ್ದರು, ಬೆಳಗ್ಗೆ 8 ಗಂಟೆಯ ಅಷ್ಟೊತ್ತಿಗೆ ಅವರನ್ನು ವಾಪಸ್ ಹೋಗಿ ಎನ್ನುತ್ತಾರೆ. ಮಾನ್ಯ ಕೇಂದ್ರ ಸಚಿವರಾದ ಶ್ರೀಮಾನ್ ನಿತಿನ್ ಗಡ್ಕರಿಯವರು ಈ ಒಂದು ಕಾರ್ಯಕ್ರಮಕ್ಕೆ ಬರುತ್ತಾರೆ. ಬಂದು ನೋಡಿದರೆ, ಈ ವಿಷಯ ಎಲ್ಲಿಯತನಕ ಹೋಯಿತು ಎಂದರೆ, ಅಲ್ಲಿಗೆ ಯಾರು ಯಾರು ಮುಖ್ಯ ಅತಿಥಿಗಳಾಗಿ ಬರಬೇಕೆಂದು ಆಹ್ವಾನ ಮಾಡಿದ್ದೆವು, ಅವರುಗಳಿಗೆಲ್ಲಾ ತಂದಿದ್ದಂತಹ ಹೂವಿನ ಹಾರ-ಶಾಲುಗಳನ್ನು ಸಹ ರಾಜ್ಯ ಸರ್ಕಾರದವರು ತೆಗೆದುಕೊಂಡು ಹೋಗಿದ್ದಾರೆ. ಏಕೆಂದರೆ, ಶ್ರೀಮಾನ್ ನಿತಿನ್ ಗಡ್ಕರಿಯವರನ್ನು ಅವಮಾನ ಮಾಡಲಿಕ್ಕೋಸ್ಕರ. ಈ ರೀತಿಯ ಅವಮಾನಗಳನ್ನು ನಮ್ಮ ಕೇಂದ್ರ ಆರ್ಥಿಕ ಸಚಿವರಾದ ಶ್ರೀಮಾನ್ ನಿತಿನ್ ಗಡ್ಕರಿಯವರಿಗೆ ಮತ್ತು ನಮ್ಮ ಪ್ರಧಾನ ಮಂತ್ರಿಗಳಿಗೆ ಮಾಡಿದರೆ ಇವರ ಯೋಜನೆಗಳಿಗೆ ಯಾರು ದುಡ್ಡು

ಕೊಡುತ್ತಾರೆ. ನಮ್ಮದು ಏನಾದರೂ ಇದ್ದರೆ ಇಲ್ಲಿ ನಾವುಗಳು ರಾಜಕಾರಣ ಮಾಡೋಣ. ಆದರೆ, ಅಭಿವೃದ್ಧಿ ವಿಷಯ ಬಂದಾಗ ಸಾಮಾನ್ಯ ಮನುಷ್ಯನಿಗೆ ಬೇಕಾಗಿರುವಂತಹ ಮೂಲಭೂತ ಸೌಕರ್ಯಗಳನ್ನು ಕೊಡಬೇಕಾದರೆ ನಾವು ಸರಿಯಾದಂತಹ ರೀತಿಯಲ್ಲಿ ನಮ್ಮ ಪ್ರಸ್ತಾವನೆಗಳನ್ನು ಕೇಳಬೇಕಾಗುತ್ತದೆ. ಆ ಒಂದು ಕೆಲಸವನ್ನು ಮಾಡುವುದಿಲ್ಲ. ಇಲ್ಲಿ ಕುಳಿತುಕೊಂಡು ಅದು ಬಂದಿಲ್ಲ, ಇದು ಬಂದಿಲ್ಲ ಎಂದು ಹೇಳುವುದನ್ನು ನಿರಂತರವಾಗಿ ಮಾಡುವುದು ಕಾಂಗ್ರೆಸ್‌ನ ಸಂಪ್ರದಾಯವಾಗಿದೆ. ನಾನು ಇತ್ತೀಚೆಗೆ ಹೈದ್ರಾಬಾದ್‌ನಲ್ಲಿ ನಡೆದಂತಹ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆ. ಅಲ್ಲಿಗೆ ಹೋದಾಗ ನಮ್ಮ ಸಮಾಜದವರು ಅಕ್ಕಪಕ್ಕದ ರಾಜ್ಯಗಳಲ್ಲಿ ಯಾರು ಯಾರು ಇದ್ದಾರೆಂದು ಗಮನಿಸಿದಾಗ ಕರ್ನಾಟಕದಿಂದ ನಾನು ಇದ್ದೆ, ತಮಿಳುನಾಡಿನಿಂದ ರಾಜಕಾರಣದಲ್ಲಿ ಇರುವಂತಹ ಒಬ್ಬರು ಅಲ್ಲಿಗೆ ಬಂದಿದ್ದರು. ಅದೇ ರೀತಿಯಲ್ಲಿ ಆಂಧ್ರಪ್ರದೇಶದ ಮಂತ್ರಿಗಳಾದಂತಹ ಅವರು ಶ್ರೀ ಟಿ.ಜಿ. ವೆಂಕಟೇಶ್‌ರವರ ಮಗ ಶ್ರೀಮಾನ್ ಭರತ್, ಕೈಗಾರಿಕಾ ಸಚಿವರು ಅವರು ಕೂಡ ನಮ್ಮ ಸಮಾಜದವರಾಗಿದ್ದು, ಅವರು ಸಹ ಬಂದಿದ್ದರು. ಮತ್ತೆ, ತೆಲಾಂಗಣದಿಂದಲೂ ಸಹ ಕೆಲವರು ಬಂದಿದ್ದರು. ಈ ರೀತಿಯಲ್ಲಿ ಇರುವಾಗ ಶ್ರೀಮಾನ್ ಭರತ್‌ರವರು ಭಾಷಣ ಮಾಡುವಾಗ ಏನು ಹೇಳಿದರು ಎಂದರೆ, ಇಲ್ಲಿ ಕುಳಿತಿರುವವರಲ್ಲಿ ಸುಮಾರು ಜನ Investors, Big Entrepreneurs, Industrialists ಇದ್ದೀರಿ, ನೀವುಗಳು ನಮ್ಮ ರಾಜ್ಯಕ್ಕೆ ಬನ್ನಿ, ನನ್ನ ಪೋನ್ ನಂಬರ್ ತೆಗೆದುಕೊಳ್ಳಿ. ನಂಬರ್ ತೆಗೆದುಕೊಂಡು ರಾತ್ರಿ ಎಷ್ಟೊತ್ತಾದರೂ ಪರವಾಗಿಲ್ಲ, ನನಗೆ ಪೋನ್ ಮಾಡಿ. ನಿಮಗೆ ಯಾವ ಒಂದು ಜಾಗ ಬೇಕು, ನೀವು ಏನಾದರೂ investment ಮಾಡುತ್ತೀರಾ, Manufacturing Industry, Service Industry ಹಾಕುತ್ತೀರಾ, ಎಂದು ಹೇಳಿದರೆ ನಮ್ಮ ಜಾಗದಲ್ಲಿ ನಿಮಗೆ ಇದಕ್ಕೆ ಅವಕಾಶ ಕೊಡುವುದಕ್ಕೆ ಯಾವುದೇ ಅಡಚಣೆಗಳಿಲ್ಲದೆ, Single Window System ಇದೆ, 24 ಗಂಟೆಗಳಲ್ಲಿ NOC (No Objection Certificate) ಮಾಡಿಕೊಡುತ್ತೇವೆಂದು ಹೇಳಿದರು. ಇದನ್ನು ಮಾಡಲಿಕ್ಕೆ ನಮ್ಮ ರಾಜ್ಯದಲ್ಲಿ ಇವರಿಗೆ ತಾಕತ್ತು ಇದೆಯೇ, ಧೈರ್ಯ ಇದೆಯೇ ಎಂದು ಕೇಳಲಿಕ್ಕೆ ಬಯಸುತ್ತೇನೆ. ಇಲ್ಲಿಗೆ ಈಗಾಗಲೇ ಬಂದಿರುವವರು ಓಡಿ ಹೋಗುತ್ತಿದ್ದಾರೆ. ನಾವೆಲ್ಲರೂ ಏನು ತಿಳಿದುಕೊಂಡಿದ್ದೇವೆಂದರೆ, ನಮ್ಮಿಂದಲೇ ಬೆಂಗಳೂರು ಬೆಳೆಯುತ್ತಿದೆ ಎಂದು ತಿಳಿದುಕೊಂಡಿದ್ದೇವೆ. ಖಂಡಿತವಾಗಿಯೂ ಇಲ್ಲ. ನೀವು ನಿಜವಾಗಿಯೂ ಯೋಚನೆ ಮಾಡಬೇಕೆಂದಿದ್ದರೆ, Beyond Bengaluru ಇವತ್ತು ಯೋಚನೆ ಮಾಡಬೇಕಾಗಿತ್ತು. ನೀವು ಎಲ್ಲಿ ಮಾಡಿದ್ದೀರಿ? ಒಂದೊಂದು ಕಡೆ KIADB (Karnataka Industrial Area Development Board) ನಲ್ಲಿರುವ ಎಲ್ಲಾ ಲ್ಯಾಂಡ್‌ಗಳು ಇವರದ್ದೇ ಆಗಿರುತ್ತದೆ. ಆ ಒಂದು ಸ್ಥಿತಿಗಳು ಇವತ್ತು ಕರ್ನಾಟಕ ರಾಜ್ಯದಲ್ಲಿ ಆಗುತ್ತಿದೆ ಎಂದರೆ ಇವರೇ ಕಾರಣ ಆಗಿರುತ್ತಾರೆ. ಯಾರು ಯಾರು Investors ಇಲ್ಲಿಗೆ ಬಂದು ವಾಪಸ್ಸು ಹೋಗಿದ್ದಾರೆ. ಈ ವಿಚಾರದಲ್ಲಿ ಹಲವಾರು ಉದಾಹರಣೆಗಳು ಕಂಡು ಬರುತ್ತವೆ. ಹಾಗಾಗಿ, ಇವರು ಇವತ್ತು ಮಾಡುತ್ತಿರುವಂತಹ ಒಂದೊಂದು ಕೆಲಸವೂ ಸಹ ಮುಂದೆ ಒಂದು ದಿವಸ ಇಲ್ಲಿ ಇರುವಂತಹ ಮುಂದಿನ ಪೀಳಿಗೆ ತೊಂದರೆಯಾಗುತ್ತದೆ. ನಮ್ಮದು ಸಿಕ್ಕಾಪಟ್ಟೆ ತೆರಿಗೆ ಬರುತ್ತಿದೆ ಎಂದು ನಮಗೆ ಅನಿಸಿಬಿಟ್ಟಿದೆ. Service Sector, Manufacturing

Industries ಯಿಂದ ತೆರಿಗೆ ಬರುವಂತಹದ್ದು ನಮ್ಮದು ದೊಡ್ಡ ಕೊಡುಗೆ ಏನಿಲ್ಲ, ನಮ್ಮ ರಾಜ್ಯದಲ್ಲಿರುವಂತಹ ಹಲವಾರು ಐ.ಟಿ. ಕಂಪನಿಗಳು ಮತ್ತು ಅವರ ಬ್ರಾಂಚ್‌ಗಳು ಇಡೀ ಪ್ರಪಂಚದಾದ್ಯಂತ ಇರುವುದರಿಂದ, ಕೊನೆಗೆ ತೆರಿಗೆ ಇಲ್ಲಿಂದ ಸಂಗ್ರಹ ಆಗುವಂತಹದ್ದು ನಮ್ಮ ಕಣ್ಣು ಮುಂದೆ ಕಾಣುತ್ತಿದೆ. ನಾವು ನಮ್ಮ Investors ಗಳಿಗೆ ಒಂದು Eco System ಅನ್ನು ಸಿದ್ಧ ಮಾಡಲಿಲ್ಲ, ಇಲ್ಲಿ ಬಂದಂತಹ ಹಲವಾರು ಜನರಿಗೆ, ನಾವು Beyond Bengaluru ಗೆ ನಾವು ಏನಾದರೂ ಒತ್ತಡ ಹಾಕಲಿಲ್ಲ ವೆಂದರೆ ನಮ್ಮ ರಾಜ್ಯದ ಸ್ಥಿತಿಗೆ ಅನಾಹುತವಾಗುತ್ತದೆ. ನಾವು ಒಂದೇ ಒಂದು ಊರಿನ ಮೇಲೆ ಅವಲಂಬಿತರಾಗುತ್ತಿದೆ. Beyond Bengaluru ಕಲ್ಪನೆಯನ್ನು ಸಹ ಮಾಡಲಿಲ್ಲ. ಹಿಂದೆ ಶ್ರೀಮಾನ್ ಬಿ.ಎಸ್. ಯಡಿಯೂರಪ್ಪನವರು ಮಾಡಿದಂತಹ ನಾವು ಹಲವಾರು ಅಭಿವೃದ್ಧಿ ಕೆಲಸಗಳನ್ನು ಬೇರೆ ಬೇರೆ ಊರುಗಳಲ್ಲಿ ಮಾಡಿದ್ದರು. ಶಿವಮೊಗ್ಗ ಅಂತಹ ಊರುಗಳಲ್ಲಿ ಎಷ್ಟು ಜನಕ್ಕೆ ವಾಪಸ್ಸು ಹೋಗುವಂತಹ ಬೇರೆ ಬೇರೆ ಭಾಗದಲ್ಲಿ ಅವಕಾಶಗಳು ಸಿಕ್ಕಿವೆ. ಉದ್ಯೋಗಾವಕಾಶಗಳು ಸಿಕ್ಕಿದೆ? ಯಾವಾಗ ಅಭಿವೃದ್ಧಿಯಾಗುತ್ತದೆ, ಆಗ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ ಎನ್ನುವ ಒಂದು ಸಾಮಾನ್ಯ ಜ್ಞಾನ ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಗೊತ್ತಾಗಲಿಲ್ಲವೇ? ಎನ್ನುವ ವಿಚಾರವನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಹಾಗಾಗಿ, ಇವತ್ತಿನ ದಿವಸ ಹಲವಾರು ಕೆಲಸಗಳನ್ನು ರಾಜ್ಯದ ಜನರು ಅಪೇಕ್ಷೆ ಪಡುತ್ತಿದ್ದರು. ಏಕೆಂದರೆ, ಇವತ್ತು ನಾವು ಬೇರೆ ರಾಜ್ಯಗಳ ಬಗ್ಗೆ ಯೋಚನೆ ಮಾಡಿದರೆ ಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯದ ಸ್ಥಿತಿ ಅಂದರೆ, ಹಣಕಾಸಿನ ಸ್ಥಿತಿ ಇಲ್ಲಿನ ಜನರ ಮನಸ್ಥಿತಿ ಬಹಳಷ್ಟು ಚೆನ್ನಾಗಿದೆ. ಇದಕ್ಕೆ ಬೇಕಾಗಿರುವಂತಹದ್ದು ಏನೆಂದರೆ, ಈ ಸ್ಥಿತಿಗೆ ತಕ್ಕಹಾಗೆ ರಾಜ್ಯ ಸರ್ಕಾರಗಳು ಕೆಲಸ ಮಾಡಿದಾಗ ಮಾತ್ರ ಸಾಧ್ಯ. ಕೇಂದ್ರ ಸರ್ಕಾರ ಇವತ್ತು ಜಿ.ಎಸ್.ಟಿ.ಯನ್ನು ಸಹ ಕಡಿಮೆ ಮಾಡಿದೆ. ಯಾರಿಗೋಸ್ಕರ ಈ ಕೆಲಸ ಮಾಡಿತು. ಇದರಿಂದ ನಮ್ಮ ರಾಜ್ಯದ ಸಚಿವರುಗಳಿಗೆ ಏನು ಅನಿಸಿತು ಎಂದರೆ ನಾಳೆಯಿಂದ ನಮಗೆ ಬರಬೇಕಾಗಿರುವಂತಹ ದುಡ್ಡು ನಮಗೆ ಬರುವುದಿಲ್ಲ. ಹಾಗಾಗಿ, ನಮಗೆ ಕಷ್ಟವಾಗುತ್ತದೆ ಎಂದು ಹೇಳಿ ಅದಕ್ಕೂ ಸಹ ಇವರು ವಿರೋಧ ಮಾಡಿದರು. ಇದರಿಂದ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ ಎಂದು ಇವರು ಹೇಳುವುದಿಲ್ಲ. ಅದಕ್ಕೂ ಸಹ ಇವರು ವಿರೋಧ ಮಾಡುತ್ತಾರೆ. ಈ ರೀತಿಯಲ್ಲಿ ತೊಂದರೆಗಳನ್ನು ಮಾಡುತ್ತಾ ಹೋದರು. ನಿನ್ನೆ ಶ್ರೀಮಾನ್ ಕೆ.ಎಸ್. ನವೀನ್ ರವರು 11–ಜಿ ಬಗ್ಗೆ ನಮ್ಮ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ಹೇಳಿದಾಗ ಅವರು 11–ಸಿ ಬಗ್ಗೆ ಹೇಳಿದರು. ಆ ಸಂದರ್ಭದಲ್ಲಿ ಈ ವಿಚಾರವಾಗಿ ನಮಗೂ ಸಹ ಸುಮ್ಮನೆ ಕೂರಲಿಕ್ಕೆ ಆಗಲಿಲ್ಲ ಎನ್ನುವ ವಿಚಾರವನ್ನು ಶ್ರೀಮಾನ್ ರವಿಯವರ ಗಮನಕ್ಕೆ ತರುತ್ತಿದ್ದೇನೆ. ನಾವು 11–ಜಿಯಿಂದ ಇನ್ನು ಒಂದು ಹೆಜ್ಜೆ ಮುಂದೆ ಹೋಗೋಣವೆಂದು ಹೇಳಿ 11–ಹೆಚ್ ಗೆ ಹೋಗೋಣವೆಂದು ಅನಿಸಿತು. 'ಹೆಚ್ಚು' ಎಂದರೆ ಕನ್ನಡದಲ್ಲಿ ಅ ಎನ್ನುವುದನ್ನು ನಾನು ಸುಮ್ಮನೆ ನೋಡುತ್ತಾ ಹೋದೆ. ರಾಜ್ಯದಲ್ಲಿ ಈ ಸರ್ಕಾರ ಬಂದ ಮೇಲೆ ಆಗಿರತಕ್ಕಂತಹ 11–ಹೆಚ್. ಇಲ್ಲಿ 11–ಜಿಗೆ ಹೋಗುವುದು ಬೇಡ 11–ಹೆಚ್.ಗೆ ಹೋಗೋಣವೆಂದು ಹೇಳಿದಾಗ ಇಲ್ಲಿ 'ಹೆಚ್' ಅಂದರೆ ಹಗರಣಗಳು ಎನ್ನುವ ರೀತಿಯಲ್ಲಿ ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

**ವೈಸ್ ಛೇರ್ಮನ್:-** ನಿಮಗೆ ಮಾತನಾಡಲಿಕ್ಕೆ ಇನ್ನು ಎಷ್ಟು ಸಮಯ ಬೇಕು?

**ಶ್ರೀ ಡಿ.ಎಸ್. ಅರುಣ್:-** ಇನ್ನು ನನಗೆ 5-6 ನಿಮಿಷಗಳು ಬೇಕಾಗುತ್ತದೆ. 'ಹೆಚ್' ಬಗ್ಗೆ ನೋಡುತ್ತಾ ಹೋದಾಗ... ಶ್ರೀಯುತ ಐ.ಎಂ. ಸತೀಶ್ ರವರೆ ತಾವು ನಾನು ಹೇಳುವುದನ್ನು ಸಹ ನೀವು ಕೇಳಬೇಕು. ನೀವು ಬರಿ ಶ್ರೀಮಾನ್ ಕೆ.ಎಸ್.ನವೀನ್ ರವರು ಹೇಳುವುದನ್ನು ಮಾತ್ರ ಕೇಳುತ್ತೀರಿ. ಈ 'ಹೆಚ್' ಬಗ್ಗೆ ನಾನು ಸುಮ್ಮನೆ ಕುಳಿತುಕೊಂಡು ಬರೆಯುತ್ತಾ ಹೋದೆ. ಹಗರಣ, ಹಗರಣ, ಹಗರಣ ಈ ರೀತಿಯಲ್ಲಿ 11 ಹಗರಣಗಳ ಬಗ್ಗೆ ನಾನು ಸುಮ್ಮನೆ ಪಟ್ಟಿಯನ್ನು ನಾನು ಸಿದ್ಧ ಮಾಡಿದೆ. ಇದಕ್ಕೂ ಜಾಸ್ತಿ ಇವೆ. ಆದರೆ, ಶ್ರೀಮಾನ್ ಕೆ.ಎಸ್. ನವೀನ್‌ರವರು ಹೇಳಿದ್ದು 11 ಹಗರಣಗಳ ಬಗ್ಗೆ ಹೇಳಿದರು. ಇವುಗಳ ಜೊತೆಯಲ್ಲಿ ಇನ್ನು ಕೆಲವು ಹಗರಣಗಳನ್ನು ಸೇರಿಸಿಕೊಂಡು ನಾನು ಹೇಳುತ್ತೇನೆ. ಇವತ್ತಿನ ಸ್ಥಿತಿಗೂ ಮತ್ತು ಈಗ ಮಂಡಿಸಿರುವ ಬಜೆಟ್‌ಗೂ ಏತಕ್ಕೆ ಸಂಬಂಧ ಇದೆ ಎಂದರೆ ಇವೆಲ್ಲವುಗಳು ಬಜೆಟ್ ಮೇಲೆ ಆಧಾರಿತವಾದಂತಹ ಹಗರಣಗಳೇ ಆಗಿರುತ್ತವೆ. ಯಾವುದು ಎಂದರೆ ವಾಲ್ಮೀಕಿ ನಿಗಮಕ್ಕೆ ನೀವು ಹಣವನ್ನು ಕೊಡುತ್ತೀರಿ. ಅದು ಸಹ ನಿಮ್ಮ ಬಜೆಟ್‌ಗೆ ಸಿಮೀತವಾಗಿರುತ್ತದೆ. ಇದಕ್ಕೆ 187 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಅದರಲ್ಲಿ ಹಗರಣ. ಮೂಡ ಸೈಟ್‌ಗಳ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಈ ಹಗರಣದಿಂದ ಅಲ್ಲಿಂದ ಬರಬೇಕಾದ ತೆರಿಗೆ ಬರುತ್ತಿಲ್ಲ. ಮೂಡಾದಲ್ಲಿ 14 ಸೈಟ್‌ಗಳ ಹಗರಣ. SCSP-TSP (Scheduled Caste Sub Plan and Tribal Sub Plan) ಹಣ ದುರ್ಬಳಕೆಯ ಹಗರಣ, ಅಬಕಾರಿ ಇಲಾಖೆಯ ಬಗ್ಗೆ ನಾವು ಹೇಳುವುದೇ ಬೇಡ. ಅಲ್ಲಿ open bid ನಡೆಯುತ್ತಿದೆ. ಅದರ ಬಗ್ಗೆ ನಾವು ಏನು ಹೇಳಿದರೂ ಸಹ ಇಷ್ಟೊಂದು ಬಂಡತನ ಎಂದರೆ, ನಾವು ಹೀಗೆಯೇ ಇರುವುದು ಎಂದವರು ಹೇಳುತ್ತಾರೆ. ನೀವು ಕೈಗಾದರೂ ಹಣವನ್ನು ಕೊಡಿ, ಫೋನ್‌ನಲ್ಲಿಯಾದರೂ ಹೇಳಿ, ನಾವು ಒಪ್ಪುವುದಿಲ್ಲ. ನಮ್ಮದು ಹೀಗೆಯೇ ಇರುವುದು ಎಂದು ಹೇಳುತ್ತಾರೆ. ಏಕೆಂದರೆ, ಇಡೀ ಸರ್ಕಾರವೇ ಆ ಒಂದು ಸ್ಥಿತಿಯಲ್ಲಿದ್ದಾಗ ಯಾವುದೋ ಒಬ್ಬ ಮಂತ್ರಿಗೆ ನೀವು ಬಲಿಪಶು ಮಾಡುತ್ತೇವೆಂದು ಹೇಳಿದರೆ ಇನ್ನು 33 ಜನ ನಾಳೆ ಗಂಟುಮೂಟೆ ಕಟ್ಟಲಿಕ್ಕೆ ಸಿದ್ಧವಾಗಿರಬೇಕು.

(ಮುಂದು)

(325) 11.03.2026 05.40 ಎಸ್‌ವಿ-ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಡಿ.ಎಸ್.ಅರುಣ್ (ಮುಂದು):**

ಹಾಗಾಗಿ ಅಬಕಾರಿ ಇಲಾಖೆಯಲ್ಲಿ ಹಗರಣ. ಮಾನ್ಯ ನವೀನ್‌ರವರು, ಮಾನ್ಯ ರವಿಕುಮಾರ್‌ರವರು ಇಬ್ಬರೂ ಕಾರ್ಮಿಕ ಇಲಾಖೆಯಲ್ಲಿ ಯಾವ ಯಾವ ರೀತಿಯಲ್ಲಿ ಹಗರಣ ಆಗುತ್ತಿದೆ ಎಂಬುದನ್ನು ತೋರಿಸಿದರು. ಕಿಟ್ ಹಗರಣ. ವಕ್ಫ್ ಬೋರ್ಡ್ ವಿಷಯದಲ್ಲಿ ಇಡೀ ರಾಜ್ಯದಲ್ಲಿಯೇ ಬೆಂಕಿ ಹೊತ್ತಿಕೊಂಡಿತು. ವಕ್ಫ್ ಬೋರ್ಡ್‌ನಲ್ಲಿ

ಹಗರಣ. ಅದೇ ರೀತಿ ಎನ್.ಆರ್.ಇ.ಜಿ.ಎ.ನಲ್ಲಿ ಯಾವ ರೀತಿ ಹಗರಣ ಮಾಡಿದ್ದಾರೆ, ಜೆಜೆಎಂನಲ್ಲಿ ಯಾವ ರೀತಿ ಹಗರಣ ಮಾಡಿದ್ದಾರೆ ಎಂದು ನಾನು ಹೇಳಿದೆನು. ನಮ್ಮ ವಿಧಾನಸಭಾ ಸದಸ್ಯರಾದ ಮಾನ್ಯ ಮಹೇಶ್ ಟೆಂಗಿನಕಾಯಿಯವರು ಗೃಹಲಕ್ಷ್ಮಿ ಹಣದ ಬಗ್ಗೆ ಪ್ರಶ್ನೆಯನ್ನು ಕೇಳಿರಲಿಲ್ಲವೆಂದರೆ ರೂ.5,000 ಕೋಟಿ ಮಾಯ. ಅದೂ ಹಗರಣ. ಅದಾದ ಮೇಲೆ ಕೆ.ಪಿ.ಎಸ್.ಸಿಯಲ್ಲಿ ಹಗರಣ. ಇವುಗಳನ್ನು ಇಲ್ಲಿಯವರೆವಿಗೂ ಸರಿ ಮಾಡುವುದಕ್ಕಾಗಲಿಲ್ಲ. ಬೆಳಗ್ಗೆ ಮಾನ್ಯ ಪಶುಸಂಗೋಪನೆ ಸಚಿವರ ಬಳಿ ಅದನ್ನೇ ಕೇಳುತ್ತಿದ್ದೆವು. ಏಕೆಂದರೆ ಕೆ.ಪಿ.ಎಸ್.ಸಿಯವರ ಮೇಲೆ ನಮಗೆ ಹತೋಟಿಯೇ ಇಲ್ಲ. ಆ ಪ್ರಶ್ನೆಪತ್ರಿಕೆಯನ್ನು ಒಮ್ಮೆ ನೋಡಿದರೆ ಬೇಜಾರಾಗುತ್ತದೆ. ಚಾಟ್ ಜಿಪಿಟಿ, ಗೂಗಲ್ ಮೂಲಕ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವಂಥ ಪರೀಕ್ಷಾ ಕೇಂದ್ರಗಳ ಮೇಲೆ ನಮಗೆ ಕಂಟ್ರೋಲ್ ಇಲ್ಲ. ಹೀಗೆ ಕೆಪಿಎಸ್‌ಸಿಯಲ್ಲಿ ಹಗರಣ. ಸ್ಮಾರ್ಟ್ ಮೀಟರ್‌ಗಳಲ್ಲಿ ಹಗರಣ. ಅಷ್ಟು ಸ್ಮಾರ್ಟ್. ಅದೇ ರೀತಿ ವರ್ಗಾವಣೆಯಲ್ಲಿ ಹಗರಣಗಳ ಮೇಲೆ ಹಗರಣ. ಗುತ್ತಿಗೆದಾರರೇ ಹೇಳುತ್ತಿದ್ದಾರೆ. ನಾವು ಆಗ 40% ಎಂದು ಹೇಳಿದೆವು. ಅದನ್ನು ಸಾಬೀತು ಮಾಡಲಾಗಲಿಲ್ಲ. ಆದರೆ ಈಗ ಹೇಳುತ್ತಿದ್ದೇವೆ. 60% ನಮ್ಮಲ್ಲಿ ಭ್ರಷ್ಟಾಚಾರವಿದೆ. 63% ... 7% ಕಡಿಮೆ ಮಾಡಿಬಿಟ್ಟರು.

ಮಾನ್ಯ ಸಭಾಪತಿಯವರೆ, ನಾನು ಹಗರಣಗಳ "ಹ" ಹೇಳಿದೆ. ಈಗ ಮಾನ್ಯ ನವೀನ್‌ರವರ ಮಾತಿಗೆ ಸ್ವಲ್ಪ ಸೇರಿಸುತ್ತಾ, "ಹೆ" ಬಗ್ಗೆ ಹೇಳಬಯಸುತ್ತೇನೆ. ಹೆ ಎಂದರೆ ಹೆಚ್ಚಳ. ಹೆಚ್ಚಳಕ್ಕೆ ಸೇರಿಸಬಹುದು. 110 ಆಗಬಹುದು.

**ಶ್ರೀ ಸಲೀಂ ಅಹಮದ್ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ನವೀನ್‌ರವರು ಹಾಗೂ ಮಾನ್ಯ ಅರುಣ್ ಅವರು ಇಬ್ಬರೂ ಕುಳಿತುಕೊಂಡು ಈ ಬಜೆಟ್ ಪುಸ್ತಕವನ್ನು ಸಿದ್ಧ ಪಡಿಸಿದ್ದಾರೆ.

**ವೈಸ್ ಛೇರ್ಮನ್:-** ಮಾನ್ಯ ಅರುಣ್ ಅವರೆ, ಇನ್ನು ಎರಡು-ಮೂರು ನಿಮಿಷಗಳಲ್ಲಿ ಮುಗಿಸಿ.

**ಶ್ರೀ ಡಿ.ಎಸ್.ಅರುಣ್:-** ಖಂಡಿತ.. ಮಾನ್ಯ ಸಲೀಂ ಅಹಮದ್ ಅವರೆ, ನಮಗೆ ಬಿಟ್ಟರೆ, ನಾನು ಮತ್ತು ಮಾನ್ಯ ನವೀನ್ ಅವರು ಅತ್ಯುತ್ತಮವಾದಂಥ ಬಜೆಟ್ ಅನ್ನು ಕೊಡುತ್ತೇವೆ. ನಾನು ವಾಣಿಜ್ಯ ವಿದ್ಯಾರ್ಥಿ. ಅವರು....

**ಶ್ರೀ ಎಂ.ಆರ್.ಸೀತಾರಾಂ:-** ನಿಮಗೆ ಅವಕಾಶ ಸಿಕ್ಕಾಗ ಮಾಡಿ.

**ಶ್ರೀ ಡಿ.ಎಸ್.ಅರುಣ್:-** ಖಂಡಿತ..100% ಮುಂದಿನ ದಿನಗಳಲ್ಲಿ ಮಾಡುತ್ತೇವೆ. ನಾವು ಮಾಡುತ್ತೇವೆ. ಅಭಿವೃದ್ಧಿ ಎಂದರೇನು ಎಂಬುದನ್ನು ತೋರಿಸುತ್ತೇವೆ.

**ಶ್ರೀ ಸಲೀಂ ಅಹಮದ್:-** ಪರ್ಮನೆಂಟ್ ಆಗಿ ಅಲ್ಲಿಯೇ ಕುಳಿತಿರುತ್ತೀರಿ..ಬಿಡಿ..

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಲೀಂ ಅಹಮದ್ ಅವರೆ, ರಾಜಕಾರಣ ಮಾಡೋಣ. ಅಲ್ಲಿ ಕುಳಿತು ನೀವೆಷ್ಟು ತಪ್ಪು ಮಾಡಿದಿರಿ ಎಂದರೆ ತೆಲಂಗಾಣ ರಾಜ್ಯವೂ ನಿಮ್ಮನ್ನೇ ಅನುಸರಿಸಿತು. ಏಕೆಂದರೆ ಈ ರೀತಿ ಕೊಟ್ಟರೆ ಮಾತ್ರ ನಾವು ಗೆಲ್ಲುವುದು ಎಂದು ಕೊಟ್ಟರು. ಇವತ್ತು ಅಲ್ಲಿನ ಸ್ಥಿತಿ ಏನಾಗಿದೆಯೆಂದು ನೋಡಿ.

**ಶ್ರೀ ಶಶೀಲ್ ಜಿ. ನಮೋಶಿ:–** ಮಾನ್ಯ ಅರುಣ್ ಅವರೆ, ನೀವು ಎಲ್ಲಾ ಅಂಶಗಳನ್ನು ತಿಳಿಸಿ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಉತ್ತರದಲ್ಲಿ ಅವುಗಳನ್ನು ತಿದ್ದುಪಡಿ ಮಾಡಿಕೊಂಡು ಹೇಳುತ್ತಾರೆ. ಅವರು ಸರಿ ಮಾಡುತ್ತಾರೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಅರುಣ್ ಅವರೆ, ತಮಗೆ ತಿಳಿದಿದೆಯೋ, ಇಲ್ಲವೋ.. ತೆಲಂಗಾಣದಲ್ಲಿ ಐದೂ ಗ್ಯಾರಂಟಿಗಳನ್ನು ಕೈಬಿಡಲಾಗಿದೆ. ಕೊಡುತ್ತಿಲ್ಲ.

**(ಗೊಂದಲ)**

**ಶ್ರೀ ಎನ್. ಎಸ್. ಬೋಸರಾಜು:–** ಯಾರು ಹೇಳಿದ್ದು?

**ಶ್ರೀ ಎನ್. ರವಿಕುಮಾರ್:–** ನಾನೇ ಹೇಳುತ್ತಿದ್ದೇನೆ.

**ಶ್ರೀ ಎನ್. ಎಸ್. ಬೋಸರಾಜು:–** ಚಾಲೆಂಜ್ ಮಾಡೋಣ. ಸುಮ್ಮನೆ ಏಕೆ ಹೇಳುತ್ತೀರಿ?

**ಶ್ರೀ ಎನ್. ರವಿಕುಮಾರ್:–** ಬನ್ನಿ. ಬನ್ನಿ. ಅಲ್ಲಿನ ಮುಖ್ಯಮಂತ್ರಿಗಳೇ ಹೇಳಿಕೆ ನೀಡಿದ್ದಾರೆ.

**(ಗೊಂದಲ)**

**ಶ್ರೀ ಎನ್. ಎಸ್. ಬೋಸರಾಜು:–** ನೀವು ಮಹಾರಾಷ್ಟ್ರ, ದೆಹಲಿಗೆ ಹೋಗಿ ನೋಡಿ ಬನ್ನಿ. ಎಲ್ಲರೂ ಕೊಡುತ್ತಿದ್ದಾರೆ. ಏನೋ ಒಂದು ಹೇಳುವುದಕ್ಕೆ ಹೋಗಬೇಡಿ. ಎಲ್ಲವೂ ದಾಖಲಾಗುತ್ತದೆ. ನಾಳೆ verify ಮಾಡಿಸೋಣ. I know that, ಕೊಡುತ್ತಿದ್ದಾರೆ. ನೀವು ಸುಳ್ಳು ಹೇಳಿ ತಪ್ಪಿಸಿಕೊಳ್ಳುವವರು. ಅದಕ್ಕೆ ನಿಮ್ಮ ಇತಿಹಾಸದಲ್ಲಿ ಕರ್ನಾಟಕದಲ್ಲಿ ಎಂದೂ ನಿಮಗೆ ಬಹುಮತ ಬಂದಿರುವುದಿಲ್ಲ. ನೀವು ಸುಳ್ಳು ಹೇಳುತ್ತೀರಿ, ದಾರಿ ತಪ್ಪಿಸುತ್ತೀರಿ, ಅದಕ್ಕಾಗಿ ನಿಮಗೆ ಕರ್ನಾಟಕದಲ್ಲಿ ಎಂದೂ ಬಹುಮತ ಬಂದಿಲ್ಲ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಬೋಸರಾಜು ಅವರೆ, ನಿಮಗೆ ಚೆನ್ನಾಗಿ ಕಾಣಬಹುದು. ಆದರೆ ನಿಮ್ಮ ಐದೂ ಗ್ಯಾರಂಟಿಗಳನ್ನು ತೆಲಂಗಾಣದಲ್ಲಿ ನಿಲ್ಲಿಸಲಾಗಿದೆ. ಚಾಲೆಂಜ್... ಚಾಲೆಂಜ್... ತೆಲಂಗಾಣದಲ್ಲಿ ಈ ಗ್ಯಾರಂಟಿಗಳನ್ನು ನಿಲ್ಲಿಸಲಾಗಿದೆ.

**ಡಾ: ಉಮಾಶ್ರೀ:–** ನಿಮ್ಮ ಅಧಿಕಾರ ಇರುವ ರಾಜ್ಯಗಳಲ್ಲಿ ಕೊಟ್ಟಿರುವುದನ್ನು ನಿಲ್ಲಿಸಿಬಿಡುತ್ತೀರಾ.. ಹೇಳಿ.

**(ಗೊಂದಲ)**

**ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):–** ಅದೇ ರೀತಿ ಆಂಧ್ರದಲ್ಲಿ ಸಮ್ಮಿಶ್ರ ಸರ್ಕಾರ ಇದೆಯಲ್ಲ, ಏನು sixer ಆಯಿತಾ, ಸೂಪರ್ ಸಿಕ್ಸ್ ಏನಾಯಿತು? ಅಲ್ಲಿನ ಸರ್ಕಾರದಲ್ಲಿ ನೀವು ಭಾಗಿಯಾಗಿದ್ದೀರಲ್ಲ, ಅದನ್ನು ಹೇಳಿ. ಸೂಪರ್ ಸಿಕ್ಸ್ ಎಂದು ಹೇಳಿ ಜನಕ್ಕೆ ಯಾಮಾರಿಸಿದ್ದೀರಲ್ಲ?

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಅರುಣ್ ಅವರೆ, ಬೇಗ ಮುಗಿಸಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೆ, ಒಂದು ಬಾರಿ ಎದೆ ಮುಟ್ಟಿಕೊಂಡು ಹೇಳೋಣ. ನಾವು ರಾಜಕೀಯ ಮಾಡುವುದಕ್ಕೇ ಬಂದಿರುವುದು. ರಾಜಕಾರಣದಲ್ಲಿ ಏನು ಬೇಕಾದರೂ ಮಾಡೋಣ. ನಮ್ಮದು ಅಭಿವೃದ್ಧಿ ಹೊಂದುತ್ತಿರುವ ದೇಶ. ಅಭಿವೃದ್ಧಿಯಾಗುತ್ತಿರುವ ಸಂದರ್ಭದಲ್ಲಿ ನಾವು ಮಾಡುತ್ತಿರುವ ಅನಾಹುತ ಎಲ್ಲಿಗೆ ಹೋಯಿತೆಂದರೆ ನಮ್ಮ ಜನರಿಗೆ ಪಾಪ, ನಿಜವಾಗಿಯೂ ಗೊತ್ತಾಗುವುದಿಲ್ಲ. ನನಗೆ ಏನು ಸಿಗುತ್ತದೆ ಎಂದು ಯೋಚನೆ ಮಾಡುತ್ತಾರೆ. ನಾವೂ ಸುಮಾರು ವರ್ಷಗಳಿಂದ ರಾಜಕಾರಣ ಮಾಡಿಕೊಂಡು ಬಂದಿದ್ದೇವೆ. ಆದರೆ ಹಾಗೆ ಜನರನ್ನು ಅಷ್ಟೊಂದು ಓಲೈಸಿದಂತೆ ಮಾಡಿ ಇಡೀ ರಾಜ್ಯವನ್ನು ಒಂದು ರೀತಿಯಾಗಿ ಬರ್ಬಾದ್ ರಾಜ್ಯ ಎಂದು ಮಾಡುವುದಕ್ಕೆ ಹೋದರೆ ಮುಂದಿನ ಜನರೇಷನ್ ಗತಿಯೇನು? ನೀವು ಐದು ವರ್ಷ ಇರುತ್ತೀರಿ, ಆಮೇಲೆ ಏನು?

ಮಾನ್ಯ ಸಭಾಪತಿಯವರೆ, "ಹ" ಆಯಿತು, ಈಗ "ಹೆ"ಗೆ ಬಂದಿದ್ದೇನೆ. ಎಲ್ಲಿಗೆ ಹೋಗುತ್ತಿದೆ? ಹಾಲಿನ ದರ ಹೆಚ್ಚಳ, ಪೆಟ್ರೋಲ್ ದರ ಹೆಚ್ಚಳ, ಡೀಸೆಲ್ ದರ ಹೆಚ್ಚಳ, ಸ್ಟ್ಯಾಂಪ್ ಡ್ಯೂಟಿ ದರ ಹೆಚ್ಚಳ, ಮದ್ಯಪಾನ ದರ ಹೆಚ್ಚಳ, ಬಸ್ ದರ ಹೆಚ್ಚಳ, ಮೆಟ್ರೋ ದರ ಹೆಚ್ಚಳ, ಡ್ರಗ್ಸ್ ದಂಧೆ ಹೆಚ್ಚಳ... ಬೇರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಡ್ರಗ್ಸ್ ದಂಧೆ ಹೆಚ್ಚಾಗಿದೆ.

**ಶ್ರೀ ಎನ್. ಎಸ್. ಬೋಸರಾಜು:-** ಗ್ಯಾಸ್ ದರದ ಬಗ್ಗೆ ಹೇಳಿ. ಹೋಟೆಲ್‌ಗಳಲ್ಲಿ ಗ್ಯಾಸ್ ಇಲ್ಲದ ಪರಿಸ್ಥಿತಿ ಇವತ್ತು ಬಂದಿದೆ.

(ಗೊಂದಲ)

**ಶ್ರೀ ಡಿ.ಎಸ್.ಅರುಣ್:-** ಇವತ್ತು ಇಡೀ ಪ್ರಪಂಚ ಬೆಂಕಿ ಹೊತ್ತಿಕೊಂಡು ಉರಿಯುತ್ತಿದೆ. ನಮ್ಮ ದೇಶ ಉತ್ತಮವಾಗಿರುವುದಕ್ಕೆ ಕಾರಣ ಮಾನ್ಯ ನರೇಂದ್ರ ಮೋದಿಯವರ ನೇತೃತ್ವ. ಇವತ್ತು ಏನಾಗಿದೆಯೋ ಅದೆಲ್ಲಾ ತಾತ್ಕಾಲಿಕ. ಗ್ಯಾಸ್ ದರ ಹೇಳುತ್ತಿದ್ದೀರಲ್ಲ, ನಿಮ್ಮ ಸಮಯದಲ್ಲಿ ಗ್ಯಾಸ್ ದರ ಎಷ್ಟಿತ್ತು ಎಂದು ಒಮ್ಮೆ ಪರಿಶೀಲಿಸಿ. 2014ರಲ್ಲಿ ಎಷ್ಟಿತ್ತು ಎಂದು ಒಮ್ಮೆ ಪರಿಶೀಲಿಸಿ. ಆಮೇಲೆ ನಾವು ಮಾತನಾಡೋಣ.

**ಶ್ರೀ ಸಲೀಂ ಅಹಮದ್:-** ಸ್ವಾಮಿ, ಎಲ್ಲಿ ಹೋಯಿತು 15 ಲಕ್ಷ? ಎಲ್ಲಿ ಹೋಯಿತು 2 ಕೋಟಿ ಉದ್ಯೋಗ? ರೈತರಿಗೆ double income ಎಲ್ಲಿ ಹೋಯಿತು? ಸುಳ್ಳು ಹೇಳುವುದಕ್ಕೆ ಒಂದು ಇತಿ-ಮಿತಿ ಇದೆ. ನೀವು ಸುಳ್ಳು ಹೇಳಿಕೊಂಡೇ ಬಂದಿರುವುದು.

**(ಗೊಂದಲ)**

**ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):-** 15 ಲಕ್ಷ ಹಣ, 2 ಕೋಟಿ ಉದ್ಯೋಗ... ಒಂದಾದರೂ ಮಾಡಿದ್ದೀರಾ? ಮಾತನಾಡುವುದಕ್ಕೆ ನಾಚಿಕೆಯಾಗಬೇಕು ನಿಮಗೆ.

**(ಗೊಂದಲ)**

**ಶ್ರೀ ಡಿ.ಎಸ್. ಅರುಣ್:-** ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಎನ್ನುವ ಗಾದೆ ಮಾತಿನಂತೆ ನಿಮ್ಮ ಮುಖ್ಯಮಂತ್ರಿಗಳು ನಿಮಗೆಲ್ಲಾ ಹಿರಿಯಕ್ಕ. ಅದೇ ಚಾಳಿಯಂತೆ ನೀವು ಅದನ್ನು ಹೇಳುತ್ತೀರಿ. ಅದು ಯಾವಾಗ ಹೇಳಿದ್ದರು, ಎಲ್ಲಿ ಹೇಳಿದ್ದರು ಎಂಬುದನ್ನು ಸಾಬೀತು ಪಡಿಸಲು ನಿಮ್ಮಿಂದ ಸಾಧ್ಯವಾಗಿಲ್ಲ. ಬಿಡಿ.

ಬಸ್ ದರ ಹೆಚ್ಚಳ, ಮೆಟ್ರೋ ದರ ಹೆಚ್ಚಳ, ನೀರಿನ ದರ ಹೆಚ್ಚಳ, ಘನತ್ಯಾಜ್ಯ ಶುಲ್ಕ ಹೆಚ್ಚಳ, ವಿದ್ಯುತ್ ದರ ಹೆಚ್ಚಳ, ಜನನ ಪ್ರಮಾಣ ಪತ್ರ ಪಡೆಯಲು ಶುಲ್ಕ ದರ ಹೆಚ್ಚಳ, ಮರಣ ಪ್ರಮಾಣ ಪತ್ರ ಪಡೆಯುವ ಶುಲ್ಕ ದರ ಹೆಚ್ಚಳ. ಹೀಗೆ ಹೆಚ್ಚಳದಲ್ಲಿರುವ ಸರ್ಕಾರ..

**ಡಾ: ಎಂ.ಸಿ.ಸುಧಾಕರ್:-** ಶಾಸಕರ ಸಂಬಳವೂ ಹೆಚ್ಚಳ ಅದನ್ನು ಹೇಳಿ.

**ಶ್ರೀ ಡಿ.ಎಸ್. ಅರುಣ್:-** ಶಾಸಕರ ಸಂಬಳವೂ ಹೆಚ್ಚಳ ಎನ್ನುವುದನ್ನು ಒಪ್ಪಿಕೊಳ್ಳುತ್ತೇವೆ. ಬೇಡವೆಂದು ವಾಪಸ್ ಕೊಡಬೇಕಾಗಿತ್ತು. "Give it up" ಎಂದು ನಮ್ಮದು ಒಂದು slogan ಇದೆ. ವಾಪಸ್ ಕೊಡಬೇಕಿತ್ತು.

**ಶ್ರೀ ಕೆ.ಎಸ್.ನವೀನ್:-** ಆ ಮಸೂದೆಯನ್ನು ತಂದಿರುವವರೇ ನೀವು. ವಿರೋಧ ಪಕ್ಷದವರಾದ ನಾವೇನು ಕೇಳಿರಲಿಲ್ಲ.

**ವೈಸ್ ಛೇರ್ಮನ್:-** ಮಾನ್ಯ ಅರುಣ್ ಅವರೆ, ಬಜೆಟ್ ಬಗ್ಗೆ ಮಾತನಾಡಿ ಮುಗಿಸಿ. Conclude ಮಾಡಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಶಶೀಲ್ ನಮೋಶಿಯವರು ಹೇಳಿದಂತೆ ಸಣ್ಣ ಪುಟ್ಟದನ್ನು ಈಗಲೂ ಅವರು ಸರಿಪಡಿಸಿಕೊಳ್ಳಬಹುದು. ನೀವು ಅನ್ಯಾಯ ಮಾಡಬೇಡಿ. ಈಗ ನೀವು ಏನು ಮಾಡಲಿಕ್ಕೆ ಹೊರಟಿದ್ದೀರಿ ಎಂದರೆ ನಿಜವಾಗಿಯೂ ಸಿಗಬೇಕಾದ ಬಿ.ಪಿ.ಎಲ್. ಪಡಿತರದಾರರನ್ನು ಒಂದೊಂದಾಗಿ ರದ್ದು ಮಾಡಲಾಗುತ್ತಿದೆ. ಅವರಿಗೆ ತಲುಪಬೇಕಾದ ಯೋಜನೆಗಳು ಅವರಿಗೆ ತಲುಪುತ್ತಿಲ್ಲ. ಏಕೆ? ಈ ಬಜೆಟ್ ಅನ್ನು ತೂಗಿಸಬೇಕು. ಅಭಿವೃದ್ಧಿ ಕಾರ್ಯಕ್ಕಲ್ಲ, ಬಂಡವಾಳ ವೆಚ್ಚಕ್ಕಲ್ಲ, capital expenditure ಗಲ್ಲ. ಎಲ್ಲಾ ಇಲಾಖೆಯಲ್ಲಿರುವಂಥ ಸಿಬ್ಬಂದಿಗಳಿಗೆ ಕೊಡಬೇಕಾಗಿರುವಂಥ ಸಂಬಳವನ್ನು ತೂಗಿಸಬೇಕಾಗಿದೆ. ಪೊಲೀಸ್ ಇಲಾಖೆಗೆ ದುಡ್ಡು ಕೊಟ್ಟಿಲ್ಲ. ಫೆಬ್ರವರಿ 28ಕ್ಕೆ ಹಣ ಬರಬೇಕಿತ್ತು. ಇವತ್ತು ಮಾರ್ಚ್ 11ನೇ ತಾರೀಖು. ಇವತ್ತಿಗೂ ಅವರಿಗೆ ಬಂದಿಲ್ಲ. ಹಲವಾರು ಜಿಲ್ಲೆಗಳಲ್ಲಿ ಬಂದಿಲ್ಲ.

ಈ ಬಜೆಟ್ ಪುಸ್ತಕದಲ್ಲಿ ಹೇಳಲಿಕ್ಕೆ ಏನಾದರೂ ಇದೆಯೇ ಎಂದು ನಾನು ಸಾಕಷ್ಟು ಹುಡುಕಾಡಿ ಓದಿದೆ. ಇದೊಂದು ಖಾಲಿ ಪುಸ್ತಕ. ಖಾಲಿ ಡಬ್ಬ ಹೇಗೆ ಶಬ್ದ ಮಾಡುತ್ತದೆಯೋ ಹಾಗೆ ಈ ರಾಜ್ಯದ ಮುಖ್ಯಮಂತ್ರಿಗಳು 17ನೇ ಬಾರಿಗೆ ಕೊಟ್ಟಂಥ ಈ ಬಜೆಟ್ ನಿಜವಾಗಿಯೂ ಜನಸಾಮಾನ್ಯರಿಗೆ ಅನಾನುಕೂಲಕರವಾಗಿದೆ ಎಂದು ಹೇಳಿ ಅವಕಾಶ ಕೊಟ್ಟಂಥ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ.. ಮಾನ್ಯ ಶಶೀಲ್ ನಮೋಶಿಯವರು ಹೇಳಿದಂತೆ ಸರಿಪಡಿಸಿಕೊಳ್ಳುವುದರ ಬಗ್ಗೆ ಒಂದು ಮಾತು ಹೇಳಬಯಸುತ್ತೇನೆ. ಬಜೆಟ್ ಪುಸ್ತಕದ ಮುಖಪುಟವನ್ನು ಸರಿಪಡಿಸಿಕೊಳ್ಳಬೇಕು. ಈ ಪುಸ್ತಕದ ಮುಖಪುಟದಲ್ಲಿ ಮಲೇಶಿಯಾದ ಕೌಲಾಲಂಪುರದ ಚಿತ್ರ ಹಾಕಿದ್ದಾರೆ.

(ಮುಂದು)

(326) 11.03.2026 5.50 ಕೆಜಿ/ಎಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಕೆ.ಎಸ್.ನವೀನ್ (ಮುಂದು):**

ಅದನ್ನು ಮಾನ್ಯ ಸಭಾನಾಯಕರು ಸರಿಪಡಿಸಬೇಕು. ಯಾವುದೋ ಒಂದು photo ವನ್ನು ಹಾಕುವ ಬದಲಿಗೆ. ಕೊನೆಯ ಪಕ್ಷ ನಮ್ಮ ವಿಧಾನಸೌಧದ photo ವನ್ನು ಹಾಕಬಹುದಿತ್ತು. ಅದು ಯಾವ ಮಹಾನುಭಾವ ಈ ತರಹದ ಹಾಕಿದ್ದಾರೆ ಗೊತ್ತಿಲ್ಲ. ನಮ್ಮ ವಿಧಾನಸೌಧದ photo ವನ್ನು ಹಾಕಬಹುದಿತ್ತು. ಇದರಲ್ಲಿ..

**ಡಾ। ಎಂ.ಆರ್.ಸೀತಾರಾಂ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಅದಕ್ಕೆ ಹೇಳುತ್ತೇನೆ. ನಮ್ಮ Esteem Mall ಎದುರುಗಡೆ ಒಂದು Twin Tower ಇದೆ.

(ಗೊಂದಲ)

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಇದು ಆ Twin Tower ಅಲ್ಲ.

(ಗೊಂದಲ)

**ಡಾ। ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಅವರು ಸ್ವಲ್ಪ ಕೇಳಬೇಕು. ನಾವೆಲ್ಲರೂ ಅಲ್ಲಿಯೇ ಓಡಾಡುತ್ತಿದ್ದೇವೆ. ನನಗೆ ಗೊತ್ತಿರುವಂತೆ ಅಲ್ಲಿ ಆ Twin Tower ಇದೆ.

(ಗೊಂದಲ)

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಇದು ಮಾನ್ಯ ಸದಸ್ಯರು ಹೇಳುತ್ತಿರುವಂತಹ Twin Tower ಅಲ್ಲ. ಇದು ಮಲೇಶಿಯಾದ Kuala Lumpur ನಲ್ಲಿರುವಂತಹ Petronas Twin Towers.

(ಗೊಂದಲ)

**ಡಾ। ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಅಂದರೆ, ಈ ಸರ್ಕಾರದ್ದು ಭೌತಿಕಮಟ್ಟ ಎಷ್ಟರ ಮಟ್ಟಿಗೆ ಬಿದ್ದು ಹೋಗಿದೆ ಎಂದರೆ, even ಮುಖಪುಟದ ಒಂದು photo ಅನ್ನು ಸಹ ಹೊರಗಡೆಯ ದೇಶದನ್ನು ತಂದು ಹಾಕುವಂತಹ ಕೆಲಸವನ್ನು ಮಾಡಿದ್ದಾರೆ.

**ಡಾ। ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

(ಗೊಂದಲ)

**ವೈಸ್ ಛೇರ್ಮನ್‌ರವರು:-** ಡಾ। ಎಂ.ಆರ್.ಸೀತಾರಾಂರವರೇ, ತಾವು ಮಾತನಾಡಿ. ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೆ. ಆಯಿತು ಬಿಡಿ.

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅದನ್ನು reprint ಮಾಡಿಕೊಡಲಿ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ಅದು ಮಲೇಶಿಯ photo ಎಂದು ಒಪ್ಪಿಕೊಳ್ಳುತ್ತಾರೆ. ಒಳ್ಳೆಯದು ಆಯಿತು.

(ಗೊಂದಲ)

**ವೈಸ್ ಛೇರ್ಮನ್‌ರವರು:-** ಡಾ। ಎಂ.ಆರ್.ಸೀತಾರಾಂರವರೇ, ತಾವು ಮಾತನಾಡಿ.

(ಗೊಂದಲ)

**ಡಾ॥ ಎಂ.ಸಿ.ಸುಧಾಕರ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ನಾವು ಆ photo ಮಲೇಶಿಯದ್ದು ಎಂದು ಹೇಳಿಲ್ಲ. ನಮ್ಮ ಸರ್ಕಾರದ ಅವಧಿಯಲ್ಲಿ ನಮ್ಮ ಬೆಂಗಳೂರು ಆ ರೀತಿ ಬದಲಾವಣೆಯಾಗುತ್ತದೆ ಅಂತ.,

(ಗೊಂದಲ)

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಆ ರೀತಿ ಹೇಳಿದರೆ, ಅದು ಮಲೇಶಿಯದ್ದಾಗಿದೆ.

(ಗೊಂದಲ)

**ಡಾ॥ ಎಂ.ಸಿ.ಸುಧಾಕರ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ನಾವು ಅದನ್ನು ಕಾಪಿ ಹೊಡೆದಿಲ್ಲ. ಅವರು ಅದೇ Twin Tower ಎಂದು ಹೇಗೆ ಹೇಳುತ್ತಾರೆ? ಅದು ನಮ್ಮ ಒಂದು imagination ಆಗಿದೆ. ಅವರು ಅದೇ ಎಂದು ಹೇಗೆ ಹೇಳುತ್ತಾರೆ? ಅದು ನಮ್ಮ imagination. ಅದು ನಮ್ಮ ಕಲ್ಪನೆಯಾಗಿದೆ. ಅವರು ಅದೇ ಎಂದು ಹೇಗೆ ಹೇಳುತ್ತಾರೆ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ವಿಧಾನಸೌಧದ ಚಿತ್ರವನ್ನು ಹಾಕಬಹುದಿತ್ತು. ಆದರೆ, ಇಷ್ಟೊಂದು ದಾಸ್ಯತೆ?

**ವೈಸ್ ಛೇರ್ಮನ್‌ರವರು:-** ಆಯಿತು ಬಿಡಿ. ಡಾ॥ ಎಂ.ಆರ್.ಸೀತಾರಾಮರವರೇ, ತಾವು ಮಾತನಾಡಿ

**ಡಾ। ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ನಮ್ಮ ನೆಚ್ಚಿನ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ದಿನಾಂಕ 06-03-2026 ರಂದು ಮಂಡಿಸಿರುವಂತಹ ಈ ಬಜೆಟ್‌ಗೆ ಸಂಪೂರ್ಣವಾಗಿ ನಮ್ಮ ಸಮರ್ಥನೆಯನ್ನು ನೀಡುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಈಗಾಗಲೇ 16 ಬಜೆಟ್‌ಗಳನ್ನು ಮಂಡಿಸಿದ್ದು, ಈ ವರ್ಷದಲ್ಲಿ 17ನೇ ಬಜೆಟ್‌ನ್ನು ಮಂಡಿಸಿದ್ದಾರೆ. ಇದನ್ನು ವಿರೋಧ ಪಕ್ಷದವರು ಸ್ವಲ್ಪ ರಚನಾತ್ಮಕವಾಗಿ ಮಾತನಾಡಬೇಕು. ವಿರೋಧ ಪಕ್ಷದವರು ಖಂಡಿಸುವುದಕ್ಕೆ ಇದ್ದಾರೆ. ಅವರು ಮಾತನಾಡಲಿ. ಆದರೆ, ಪ್ರಶಂಸೆಯನ್ನು ಸಹ ಹೇಳಬೇಕಾಗುತ್ತದೆ. ನಾನು ಅದನ್ನು ರೂಡಿಸಿಕೊಂಡಿದ್ದೇನೆ. ಏಕೆಂದರೆ, an argument for the sake of argument is not an argument at all. But ಸುಮ್ಮನೆ ಅದನ್ನು ಟೀಕಿಸುವುದು

ಅಷ್ಟೊಂದು ಸಮ್ಮತವಲ್ಲ. ಆದರೂ ಸಹ, ಮುಂದೆ ಹೋಗುತ್ತಾ, ಈ ಒಂದು ಬಜೆಟ್‌ನಲ್ಲಿ Rs.4.48 lakh crores ಮಂಡಿಸಿರುವ ಬಜೆಟ್‌ನ ಎಲ್ಲಾ ಮಾನದಂಡಗಳ ಒಳಗೆ ಅಂದರೆ, fiscal deficit 2.91% ಇದೆ. ಅಂದರೆ, 100ಕ್ಕೆ ಮೇಲೆ ಇರಬಾರದು, ಅದು 2.91% ಇದೆ. Total Outlay ನಲ್ಲಿ 25% ಕೆಳಗೆ ಸಾಲ ಇರಬೇಕು ಎಂಬ ಇತಿಮಿತಿಯಲ್ಲಿ ಈ ಬಜೆಟ್‌ನ್ನು ಮಂಡಿಸಿದ್ದಾರೆ. ಇದರ ಜೊತೆಯಲ್ಲಿ borrowings ಎಷ್ಟಿದೆ, ನಮ್ಮ ರಾಜ್ಯ ಸರ್ಕಾರದಲ್ಲಿ ಈಗಾಗಲೇ ಮಾರ್ಚ್ 2026 ರವರೆಗೂ ಸುಮಾರು 5.8 ಲಕ್ಷ ಕೋಟಿ ರೂಪಾಯಿಗಳ ಸಾಲ ಹೀಗೆ ಇರುತ್ತದೆ. ಆದರೆ, ಮಾರ್ಚ್ 31, 2027 ಕ್ಕೆ ಸುಮಾರು 7 ಲಕ್ಷ ಕೋಟಿ ರೂಪಾಯಿಗಳು ಆಗಬಹುದು. But this is only a budget proposal. ಇದೊಂದು ಸಮತೋಲನವಾದ ಬಜೆಟ್ ಆಗಿದೆ. ಇದರಲ್ಲಿ development ಇದೆ, ಇದರಲ್ಲಿ ನಮ್ಮ ಜನರಿಗೆ welfare measures ಇದೆ. Equal ನಲ್ಲಿದೆ. ನಾವು ಇದರಲ್ಲಿನ ಅಂಶಗಳನ್ನು ಒಂದೊಂದಾಗಿ ಹೇಳಿಕೊಳ್ಳುತ್ತಾ ಬಂದರೆ, ಒಂದು infrastructure ಗೆ ಇವೆಲ್ಲಕ್ಕೂ ಸಹ roads ಗೆ irrigation ಗೆ ಮತ್ತು ಇತರ housing ಗೆ urban development ಗೆ ಇವೆಲ್ಲಕ್ಕೂ ಸಹ ನಾವು ಹೆಚ್ಚಿನ ಒಂದು ಆದ್ಯತೆಯನ್ನು ಕೊಟ್ಟು ರೂ.1,27,103 ಕೋಟಿ ರೂಪಾಯಿಗಳಷ್ಟು development ಅಂದರೆ, capital assets create ಮಾಡಿರುವ ಒಂದು provision ಅನ್ನು ಮಾಡಿದ್ದಾರೆ. ಇದರ ಜೊತೆಯಲ್ಲಿ welfare, ಅದಕ್ಕೆ ಇದರಲ್ಲಿ ನಮ್ಮ Department of Women and Child Development ಆಗಿರಬಹುದು, Department of Social Welfare, Department of Food and Civil Supplies, Department of Agriculture ಆಗಿಬಹುದು. ಈ ಒಂದು ಇಲಾಖೆಗಳಲ್ಲಿ ರೈತರಿಗೆ ಇತರ ಜನರಿಗೆ ಅನುಕೂಲ ಮಾಡುತ್ತಿರುವುದು ಅದು welfare measures ಸಹ ಎರಡು equal ಆಗಿದೆ. ಅಂದರೆ, 1.27 ಸಾವಿರ ಕೋಟಿ ರೂಪಾಯಿಗಳು ಗ್ಯಾರಂಟಿಗಾದರೆ, 1.22 ಸಾವಿರ ಕೋಟಿ ರೂಪಾಯಿಗಳು capital expenditure. ಸಮತೋಲನವಾದ ಬಜೆಟ್‌ನ್ನು ಮಂಡಿಸಿದ್ದಾರೆ. ಹಾಗಾಗಿ, ನಾನು ಅದಕ್ಕೆ ಹೆಚ್ಚಿನ ಪ್ರಶಂಸೆಯನ್ನು ನೀಡುತ್ತೇನೆ.

ಮಾನ್ಯ ಸಭಾಪತಿಯವರೇ, ಇದರ ಜೊತೆಯಲ್ಲಿ ಖರ್ಚು ಏನು ಮಾಡುತ್ತಿದ್ದೇವೆ. ಇದರಲ್ಲಿ ಒಂದು ರೂಪಾಯಿ ಆದಾಯ ಬಂದರೆ, ಅದಕ್ಕೆ ಶೇಕಡವಾರು ಅಂದರೆ, 15 ಪೈಸೆಯಷ್ಟು ಸಮಾಜ ಕಲ್ಯಾಣಕ್ಕೆ ಕೊಡುತ್ತಿದ್ದಾರೆ. ಮಿಕ್ಕಿದ ಬೇರೆ benefits ಗೆ 18 ಪೈಸೆಯನ್ನು ಕೊಡುತ್ತಿದ್ದೇವೆ. ಮತ್ತೆ interest ಮತ್ತು loans ಗೆ 29 ಪೈಸೆಯನ್ನು ಕೊಡುತ್ತಿದೆ. ನಮ್ಮ ರೈತರಿಗೆ agriculture, rural development ಗೆ 13 ಪೈಸೆಯನ್ನು ಕೊಡುತ್ತಿದ್ದೇವೆ. ವಿದ್ಯೆಗೆ 10 ಪೈಸೆಯನ್ನು ಕೊಡುತ್ತಿದ್ದೇವೆ. ಆರೋಗ್ಯಕ್ಕೆ 04 ಪೈಸೆಯನ್ನು ಕೊಡುತ್ತಿದ್ದೇವೆ ಮತ್ತು ಇತರ ಎಲ್ಲಾ ಖರ್ಚು ಮತ್ತು ವೆಚ್ಚಗಳಿಗೆ ಸುಮಾರು 14 ಪೈಸೆಯನ್ನು ಕೊಡುತ್ತಿದ್ದೇವೆ. ಮತ್ತೆ water supply and sanitation ಗೆ 3 ಪೈಸೆಯನ್ನು ಮೀಸಲಿಟ್ಟಿದ್ದಾರೆ. ಅಂದರೆ, ಇದು ಈ ಸಮಾಜದ ಎಲ್ಲಾ ಜನರಿಗೆ ಮುಟ್ಟುವಂತಹ ಒಂದು benefits ಅನ್ನು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ.

ಮಾನ್ಯ ಸಭಾಪತಿಯವರೇ, ಇದರ ಜೊತೆಯಲ್ಲಿ ಒಂದೊಂದು ಇಲಾಖೆಗೆ ಎಷ್ಟು ಹಣ ಕೊಟ್ಟಿದ್ದಾರೆಂದರೆ, Education Department ಗೆ 47,230 ಕೋಟಿ ರೂಪಾಯಿಗಳನ್ನು ಕೊಡುವ ಮೂಲಕ ವಿದ್ಯಾ ಕ್ಷೇತ್ರಕ್ಕೆ ಕೊಟ್ಟಿದ್ದಾರೆ. Women and Child Development ಇಲಾಖೆಗೆ 34,929 ಕೋಟಿ ರೂಪಾಯಿಗಳನ್ನು ಗೃಹಲಕ್ಷ್ಮಿ ಯೋಜನೆ ಸೇರಿ ಕೊಟ್ಟಿದ್ದಾರೆ. Rural Development ಗೆ 26,000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮತ್ತೆ ಜಲಸಂಪನ್ಮೂಲ ಅಂದರೆ, ನೀರಾವರಿ ಇಲಾಖೆಗೆ 23,436 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಇದರಲ್ಲಿ Urban Development and Housing Development ಗೆ 22,200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮತ್ತೆ Health and Family Welfare ಗೆ 17,800 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. Social Welfare ಗೆ 18,000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವೆಲ್ಲವನ್ನು ನಮ್ಮ ಜನರಿಗೆ, ಎಲ್ಲಾ ಇಲಾಖೆಗೆ ಮತ್ತು ಎಲ್ಲಾ ಕ್ಷೇತ್ರಗಳಿಗೆ ಮುಟ್ಟುವಂತಹ ಮುಖ್ಯವಾದಂತಹ ಇಲಾಖೆಗಳನ್ನು ನಾನು ಗುರುತಿಸಿ ಹೇಳುತ್ತಿದ್ದೇನೆ. ಉಳಿದಿದ್ದು ಬಜೆಟ್‌ನಲ್ಲಿದೆ. ಇದರಿಂದಾಗಿ ಕಳೆದ ಎರಡು ವರ್ಷಗಳ ಕಾಲ ನಾವು ಸುಮಾರು ಒಂದು ಲಕ್ಷ ಇಪತ್ತು ಸಾವಿರ ಕೋಟಿ ರೂಪಾಯಿಗಳನ್ನು ನಮ್ಮ ಜನರಿಗೆ ಈ guarantees ಮೂಲಕ ಕೊಟ್ಟಿರುವುದಕ್ಕೆ ಇಡೀ ನಮ್ಮ ದೇಶದಲ್ಲಿ ನಮ್ಮ ಕರ್ನಾಟಕದ Gross State Domestic Product 8.1% ಇದೆ. ಅಂದರೆ, ಇಡೀ ನಮ್ಮ ದೇಶದ average 7.4% ಇದ್ದರೆ, ಶೇಕಡಾ 7.4% ಇದ್ದರೆ, ನಮ್ಮ ರಾಜ್ಯದ GSDP 8.1% ಇರುವುದು. ಇದರಿಂದ income ನಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಒಂದು ಆದಾಯ ಬರುತ್ತಿರುವುದರಿಂದ ನಾವು ಈ ಎಲ್ಲಾ ಕೆಲಸಗಳನ್ನು ಮಾಡುವುದಕ್ಕೆ ಆಗಿದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್‌ರವರು ತೆಲಂಗಾಣ ರಾಜ್ಯದವರು ನೀವು ಅಲ್ಲಿಗೆ ಬನ್ನಿ ಎಂದು ಹೇಳಿದರೆಂದು ಹೇಳಿದರು. ನಾವು ಯಾರಿಗೂ ಕರೆದು ಹೇಳಬೇಕಾಗಿಲ್ಲ. ಕಳೆದ ವರ್ಷದಲ್ಲಿ Foreign Direct Investment ಎಷ್ಟು ಬಂದಿದೆ ಎಂದರೆ, ಇಡೀ ನಮ್ಮ ದೇಶದಲ್ಲಿ ಬಂದಿರುವುದಕ್ಕೆ 26.5% ರಷ್ಟು investment ನಮ್ಮ ರಾಜ್ಯಕ್ಕೆ ಬಂದಿದೆ. ಅದು ಗುಜರಾತ್‌ಗಿಂತ, ಮಹಾರಾಷ್ಟ್ರಗಿಂತ , ತೆಲಾಂಗಣಕ್ಕಿಂತ, ಆಂಧ್ರ ಪ್ರದೇಶಕ್ಕಿಂತ ಹೆಚ್ಚು ಬಂದಿದೆ. ಇದನ್ನು ತಮ್ಮೆಲ್ಲರ ಗಮನಕ್ಕೆ ತರುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಮತ್ತೆ GST collections ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ. 2019ನೇ ಸಾಲಿನಲ್ಲಿ ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು rationalisation ಅನ್ನು ಮಾಡಿದರು. ಅದನ್ನು ಬಿಜೆಪಿ ಸರ್ಕಾರದವರು ಮಾಡಿದರು. ಆಗ 5% ರಿಂದ 28% ರವರೆಗೂ ಮಾಡಿ ಜನರಿಗೆಲ್ಲಾ ದೊಡ್ಡ ಹೊರೆ ಆಯಿತು. ಕಳೆದ ವರ್ಷ ಬಿಹಾರ್ ರಾಜ್ಯದಲ್ಲಿ ಮತ್ತು ಇತರೆ ಕಡೆಗಳಲ್ಲಿ ಚುನಾವಣೆ ಬರುತ್ತಿದೆ ಎಂದು ಅದನ್ನು rationalisation ಮಾಡಿ ಕಡಿಮೆ ಮಾಡಿದರು. ಅಂದರೆ, 8 ವರ್ಷಗಳ ಕಾಲ ಎಲ್ಲಾ ರಾಜ್ಯಗಳು... ಅದು ನಮ್ಮ ಕರ್ನಾಟಕ್ಕೆ ಮಾತ್ರ ಕಡಿಮೆ ಆಗುತ್ತಿಲ್ಲ. ನಮ್ಮ ಇಡೀ ದೇಶದಲ್ಲಿ ಎಲ್ಲಾ ರಾಜ್ಯಗಳಿಗೂ ಮುಂದಕ್ಕೆ ಇದು ಕೊರತೆಯಾಗುತ್ತದೆ. ನಾವು ಆಗಲೇ ಮಾತನಾಡಿರುವ ಪ್ರಕಾರ, 10,000.00 ಕೋಟಿ

ರೂಪಾಯಿಗಳು ಈ ವರ್ಷ ನಮಗೆ ಕೊರತೆಯಾಗುತ್ತದೆ. ಅದು reduction of GST ಮಾಡಿರುವುದರಿಂದ. ಮುಂದೆ ಬರುವ ವರ್ಷ 15,000 ಕೋಟಿ ರೂಪಾಯಿಗಳು ಆಗಬಹುದು. ಇದೇ ರೀತಿ ಇನ್ನು ದೊಡ್ಡ ದೊಡ್ಡ ರಾಜ್ಯಗಳಿಗೆ ಇನ್ನು ಹೆಚ್ಚಿನ ಒಂದು ಕೊರತೆ ಆಗುತ್ತದೆ. ಇದರಿಂದ ಅವರು ಪ್ರಶಂಸೆ ತೆಗೆದುಕೊಂಡು ಕಡಿಮೆ ಮಾಡಿದ್ದೇವೆಂದು ಹೇಳುವುದಲ್ಲ. ಇದನ್ನು ಬಹಳ ಹೆಚ್ಚು ಮಾಡಿ ಕಡಿಮೆ ಮಾಡಿರುವುದೇ ವಿನಾಃ ಕಡಿಮೆ ಏನೂ ಮಾಡಿಲ್ಲ. ಅದರ ಜೊತೆಯಲ್ಲಿ ಈ ವರ್ಷ ನಾವು ಕೊನೆಯ ಪಕ್ಷ 56,000 vacant posts fill ಮಾಡುವಂತಹ ಒಂದು ದಿಟ್ಟ ಕ್ರಮವನ್ನು ನಮ್ಮ ರಾಜ್ಯ ಸರ್ಕಾರ ತೆಗೆದುಕೊಳ್ಳುತ್ತಿದೆ.

(ಮುಂದು)

(327) 11.03.2026/6.00/ಎಂವಿ-ಎಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಡಾ: ಎಂ.ಆರ್.ಸೀತಾರಾಂ (ಮುಂದು):**

ಅದರ ಜೊತೆಗೆ ನಾವು ಈ ವರ್ಷ at least 56,000 vacant posts fill ಮಾಡುವ ಒಂದು ದಿಟ್ಟ ಕ್ರಮವನ್ನು ನಮ್ಮ ರಾಜ್ಯ ಸರ್ಕಾರ ತೆಗೆದುಕೊಳ್ಳುತ್ತಿದೆ. ಅದರ ಜೊತೆಗೆ ಈ ಒಳಮೀಸಲಾತಿ ಏನಿದೆ ಅದು ಈ ತಿಂಗಳನಲ್ಲಿ ಮುಗಿಯುತ್ತದೆ. ಅದು ಮುಗಿದ ತಕ್ಷಣ ಎಲ್ಲಾ ಇಲಾಖೆಗಳಲ್ಲೂ ಸರಾಸರಿಯಾಗಿ ಆಗುತ್ತದೆಂದು ಹೇಳುತ್ತಿದ್ದೇನೆ. ಈ ವರ್ಷ 2026-27ಕ್ಕೆ ಸುಮಾರು 56,432 ಹುದ್ದೆಗಳನ್ನು ಭರ್ತಿ ಮಾಡುವಂತಹ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು ಎಂದು ಈಗಾಗಲೇ ಇಲಾಖೆಗಳು ಅದನ್ನು ಕೈಗೆತ್ತಿಕೊಂಡಿದೆ. ಮುಂದಿನ ತಿಂಗಳನಿಂದ ಈ ಪ್ರಕ್ರಿಯೇ ಪ್ರಾರಂಭವಾಗುತ್ತದೆ. ಅವರು ಈಗಾಗಲೇ ಮಾತನಾಡಿದ್ದಾರೆ. ಈ tax devolution ಹೇಗೆ ಮತ್ತು ಏನಾಗುತ್ತದೆ ಎಂದು ಇವತ್ತಿನ ಎಲ್ಲಾ ಪೇಪರ್‌ಗಳಲ್ಲಿ ಬಂದಿದೆ. ನಾವು ಕೇಂದ್ರ ಸರ್ಕಾರಕ್ಕೆ ಕೊಡುವ ಹಣದಲ್ಲಿ ನಮ್ಮ ಕರ್ನಾಟಕ ರಾಜ್ಯಕ್ಕೆ ಶೇಕಡಾ 3.1ರಷ್ಟನ್ನು ಹಿಂದಕ್ಕೆ ಕೊಡುತ್ತಿದ್ದಾರೆ. ನಮ್ಮ population ಏಳು ಕೋಟಿ ಇದೆ. ಅದೇ ಉತ್ತರ ಪ್ರದೇಶಕ್ಕೆ ಶೇಕಡಾ 18ರಷ್ಟನ್ನು ಕೊಡುತ್ತಿದ್ದಾರೆ. ಆದರೆ, ನಮ್ಮ income ಎಷ್ಟಿದೆ ಎಂದರೆ, ನಾವು ಇಲ್ಲಿಂದ ನಾಲ್ಕು ಲಕ್ಷ ಚಿಲ್ಲರೆ ಕೋಟಿಯಷ್ಟು ಕೊಡುತ್ತಿದ್ದರು ಸಹ ನಮಗೆ ಸಿಗುತ್ತಿರುವುದು ಶೇಕಡಾ 3.1ರಷ್ಟು ಮಾತ್ರ. ಅದನ್ನು 16$^{th}$ Finance Commission ನಲ್ಲಿ increase ಮಾಡುತ್ತಿದ್ದಾರೆ. ಅದು ಮುಂದಿನ ವರ್ಷ ಹಣ ಬರಬಹುದು ಎಂಬ ಆಶಾಭಾವನೆ ಇಟ್ಟುಕೊಂಡಿದ್ದೇವೆ. ಈಗ average ಆಗಿ common man ಗೆ ಹೇಳಬೇಕೆಂದರೆ, ನಾವು ಕೊಡುವ 100 ರೂಪಾಯಿಗಳಿಗೆ ನಮಗೆ 13.1 ಪೈಸೆಯಷ್ಟು ವಾಪಸ್ಸು ಬರುತ್ತಿದೆ. ಆದುದರಿಂದ, ಈಗಾಗಲೇ ಕೇಂದ್ರ ಸರ್ಕಾರ ನಮಗೆ ಹೇಳಿರುವುದನ್ನೆಲ್ಲಾ ಕೊಟ್ಟಿಲ್ಲ. Union Budget ನಲ್ಲಿ ನಮ್ಮ Upper Bhadra ಯೋಜನೆಗೆ 5,000/- ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಮಾನ್ಯ ಕೇಂದ್ರ ಹಣಕಾಸು ಮಂತ್ರಿಗಳಾದ ಶ್ರೀಮತಿ ನಿರ್ಮಲಾ

ಸೀತಾರಾಮನ್ ರವರು ಘೋಷಣೆ ಮಾಡಿದ್ದರು. ಆದರೆ, ಅವರು ಅದಕ್ಕೆ ಕೊಡಲಿಲ್ಲ. ಈಗ N.D.R.F ನಲ್ಲಿ ನಮಗೆ ಪರಿಹಾರ ಬಾರದೇ ಇರುವುದಕ್ಕೆ ನಾವೆಲ್ಲರೂ ಸಹ ನವ ದೆಹಲಿಗೆ ಹೋಗಿ, ಅಲ್ಲಿ ಧರಣಿ ಮಾಡಿ, ಮಾನ್ಯ ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಹಾಕಿ, ನಂತರ ಅಲ್ಲಿಂದ ತೆಗೆದುಕೊಂಡಿರುವ ನಿದರ್ಶನ ಇದೆ. ಅದರ ಇತಿಹಾಸ ಸಹ ಇದೆ. ರಾಜ್ಯ ಸರ್ಕಾರ ಕೇವಲ ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತಿದೆ ಎಂದು ಅಲ್ಲ. ನಿಜವಾದ ಸಾಕ್ಷ್ಯಗಳನ್ನು ಕೊಟ್ಟಿದ್ದಕ್ಕೆ ಮಾನ್ಯ ಸುಪ್ರೀಂ ಕೋರ್ಟ್‌ನವರು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ಕೊಟ್ಟು ನೀವು ಹಣ ಬಿಡುಗಡೆ ಮಾಡಿ ಎಂದು ಹೇಳಿದ ಮೇಲೆ ಕೇಂದ್ರ ಸರ್ಕಾರದವರು ನಮಗೆ ಹಣ ನೀಡಿರುವುದು. ಈ ರೀತಿ ಸಂಘರ್ಷ ಯಾವ ರೀತಿ ಇರಬೇಕು ಎಂದರೆ, ರಾಜ್ಯ ಸರ್ಕಾರ ಬೆಳೆದಾಗ ಕೇಂದ್ರ ಸರ್ಕಾರ ಒಟ್ಟಾಗಿ ಬಲಿಷ್ಠವಾಗಿ ಬೆಳೆಯುತ್ತದೆ. ಆದರೆ, ಅವರು ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ ಎನ್ನುವಂತೆ ನಡೆಸುತ್ತಿದ್ದಾರೆ. ಅದನ್ನು ತಪ್ಪಿಸಿ ಮುಂದಕ್ಕಾದರೂ ಇದನ್ನು ಸರಿಪಡಿಸಿಕೊಳ್ಳಬೇಕೆಂದು ನಾನು ಈ ಬಜೆಟ್ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ನಾವು ಇದರಲ್ಲಿ ಅಳತೆ ಮಾಡಿಕೊಂಡು ಬಂದರೆ, ಯಾವ್ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಕೆಲಸ ಮಾಡುತ್ತಿದ್ದೇವೆಂದು ಎರಡು ಮಾತುಗಳಲ್ಲಿ ಹೇಳುತ್ತೇನೆ. ಮುಖ್ಯವಾಗಿ ಕೃಷಿ ಇಲಾಖೆಯಲ್ಲಿ Crop Insurance Scheme ನಲ್ಲಿ ಸುಮಾರು 6,213 ಕೋಟಿ ರೂಪಾಯಿಗಳಿಂದ ಸುಮಾರು 51 ಲಕ್ಷ ರೈತರಿಗೆ ಪರಿಹಾರ ಸಿಕ್ಕಿದೆ. ಮತ್ತೆ electricity subsidy ಯಲ್ಲಿ ಸುಮಾರು 48,000/- ಕೋಟಿ ರೂಪಾಯಿಗಳಿಂದ 36 ಲಕ್ಷ farmers ಗೆ subsidy ಕೊಟ್ಟಿದ್ದೇವೆ. ಇದು ಏನು ಸಿಕ್ಕಿಲ್ಲ, ಇದು ಖಾಲಿ ಕೊಡ ಮತ್ತು ಚೆಂಬು ಎಂದು ಹೇಳುವುದು ಅಲ್ಲ. ಇದು ನಿದರ್ಶನವಾಗಿ ಕೊಟ್ಟಿರುವುದು. ನಾವು ಸತ್ಯಕ್ಕೆ ದೂರವಾದ ಮಾತನ್ನು ಹೇಳಿದ್ದರೆ, ಈ ರಾಜ್ಯದ ಜನರು ದಂಗೆ ಏಳುತ್ತಿದ್ದರು. ಇದರ ಜೊತೆಗೆ 70,000/- ಕೋಟಿ ರೂಪಾಯಿಗಳನ್ನು 36 ಲಕ್ಷ ರೈತರಿಗೆ ಸಾಲ ನೀಡಿದ್ದೇವೆ. ಇದೂ ಸಹ ಕೊಟ್ಟಿರುವಂಥದ್ದು. ಇದು ಕೇವಲ ಆಶ್ವಾಸನೆ ಅಲ್ಲ. ಈಗಾಗಲೇ Upper Bhadra Project ಗೆ ಯಾವ ರೀತಿ ಮಾಡಬೇಕೆಂದು ಅವರಿಗೆ compensation ಕೊಡುವಂಥದ್ದು ಆಗಿದೆ. ಅಂದರೆ, ಒಂದು ಕಡೆ 30 ಲಕ್ಷ, ಮತ್ತೊಂದು ಕಡೆ 40 ಲಕ್ಷ ಎಂದು ಮಾಡಿ, ಚಿತ್ರದುರ್ಗ ಜಿಲ್ಲೆಯವರೆಗೆ 135 ಕಿಲೋಮೀಟರ್‌ನಷ್ಟು canal ಅನ್ನು ಚಿತ್ರದುರ್ಗ ಪಟ್ಟಣಕ್ಕೆ ಕುಡಿಯುವ ನೀರು ಮತ್ತು ಎಲ್ಲದಕ್ಕೂ ಸಹ ಈ ಒಂದು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಆಮೇಲೆ ಚಾಮರಾಜನಗರ ಜಿಲ್ಲೆಗೆ ಸುಮಾರು 490 ಕೋಟಿ ರೂಪಾಯಿ, ಅಂದರೆ 12,000 ಎಕರೆಗೆ ನೀರಾವರಿ ಮತ್ತು ಅದರ ಜೊತೆಗೆ ಕುಡಿಯುವ ನೀರಿಗೂ ಸಹ ವ್ಯವಸ್ಥೆ ಮಾಡುವುದಕ್ಕೆ ಒಂದು ದೊಡ್ಡ ಯೋಜನೆಯನ್ನು ಮಾಡಿದ್ದಾರೆ. ಅದಕ್ಕೆ

ಚಾಮರಾಜನಗರದ ಭಾಗದಲ್ಲಿರುವಂತಹವರು ಹೆಚ್ಚಿನ ಪ್ರಶಂಸೆ ಕೊಟ್ಟಿದ್ದಾರೆ. ಅಲ್ಲಿಗೆ ಮಾನ್ಯ ಮುಖ್ಯಮಂತ್ರಿಗಳು ಸಹ ಹೋಗಿ ಬಂದಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಇದರ ಜೊತೆಗೆ 12,೦೦೦ ಎಕರೆಗೆ ನೀರಾವರಿಯನ್ನು ನೀಡಿದ್ದಾರೆ. ಚಾಮರಾಜನಗರಕ್ಕೆ ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಯೋಜನೆಯನ್ನು ಮಾಡಿಕೊಟ್ಟಿದ್ದಾರೆ. ಚಾಮರಾಜನಗರಕ್ಕೆ ಈ ರೀತಿ ಕೊಟ್ಟಿರುವುದು ಇದೇ ಮೊದಲನೆ ಬಾರಿಯಾಗಿದೆ. ಮತ್ತೆ ವಿದ್ಯೆಗೆ ಸಂಬಂಧಪಟ್ಟಂತೆ Karnataka Public School ಎಂಬ ಕಾರ್ಯಕ್ರಮವನ್ನು ಕಳೆದ ವರ್ಷ ಪ್ರಾರಂಭ ಮಾಡಿದರು. ಈ ವರ್ಷ ೮೦೦ ಶಾಲೆಗಳು. ಅದರಲ್ಲಿ Asian Development Bank ನ ಸಹಯೋಗದೊಂದಿಗೆ ೫೦೦ ಸರ್ಕಾರಿ ಶಾಲೆಗಳನ್ನು ಪ್ರಾರಂಭ ಮಾಡುತ್ತಿದ್ದಾರೆ. ಅದರ ಜೊತೆಗೆ ೨೦೦ ಶಾಲೆಗಳನ್ನು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ವತಿಯಿಂದ ಮಾಡುತ್ತಿದ್ದಾರೆ. ಮತ್ತೆ 1೦೦ ಶಾಲೆಗಳನ್ನು K.M.E.R.C (Karnataka Mining Environment Restoration Corporation) ವತಿಯಿಂದ ಹೀಗೆ ಒಟ್ಟು 3,೯೦೦ ಕೋಟಿ ರೂಪಾಯಿಗಳನ್ನು ಮುಂದೆ ಬರುವಂತಹ ಮೂರು ವರ್ಷದಲ್ಲಿ ಖರ್ಚು ಮಾಡಲಾಗುವುದು. ಆಮೇಲೆ transfer policy ಯಲ್ಲಿ ಆದಷ್ಟು ಇಲಾಖೆಗಳಲ್ಲಿ counselling process ಮಾಡುತ್ತಿದ್ದಾರೆ. ಈಗ R.D.P.R ನಲ್ಲಿ ಆಗಿದೆ. ಕಂದಾಯ ಇಲಾಖೆಯಲ್ಲಿ ಆಗುತ್ತಿದೆ. ಈಗ ಮುಖ್ಯವಾಗಿ ಶಿಕ್ಷಣ ಇಲಾಖೆಯಲ್ಲಿ counselling process ಪ್ರಾರಂಭವಾಗಿದೆ. ಈಗಾಗಲೇ ಇದರ ಬಗ್ಗೆ ಹಗರಣವೆಂದು ಹೇಳಿದರು. ಈಗ counselling ನಲ್ಲಿ ಯಾವ ರೀತಿಯ ಹಗರಣವೆಂದು ಅವರಿಗೇ ಕಲ್ಪನೆ ಇರಬೇಕು. ನಮ್ಮ ಪ್ರಕಾರ counselling process ಬಹಳ ಪಾರದರ್ಶಕವಾಗಿ ನಡೆಯುವಂಥದ್ದು. ಈಗ transfers ಎಲ್ಲಾ ನಡೆಯುವುದು counselling process ಪ್ರಕಾರವೆಂದು ನಾವೆಲ್ಲರೂ ಅಂದುಕೊಂಡಿದ್ದೇವೆ.

**ಸಭಾಪತಿಯವರು:-** ಮಾನ್ಯ ಎಂ.ಆರ್.ಸೀತಾರಾಂ ರವರೆ, ನಾನು ಶಿಕ್ಷಣ ಸಚಿವನಾಗಿದ್ದಾಗ ಇಡೀ ದೇಶದಲ್ಲಿ ಮೊಟ್ಟ ಮೊದಲನೆಯದಾಗಿ ಶಿಕ್ಷಕರ ವರ್ಗಾವಣೆಗೆ counselling system ಅನ್ನು ತಂದಿದ್ದು. ಅಂದರೆ, ಇಡೀ ದೇಶದಲ್ಲಿಯೇ ಮೊಟ್ಟ ಮೊದಲು.

**ಡಾ: ಎಂ.ಆರ್.ಸೀತಾರಾಂ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿ ಮೊಟ್ಟ ಮೊದಲು ಮಾಡಿದರೂ ಸಹ ಅವರು ಹಗರಣವೆಂದು ಹೇಳುತ್ತಿದ್ದರು. ಅದಕ್ಕೆ ಅವರಿಗೆ ಉತ್ತರ ಕೊಟ್ಟಿದ್ದೇನೆ. ಈ ವರ್ಷ ಶಿಕ್ಷಣ ಇಲಾಖೆಯಲ್ಲಿ 15,000 vacant posts fill ಮಾಡುವುದಕ್ಕೆ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಪ್ರಸಕ್ತ ವರ್ಷದಲ್ಲಿ vacant posts, guest lecturer and teacher's posts fill ಮಾಡುತ್ತಾರೆ. ಮತ್ತೆ Higher Education ನವರು ಸಹ ಹಲವಾರು ಯೋಜನೆಗಳನ್ನು ಮಾಡಿಕೊಂಡು, ಸರ್ಕಾರದ polytechnics and U.V.C.E ಯ ಸರ್ಕಾರದ ಕಾಲೇಜುಗಳನ್ನು improve ಮಾಡುವುದಕ್ಕೆ Asian Development Bank ನಿಂದ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಮತ್ತೆ ಆರೋಗ್ಯ ಕ್ಷೇತ್ರಕ್ಕೆ 900 ಕೋಟಿ ರೂಪಾಯಿಗಳಿಂದ ತಾಲ್ಲೂಕಿನ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಒಂದು ಯೋಜನೆಯನ್ನು ಹಾಕಿ ಅದರ ಜೊತೆಗೆ ಸುಮಾರು 2,500 ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತಹ ಕೆಲಸವನ್ನು ಆರೋಗ್ಯ ಇಲಾಖೆಯವರು ಮಾಡುತ್ತಿದ್ದಾರೆ. ಮತ್ತೆ 1,200 ಕೋಟಿ ರೂಪಾಯಿಗಳಿಂದ Super Specialty Hospital ಗಳಿಗೆ ಮುಖ್ಯವಾಗಿ ಕಾರವಾರದಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ಇರುವ ಶ್ರೀ *ಜಯದೇವ* ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಆಸ್ಪತ್ರೆ ಮತ್ತು ಮೈಸೂರಿನಲ್ಲಿರುವ ಶ್ರೀ *ಜಯದೇವ* ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಈ ಮೂರು ಆಸ್ಪತ್ರೆಗಳನ್ನು upgrade ಮಾಡುವುದಕ್ಕೆ 1,200 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಮತ್ತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಒಟ್ಟು 62,345 ಕೋಟಿ ರೂಪಾಯಿಗಳನ್ನು ಎಲ್ಲಾ ಕಾರ್ಯಕ್ರಮಗಳಿಗೆ ಮೀಸಲಿಟ್ಟು, ಗೃಹಲಕ್ಷ್ಮಿಗೆ 28,000 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಈಗ ಮುಖ್ಯವಾಗಿ ಕೆಲವು ಕಡೆ ನಮ್ಮ ರಾಜ್ಯ ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸಾಲ ತೆಗೆದುಕೊಂಡುಬಿಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ. ಈಗ ಬಜೆಟ್ ಪ್ರಕಾರ ಮಾರ್ಚ್ 31, 2027ನೇ ಇಸವಿಗೆ ನಮ್ಮ ಅಂದಾಜಿನ ಮೇಲೆ ಸುಮಾರು ಏಳು ಲಕ್ಷ ಕೋಟಿಯಷ್ಟು ಸಾಲ ಇರುತ್ತದೆ. ನಾನು ಅದನ್ನು ಸಹ ತಿಳಿಸಬೇಕು. ಅದು ಏನೆಂದರೆ, ಈ ಮಾರ್ಚ್ 31, 2026ಕ್ಕೆ ಇಲಾಖೆಯ ಅಂಕಿ-ಸಂಖ್ಯೆಯಲ್ಲಿ 5.80 ಲಕ್ಷ ಕೋಟಿ ಮಾತ್ರ ಸಾಲವಿದೆ. ಅಂದರೆ, ಪ್ರತಿಯೊಬ್ಬ ಏಳು ಕೋಟಿ ಪ್ರಜೆಗಳ ತಲೆಯ ಮೇಲೆ 82,857/- ಸಾಲವಿದೆ. ಇದನ್ನು ನಾನು ಇದರ ಮಾಹಿತಿಯನ್ನು ಏಕೆ ಕೊಡುತ್ತಿದ್ದೇನೆಂದರೆ, ಕೆಳಮನೆಯಲ್ಲಿ ಮಾನ್ಯ ವಿರೋಧ ಪಕ್ಷ ನಾಯಕರು ನಿನ್ನೆಯ ದಿವಸ ಒಂದು paper statement ಕೊಟ್ಟಿದ್ದಾರೆ. ನಾನು ಅದನ್ನು ಓದಿದ್ದೇನೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

(328) 11.03.2026 06.10 **LL-RN** **(ಸಭಾಪತಿಯವರ ಉಪಸ್ಥಿತಿ)**

**ಡಾ॥ ಎಂ.ಆರ್. ಸೀತಾರಾಂ (ಮುಂದು):**

ಅದೇನೆಂದರೆ, ಒಂದು ಲಕ್ಷ ಚಿಲ್ಲರೆ ಕೋಟಿ ರೂಪಾಯಿಗಳಾಗಿರುತ್ತದೆ. ಇದರಿಂದಾಗಿ, ಈ ಸರ್ಕಾರ ಕರ್ನಾಟಕದ ಜನತೆಯ ಮೇಲೆ ಸಾಲದ ಹೊರೆಯನ್ನು ಹೊರಿಸಿದ್ದಾರೆಂದು ಹೇಳಿದರು. ಕೇಂದ್ರ ಸರ್ಕಾರದಲ್ಲಿ ಶ್ರೀ ಮನಮೋಹನ್ ಸಿಂಗ್‌ರವರು ಈ ದೇಶದ ಪ್ರಧಾನ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ 2014ನೇ ಇಸವಿಯಲ್ಲಿ ನಮ್ಮ ದೇಶದ ಒಟ್ಟು ಸಾಲ ರೂ.55.87 ಲಕ್ಷ ಕೋಟಿಗಳಾಗಿತ್ತು. ಆ ಸಂದರ್ಭದಲ್ಲಿ ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಯ ತಲೆ ಮೇಲೆ ರೂ.46,558 ಗಳಾಗಿತ್ತು. ಅದು ಇಡೀ ಭಾರತ ದೇಶದ ಎಲ್ಲಾ ಪ್ರಜೆಯ ಮೇಲೆ ಇರುವಂತಹ ಸಾಲವಾಗಿರುತ್ತದೆ. ಆದರೆ, ಇವೊತ್ತಿನ ದಿವಸ ನಮ್ಮ ಯೂನಿಯನ್ ಗವರ್ನ್‌ಮೆಂಟ್ ಅಂದರೆ, ಪ್ರಧಾನ ಮಂತ್ರಿಗಳಾಗಿರುವಂತಹ ಶ್ರೀ ನರೇಂದ್ರ ಮೋದಿಯವರು ಹಾಗೂ ವಿತ್ತ ಸಚಿವರಾಗಿರುವಂತಹ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ಇರುವಂತಹ ಸರ್ಕಾರದಲ್ಲಿ ಈ ದೇಶದ ಸಾಲ ಎಷ್ಟಾಗಿದೆ ಎಂದರೆ, ರೂ.197.18 ಲಕ್ಷ ಕೋಟಿಗಳಾಗಿರುತ್ತದೆ. ಅಂದರೆ, ಸುಮಾರು ರೂ.200 ಲಕ್ಷ ಕೋಟಿಗಳಾಗುತ್ತದೆ. ಆ ಸಾಲಕ್ಕೆ ಇವೊತ್ತಿನ ದಿವಸ ದೇಶದ ಪ್ರತಿಯೊಬ್ಬ ಪ್ರಜೆಯ ಮೇಲೆ ರೂ.1,40,842 ಗಳಾಗಿರುತ್ತದೆ. ಆದುದರಿಂದ, ನೀತಿ ಹೇಳುವವರು ಹೇಸಿಗೆ ಮಾಡಬಾರದು. ಆದರೆ ನಾನು ಹೇಳುವುದೇನೆಂದರೆ, ನಾವೆಲ್ಲರೂ ಸಹ ಒಂದೇ ರೀತಿಯಾದಂತಹ ಎಕಾನಮಿಯಲ್ಲಿ ನಡೆದುಕೊಂಡು ಹೋಗುವಾಗ ಉಳ್ಳವರು, ಇಲ್ಲದವರಿಗೆ ಕೊಟ್ಟುಕೊಂಡೇ ಬೆಳೆದುಕೊಂಡು ಹೋಗಬೇಕಾಗುತ್ತದೆ. ಆ system ನಲ್ಲಿ ರಾಜ್ಯ ಸರ್ಕಾರ ಏನು ಮಾಡಿದೆ,... ಶ್ರೀ ನರೇಂದ್ರ ಮೋದಿಯವರೇ, ಈ ಹಿಂದೆ ಮಾತನಾಡುವ ಸಂದರ್ಭದಲ್ಲಿ ಅಂದರೆ, ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು "ಕರ್ನಾಟಕ ರಾಜ್ಯ ಸರ್ಕಾರ ದಿವಾಳಿಯಾಗುತ್ತದೆ. ಇನ್ನು ದುಡ್ಡು ಹುಟ್ಟುವುದಿಲ್ಲ. It would be a fake stake. ಆದರೆ, ಇವೊತ್ತಿನ ದಿವಸದ ದಿನಪತ್ರಿಕೆಯಲ್ಲಿ ಅಸ್ಸಾಂ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು, ತಮ್ಮ ರಾಜ್ಯದ ಪ್ರತಿಯೊಬ್ಬ ಮಹಿಳೆಯರ ಬ್ಯಾಂಕ್ ಖಾತೆಗೆ ರೂ.8,000 ಅಥವಾ ರೂ.9,000 ಹಣ ತುಂಬಿರುತ್ತಾರೆ. ಕಳೆದ ಬಿಹಾರ್ ಚುನಾವಣೆಯಲ್ಲಿ ಆ ರಾಜ್ಯದ ಪ್ರತಿಯೊಬ್ಬ ಮಹಿಳೆಯರ ಬ್ಯಾಂಕ್ ಖಾತೆಗೆ ರೂ.10,000 ಹಣ ತುಂಬಿರುತ್ತಾರೆ. ಆದರೆ, ಈ ಹಿಂದೆ ನಮ್ಮ ಸರ್ಕಾರ ಚುನಾವಣಾ ಪ್ರಣಾಳಿಕೆಯಲ್ಲಿ, "ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ, ಗ್ಯಾರಂಟಿ ಯೋಜನೆಗಳನ್ನು ಕೊಡುತ್ತೇವೆ" ಎಂದು ಹೇಳಿದ್ದೆವು. ಅದರಂತೆ, ಜನ ನಮಗೆ ಮತ ಕೊಟ್ಟು ಗೆಲ್ಲಿಸಿರುತ್ತಾರೆ. ತದನಂತರ, ನಾವು ಸರ್ಕಾರ ರಚನೆ ಮಾಡಿದ ನಂತರ, ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ ರೀತಿ, ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡಿರುತ್ತೇವೆ. ಆದರೆ, ಬಿ.ಜೆ.ಪಿ.ಯವರು ಚುನಾವಣೆಗೆ ಮೊದಲೇ ಪ್ರತಿಯೊಬ್ಬ ಮಹಿಳೆಯರಿಗೆ ರೂ.10,000 ಗಳನ್ನು ಕೊಡುತ್ತಿದ್ದಾರೆ. ಬಿ.ಜೆ.ಪಿ. ಪಕ್ಷದವರು ಬಿಹಾರ ರಾಜ್ಯದಲ್ಲಿ ಪ್ರತಿಯೊಬ್ಬ ಮಹಿಳೆಯರಿಗೆ ರೂ.10,000 ಹಾಗೂ ಅಸ್ಸಾಂ ರಾಜ್ಯದಲ್ಲಿ ಪ್ರತಿಯೊಬ್ಬ ಮಹಿಳೆಯರಿಗೆ ರೂ.9,000 ಗಳನ್ನು ನಿನ್ನೆಯ ದಿವಸ ಕೊಟ್ಟಿರುತ್ತಾರೆ. ತದನಂತರ, ನಾಳೆ ಅಥವಾ ನಾಡಿದ್ದು ಚುನಾವಣೆಯನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

ಘೋಷಣೆ ಮಾಡುತ್ತಾರೆ. ಆದುದರಿಂದ, ಕೇಂದ್ರ ಸರ್ಕಾರದ ಯೋಜನೆಗಳಿಂದ ರಾಜ್ಯ ಸರ್ಕಾರ ಕಲಿಯುವುದಕ್ಕಿಂತಲೂ, ನಮ್ಮ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಕೇಂದ್ರ ಸರ್ಕಾರ ಕಲಿತಿರುತ್ತದೆ. ಅದರಂತೆ, ನಾವು ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳನ್ನು ಎಲ್ಲಾ ರಾಜ್ಯಗಳಲ್ಲಿ ಹಾಕಿಕೊಂಡು ಬರುತ್ತಿದ್ದಾರೆ. ಇದನ್ನು ಹೇಳುತ್ತಾ, ವಿರೋಧ ಪಕ್ಷದವರು ಸುಮ್ಮನೆ ನಮ್ಮ ಸರ್ಕಾರದ ವಿರುದ್ಧ comment ಮಾಡುತ್ತಾ, "ಈ ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಸರ್ಕಾರ ದಿವಾಳಿಯಾಗುತ್ತದೆ. ಕೆಲಸದವರು ಸಿಗುತ್ತಿಲ್ಲ; ಎಲ್ಲರೂ ಸೋಮಾರಿಗಳಾಗುತ್ತಿದ್ದಾರೆ ಎಂದು ಹೇಳುವುದೆಲ್ಲವನ್ನೂ ಬಿಟ್ಟು ಎಲ್ಲರೂ ಸೇರಿ ಕರ್ನಾಟಕ ರಾಜ್ಯದ ಒಳ್ಳೆಯದಕ್ಕೆ ಕೆಲಸ ಮಾಡಬೇಕು. ಅದರಲ್ಲಿಯೂ ಮುಖ್ಯವಾಗಿ, ಶ್ರೀ ಸಿದ್ಧರಾಮಯ್ಯನವರು ಈ ರಾಜ್ಯದಲ್ಲಿ 17 ಬಜೆಟ್ ಮಂಡನೆ ಮಾಡಬೇಕೆಂದರೆ, ಏನಾದರೂ ಮುಖ್ಯವಾದ ವಿಚಾರ ಇರಬೇಕು. ಇಲ್ಲವಾದರೆ ಅದು ಸಾಧ್ಯವಿಲ್ಲ. ಈ ಮಾತನ್ನು ಅವರೇ ಇವೊತ್ತಿನ ದಿವಸ ಹೇಳಿರುತ್ತಾರೆ. ಅದೇನೆಂದರೆ, "ಶ್ರೀ ಹೆಚ್.ಡಿ. ದೇವೇಗೌಡರವರೇ ನನಗೆ ಮೊದಲಿಗೆ ಅವಕಾಶವನ್ನು ಕಲ್ಪಿಸಿಕೊಟ್ಟರು" ಎಂದು ಹೇಳಿರುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಾ, "ಈ ದೇಶದ ಸಾಲ ರೂ.54 ಲಕ್ಷ ಕೋಟಿಗಳಿಂದ ರೂ.200 ಕೋಟಿಗಳಿಗೆ ತಲುಪಿದೆ ಎಂದು ಹೇಳಿದರು. 1952 ನೇ ಇಸವಿಯಿಂದ 2014 ರವರೆಗೆ ರೂ.54 ಲಕ್ಷ ಕೋಟಿ ಮಾತ್ರ ಸಾಲವಾಗಿತ್ತು. ಆದರೆ, ಬಿ.ಜೆ.ಪಿ. ಸರ್ಕಾರ ಕೇವಲ 11 ವರ್ಷದಲ್ಲಿ ರೂ.150 ಲಕ್ಷ ಕೋಟಿ ಸಾಲ ಮಾಡಿದಾಗ, ಆ ಹಣದಿಂದ ಏನು ಮಾಡಿದ್ದಾರೆಂಬುದು ಬೇಕಾಗುತ್ತದೆ.

**ಡಾ॥ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಸರ್ಕಾರ ಜನರ ಮೇಲೆ ಸಾಲದ ಹೊರೆಯನ್ನು ಹೊರಿಸಿದ್ದಾರೆ" ಎಂದು ಕೆಳಮನೆಯಲ್ಲಿ ವಿರೋಧ ಪಕ್ಷದ ನಾಯಕರು ಹೇಳಿದರು. ಏಕೆಂದರೆ, ನಾವೆಲ್ಲರೂ ಜವಾಬ್ದಾರಿ ಜಾಗದಲ್ಲಿ ಇರುವಾಗ, ನಾವು ಯಾವತ್ತೂ ಕೂಡ ಆರ್ಥಿಕ ಇತಿ-ಮಿತಿಗಳನ್ನು ನೋಡಿ ಬಜೆಟ್ ಮಂಡನೆ ಮಾಡುವುದು ಒಳ್ಳೆಯದು. ನಾನು ಇದನ್ನು ಏತಕ್ಕೆ ಬಿಡಿಸಿ ಹೇಳುತ್ತಿದ್ದೇನೆ ಎಂದರೆ, 31ನೇ ಮಾರ್ಚ್, 2026ಕ್ಕೆ ನಮ್ಮ ರಾಜ್ಯದ ಸಾಲ ಎಷ್ಟು ಇರುತ್ತದೆ ಎಂದರೆ,, ರೂ.5.8 ಲಕ್ಷ ಕೋಟಿಗಳಾಗಿರುತ್ತದೆ. 31ನೇ ಮಾರ್ಚ್, 2027ಕ್ಕೆ ಅದು ಸುಮಾರು ರೂ.7 ಲಕ್ಷ ಕೋಟಿಗಳಾಗುತ್ತದೆ. ಆದರೆ, ಇವೊತ್ತಿನ ದಿವಸ ಅದನ್ನು projected ಸಾಲ ಎಷ್ಟು ಇದೆ ಎಂಬುದನ್ನು ಈ ದಿನಕ್ಕೆ ಲೆಕ್ಕಾಚಾರ ಹಾಕಿ ನಮ್ಮ ರಾಜ್ಯದ ಪ್ರತಿಯೊಬ್ಬ ಪ್ರಜೆಯ ಮೇಲೆ ರೂ.1 ಲಕ್ಷ ಚಿಲ್ಲರೆ ಆಗಿದೆ ಎಂದು ಹೇಳಿರುತ್ತಾರೆ. ಆದರೆ, ಇವೊತ್ತಿಗೆ ರೂ.80,000 ಗಳಾಗಿರುತ್ತದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**ಡಾ॥ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿರುವುದಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸದಸ್ಯರು ಯೀಲ್ಡ್ ಆಗಿಲ್ಲವೆಂದರೆ, ತಮಗೆ ಮಾತನಾಡಲು ಅವಕಾಶ ಇರುವುದಿಲ್ಲ. ಹಾಗಾಗಿ, ಅವರು ಮಾತನಾಡುವುದಕ್ಕೆ ತೊಂದರೆ ಮಾಡಬೇಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರನ್ನು ಡಿಸ್ಟರ್ಬ್ ಮಾಡುವುದಿಲ್ಲ. ಅವರು ಹೇಳರುವುದನ್ನು ನಾನು ಕೇಳಕೊಂಡಿದ್ದೇನೆ. ಅದಕ್ಕಾಗಿ ನಾನು ಅವರನ್ನು ಡಿಸ್ಟರ್ಬ್ ಮಾಡಿರುವುದಿಲ್ಲ. ಆದರೆ, ಒಂದು ವಿಚಾರವನ್ನು ಹೇಳಬಯಸುವುದೇನೆಂದರೆ, ಅಸೆಟ್ ಕ್ರಿಯೇಷನ್ ಮಾಡುವುದಕ್ಕೆ ಸಾಲ ಮಾಡಿದ್ದರೆ, ಏನೂ ತಪ್ಪಿಲ್ಲ. ನಮ್ಮ ದೇಶದಲ್ಲಿ ಸಾಲ ಮಾಡಿದ್ದರಿಂದ, ಬೇಕಾದಷ್ಟು ಅಸೆಟ್ ಕ್ರಿಯೇಷನ್ ಆಗಿರುತ್ತದೆ. ಅದು ಅವರಿಗೂ ಸಹ ಗೊತ್ತಿದೆ. ಆದರೆ, ಅವರು ಅದನ್ನು ಒಪ್ಪುತ್ತಿಲ್ಲ. ಅಷ್ಟೇ.

**ಡಾ॥ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾನು ಅಂಕಿ-ಅಂಶಗಳನ್ನು ಮಾತ್ರ ಹೇಳುತ್ತಿದ್ದೇನೆ. ಅಸೆಟ್ ಕ್ರಿಯೇಷನ್ ಆಗಿರುವುದನ್ನು ನಾವು ಈಗಾಗಲೇ ತೋರಿಸಿದ್ದೇವೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಅದನ್ನು ನೋಟ್ ಮಾಡಿಕೊಂಡು, ತಮಗೆ ಅವಕಾಶ ಸಿಕ್ಕಾಗ ಹೇಳಿ.

**ಡಾ॥ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಇದೊಂದು ಸಮತೋಲಿತ ಬಜೆಟ್ ಎಂದು ಹೇಳದ್ದು, ಅದೇ ಕಾರಣಕ್ಕಾಗಿಯೇ. ಒಂದು ಲಕ್ಷ ಚಿಲ್ಲರೆ ಕೋಟಿ ರೂಪಾಯಿಗಳ ಹಣವನ್ನು ಗ್ಯಾರಂಟಿ ಯೋಜನೆಯಡಿಯಲ್ಲಿ ನಾವು ನಮ್ಮ ರಾಜ್ಯದ ಎಲ್ಲಾ ಜನರಿಗೆ welfare measures ಗಾಗಿ ಕೊಟ್ಟಿರುತ್ತೇವೆ. ರೂ.1,27,000 ಕೋಟಿ ಕ್ಯಾಪಿಟಲ್ ಅಸೆಟ್ಸ್ ಆಗಿರುತ್ತದೆ. ಅದರಿಂದಾಗಿ, ರಾಜ್ಯದ ಎಲ್ಲಾ ಜನರ ಅಭಿವೃದ್ಧಿ ಕೂಡ ಆಗುತ್ತಿದೆ. ಇದರ ಜೊತೆಗೆ, ನಾನು ಈಗಾಗಲೇ ಏನು ಹೇಳದ್ದೇನೆಂದರೆ..., ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರು ಏನು ಹೇಳದ್ದಾರೆ..., ಮಾನ್ಯ ಸಭಾಪತಿಯವರೇ, ಆಯಿತು. ಅವರು ಮಾತನಾಡಿದ ನಂತರ ನಾನು ಮಾತನಾಡುತ್ತೇನೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸೀತಾರಾಂರವರೇ, ಒಂದು ನಿಮಿಷ ತಾವು ಅನುಮತಿ ಕೊಟ್ಟರೆ...,

**ಡಾ॥ ಎಂ.ಆರ್. ಸೀತಾರಾಂ:-** ಇಲ್ಲ ಆಗುವುದಿಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸೀತಾರಾಂರವರು ನನಗೆ ಬಹಳ ಬೆಸ್ಟ್ ಫ್ರೆಂಡ್ ಆಗಿದ್ದಾರೆ. ಹಾಗಾಗಿ, ಒಂದು ನಿಮಿಷ ಅವಕಾಶ ಕೊಡಿ ಮಾನ್ಯ ಸೀತಾರಾಂರವರೇ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸೀತಾರಾಂರವರೇ, ನಮಗೂ ಒಂದು ನಿಮಿಷ ಅವಕಾಶ ಕೊಡಿ.

**ಡಾ॥ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಇಲ್ಲ ಆಗುವುದಿಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸೀತಾರಾಂರವರು ನನಗೆ ಬಹಳ ಬೆಸ್ಟ್ ಫ್ರೆಂಡ್ ಆಗಿದ್ದಾರೆ.

**ಸಭಾಪತಿಯವರು:-** ಮಾನ್ಯ ಸೀತಾರಾಂರವರಿಗೆ ಬಹಳ ಮಂದಿ ಬೆಸ್ಟ್ ಫ್ರೆಂಡ್ ಇದ್ದಾರೆ, ಈ ಸದನದಲ್ಲಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅವರಿಗೆ ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅವರು ಈ ದೇಶದಿಂದ ಹೊರಗೆ ಇಡೀ ಪ್ರಪಂಚವನ್ನು ಸುತ್ತಾಡಿ ಬರಲಿ. ಇಡೀ ಭಾರತ ದೇಶದ ಬಗ್ಗೆ ಎಂತಹ ಒಂದು ಒಳ್ಳೆಯ ಇಮೇಜ್ ಬಂದಿದೆ. ಇಡೀ ಪ್ರಪಂಚದಲ್ಲಿ ನಮ್ಮ ದೇಶ 4ನೇ ಉನ್ನತ ದೇಶವಾಗಿರುತ್ತದೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅಮೇರಿಕಾ ದೇಶದ ಪ್ರೆಸಿಡೆಂಟ್ ಡೋನಾಲ್ಡ್ ಟ್ರಂಪ್‌ರವರು ನಮ್ಮ ದೇಶದ ಬಗ್ಗೆ ಮತ್ತು ಶ್ರೀ ನರೇಂದ್ರ ಮೋದಿಯವರ ಬಗ್ಗೆ ಏನು ಹೇಳಿದ್ದಾರೆಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಂಡರೆ ಒಳ್ಳೆಯದು. ಶ್ರೀ ನರೇಂದ್ರ ಮೋದಿಯವರು ಕೇವಲ ದೇಶಗಳನ್ನು ಸುತ್ತಾಡಿ ಬರುವುದು ಬಿಟ್ಟರೆ ಬೇರೆ ಏನೂ ಮಾಡಿರುವುದಿಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ನಾನು ಮತ್ತು ಡಾ||ಸೀತಾರಾಂರವರೇ ಒಟ್ಟಿಗೆ ಕುಳಿತುಕೊಂಡು ಮಾತನಾಡಿರುತ್ತೇವೆ. ಬೇಕಾದರೆ ತಾವೇ ಅವರನ್ನು ಕೇಳಿ.

**(ಗೊಂದಲ)**

**ಡಾ|| ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಶ್ರೀ ನರೇಂದ್ರ ಮೋದಿಯವರು ಬಂದ ನಂತರ ಈ ದೇಶಕ್ಕೆ ಒಂದು ಒಳ್ಳೆಯ ಇಮೇಜ್ ಬಂದಿರುತ್ತದೆ. ಇವೊತ್ತಿನ ದಿವಸ ನಮ್ಮ ದೇಶದ Airports ಗಳನ್ನು ನೋಡಿ, ರಸ್ತೆಗಳನ್ನು ನೋಡಿ, ಮೆಡಿಕಲ್ ಕಾಲೇಜುಗಳನ್ನು ನೋಡಲಿ, ಐ.ಐ.ಟಿ. ಕಾಲೇಜುಗಳನ್ನು ನೋಡಿ, ಐ.ಐ.ಎಂ. ಕಾಲೇಜುಗಳನ್ನು ನೋಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಮ್ಮ ದೇಶದಲ್ಲಿ ರೂ.150 ಲಕ್ಷ ಕೋಟಿ ಖರ್ಚು ಮಾಡಿ, ಅಸೆಟ್ ಕ್ರಿಯೇಟ್ ಮಾಡಿದ್ದಾರೆಂದು ಮಾನ್ಯ ರವಿಕುಮಾರ್‌ರವರು ಹೇಳಿದರು. ಪಂಡಿತ್ ಜವಾಹರಲಾಲ್ ನೆಹರುರವರು 26 ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪನೆ ಮಾಡಿದ್ದರು. ಅವುಗಳೆಂದರೆ, ಹೆಚ್.ಎಂ.ಟಿ., ಬಿ.ಇ.ಎಲ್., ಇತ್ಯಾದಿ ಎಲ್ಲಾ ಉದ್ದಿಮೆಗಳನ್ನು ಮಾರಾಟ ಮಾಡಿರುವುದು ಯಾರು? ಇದನ್ನು ಅಸೆಟ್ ಕ್ರಿಯೇಟ್ ಎಂದು ಹೇಳುತ್ತಾರೆಯೇ? ಅವುಗಳನ್ನು ಕೇವಲ ಇಬ್ಬರು ಬಂಡವಾಳಶಾಹಿಗಳಿಗೆ ಮಾರಾಟ ಮಾಡಿರುವುದು ಅಸೆಟ್ ಕ್ರಿಯೇಟ್ ಮಾಡಿರುವುದು ಎಂದು ಹೇಳಿದರೆ, ಇದು ಹಾಸ್ಯಾಸ್ಪದ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇವರು ಹೆಚ್.ಎ.ಎಲ್. ಅನ್ನು ಬಂದ್ ಮಾಡುವುದಕ್ಕೆ ಹೊರಟಿದ್ದರು. ಆದರೆ, ಇವೊತ್ತಿನ ದಿವಸ ಹೆಚ್.ಎ.ಎಲ್. ನ ಉತ್ಪನ್ನಗಳನ್ನು ಇಡೀ ಪ್ರಪಂಚ ಒಪ್ಪಿಕೊಳ್ಳುತ್ತಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದರ ಜೊತೆಗೆ, ಡೊನಾಲ್ಡ್ ಟ್ರಂಪ್ ಏನು ಹೇಳಿದ್ದಾರೆಂಬುನ್ನು ಇವರು ಒಮ್ಮೆ ಕೇಳಲಿ. ಇವರು ಇಡೀ ಪ್ರಪಂಚದಲ್ಲಿ ನಮ್ಮ ದೇಶಕ್ಕೆ ಒಳ್ಳೆಯ ಇಮೇಜ್ ಬಂದಿದೆಯೆಂದು ಹೇಳುವುದಕ್ಕೆ ಹೊರಟಿದ್ದಾರೆ. ಆದರೆ, ಅಲ್ಲಿ ಅಮೇರಿಕಾ ದೇಶದ ಡೊನಾಲ್ಡ್ ಟ್ರಂಪ್, "ನಾವು ಹೇಳಿದ ಹಾಗೆ ಭಾರತ ದೇಶದವರು ಕುಣಿಯುತ್ತಾರೆ" ಎಂದು ಹೇಳಿರುತ್ತಾರೆ. ನಮ್ಮ ದೇಶದಲ್ಲಿ ಈ ರೀತಿಯೇ ನಮ್ಮ ಮಾನ

ಮರ್ಯಾದೆ ತೆಗೆಯುವುದು? ಹಾಗಾಗಿ, ಮಾನ್ಯ ಸೀತಾರಾಂರವರು ಬಜೆಟ್ ಮೇಲೆ ಏನೋ ಮಾತನಾಡುತ್ತಿದ್ದಾರೆ. ಹಾಗಾಗಿ, ಅವರು ಮಾತನಾಡುವುದಕ್ಕೆ ತಾವು ಅವಕಾಶ ಕೊಡಿ.

**ಸಭಾಪತಿಯವರು:-** ಆಯಿತು, ಸಾಕು. ಮಾನ್ಯ ಸೀತಾರಾಂರವರೇ, ತಾವು ಈಗ ಮಾತನಾಡಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇವರು ಹೆಚ್.ಎ.ಎಲ್. ಅನ್ನು ಬಂದ್ ಮಾಡುವುದಕ್ಕೆ ಹೊರಟ್ಟಿದ್ದರು. ಆದರೆ, ಇವೊತ್ತಿನ ದಿವಸ ಹೆಚ್.ಎ.ಎಲ್. ತುಂಬಾ ಪವರ್‌ಫುಲ್ ಆಗಿದ್ದು, ಇಡೀ ಪ್ರಪಂಚವೇ ಅದನ್ನು ಮೆಚ್ಚುತ್ತಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸೀತಾರಾಂರವರೇ, ತಾವು ಮಾತನಾಡುತ್ತೀರೋ, ಇಲ್ಲವೋ?

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸೀತಾರಾಂರವರು ನಮ್ಮ very best friend.

**ಸಭಾಪತಿಯವರು:-** ತಾವು ಈಗ ಮಾತನಾಡುವುದು ಬೇಡ.

**ಡಾ॥ ಎಂ.ಆರ್. ಸೀತಾರಾಂ:-** ಮಾನ್ಯ ನವೀನ್‌ರವರೇ, ತಾವು ಆನಂತರ ಮಾತನಾಡಿ. ಈಗ ದಯಮಾಡಿ ಕುಳತುಕೊಳ್ಳಿ.

**ಸಭಾಪತಿಯವರು:-** ಮಾನ್ಯ ಸೀತಾರಾಂರವರೇ, ಮಾನ್ಯ ನವೀನ್‌ರವರ ಮಾತು ಕೇಳದರೆ, "ಗಿಡದ್ದಾಗಿನ ಮಂಗ್ಯಾ ಕೈಬಿಡುತ್ತದೆ".

**ಡಾ॥ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಮಾನ್ಯ ಸಿದ್ಧರಾಮಯ್ಯನಂತಹವರು 17 ಬಜೆಟ್‌ಗಳನ್ನು ಕೊಡಬೇಕೆಂದರೆ, ಅದು ಈ ರಾಜ್ಯದಲ್ಲಿ... ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಕೆ ನೀಡಿರುತ್ತಾರೆ. ಅದೇನೆಂದರೆ, "ಇದಕ್ಕೆ ನಾನು ನಮ್ಮ ಶ್ರೀ ಹೆಚ್. ಡಿ. ದೇವೇಗೌಡರವರಿಗೆ ಕ್ರೆಡಿಟ್ ಕೊಡಬೇಕು" ಎಂದು ಹೇಳರುತ್ತಾರೆ. ಏಕೆಂದರೆ, ನಾನು ಆಗ ಕಂದಾಯ ಇಲಾಖೆಯ ಖಾತೆಯನ್ನು ಕೇಳದ್ದೆನು.

**ಸಭಾಪತಿಯವರು:-** ಅದಕ್ಕೆ ನಾನೇ ಪ್ರತ್ಯಕ್ಷ ಸಾಕ್ಷಿಯಾಗಿರುತ್ತೇನೆ.

**ಡಾ॥ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಹೌದು. ತಾವೇ ಅದಕ್ಕೆ ಸಾಕ್ಷಿಯಾಗಿರುತ್ತೀರಿ. ಆ ಸಂದರ್ಭದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಕಂದಾಯ ಇಲಾಖೆಯ ಖಾತೆಯನ್ನು ಕೇಳರುತ್ತಾರೆ. ಆದರೆ, ಆ ಖಾತೆಯನ್ನು ಮಾನ್ಯ ಹೆಚ್.ಡಿ. ದೇವೇಗೌಡರವರು ಶ್ರೀ ಆರ್.ಎಲ್. ಜಾಲಪ್ಪನವರಿಗೆ ಕೊಟ್ಟಿರುತ್ತಾರೆ.

**ಸಭಾಪತಿಯವರು:-** ಆ ಸಂದರ್ಭದಲ್ಲಿ ನಾನು ಹಾಗೂ ಇತರರು ಸಭೆಯಲ್ಲಿ ಇದ್ದೆವು. ಆಗ ಮಾನ್ಯ ಹೆಚ್.ಡಿ. ದೇವೇಗೌಡರವರು, ಮಾನ್ಯ ಸಿದ್ಧರಾಮಯ್ಯನವರಿಗೆ, "ತಾವು ಆರ್ಥಿಕ ಇಲಾಖೆಯ ಖಾತೆಯನ್ನು ತೆಗೆದುಕೊಳ್ಳಿ" ಎಂದು ಹೇಳದರು. ಅದಕ್ಕೆ ಮಾನ್ಯ ಸಿದ್ಧರಾಮಯ್ಯನವರು ಹಿಂದೆ-ಮುಂದೆ ನೋಡುತ್ತಾ, ಆ ಖಾತೆಯನ್ನು ಬೇರೆಯವರಿಗೆ

ನೀಡಬೇಕೆಂದು ಮತ್ತಿಬ್ಬರ ಹೆಸರನ್ನು ಮಾನ್ಯ ಸಿದ್ದರಾಮಯ್ಯನವರೇ ಸೂಚಿಸಿರುತ್ತಾರೆ. ಅದಕ್ಕೆ ಮಾನ್ಯ ಹೆಚ್.ಡಿ. ದೇವೇಗೌಡರವರು ಒಪ್ಪಲೇ ಇಲ್ಲ. ಬದಲಾಗಿ, "ತಾವೇ ಈ ಖಾತೆಯನ್ನು ನಿಭಾಯಿಸಬೇಕು" ಎಂದು ಹೇಳಿರುತ್ತಾರೆ. ಆ ದಿನ ನಡೆದಂತಹ ಮೀಟಿಂಗ್ ನಾನು ಹಾಗೂ ಇತರರು ಇದ್ದೆವು.

**ಡಾ॥ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೇ, ಹೌದು ಸರಿ ಇದೆ. ಇಂತಹ ಮನುಷ್ಯರು 17 ಬಜೆಟ್ ಮಂಡನೆ ಮಾಡಿದಂತಹ ಸಂದರ್ಭದಲ್ಲಿ, ಮುಂದೆ ನಮ್ಮ ಹೈಕಮಾಂಡ್ 'ಓಕೆ' ಎಂದರೆ, ಮಾನ್ಯ ಸಿದ್ದರಾಮಯ್ಯನವರು ಮುಂದೆ 18ನೇ ಅಥವಾ 19ನೇ ಬಜೆಟ್ ಅನ್ನು ಸಹ ಮಂಡನೆ ಮಾಡಬಹುದಾಗಿರುತ್ತದೆ. ಆದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಸದಸ್ಯರೆಲ್ಲರೂ ಇದನ್ನು ಸ್ವಾಗತಿಸಬೇಕಾಗಿತ್ತು. ನಮ್ಮ ರಾಜ್ಯದಲ್ಲಿ ಮೊದಲನೇ ವ್ಯಕ್ತಿ ಯಾರಾದರೂ ಒಬ್ಬರೂ..., ಇಡೀ ವಿರೋಧ ಪಕ್ಷದವರು, ರಾಜಕೀಯ ವ್ಯವಸ್ಥೆಯಲ್ಲಿ ಯಾರಾದರೂ ಒಬ್ಬರು, "ಮಾನ್ಯ ಸಿದ್ದರಾಮಯ್ಯನವರು ಈ ರೀತಿ 17ನೇ ಬಜೆಟ್ ಮಂಡನೆ ಮಾಡಿದ್ದಾರೆ. ಅದರಿಂದಾಗಿ, ನಮ್ಮ ರಾಜ್ಯಕ್ಕೆ ಒಳ್ಳೆಯದಾಗಿದೆ. ಅವರಿಗೂ ಒಳ್ಳೆಯದಾಗಲಿ" ಎಂದು ಒಂದು ಮಾತನ್ನು ಯಾರೂ ಕೂಡ ಹೇಳಿರುವುದಿಲ್ಲ. ಅಂದರೆ, ವಿರೋಧ ಪಕ್ಷದ ಬಗ್ಗೆ ಮಾನ್ಯ ಡಿ.ಎಸ್. ಅರುಣ್‌ರವರು ಮಾತನಾಡುತ್ತಾ, "ಬಹಳಷ್ಟು ರಾಜಕೀಯ ಮಾಡೋಣ, ಮಟ್ಟೋಣ" ಎಂದು ಹೇಳಿದರು. ಆದರೆ, ಡಿಪ್ಲೋಮೆಸಿ ರಾಜಕೀಯದ ರಾಜಕಾರಣ ಕೂಡ ಮುಖ್ಯವಾಗಿರುತ್ತದೆ. ಅದನ್ನು ಅವರು ಮತ್ತು ನಾವು ಒಪ್ಪಬೇಕು. ಈಗಾಗಲೇ ಮಾನ್ಯ ಮಹಿಳಾ ಸದಸ್ಯರು ಮಾತನಾಡುವಾಗ ನಾನು ಒಂದು ಮಾತನ್ನು ಹೇಳಿರುತ್ತೇನೆ. ಅದೇನೆಂದರೆ, "ಶ್ರೀ ಬಿ.ಎಸ್. ಯಡಿಯೂರಪ್ಪನವರು ಶಿವಮೊಗ್ಗ ಜಿಲ್ಲೆಯನ್ನು ಅಭಿವೃದ್ಧಿ ಮಾಡಬೇಕು. ಅದರಂತೆ, ಅವರು ಶಿವಮೊಗ್ಗವನ್ನು ಅಭಿವೃದ್ಧಿ ಮಾಡಿರುತ್ತಾರೆ, ನಿಜ. ಆದರೆ, ಇಡೀ ರಾಜ್ಯದ ಅಭಿವೃದ್ಧಿ ಆಗಿರುವುದಿಲ್ಲವೆಂದು ನಾನು ಹೇಳಿರುತ್ತೇನೆ. ಹಾಗಾಗಿ, ಇಡೀ ರಾಜ್ಯದ ಅಭಿವೃದ್ಧಿ ಆಗುವಂತಹ ಕೆಲಸ ಆಗಬೇಕು. ಮಾನ್ಯ ಸಿದ್ದರಾಮಯ್ಯನವರು ಆ ರೀತಿಯಾಗಿ 17 ಬಜೆಟ್ ಮಂಡನೆ ಮಾಡಿದ್ದಾರೆ. ಅದನ್ನು ವಿರೋಧ ಪಕ್ಷದ ಒಬ್ಬ ನಾಯಕರುಗಳಾದರೂ, ಈ ರಾಜಕೀಯ ವ್ಯವಸ್ಥೆಯಲ್ಲಿ ಅಭಿನಂದನೆ ಮಾಡಲಿಲ್ಲ. ಆದರೆ, ಅದನ್ನು ರಾಜ್ಯದ ಜನರು ಮೆಚ್ಚಿದ್ದಾರೆ. ಈ ಭಾರತೀಯ ಜನತಾ ಪಾರ್ಟಿಯವರು ಅದನ್ನು ವೆಲ್‌ಕಮ್ ಮಾಡಿಲ್ಲವೆಂದರೆ, ಏನೂ ಚಿಂತೆ ಇಲ್ಲ. ಈ ರಾಜ್ಯದ ಬಹುತೇಕ ಜನ ಅಂದರೆ, ಶೇಕಡ 90 ರಷ್ಟು ಜನ ಅದನ್ನು ವೆಲ್‌ಕಮ್ ಮಾಡಿದ್ದಾರೆ

**ಶ್ರೀ ಕೆ.ಎಸ್. ನವೀನ್:–** ಮಾನ್ಯ ಸಭಾಪತಿಯವರೇ, ನಾನು ಅದನ್ನು ಅಭಿನಂದಿಸಿರುತ್ತೇನೆ. ಅಂದರೆ, "ಮಾನ್ಯ ಸಿದ್ದರಾಮಯ್ಯನವರಿಗೆ 17 ಬಜೆಟ್‌ಗಳನ್ನು ಮಂಡನೆ ಮಾಡುವಂತಹ ಯೋಗ ಇದೆ. ಆದರೆ, ಯೋಗ್ಯತೆ ಇಲ್ಲ" ಎಂದು ಹೇಳಿರುತ್ತೇನಷ್ಟೇ.

**ಡಾ॥ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೇ, ಬಜೆಟ್ ಭಾಷಣದಲ್ಲಿ ಒಬ್ಬರು ಇಬ್ಬರು ಅಲ್ಲ. ಇಡೀ ರಾಜಕೀಯ ವ್ಯವಸ್ಥೆಯಲ್ಲಿ, ಯಾವುದೇ ಒಂದು ಪತ್ರಿಕಾ ಹೇಳಿಕೆಯಲ್ಲಾದರೂ ಭಾರತೀಯ ಜನತಾ ಪಕ್ಷದ ಸದಸ್ಯರು ಅದನ್ನು ಮೆಚ್ಚಿರುವುದಿಲ್ಲ ಮತ್ತು ಅದನ್ನು ವೆಲ್‌ಕಮ್ ಮಾಡಿರುವುದಿಲ್ಲ.

**ಶ್ರೀ ಡಿ.ಎಸ್. ಅರುಣ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಡಾ॥ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಅರುಣ್‌ರವರೇ, ಮಾನ್ಯ ಸದಸ್ಯರು ಯೀಲ್ಡ್ ಆದರೆ ಮಾತ್ರ ತಾವು ಮಾತನಾಡಿ. ಈಗ ತಾವು ದಯಮಾಡಿ ಕುಳಿತುಕೊಳ್ಳಿ.

**ಡಾ॥ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ಧರಾಮಯ್ಯನವರು ಬಜೆಟ್ ಮಂಡನೆ ಮಾಡಿದ ನಂತರ, ವಿರೋಧ ಪಕ್ಷದವರು ಏನು ಮಾಡಿದರೆಂದರೆ, ತಮ್ಮ ಕೈಯಲ್ಲಿ ಚೊಂಬು ಹಿಡಿದುಕೊಂಡು, "ಮಾನ್ಯ ಸಿದ್ಧರಾಮಯ್ಯನವರು ಈ ರಾಜ್ಯದ ಬಜೆಟ್‌ನಲ್ಲಿ ನಮಗೆಲ್ಲರಿಗೂ ಚೊಂಬು ಕೊಟ್ಟಿದ್ದಾರೆ" ಎಂದು ಹೇಳಿದರು.

(ಮುಂದು)

(329) 11.03.2026 ವೈಎಲ್-ಆರ್‌ಎನ್ 6.20 **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಚಿಪ್ಪು ಇಟ್ಟುಕೊಂಡಿದ್ದಾರೆ.

**ಡಾ॥ ಎಂ.ಆರ್.ಸೀತಾರಾಂ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ರಾಜ್ಯದ ಜನರು ಅವರಿಗೆ ಚಿಪ್ಪು ವಾಪಸ್ಸು ಕೊಟ್ಟಿರುವುದಕ್ಕೆ ವಿರೋಧ ಪಕ್ಷದ ಕಡೆ ಕುಳಿತಿರುವುದು. ದಯವಿಟ್ಟು ಅದನ್ನು ಅರ್ಥ ಮಾಡಿಕೊಳ್ಳಬೇಕು. ಜನರು ನಮಗೆ ಐದು ವರ್ಷಗಳವರೆಗೂ ಅಧಿಕಾರ ಕೊಟ್ಟ ಮೇಲೆ ಅದನ್ನು ಸ್ವಾಗತ ಮಾಡಿಕೊಂಡು ಹೋಗುತ್ತಿರಬೇಕು. ಅದನ್ನು ಬಿಟ್ಟು ಇಲ್ಲದ ವಿಚಾರವನ್ನು ರಾಜಕಾರಣ ಮಾಡಿಕೊಂಡು ಕುಳಿತರೆ ಆಗುವುದಿಲ್ಲ, ಅದು ವಿರೋಧ ಪಕ್ಷದ ಕರ್ತವ್ಯವು ಆಗುವುದಿಲ್ಲ.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಡಾ॥ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ. ಇಷ್ಟು ಹೊತ್ತು ಅವರೆಲ್ಲರೂ ಮಾತನಾಡುವುದನ್ನು ಕೇಳಿದ್ದು, ದಯವಿಟ್ಟು ನಾನು ಹೇಳುವುದನ್ನು ಅವರು ಕೇಳಲಿ.

**ಸಭಾಪತಿಯವರು:-** ಮಾನ್ಯ ಡಿ.ಎಸ್.ಅರುಣ್‌ರವರೇ, ತಾವು ಏನು ಮಾತನಾಡಬೇಕು ಅದನ್ನು ಬರೆದಿಟ್ಟುಕೊಂಡು, ಅವಕಾಶ ಕೊಟ್ಟಾಗ ಮಾತನಾಡಿ.

**ಡಾ॥ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ರಾಜಕಾರಣದಲ್ಲಿ ನಾವೆಲ್ಲರೂ ಸೇರಿ ರಾಜ್ಯದ ಜನರಿಗೆ ಒಳ್ಳೆಯದನ್ನು ಮಾಡಬೇಕು. ಅದರಲ್ಲಿ ಪ್ರಾಮಾಣಿಕತೆ, ದಕ್ಷತೆ, ಎಲ್ಲವನ್ನೂ ಇಟ್ಟುಕೊಂಡಾಗ ಮಾತ್ರ ಉತ್ತಮವಾದ ಹೆಸರನ್ನು ಸಂಪಾದಿಸಬಹುದು. ಅದರಲ್ಲಿಯೂ ಮೇಲ್ಮನೆಯ ಸದಸ್ಯರಲ್ಲಿ ಆ ಮಟ್ಟ ಇನ್ನೂ ಹೆಚ್ಚಾಗಬೇಕು, ಕುಗ್ಗಬಾರದು. ಆ ನಿಟ್ಟಿನಲ್ಲಿ ನಾನು ಎಲ್ಲರಿಗೂ ಮನವಿ ಮಾಡಿಕೊಳ್ಳುವುದೇನೆಂದರೆ, ರಚನಾತ್ಮಕವಾದ ರಾಜಕಾರಣ ಮಾಡೋಣ. ಏನೇ ಇದ್ದರೂ ಒಬ್ಬರಿಗೊಬ್ಬರು ಪರಸ್ಪರ ವಾದ-ವಿವಾದವನ್ನು ಮಾಡೋಣ. ಆದರೆ, ಜನರಿಗೆ ಏನೂ ಒಳ್ಳೆಯದಾಗುತ್ತಿದೆ ಅದನ್ನು ಮೆಚ್ಚುವಂತಹ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಎಲ್ಲರಿಗೂ

ಮನವಿ ಮಾಡಿಕೊಂಡು, ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉತ್ತಮವಾದ, ಸಮತೋಲನವಾದ ಬಜೆಟ್‌ನ್ನು ಮಂಡನೆ ಮಾಡಿದ್ದು, ಸುಮಾರು ರೂ.1,00,000 ಕೋಟಿ ವೆಚ್ಚ ಮಾಡಿ, ಈ ರಾಜ್ಯವನ್ನು ಅಭಿವೃದ್ಧಿ ಮಾಡಿದ್ದಾರೆ. ಹಾಗೆಯೇ ಬಡವರಿಗೆ ಅನುಕೂಲವಾಗುವಂಥ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿರುವುದರಿಂದ, ಎಲ್ಲರ ಪರವಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ, ಧನ್ಯವಾದಗಳು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ವಿರೋಧ ಪಕ್ಷದ ನಾಯಕರೇ ಮತ್ತು ಸರ್ಕಾರದ ಮುಖ್ಯ ಸಚೇತಕರು ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕರೂ ಎಲ್ಲರಿಗೂ ಹೇಳುವುದೇನೆಂದರೆ, ಬಜೆಟ್ ಅಧಿವೇಶನ ನಡೆಯುತ್ತಿದ್ದು, ಸದನದೊಳಗೆ ಸದಸ್ಯರೇ ಇರಲಿಲ್ಲವೆಂದರೆ, ಹೇಗೆ ಸದನ ನಡೆಸುವುದು? ಇದೊಂದು ರೀತಿ ವಿಚಿತ್ರವೆನಿಸುತ್ತದೆ. ಇಂತಹ ಗಂಭೀರವಾದ ವಿಚಾರದ ಮೇಲೆ ಚರ್ಚೆ ನಡೆಯುತ್ತಿದೆ. ಹಾಗಾಗಿ, ನಾನು ಹೇಳುವುದೇನೆಂದರೆ, ಕೇವಲ ಕೋರಂ ನೋಡುವುದು ಬೇಡ, ಎಲ್ಲಾ ಸದಸ್ಯರು ಸದನದೊಳಗೆ ಇರಬೇಕಲ್ಲವೇ? ಎಷ್ಟೆಲ್ಲಾ ಚರ್ಚೆ ನಡೆಯುತ್ತಿದ್ದು, ಹೊಸ ವಿಚಾರಗಳನ್ನು ಹೇಳುತ್ತಿರುತ್ತಾರೆ. ಈ ರೀತಿ ಸದನದೊಳಗೆ ಸದಸ್ಯರು ಇರಲಿಲ್ಲವೆಂದರೆ, ಸದನ ನಡೆಸಲು ನನಗೆ ಸ್ವಲ್ಪವೂ ಮನಸ್ಸಾಗುತ್ತಿಲ್ಲ. ಇದು ವಿಧಾನ ಪರಿಷತ್ತು ಆಗಿದ್ದು, ಎಲ್ಲಾ ಸದಸ್ಯರು ಸದನದೊಳಗೆ ಇರಬೇಕು. ಹೊಸ ಹೊಸ ವಿಚಾರಗಳ ಬಗ್ಗೆ ಚರ್ಚೆ ನಡೆಯುವಾಗ ಎಲ್ಲರೂ ತಿಳಿದುಕೊಳ್ಳುತ್ತಾರೆ. ಸದನವನ್ನು ನಾಳೆ ಬೆಳಗ್ಗೆ 11 ಗಂಟೆವರೆಗೂ ಮುಂದೂಡಲಾಗುವುದು.

**(ಸದನದವು ಸಂಜೆ 6 ಗಂಟೆ 23 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 12ನೇ ಮಾರ್ಚ್ ಮಾಹೆ 2026 ರಂದು ಗುರುವಾರ ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**